
ಟಿ. ಆರ್. ರಾಧಾಕೃಷ್ಣ

ಕುಸ್ತಿಲೋಕದ ಧ್ರುವತಾರೆ

ಪೈಲ್ವಾನ್ ನಂಜಪ್ಪ

ಜೀವನ ಚರಿತ್ರೆ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ

KPP

ಮರೆಯಲ್ಲಿರುವ ಮಹಾನುಭಾವರು ಗ್ರಂಥಮಾಲೆ

ಕುಸ್ತಿಲೋಕದ ಧ್ರುವತಾರೆ

ಪೈಲ್ವಾನ್ ನಂಜಪ್ಪ

(ಜೀವನ ಚರಿತ್ರೆ)

ಟಿ. ಆರ್. ರಾಧಾಕೃಷ್ಣ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೪೮ ೪೫೧೬

KUSTILOKADA DHRUVATAARE PAILWAN NANJAPPA - Life Story by T. R. Radhakrishna, 'Athmeeya', Filter House Road, Karuvina Katte Circle, Chitradurga - 577 501, Ph : 08194-234467, Mobile: 94495 81059
Published by : Kannada Pustaka Pradhikara, Kannada Bhavana, J.C. Road Bangalore - 560 002

Pages : xiv + 6 + 102

Price : **Rs. 45/-**

First Edition : 2007

Copies : 1000

ISBN : 81-7713-206-7

© ಕನ್ನಡ ಪುಸ್ತಕ ಪ್ರಾಧಿಕಾರ

ಬೆಲೆ : **ರೂ. ೪೫/–**

ಪುಟಗಳು : xiv + ೬ + ೧೦೨

ಕರಡು ತಿದ್ದಿದವರು : ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಮುಖಪುಟ ವಿನ್ಯಾಸ : ಮಂಜುನಾಥ್ ಎಸ್.

ಪ್ರಕಾಶಕರು :
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ; ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು

ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳ ಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆ ಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಂಕಸಾಲೆ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯ ದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಬಹುಭಾಷೆಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರ ದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂಡು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ

ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಿಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿತ ವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿ ರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಇತಿಹಾಸದ ಪುಟಗಳಲ್ಲಿ ಚಿತ್ರದುರ್ಗಕ್ಕೆ ವಿಭಿನ್ನವೂ ವಿಶಿಷ್ಟವೂ ಆದ ಸ್ಥಾನವಿದೆ. ಮದಕರಿನಾಯಕ ಒನಕೆ ಓಬವ್ವರ ಸಾಹಸಗಾಥೆಗಳು ಅಲ್ಲಿನ ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದ ಜೀವನಗಾಥೆಗಳಾಗಿವೆ. ಕರ್ನಾಟಕದ ಜಾನಪದ ಜಗತ್ತಿನಲ್ಲೂ ಚಿತ್ರದುರ್ಗದ ಕೊಡುಗೆ ಅಪಾರವೂ ಅನನ್ಯವೂ ಆದುದು. ಹಲವು ಬುಡಕಟ್ಟು ಸಮುದಾಯಗಳಿಗೆ ನೆಲೆಬೀಡಾಗಿರುವ ಈ ನೆಲದ ಗಂಧ ಸಾಂಸ್ಕೃತಿಕ ಬಹುತ್ವದ ಆರ್ದ್ರಭಾವದಲ್ಲಿ ಅರಳಿರುವುದು; ಆಧುನಿಕತೆಗೆ ಮುಖಮಾಡಿಯೂ ಗ್ರಾಮೀಣ ಸೊಗಡನ್ನು ಇಂದಿಗೂ ತನ್ನ ಬದುಕಿನ ಬನಿಯಾಗಿಸಿಕೊಂಡಿರುವುದು.

ಇಂಥ ನೆಲದ ಬದುಕಿನ ಜಾನಪದ ಸಂಪದವನ್ನು ದಾಖಲಿಸಹೊರಟರೆ ಒಂದು ಹಳ್ಳಿಗೆ ಕನಿಷ್ಠ ಹತ್ತು ವಕ್ತ್ಯ ಪ್ರತಿಭೆಗಳು ಎದುರಾಗುತ್ತವೆ. ವರ್ತಮಾನದಲ್ಲೇ ಇಷ್ಟು 'ಸಿರಿ' ಸಮೃದ್ಧಿ ಇರುವಾಗ ಇನ್ನು ಗತದ ಗರ್ಭದಲ್ಲಿ ಹೂತುಹೋದ ಮೌಖಿಕ ಪ್ರತಿಭೆಗಳ ಗಣನೆ ಲೆಕ್ಕಕ್ಕೆ ಸಿಗುವುದೇ?

'ಪೈಲ್ವಾನ್ ನಂಜಪ್ಪ' ದುರ್ಗದ ಕಲ್ಲು ಬಂಡೆಗಳ ನಡುವೆ ಅರಳಿದ ಒಂದು ಗಟ್ಟಿ ಜೀವ; ಕುಸ್ತಿಲೋಕದ ಧ್ರುವತಾರೆ ಎಂದೇ ಹೆಸರಾದವರು. ಸ್ವಾತಂತ್ರ್ಯ ಬಂದ ಮೇಲೂ ಜವಾಬ್ದಾರಿ ಸರ್ಕಾರದಿಂದ ಮೈಸೂರು ರಾಜ್ಯಕ್ಕೆ ಬಿಡುಗಡೆ ದೊರಕದಿದ್ದಾಗ ಜನರ ಹೋರಾಟ ಅನಿವಾರ್ಯವಾಯಿತು. ಚಿತ್ರದುರ್ಗದಲ್ಲಿ ಜನರನ್ನು ಸಂಘಟಿಸಿ ಹೋರಾಟಕ್ಕಿಳಿದವರು ಪೈಲ್ವಾನ್ ನಂಜಪ್ಪ. ದುರ್ಗದ ಸಾಮಾಜಿಕ ಸಾಂಸ್ಕೃತಿಕ ಬದುಕಿನಲ್ಲಿ ತಮ್ಮ ಪರಿಮಿತವೂ ಅರ್ಥಪೂರ್ಣವೂ ಆದ ಸಾಧನೆಗಳಿಂದ ಸಾರ್ಥಕ ಬಾಳುವೆಯನ್ನು ನಡೆಸಿದವರು. ಇವರ ಜೀವನ ಕಥನವನ್ನು ಟಿ.ಆರ್. ರಾಧಾ ಕೃಷ್ಣರವರು ಕಷ್ಟಪಟ್ಟು ಮಾಹಿತಿಗಳನ್ನು ಸಂಗ್ರಹಿಸಿ ಕಟ್ಟಿಕೊಟ್ಟಿದ್ದಾರೆ. ಈ ಕಥನವನ್ನು ಕಟ್ಟುವಲ್ಲಿ ಲಿಖಿತ ದಾಖಲಾತಿಗಳಿಗಿಂತ ಮೌಖಿಕ ಮಾಹಿತಿಗಳೇ ಪ್ರಧಾನ ಪಾತ್ರ ವಹಿಸಿರುವುದು ಮುಖ್ಯ ವಿಚಾರ. ಕಾರಣ ಲಿಖಿತ ದಾಖಲಾತಿ ಎಂಬುದು ಎಷ್ಟೇ ಖಚಿತವಾದುದಾದರೂ ಒಬ್ಬನ ಕಣ್ಣಿನಲ್ಲಿ ನಿರ್ಣಿತವಾದ ನಿಜ. ಅದಕ್ಕಿಂತ ಸಮುದಾಯಗಳ ಮುಖವಾಣಿಗಳಾದ ಪತ್ರಿಕೆಗಳು ಗೆಜೆಟಿಯರ್‌ಗಳು ಒದಗಿಸುವ ದಾಖಲಾತಿಗಳಿಗೆ ಅವುಗಳ ವ್ಯಾಪ್ತಿಯ ಅಧಿಕೃತತೆ ಇದ್ದೇ ಇರುತ್ತದೆ. ಆದರೆ ಜನಮಾನಸದಲ್ಲಿ ಉಳಿದ ಇತಿಹಾಸ ತನ್ನ ಸ್ವಸ್ವರೂಪದಲ್ಲಿ ಉಳಿದಿರುವುದಿಲ್ಲ. ಅದಕ್ಕಿಂತ ಮಿಗಿಲಾಗಿ ರೂಪಕ ಅನ್ಯೋಕ್ತಿಗಳ ಅರ್ಥ ಪರಂಪರೆಯಲ್ಲಿ ಅದು ಅದರದೇ ಆದ ನೆನಪಿನ ಕ್ರಮಗಳನ್ನು ಆಶ್ರಯಿಸುತ್ತದೆ. ಇತಿಹಾಸಕಾರ ಆ ಪರಂಪರೆಯನ್ನು ಬಗೆಯುವ ಸಾಂಸ್ಕೃತಿಕ ಒಳಗಣ್ಣನ್ನು ಉಳ್ಳವನಾಗಿರಬೇಕು. ಆಗ ಮಾತ್ರ ನಮಗೆ ನಿಜವಾದ ಇತಿಹಾಸ ಲಭ್ಯವಾಗುತ್ತದೆ. ಏಕೆಂದರೆ ಜಾನಪದ ಜಗತ್ತಿನಲ್ಲಿ ಸತ್ಯಕ್ಕೆ ಮಾತ್ರ ಮನ್ನಣೆ. ಅಲ್ಲಿ ಉತ್ಪ್ರೇಕ್ಷೆ ಇದ್ದರೂ ಆ ಉತ್ಪ್ರೇಕ್ಷೆ ಎಂಬುದು ಸತ್ಯದ ಭೂಮಿಯಲ್ಲಿ ಬೇರುಬಿಟ್ಟು ಬೆಳೆದ ಮರ. ಸತ್ಯಕ್ಕೆ ಎರವಾದ ವಿಚಾರವನ್ನು ಸಂಗತಿಯನ್ನು ಜಾನಪದ ಎಂದೂ ಮಾನ್ಯ ಮಾಡುವುದಿಲ್ಲ. ಈ ದೃಷ್ಟಿಯಿಂದ ಜನಮಾನಸದ ಮೌಖಿಕ ಪರಂಪರೆಯ ರೂಪಕಾತ್ಮಕ ಇತಿಹಾಸ ಈ ದೇಶದ ನಿಜವಾದ ಜೀವನಕ್ರಮವನ್ನು ಅನಾವರಣ ಮಾಡಬಲ್ಲ ದಾಖಲಾತಿ. ಮಾರ್ಗ ಪರಂಪರೆಯ ಇತಿಹಾಸಕ್ಕಿರುವ ಯಾವುದೇ ಪ್ರಲೋಬನೆಗಳ ವಕ್ರದೃಷ್ಟಿಗಳ ದಾಖಲಾತಿಯ ವ್ಯಾಖ್ಯಾನ ಇಲ್ಲಿ ಇರುವುದಿಲ್ಲ. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಟಿ.ಆರ್. ರಾಧಾಕೃಷ್ಣ ಅವರ ಇಂಥ ಮೌಖಿಕ ಪರಂಪರೆಯ ನೆನಪುಗಳ ನೆಲೆಯಲ್ಲಿ ಅರಳಿದ ಜೀವನ ಗಾಥೆ

'ಪೈಲ್ವಾನ್ ನಂಜಪ್ಪ' ಕೃತಿ. ಇಲ್ಲಿ ಪೈಲ್ವಾನ್ ನಂಜಪ್ಪನವರ ಜೀನವ ವಿವರ ಮಾತ್ರ ಬಿಚ್ಚಿಕೊಳ್ಳುತ್ತಿಲ್ಲ; ಇಡೀ ಚಿತ್ರದುರ್ಗದ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಬದುಕಿನ ವಿವರಗಳು ದನಿ ಪಡೆದಿವೆ. ಚಿತ್ರದುರ್ಗದ ಸಾಂಸ್ಕೃತಿಕ ಬದುಕಿನಲ್ಲಿ ಗರಡಿ ಮನೆಗಳು ಪಡೆದುಕೊಂಡಿದ್ದ ಮಹತ್ವ, ಇಂಥ ಪರಂಪರೆಯನ್ನು ಬೆಳೆಸುವುದಕ್ಕೆ ಕಾರಣಕರ್ತರಾದ ಉಸ್ತಾದ್‌ಗಳು, ಗರಡಿ ಮನೆಯ ಪೋಷಕರ ಉದಾರತೆ ಪೈಲ್ವಾನರುಗಳ ಜಾತ್ಯಾತೀತ ಮನೋಧರ್ಮ ಇತ್ಯಾದಿ ವಿವರಗಳು ಕಣ್ಣಿಗೆ ಕಟ್ಟಿದಂತೆ ಈ ಕೃತಿಯಲ್ಲಿ ದಾಖಲಾಗಿವೆ. ಪೈಲ್ವಾನ್ ನಂಜಪ್ಪನವರ ವ್ಯಕ್ತಿತ್ವ ಸಾಧನೆ ಶ್ರೇಯಗಳನ್ನು ಲೇಖಕರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಮರೆಯಲ್ಲಿರುವ ಮಹಾನುಭಾವರ ಮಾಲಿಕೆಯಲ್ಲಿ ಇದನ್ನು ಪ್ರಕಟಿಸಲು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಗೆ ನೀಡಿದ ಶ್ರೀ ಟಿ.ಆರ್. ರಾಧಾಕೃಷ್ಣ ಅವರಿಗೆ ಆತ್ಮೀಯ ಕೃತಜ್ಞತೆಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಅರ್ಪಣೆ

ಚಿತ್ರದುರ್ಗದ ದೊಡ್ಡಗರುಡಿಯ
ಸಮಸ್ತ ಉಸ್ತಾದ್‌ಗಳು, ಪೋಷಕರು,
ಹಿರಿಯ-ಕಿರಿಯ ಪೈಲ್ವಾನರುಗಳು
ಮತ್ತು ಅಭಿಮಾನಿಗಳಿಗೆ
ಬಹಳಷ್ಟು ಪ್ರೀತಿಯಿಂದ

- ಟಿ.ಆರ್. ರಾಧಾಕೃಷ್ಣ

ಲೇಖಕರ ಎರಡು ಮಾತು

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯನವರು 'ಮರೆಯಲ್ಲಿರುವ ಮಹಾನುಭಾವರು' ಹೊಸ ಪ್ರಕಟಣಾ ಮಾಲೆಯಲ್ಲಿ ಪೈ. ನಂಜಪ್ಪನವರ ವ್ಯಕ್ತಿ ಚಿತ್ರಣವೊಂದನ್ನು ನಿರೂಪಿಸಿ ಕೊಡಬೇಕೆಂದು ಕೇಳುವುದರ ಮೂಲಕ ನನ್ನ ಬಾಲ್ಯದಿಂದಲೂ ನೋಡಿದ್ದ, ರೋಮಾಂಚಕಾರಿ ಕಥೆಗಳನ್ನು ಸೃಷ್ಟಿಸಿದ್ದ ನಂಜಪ್ಪನವರ ಬಗ್ಗೆ ಇನ್ನೊಮ್ಮೆ ಇನ್ನು ಕೊಂಚ ಸ್ಪಷ್ಟವಾಗಿ ತಿಳಿಯುವಂತ ಅವಕಾಶ ಒದಗಿತು. ಇಂಥ ಸದವಕಾಶದ ಸಂತೋಷದ ಕೆಲಸ ನನಗೆ ವಹಿಸಿದ್ದಕ್ಕಾಗಿ ಪ್ರಾಧಿಕಾರದ ಅಧ್ಯಕ್ಷರನ್ನು ಪ್ರಪ್ರಥಮವಾಗಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಮ್ಮ ಕಣ್ಣು ಮುಂದೆಯೇ ಓಡಾಡಿದ್ದ ಪೈ. ನಂಜಪ್ಪ ನಮ್ಮಿಂದ ಕಣ್ಮರೆಯಾಗಿ ನಲವತ್ತು ವರ್ಷವಾಗಿದೆ. ಈತನ ಬಗ್ಗೆ ತಿಳಿಯಬೇಕಾದುದೆಲ್ಲಾ ಬಹುಮಟ್ಟಿಗೆ ಸಮಕಾಲೀನ ಪೈಲ್ವಾನರ, ಅಭಿಮಾನಿಗಳ ಬಾಯಲ್ಲೇ ಇದೆ. ಇಷ್ಟು ವರ್ಷಗಳಾದ ಮೇಲೆ ಬೇಕಾದಷ್ಟು ಸಂಗತಿಗಳು ಮರೆತು ಹೋಗುವ ಸಂಭವವೇ ಹೆಚ್ಚು. ನಾನು ಕೊಂಚ ಅಳುಕಿನಿಂದಲೇ ಈ ಕೆಲಸಕ್ಕೆ ಕೈ ಹಾಕಿದಾಗ ನನ್ನಲ್ಲಿ ವಿಶೇಷ ಉತ್ಸಾಹ ತುಂಬಿ ನನಗೆ ಅಪರಿಮಿತ ಸಹಕಾರ, ಸಹಾಯ ಮಾಡಿದವರು ನಂಜಪ್ಪನವರ ಪ್ರೀತಿಯ ಶಿಷ್ಯರಾದ ಕೆ. ನಾಗರಾಜ್ ಮತ್ತು ಪೈ. ವಸಂತರಾವ್. ಇವರು ಪೈ ಗೋಪಾಲಪ್ಪನೊಂದಿಗೆ ನಾನು ಹೇಳಿದ ಸಮಯಕ್ಕೆಲ್ಲಾ ಹಾಜರಾಗಿ ಅಂದಿನ ಕುಸ್ತಿಯ ಲೋಕದ ವೈವಿಧ್ಯವನ್ನು, ಪೈ. ನಂಜಪ್ಪನವರ ಸಾಧನೆ, ಸಿದ್ಧಿಗಳನ್ನು ಅನಾವರಣ ಮಾಡಿದ ರೀತಿ ಅದ್ಭುತವಾದದು. ಇವರ ಜೊತೆಗೆ ಈ ಕೆಲಸದಲ್ಲಿ ಕೈ ಜೋಡಿಸಿ ನೆರವಾದವರು ಪೈ.ಸಿ.ಟಿ. ತಿಪ್ಪೇಸ್ವಾಮಿ, ಪೈ. ಮೊಹಮ್ಮದ್ ಸೈಯದ್ ಖಾದರ್, ಸಿ.ಕೆ. ಚಂದ್ರಪ್ಪ, ಸಿ.ಟಿ.ಎಸ್. ನಾಯಕ್, ಎಚ್.ಜಿ. ಸೋಮಶೇಖರರಾವ್ ಮೊದಲಾದವರು ನೀಡಿದ ಪ್ರೀತಿಯ ಸಹಕಾರ ದೊಡ್ಡದು. ಪೈ. ನಂಜಪ್ಪನವರ ಅಣ್ಣನವರಾದ ಚಿನ್ನಪ್ಪನವರ ಮಗ ಈಶ್ವರ್ ಲಾಡ್, ಇನ್ನೊಬ್ಬ ಅಣ್ಣ ಗಂಗಾಧರಪ್ಪನವರ ಮಗ ವಿಶ್ವನಾಥ್, ತಮ್ಮ ತಿಪ್ಪೇಸ್ವಾಮಿಯವರ ಮಗ ನಾಗರಾಜ್ ಮತ್ತು ಗಣೇಶ್‌ರಾವ್ ಮಜುಮ್‌ದಾರ್, ಡಾ. ಸೂರ್ಯನಾಥ ಕಾಮತ್, ಜಿ.ಎಸ್. ಉಜ್ಜನಪ್ಪ, ಕೆ. ವೆಂಕಣ್ಣಾಚಾರ್, ಹರತಿ ವೀರೇಂದ್ರ ಸಿಂಹ – ಇವರುಗಳು ಕೆಲವು ಅಪರೂಪದ ಫೋಟೋ ಕೊಟ್ಟು, ಕೆಲವು ವಿವರ ಕೊಟ್ಟು ಸಹಕರಿಸಿದ್ದಾರೆ.


ಬಹುಪಾಲು ಇವರೆಲ್ಲರೂ ಮನಬಿಚ್ಚಿ ನಂಜಪ್ಪನವರ ಬಗ್ಗೆ ಹೇಳಿದ ಮಾತುಗಳನ್ನು ಅಕ್ಷರದಲ್ಲಿ ಪರಿವರ್ತಿಸಿ ಈ ಕೃತಿ ರಚನೆಯಾಗಿದೆ ಎನ್ನಿಸುತ್ತದೆ. ಈ ಎಲ್ಲಾ ಹಿರಿಯರಿಗೆ ನನ್ನ ಕೃತಜ್ಞತೆಗಳು. ನನ್ನ ಸೋದರ ಜನಾರ್ಧನಸ್ವಾಮಿ, ದಾವಣಗೆರೆಯ ಇನ್ನೊಬ್ಬ ಸೋದರ ಜಯರಾಮಸ್ವಾಮಿಗೂ ನನ್ನ ನೆನೆಕೆಗಳು ಸಲ್ಲುತ್ತವೆ.

ಡಾ. ಲೋಕೇಶ ಅಗಸನಕಟ್ಟೆಯವರು ಈ ಕೃತಿಯ ರೂಪರೇಷೆಯ ಬಗ್ಗೆ ಚರ್ಚಿಸಿ, ಸಲಹೆಕೊಟ್ಟಿದ್ದಾರೆ. ಡಾ. ಮೀರಾಸಾಬಿಹಳ್ಳಿ ಶಿವಣ್ಣ ಮತ್ತು ಡಾ. ಬಿ. ರಾಜಶೇಖರಪ್ಪನವರು ಈ ಕೃತಿ ರಚನೆಗೆ ಬೇರೆ ಬೇರೆ ರೀತಿಯಲ್ಲಿ ಪ್ರೇರಣೆ, ಪ್ರೋತ್ಸಾಹ ಕೊಟ್ಟಿದ್ದಾರೆ. ಅವರನ್ನು ಸ್ಮರಿಸುವುದು ನನ್ನ ಕರ್ತವ್ಯ. ಉತ್ತಮ ಪ್ರತಿಯನ್ನು ನಾನು ಸಿದ್ಧಪಡಿಸುತ್ತಿದ್ದಾಗ ನನ್ನ ಮಗಳು ತಾರಿಣೀ ಶುಭದಾಯಿನೀ ಕೊಂಚ ನೆರವಾಗಿದ್ದಾಳೆ. ಆಕೆಗೆ ನನ್ನ ಪ್ರೀತಿಯ ಕೃತಜ್ಞತೆಗಳು. ಮರೆಯಲ್ಲಿರುವ ಮಹಾನುಭಾವರಲ್ಲಿ ಒಬ್ಬರನ್ನು ಜುಲುಮೆಮಾಡಿ ಒಪ್ಪಿಸಿ ನಿಮ್ಮ ಮುಂದೆ ಕರೆ ತಂದಿದ್ದೇನೆ. ಅವರನ್ನು ಪ್ರೀತಿಯಿಂದ ಕಾಣುತ್ತೀರಿ ಎಂಬ ವಿಶ್ವಾಸದೊಂದಿಗೆ,


ಇತಿ ನಿಮ್ಮ ಪ್ರೀತಿಯ
ಟಿ. ಆರ್. ರಾಧಾಕೃಷ್ಣ
೧.೯.೨೦೦೫

'ಆತ್ಮೀಯ'
ಫಿಲ್ಟರ್ ಹೌಸ್ ರಸ್ತೆ,
ಕರುವಿನಕಟ್ಟೆ ವೃತ್ತ
ಚಿತ್ರದುರ್ಗ – ೫೭೭೫೦೧


ಒಳಗಿನ ಪುಟಗಳಲ್ಲಿ



ಕುಸ್ತಿಪಟುವಿಗೆ ಒಪ್ಪುವ ಸುಂದರ ಕಾಯದ ತರುಣ ಪೈಲ್ವಾನ್ ನಂಜಪ್ಪ.




ಪಂಜಾಬಿನಿಂದ ಬಂದು ಚಿತ್ರದುರ್ಗದಲ್ಲಿ ನೆಲೆನಿಂತ ತನ್ನ
ನೆಚ್ಚಿನ ಗುರು ಪರಿಪೈಗರ್ ಜೊತೆಯಲ್ಲಿ ಪೈಲ್ವಾನ್ ನಂಜಪ್ಪ.



ಸರಳ ಉಡುಗೆಯಲ್ಲಿ ಪೈಲ್ವಾನ್ ನಂಜಪ್ಪ



ಪೈಲ್ವಾನ್ ನಂಜಪ್ಪನವರ ಜೀವನ ರೂಪಿಸಿದ
ಈಗ ಪುನರ್ ನಿರ್ಮಾಣಗೊಂಡಿರುವ ದೊಡ್ಡ ಗರುಡಿ.



ದೊಡ್ಡ ಗರುಡಿಯ ಒಳಗೆ ಮಟ್ಟಿಯ ಎದುರು ಗೋಡೆಯ
ಮೇಲೆ ಇರುವ ಪೈ. ರಾಮಪ್ಪ, ಪೈ. ನಂಜಪ್ಪನವರ ತೈಲ ಚಿತ್ರಗಳು.



೧) ಎದುರಿಗೆ ಕಾಣುವುದು ನಗರದೇವತೆ ಶ್ರೀ ಉತ್ಸವಾಂಬ ದೇವಾಲಯ.


೨) ಎದುರಲ್ಲಿರುವ ಗರುಡಗಂಭದ ಎಡಪಕ್ಕದಲ್ಲಿ ಪೈ. ನಂಜಪ್ಪ ಹುಟ್ಟಿದ ಮನೆ.

೩) ಅಲ್ಲೇ ಬಲಗಡೆ ಕಾಣುವ ಮಹಡಿ ಪೈ. ನಂಜಪ್ಪನವರ ತಂದೆ ಲಾಡರ ಈಶ್ವರಪ್ಪನವರ ಪ್ರಸಿದ್ಧ ಕಿರಾಣಿ ಅಂಗಡಿ.

೪) ದೇವಸ್ಥಾನದ ಹಿಂಭಾಗದಲ್ಲಿ ಕಾಣುತ್ತಿರುವ, ಹಿಂದೆ ಕುಸ್ತಿಗಳು ನಡೆಯುತ್ತಿದ್ದ ಬಸವನ ಬುರುಜು.




(ಎಡಗಡೆಯಿಂದ ಬಲಗಡೆಗೆ) ೧) ಪೈ. ನಂಜಪ್ಪನ ತಮ್ಮ ಲಾಡರ ಚೆನ್ನಪ್ಪ
೨) ಅಣ್ಣ ಲಾಡರ ಗಂಗಾಧರಪ್ಪ, ೩) ತಂದೆ ಲಾಡರ ಈಶ್ವರಪ್ಪನವರು




ಪೈ. ವಸಂತ್ ಅವರ ಜೊತೆ
ಅಖಾಡದಲ್ಲಿ ಪೈ. ನಂಜಪ್ಪ.




ಪೈ. ನಂಜಪ್ಪನವರಷ್ಟೇ ಹೆಸರಾಗಿದ್ದ ಅವರ ಗೆಳೆಯ ಪೈ. ರಾಮಪ್ಪ ಅವರು
ಸತ್ತ ಚಿರತೆಯನ್ನು ಹೆಗಲ ಮೇಲೆ ಹೊತ್ತು ತೆಗೆಸಿದ ಒಂದು ಅಪರೂಪದ ಚಿತ್ರ.



ಚಿಕ್ಕವಯಸ್ಸಿನಲ್ಲೇ ಚಿರನಿದ್ರೆಗೆ ತೆರಳಿದ ಪೈ. ನಂಜಪ್ಪನವರು.



ಪೈ. ನಂಜಪ್ಪನವರ ಸಮಾಧಿ-ಸ್ಮಾರಕ.



ಪೈ. ನಂಜಪ್ಪನವರ ಅಂತಿಮ ಯಾತ್ರೆಯಲ್ಲಿ ಪಾಲುಗೊಂಡ ಜನಸ್ತೋಮ.

೧ ಬೆಟ್ಟದ ಪರಿಸರದಲ್ಲೊಂದು ಸಾಹಸ ಗಾಥೆ

ಹಿಂದಿನ ಬಹಳಷ್ಟು ಪಾಳೆಯಪಟ್ಟುಗಳು ಬೆಟ್ಟ ಗುಡ್ಡಗಳ ಪರಿಸರಕ್ಕೆ ಹೊಂದಿಕೊಂಡು ನಿರ್ಮಾಣವಾದಂತೆ, ಚಿತ್ರದುರ್ಗದ ಪಾಳೆಯಪಟ್ಟೂ ಕೂಡಾ ಬೆಟ್ಟಗುಡ್ಡಗಳ ಪರಿಸರದಲ್ಲಿಯೇ ನಿರ್ಮಾಣವಾಗಿ, ಆ ಪಾಳೆಯಪಟ್ಟಿನ ಕಥೆಯನ್ನು ತಿಳಿಸಲೋ ಎಂಬಂತೆ ಇಲ್ಲಿನ ಬೆಟ್ಟದ ಪರಿಸರ ಕಾಣುತ್ತದೆ. ಈ ಬೆಟ್ಟಗುಡ್ಡದ ಪರಿಸರಕ್ಕೆ ಬಂದರೆ ಸರಿ, ಇದನ್ನು ಆರೋಹಣ ಮಾಡುವವರಿಗೆ ಉಲ್ಲಾಸ, ಉತ್ಸಾಹವನ್ನು ತುಂಬಿ, ಸಾಹಸ ಧೈರ್ಯವನ್ನು, ಅವರಲ್ಲಿ ಪ್ರಚೋದನೆ ಮಾಡುವಂತೆ ಕಾಣುತ್ತದೆ. ಇಂಥ ಬೆಟ್ಟ ಗುಡ್ಡಗಳಲ್ಲಿ ಹತ್ತುವಾಗ, ಇಳಿಯುವಾಗ ಇಲ್ಲಿನ ಹೆಬ್ಬಂಡೆಗಳು, ಗವಿಗಳು, ಪ್ರಪಾತಗಳು ನಮ್ಮಲ್ಲಿ ಭೀತಿಯನ್ನು, ಬೆರಗನ್ನು ಏಕಕಾಲದಲ್ಲಿ ಸೃಷ್ಟಿಸಿ ಬಿಡುತ್ತವೆ. ಚಿನ್ಮೂಲಾದ್ರಿಯ ಯಾವುದಾದರೂ ಒಂದು ದೊಡ್ಡ ಬಂಡೆಯನ್ನು ಅಥವಾ ಎತ್ತರದ ಪ್ರದೇಶವನ್ನು ಹತ್ತಿ ನಿಂತರೆ ನಮ್ಮ ಕಣ್ಣಿಗೆ ಇಲ್ಲಿನ ದೇವಾಲಯಗಳು, ಗುಹಾಂತರ ದೇವಾಲಯಗಳು, ಕೋಟೆಗಳು, ಕಲ್ಯಾಣಿಗಳು, ಹೊಂಡಗಳು ಒಂದು ಸುಂದರ ದೃಶ್ಯವನ್ನು ತರುವುದರ ಜೊತೆಗೆ, ಗತಕಾಲದ ಒಂದು ರಾಜ್ಯದ ನೆನಪನ್ನು ತರುತ್ತವೆ.

ಅದರಲ್ಲಿಯೂ ಚಿತ್ರದುರ್ಗದ ಬೆಟ್ಟ, ಕೋಟೆ, ಕೊತ್ತಳಗಳ ನಡುವೆ ನಿಂತು ಚಿಂತಿಸುವಾಗ ಇಲ್ಲಿನ ಪಾಳೆಯಗಾರರ ಶೌರ್ಯ, ಧೈರ್ಯ, ಸಾಹಸದ ಕಥೆಗಳು, ಪೌರುಷದ ಮಾತುಗಳು ನಮ್ಮ ಮನಸ್ಸಿಗೆ ಬಂದು ವರ್ತಮಾನವನ್ನೇ ಮರೆಸಿ ಒಂದು ಚಾರಿತ್ರಿಕ ಲೋಕದಲ್ಲಿ ವಿಹರಿಸುವಂತೆ ಮಾಡಿಬಿಡುತ್ತವೆ. ಇಲ್ಲಿ ಮದಕರಿನಾಯಕ ಮುಖ್ಯವಲ್ಲ. ಮದಿಸಿದ ಕರಿಯ ಮದವಡಗಿಸಿದ ಮದಕರಿನಾಯಕ ಮುಖ್ಯವಾಗಿ ಜನಪ್ರಿಯನಾಗಿದ್ದಾನೆ. ಹಾಗೆಯೇ ಒನಕೆ ಓಬವ್ವೆಯು ಒಂದು ಕಥೆಯಾಗಿ ಎಲ್ಲರ ಬಾಯಲ್ಲೂ ಕೊಂಡಾಡಲ್ಪಡುತ್ತಿದ್ದಾಳೆ.

ರಾಜಾವೀರಮದಕರಿನಾಯಕ, ದೊಡ್ಡ ಮದಕರಿನಾಯಕ – ಇವರುಗಳ ವೀರ್ಯವತ್ತಾದ ಕಥೆ ಇಲ್ಲಿನವರ ಬಾಯಲ್ಲಿ ಹರಿದುಬರತೊಡಗುತ್ತದೆ. ಹೈದರಾಲಿಯ ಸ್ನೇಹಕ್ಕಾಗಿ ರಾಜಾವೀರಮದಕರಿನಾಯಕ ಮತ್ತು ದೊಡ್ಡಮದಕರಿನಾಯಕರು ಕಾರಿರುಳಲ್ಲಿ ಹೋಗಿ ನಿಡುಗಲ್ಲು ಕೋಟೆಯನ್ನು ಮೆಟ್ಟುಗಾಲಿನಲ್ಲಿ ಹತ್ತಿ, ಕೋಟೆಯನ್ನು ವಶಪಡಿಸಿಕೊಂಡು ಕಾಮರಾಜನನ್ನು ಸೆರೆಹಿಡಿದು ತಂದ ಪೌರುಷದ ಕಥೆಯನ್ನು ಇಲ್ಲಿನ ಜನರಲ್ಲಿ ಅನೇಕರು ಮೆಚ್ಚಿ ಬಣ್ಣಿಸುತ್ತಾರೆ. ಇಂಥ ಪರಿಸರ, ಇಂಥ ಕಥೆ, ಇಂಥ ಇತಿಹಾಸ ಉಳ್ಳ ಈ ಚಿತ್ರದುರ್ಗದ

ಜನರಲ್ಲಿ ಇವೆಲ್ಲವೂ ಅಷ್ಟೊ – ಇಷ್ಟೊ ರಕ್ತಗತವಾಗಿರುತ್ತವೆ ಎಂದು ತಿಳಿಯುವುದರಲ್ಲಿ ತಪ್ಪಿಲ್ಲವೆನ್ನಿಸುತ್ತದೆ.

ಆದ್ದರಿಂದಲೇ ಪಾಳೆಯಗಾರರ ಕಾಲ ಮುಗಿದ ಮೇಲೆ ಈ ಕೋಟೆ, ಗುಡ್ಡ–ಬೆಟ್ಟದ ಪರಿಸರದಲ್ಲಿ ಶೌರ್ಯ, ಧೈರ್ಯ, ಸಾಹಸದ ಕಥೆಗಳಿಗೆ ಪೂರ್ಣ ವಿರಾಮ ಬೀಳಲಿಲ್ಲ. ಅಂಥ ಸಾಹಸದ ಕಥೆ ಇತಿಹಾಸದ ನಂತರವೂ ಮುಂದುವರಿಯಿತು ಎಂಬುದನ್ನು ತಿಳಿಯುವ ಕುತೂಹಲವಿದ್ದರೆ, ಇಲ್ಲಿನ ಕೋಟೆ–ಕೊತ್ತಳ, ಬೆಟ್ಟದ ಒಂದು ಭಾಗದ ಪರಿಚಯವನ್ನು ಕೊಂಚ ಮಾಡಿಕೊಳ್ಳೋಣ. ಇಲ್ಲಿನ ಕಾಮನಬಾವಿಯ ಕೋಟೆಯ ಬಾಗಿಲು ಮೂಲಕ ಮೂರು ನಾಲ್ಕು ಬಾಗಿಲುಗಳನ್ನು ದಾಟಿ ಹೋದರೆ ಉಯ್ಯಾಲೆ ಕಂಬ ಸಿಕ್ಕುತ್ತದೆ. ಅಲ್ಲಿಂದ ದಕ್ಷಿಣಕ್ಕೆ ಸಂಪಿಗೆ ಸಿದ್ಧೇಶ್ವರನ ದೇವಾಲಯವಿದೆ. ದೇವಾಲಯದ ಪಕ್ಕಕ್ಕೆ ಮುರುಘಾಮಠವಿದೆ. ಸಂಪಿಗೆ ಸಿದ್ಧೇಶ್ವರನ ದೇವಾಲಯದ ಹೊರಗಡೆ ನಿಂತು ಬಲಭಾಗದ ತುದಿಗೆ ಬಂದರೆ ಅಲ್ಲಿಂದ ಮುಂದಕ್ಕೆ ಕಣಿವೆಯ ದಾರಿಯೊಂದು ಹಾಯ್ದು ಹೋಗಿರುವುದು ಕಾಣುತ್ತದೆ. ಈ ಕಣಿವೆಯ ದಾರಿಯ ಇಕ್ಕೆಲಗಳಲ್ಲೂ ಹೆಬ್ಬಂಡೆಗಳು, ಗುಡ್ಡಗಳು. ಈ ಗುಡ್ಡಗಳಲ್ಲಿ ಕತ್ತಲು ತುಂಬಿದ ಕೆಲವು ಗವಿಗಳು.

ಆ ದಾರಿಯಲ್ಲಿಯೇ ಮುಂದುವರಿದರೆ ಮುಂದೆ ಅರಮನೆಯ ಬಯಲು, ಗೋಪಾಲಸ್ವಾಮಿಯ ದೇವಾಲಯ ಕಣ್ಣಿಗೆ ಬೀಳುತ್ತವೆ. ಗೋಪಾಲಸ್ವಾಮಿ ದೇವಾಲಯದ ದಕ್ಷಿಣದ ಕಡೆಗೆ ಹೋದರೆ ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟ ಸಿಕ್ಕುತ್ತದೆ. ಈ ಎತ್ತರದ ಬೆಟ್ಟ ಹತ್ತುವಾಗ ಕೆಲವು ಪ್ರಪಾತಗಳ ದರ್ಶನವಾಗುತ್ತದೆ. ಈ ಬೆಟ್ಟದ ತುದಿಗೆ ಒಂದು ಬದಿಯಲ್ಲಿ ಗೊಪ್ಪಯ್ಯನ ಚಾವಡಿ ಸಿಕ್ಕುತ್ತದೆ. ಈ ಗೊಪ್ಪಯ್ಯನ ಚಾವಡಿಯ ಒಂದು ಬದಿಯಲ್ಲಿ ಕಲ್ಲಿನ ದೋಣೆಯಿದೆ. ಈ ದೋಣೆಯಲ್ಲಿ ಮಳೆಯಿಂದ ಸಂಗ್ರಹವಾದ ನೀರು ವರ್ಷಪೂರ್ತಿ ಬತ್ತದೆ ಇರುತ್ತದೆ. ಇಂಥ ದುರ್ಗಮ ಪ್ರದೇಶದಲ್ಲಿ ಪಾಳೆಯಪಟ್ಟು ನಿರ್ಮಾಣವಾಗಿದ್ದರಿಂದ ಪಾಳೆಯಗಾರರನ್ನು ಶತ್ರುಗಳು ಸೋಲಿಸಿ ಸೆರೆಹಿಡಿಯುವುದು ಹುಡುಗಾಟದ ಮಾತಾಗಿರಲಿಲ್ಲ. ಈಗ ನಾವು ಇಲ್ಲಿ ಒಬ್ಬಂಟಿಯಾಗಿ ಅಲೆಯಲು ಹೋದರೆ ತಪ್ಪಿಸಿಕೊಳ್ಳುವುದರಲ್ಲಿ ಅನುಮಾನವಿಲ್ಲ ! ಈ ರಹಸ್ಯಮಯ ಆವರಣದಲ್ಲಿ ಪಾಳೆಯಗಾರರ ಶೌರ್ಯ, ಧೈರ್ಯದ ರೋಚಕ ಕಥೆಗಳು ಬಿಚ್ಚಿಕೊಳ್ಳುತ್ತವೆ. ಆದರೆ ಈಗ ನಾವು ಪರಿಚಯ ಮಾಡಿಕೊಳ್ಳುತ್ತಿರುವುದು ಇಂಥ ಪಾಳೆಯಗಾರರ ಇತಿಹಾಸವಲ್ಲ ; ಬದಲಾಗಿ ಇತಿಹಾಸವನ್ನು ಸೃಷ್ಟಿಸಿದ ನಮ್ಮ ದೊಡ್ಡಗರುಡಿಯ ಪೈಲ್ವಾನ್ ನಂಜಪ್ಪನವರ ಸಾಹಸದ ಕಥೆಯೊಂದನ್ನು ಈ ಪರಿಸರ ಹೇಳುತ್ತಿದೆ.

ಗರುಡಿಯಲ್ಲಿ ಅಥವಾ ಅಖಾಡದಲ್ಲಿ ಮೆರೆಯಬೇಕಾದ ಪೈಲ್ವಾನನೊಬ್ಬ ಈ ಬೆಟ್ಟದ ಪರಿಸರದಲ್ಲಿ ಹದಿನೈದು–ಇಪ್ಪತ್ತು ದಿವಸ ಇದ್ದನೆಂದು ಕೇಳಿದರೆ ಸಾಕು ರೋಮಾಂಚನವಾಗುತ್ತದೆ. ಪಾಳೆಯಪಟ್ಟು ನಶಿಸಿದ ಮೇಲೆ ಇದು ನಿರ್ಜನ ಪ್ರದೇಶ. ಅಲ್ಲಿ ಕವಿದ ಮೌನ, ಕಾಣುವ ಕತ್ತಲು ಗವಿಗಳು ಇತ್ಯಾದಿಗಳಿಂದ ಇಲ್ಲಿ ಓಡಾಡುವ ಮನಸ್ಸಿನಲ್ಲಿ

ವಿನಾಕಾರಣ ದಿಗಿಲು, ಭೀತಿಯನ್ನು ಉಂಟುಮಾಡುತ್ತದೆ. ಸಾಲದ್ದಕ್ಕೆ ಒಂದು ಕಾಲದಲ್ಲಿ ಈ ಪರಿಸರ ಹುಲಿ, ಚಿರತೆಗಳ ನೆಲೆವೀಡು. ಇಂಥ ಪ್ರದೇಶದಲ್ಲಿ ಹಗಲು-ರಾತ್ರಿಯನ್ನು, ಚಳಿ-ಬಿಸಿಲನ್ನು, ಇಲ್ಲಿ ಕವಿದ ಮೌನವನ್ನು ಅನುಭವಿಸುತ್ತ ಪೈ. ನಂಜಪ್ಪ ಇಲ್ಲಿ ಎರಡು ಮೂರು ವಾರ ವಾಸಮಾಡಿದ್ದು ಹೇಗೆ ? ಏಕೆ ?

ಇಲ್ಲಿ ಪೈ. ನಂಜಪ್ಪ ಇಷ್ಟು ದಿನಗಳ ಕಾಲ ಏಕೆ ಇರಬೇಕಾಯಿತು ಎಂಬ ಪ್ರಶ್ನೆಗೆ ಉತ್ತರ ದೊರಕಬೇಕಾದರೆ ನಾವು ಸುಮಾರು ಐವತ್ತೆಂಟು ವರ್ಷಗಳಷ್ಟು ಹಿಂದಕ್ಕೆ ಹೋಗಬೇಕಾಗುತ್ತದೆ.

೧೯೪೭ರ ಆಗಸ್ಟ್ ೧೫ ರಂದು ಭಾರತದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಮತ್ತು ಅದರ ಹಿಂದಿನ ಹೋರಾಟದ ಕಥೆ ನಮಗೆ ಸುಪರಿಚಿತವಾಗಿದೆ. ಆಗ ಗಾಂಧೀಜಿಯ ಕರೆಗೆ ಮನ್ನಣೆ ನೀಡಿ ದೇಶದ ಉದ್ದಗಲಕ್ಕೂ ಕೋಟ್ಯಂತರ ಜನಗಳು ಅಹಿಂಸಾತ್ಮಕ ಚಳುವಳಿಗಳಲ್ಲಿ, ಅಸಹಕಾರ ಚಳುವಳಿಗಳಲ್ಲಿ ಪಾಲುಗೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಎಲ್ಲಾ ಊರುಗಳಲ್ಲಿ ಸಿಕ್ಕ ಸಹಕಾರದಂತೆಯೇ ನಮ್ಮ ಊರಲ್ಲಿಯೂ ಈ ಹೋರಾಟಕ್ಕೆ ಸಹಕಾರ ಸಿಕ್ಕಿತು.

ದೇಶದ ಸ್ವಾತಂತ್ರ್ಯ ಸಿಕ್ಕ ಬಳಿಕ ಕೆಲವೇ ಕೆಲವು ರಾಜ್ಯಗಳು ಭಾರತದ ಒಕ್ಕೂಟಕ್ಕೆ ಸೇರಲು ಇಷ್ಟಪಡಲಿಲ್ಲ. ಅಂಥ ರಾಜ್ಯಗಳಲ್ಲಿ ಹಳೆಯ ಮೈಸೂರು ರಾಜ್ಯವೂ ಒಂದು. ಆಗ ಪ್ರಜಾಪ್ರಭುತ್ವ ಪ್ರೇಮಿಗಳು ಮೈಸೂರು ಸರ್ಕಾರದ ಈ ಧೋರಣೆಯನ್ನು ಪ್ರತಿಭಟಿಸತೊಡಗಿದರು. ಈ ಪ್ರತಿಭಟನೆಯು ಚಳುವಳಿಯ ರೂಪತಾಳಿ ಎಲ್ಲಾ ಊರುಗಳಲ್ಲಿಯೂ ನಡೆದಂತೆ ಚಿತ್ರದುರ್ಗದಲ್ಲಿಯೂ ನಡೆಯಿತು. ಈ ಚಳುವಳಿಯು ಸೆಪ್ಟೆಂಬರ್ ತಿಂಗಳಲ್ಲಿ ಒಂದು ಸ್ಪಷ್ಟರೂಪ ತಳೆಯಿತು. ನಾಡಿನ ಪ್ರಮುಖ ನಾಯಕರೆನ್ನಿಸಿಕೊಂಡವರು ಆಗ ಚಿತ್ರದುರ್ಗದಲ್ಲಿದ್ದರು. ಅಂದು ಅನೇಕ ಸಾರ್ವಜನಿಕ ಸಭೆಗಳಿಗೆ ಕೇಂದ್ರ ಸ್ಥಾನವಾಗಿದ್ದ ನೀಲಕಂಠೇಶ್ವರ ದೇವಸ್ಥಾನದಲ್ಲಿ ಈ ನಾಯಕರು ಜನತೆಗೆ ತಿಳುವಳಿಕೆ ಕೊಡಲು ಅನೇಕ ಭಾಷಣಗಳನ್ನು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಬಹುಶಃ ತೆಗೆದುಕೊಂಡ ತೀರ್ಮಾನದಂತೆ ಇಲ್ಲಿನ ಗರುಡಿಗಳವರೆಲ್ಲಾ ಒಟ್ಟಾಗಿ ಚಳುವಳಿಯ ಅಂಗವಾಗಿ ಮೆರವಣಿಗೆ ಹೊರಡಬೇಕು ; ಆ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಬೇಕು ; ಬಳಿಕ ಮೈಸೂರು ಸರ್ಕಾರದ ವಿರುದ್ಧ ಪ್ರತಿಭಟನೆಯ ಅಂಗವಾಗಿ ರಾಷ್ಟ್ರೀಯ ಧ್ವಜವನ್ನು ಜಿಲ್ಲಾಧಿಕಾರಿಗಳ ಕಚೇರಿಯ ಮೇಲೆ ಹಾರಿಸಬೇಕು ಎಂಬುದಾಗಿತ್ತು.

ಕೆಲವರು ಈ ಹೋರಾಟದಲ್ಲಿ ಪಾಲುಗೊಂಡ ದೊಡ್ಡಗರುಡಿ ಮತ್ತು ಪೈ. ನಂಜಪ್ಪನವರ ಪಾತ್ರ ಕುರಿತು ಹೇಳುವಾಗ, ಇದನ್ನು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯದ ಕಥೆ ಎಂಬಂತೆ ಬಣ್ಣಿಸುತ್ತಾರೆ. ಈ ತಪ್ಪುಗ್ರಹಿಕೆಯನ್ನು ನಿವಾರಿಸುವುದಕ್ಕಾಗಿ ನಾವು ಅಂದಿನ ಈ ಹೋರಾಟದ ಬಗ್ಗೆ ಕೆಲವು ಅಂಶಗಳನ್ನು ತಿಳಿದುಕೊಳ್ಳಬೇಕು ಎನ್ನಿಸುತ್ತದೆ.

೧೯೪೭ರ ಆಗಸ್ಟ್ ೧೫ ರಂದು ಸ್ವಾತಂತ್ರ್ಯ ಸಿಕ್ಕರೂ, ಮೈಸೂರು ರಾಜ್ಯ ಭಾರತದ ಒಕ್ಕೂಟಕ್ಕೆ ಸೇರದಿದ್ದುದರಿಂದ ಜವಾಬ್ದಾರಿ ಸರ್ಕಾರಕ್ಕಾಗಿ ಸೆಪ್ಟೆಂಬರ್ ತಿಂಗಳಲ್ಲಿ ಮತ್ತೆ ಚಳುವಳಿ ಆರಂಭವಾಯಿತು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಕೆಲವೇ ದಿನಗಳಲ್ಲಿ ಮತ್ತೆ ಈ ಚಳುವಳಿ ಬಿರುಸಿನಿಂದ ನಡೆಯತೊಡಗಿದ್ದರಿಂದ, ಅನೇಕರು ಇದು ಬ್ರಿಟಿಷ್ ಸರ್ಕಾರದ ವಿರುದ್ಧ ಮಾಡಿದ ಸ್ವಾತಂತ್ರ್ಯದ ಹೋರಾಟವೆಂದೆ ಬಗೆದಿದ್ದಾರೆ. ನಿಜವಾಗಿಯೂ ಇದು ಸ್ವಾತಂತ್ರ್ಯದ ಹೋರಾಟವೆ. ಆದರೆ ಇದು ದೇಶೀಯ ರಾಜರ ವಿರುದ್ಧ ಮಾಡಿದ ಇನ್ನೊಂದು ರೂಪದ ಸ್ವಾತಂತ್ರ್ಯದ ಹೋರಾಟ.

ಇದನ್ನು ಬ್ರಿಟಿಷ್ ಸರ್ಕಾರದ ವಿರುದ್ಧ ಮಾಡಿದ ಹೋರಾಟ ಎಂದು ತಪ್ಪಾಗಿ ಗ್ರಹಿಸಲು ಆಗ ನಡೆದ ಈ ಚಳುವಳಿಯ ಕೆಲವು ಲಕ್ಷಣಗಳೂ ಕಾರಣವಾಗಿವೆ. ಮೊದಲನೆಯ ಕಾರಣವೆಂದರೆ ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲುಗೊಂಡ ಧುರೀಣರೆಲ್ಲಾ, ಈ ಚಳುವಳಿಯಲ್ಲಿ ಮತ್ತೆ ಅಷ್ಟೇ ಉತ್ಸಾಹದಲ್ಲಿ ಪಾಲುಗೊಂಡಿದ್ದು. ಜೊತೆಗೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅರಣ್ಯದ ಕಾನೂನು ಮುರಿದು ಈಚಲು ಮರ ಕಡಿದಂತೆ, ಈ ಜವಾಬ್ದಾರಿ ಸರ್ಕಾರದ ಬೇಡಿಕೆಯ ಅಂಗವಾಗಿ ನಡೆದ ಚಳುವಳಿಯಲ್ಲೂ ಈಚಲುಮರ, ಗಂಧದ ಮರ ಕಡಿಯುವುದರ ಮೂಲಕ ಚಳುವಳಿಯನ್ನು ತೀವ್ರಗೊಳಿಸಿದ್ದು. ಜೊತೆಗೆ ತಾಲ್ಲೂಕ್ ಕಚೇರಿಗಳ ಮೇಲೆ ರಾಷ್ಟ್ರಧ್ವಜ ಹಾರಿಸುವುದು ಈ ಚಳುವಳಿಯ ಮತ್ತೊಂದು ಮುಖ್ಯ ಕಾರ್ಯಕ್ರಮ.

ಹೀಗೆ ಜವಾಬ್ದಾರಿ ಸರ್ಕಾರಕ್ಕಾಗಿ ಮಾಡಿದ ಚಳುವಳಿಯನ್ನು ಅರಮನೆಯ ಸತ್ಯಾಗ್ರಹ, ಮೈಸೂರು ಚಲೋ ಚಳುವಳಿ ಎಂದೇ ಕರೆಯುತ್ತಾರೆ. ಈ ಚಳುವಳಿ ಚಿತ್ರದುರ್ಗ ಜಿಲ್ಲೆಯಲ್ಲಿ ದಾವಣಗೆರೆ, ಹರಿಹರ, ಹಿರಿಯೂರು, ಹೊಸದುರ್ಗ, ಚಿತ್ರದುರ್ಗ ಮೊದಲಾದ ಕಡೆ ಬಿರುಸಿನಿಂದ ನಡೆಯಿತು. ಕೆಲವು ಕಡೆ ಪೋಲೀಸರ ಗೋಲಿಬಾರಿಗೆ ಕೆಲವರು ಸತ್ತರು. ಮತ್ತೆ ಕೆಲವು ಕಡೆ ಚಳುವಳಿಗಾರರಿಂದ ಜೈಲುಗಳು ಭರ್ತಿಯಾಗಿದ್ದರಿಂದ ವಾಹನಗಳಲ್ಲಿ ತುಂಬಿಕೊಂಡು ಹೋಗಿ ಚನ್ನಗಿರಿಯ ಕಾಡುಗಳಲ್ಲಿ ಬಿಟ್ಟು ಬಂದರು. ಅವರು ಕಷ್ಟ ಪಟ್ಟು ದಾರಿ ಹುಡುಕಿ ಕಾಲು ನಡಿಗೆಗಳಲ್ಲಿ ತಮ್ಮ ಊರುಗಳಿಗೆ ಹಿಂದಿರುಗಿ ತಮ್ಮ ತಮ್ಮ ಮನೆ ಸೇರಿಕೊಂಡರು.

ಇಂಥ ಬಿರುಸಿನಿಂದ ನಡೆಯುತ್ತಿದ್ದ ಚಳುವಳಿಗೆ ತಮ್ಮದೊಂದು "ವೀರಕಾಣಿಕೆ" ಇರಲಿ ಎಂದು ದೊಡ್ಡಗರುಡಿಯವರು ಮತ್ತು ಇಲ್ಲಿನ ಪೈಲ್ವಾನರುಗಳು ಇಂಥದೊಂದು ಸಾಹಸಕ್ಕೆ ಹೆಜ್ಜೆ ಇಟ್ಟರು. ಇದು ಬ್ರಿಟಿಷ್ ಸರ್ಕಾರದ ವಿರುದ್ಧ ನಡೆದ ಚಳುವಳಿಯಲ್ಲ ಎನ್ನಲು ದೊಡ್ಡಗರುಡಿಯ ನಿಕಟವರ್ತಿಗಳಾದ ಸಿ.ಟಿ.ಎಸ್ ನಾಯಕರು ಈ ಬಗ್ಗೆ ವಿವರಣೆ ಕೊಡುತ್ತಾರೆ. ಅವರು ಆಗ ಬೆಂಗಳೂರಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಡಿಪ್ಲೋಮಾ ಓದುತ್ತಿದ್ದರು. ಅರಮನೆಯ ಚಳುವಳಿಯು ಬಿರುಸಿನಿಂದ ನಡೆದುದರ ಅಂಗವಾಗಿ ಮುನ್ನೆಚ್ಚರಿಕೆ ವಹಿಸಿ ಕಾಲೇಜುಗಳಿಗೆ ಆಗ ರಜಾ ಘೋಷಿಸಿದ್ದರಂತೆ. ಆಗ ಸಿ.ಟಿ.ಎಸ್. ನಾಯಕರು ದುರ್ಗಕ್ಕೆ ಬಂದು ಈ ಚಳುವಳಿಗೆ ಸೇರಲು ದೊಡ್ಡಗರುಡಿಯ ಪೈಲ್ವಾನರುಗಳಿಗೆ ಕುಮ್ಮಕ್ಕು ಕೊಟ್ಟಿದ್ದರ ಜೊತೆಗೆ, ತಾವೂ ಪಾಲುಗೊಂಡಿದ್ದನ್ನು ಅವರು ತಿಳಿಸುತ್ತಾರೆ.

ಸಿ.ಎಂ. ನರಸಿಂಹಜಟ್ಟಿಯವರು ಆಗಸ್ಟ್ ೮, ೨೦೦೫ರ 'ಪ್ರಜಾಪ್ರಗತಿ' ಪತ್ರಿಕೆಯಲ್ಲಿ 'ಗರಡಿಯಲ್ಲಿ ಮೆರೆದ (ಹುಲಿ) ಪೈಲ್ವಾನ್ ನಂಜಪ್ಪ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಆ ಲೇಖನದಲ್ಲಿ ಮೈಸೂರು ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು, ಮೈಸೂರು ಅರಸರ ಧ್ವಜವನ್ನು ತಾಲ್ಲೂಕ್ ಆಫೀಸಿನ ಮೇಲಿಂದ ಕೆಳಗಿಳಿಸಿ ರಾಷ್ಟ್ರಧ್ವಜವನ್ನು ಹಾರಿಸಿದ್ದನ್ನು ಪ್ರಸ್ತಾಪಿಸುತ್ತಾರೆ. ೧೯೪೭ರಲ್ಲಿ ಧ್ವಜಾರೋಹಣ ಮಾಡಲು ಹೋದಾಗ ಗೋಲಿಬಾರ್ ಆದ ಸಂಗತಿಯನ್ನು ಎ.ಎಸ್. ಶ್ರೀನಿವಾಸಮೂರ್ತಿ ಆಚಾರ್‌ರವರು ಡಾ. ಸೂರ್ಯನಾಥ ಕಾಮತ್‌ರವರು ಸಂಪಾದಿಸಿದ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಕೃತಿಯಲ್ಲಿ ದಾಖಲಿಸುತ್ತಾರೆ. ಇವೆಲ್ಲವುಗಳಿಂದ ದೃಢಪಡುವ ಸಂಗತಿ ಏನೆಂದರೆ ಪೈ. ನಂಜಪ್ಪ ಮತ್ತು ದೊಡ್ಡಗರುಡಿಯ ಪೈಲ್ವಾನರುಗಳು ಪಾಲುಗೊಂಡಿದ್ದು ಅಂದಿನ ಅರಮನೆ ಚಲೋ ಚಳುವಳಿಯಲ್ಲಿ ಎಂಬುದು ಗರುಡಿಯೊಡನೆ ನಿಕಟ ಸಂಪರ್ಕ ಮತ್ತು ಪೈಲ್ವಾನ್ ನಂಜಪ್ಪನ ಪರಿಚಯವನ್ನು ಸಾಕಷ್ಟು ಹೊಂದಿದ್ದ ಚಲನಚಿತ್ರ ಹಾಗೂ ಕಿರುತೆರೆಯ ಕಲಾವಿದರಾದ ಎಚ್.ಜಿ. ಸೋಮಶೇಖರ ರಾವ್ ತಮ್ಮ 'ಸೋಮಣ್ಣನ ಸ್ಟಾಕ್‌ನಿಂದ' ಕೃತಿಯಲ್ಲಿ ಈ ಚಳುವಳಿಯಲ್ಲಿ ಪೈ. ನಂಜಪ್ಪ ಪೈ. ರಾಮಪ್ಪ ಪಾಲುಗೊಂಡಿದ್ದನ್ನು ಪ್ರತ್ಯಕ್ಷವಾಗಿ ಕಂಡ, ಮತ್ತು ಈ ಚಳುವಳಿಯಲ್ಲಿ ಪಾಲುಗೊಂಡ ಅವರು ತಿಳಿಸುತ್ತಾರೆ. ಅವರು ಈ ವಿಷಯ ಪ್ರಸ್ತಾಪಿಸುವಾಗ ದಿನಾಂಕ ನಮೂದಿಸಿಲ್ಲ. ಆದರೂ ಅವರು ಬಣ್ಣಿಸುವ ಚಳುವಳಿ ಈ ಅರಮನೆಯ ಚಳುವಳಿ ಎಂದೇ ತಿಳಿಯಬೇಕಾಗುತ್ತದೆ.

ಸ್ವಾತಂತ್ರ್ಯ ಹೋರಾಟದ ಮುಂದುವರೆದ ಇನ್ನೊಂದು ರೂಪವಾದ ಈ ಅರಮನೆಯ ಚಳುವಳಿಯಲ್ಲಿ ಪೈಲ್ವಾನ್ ನಂಜಪ್ಪ ಮತ್ತು ದೊಡ್ಡಗರುಡಿಯವರು ಪಾಲುಗೊಂಡಾದ ಮೇಲೆ ಮುಂದೇನಾಯಿತು ನೋಡೋಣ.

ಆ ದಿನದ ಮೆರವಣಿಗೆಯು ನೀಲಕಂಠೇಶ್ವರ ದೇವಾಲಯದಿಂದ ಹೊರಟು ಜಿಲ್ಲಾಧಿಕಾರಿಗಳ ಕಚೇರಿಯನ್ನು ತಲುಪಬೇಕೆಂದಿತ್ತು. ಅಂದು ನಿಗದಿಯಾದ ಪ್ರಕಾರ ಚಿತ್ರದುರ್ಗದ ಎಲ್ಲಾ ಗರುಡಿಗಳವರೂ, ಅಂದರೆ ಆ ಗರುಡಿಗಳ ಪೈಲ್ವಾನರುಗಳೂ, ಮುಖಂಡರೂ ಈ ಮೆರವಣಿಗೆಯಲ್ಲಿ ಪಾಲುಗೊಳ್ಳಲು ಈಗಾಗಲೇ ಸೂಚಿಸಲಾಗಿತ್ತು. ಆಗತಾನೆ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದರೂ ಮೈಸೂರು ರಾಜ್ಯದ ಜನ ಅದನ್ನು ಅನುಭವಿಸಲಾಗುತ್ತಿಲ್ಲವೆಂಬ ಚಿಂತೆಯು ಇಲ್ಲಿನ ರಾಜಕೀಯ ಮುಖಂಡರನ್ನು ಕಾಡಿಸುತ್ತಿತ್ತು. ಭೀಮಪ್ಪನಾಯಕರು, ವಕೀಲ್ ಕೆಂಚಪ್ಪನವರು ಮೊದಲಾದವರು ಇಲ್ಲಿನ ಗರುಡಿಗಳೊಡನೆ ನೇರ ಸಂಪರ್ಕವಿಟ್ಟುಕೊಂಡಿದ್ದರು. ಅಂದಿನ ರಾಜಕೀಯ ವಿದ್ಯಾಮಾನಗಳನ್ನು ರೇಡಿಯೋ, ವೃತ್ತಪತ್ರಿಕೆಗಳು ಸಾಕಷ್ಟು ಬಿತ್ತರಿಸುತ್ತಿದ್ದವು. ಈ ನಾಯಕರು, ಈ ಮಾಧ್ಯಮಗಳು ಎಲ್ಲವೂ ಗರುಡಿಯ ಜನಕ್ಕೆ ಪ್ರೇರಣೆ ನೀಡಿ ತಾವು ಈ ಬಿಡುಗಡೆಯ ಹೋರಾಟದಲ್ಲಿ ಪಾಲುಗೊಳ್ಳುವಂತೆ ಮಾಡಿದವು.

ಇಲ್ಲಿನ ಹಿರಿಯರು ಹೇಳುವ ಪ್ರಕಾರ ಚಿತ್ರದುರ್ಗದ ಎಲ್ಲಾ ಗರುಡಿಗಳವರೂ ಅಂದು ನೀಲಕಂಠೇಶ್ವರ ದೇವಾಲಯದ ಬಳಿ ಜಮಾಯಿಸತೊಡಗಿದರು. ಅಂತೆಯೇ ದೊಡ್ಡಗರುಡಿಯು

ಹೊರಡಲು ಸಿದ್ದವಾಯಿತು. ಪ್ರಸಿದ್ಧರಾದ ಪೈಲ್ವಾನರು, ಪೋಷಕರು, ಅನೇಕ ದೊಡ್ಡಮನುಷ್ಯರು ಸೇರಿಕೊಳ್ಳುತ್ತಿದ್ದ ಹಾಗೆಯೇ ಮೆರವಣಿಗೆಗಾಗಿ ಒಂದು ದೊಡ್ಡ ಗುಂಪೇ ನಿರ್ಮಾಣವಾಯಿತು. ಅದು ಏನು ಕಡಿಮೆ ಎಂದರೂ ನಾನ್ನೂರು, ಐನೂರು ಜನರಷ್ಟಾಯಿತು. ಆ ಮೆರವಣಿಗೆಯಲ್ಲಿ ಪಾಲುಗೊಳ್ಳಲು ಪೈ. ನಂಜಪ್ಪ, ಪೈ. ರಾಮಣ್ಣ, ಪೈ. ವೀರಭದ್ರಪ್ಪ, ಪೈ. ಬಷೀರ್ ಮೊದಲಾದವರು ಮುಂಚೂಣಿಯಲ್ಲಿದ್ದರು. ಸಿ.ಟಿ.ಎಸ್. ನಾಯಕ್, ಪೋಸ್ಟ್ ಭೀಮಣ್ಣರ ಮಗ ಅಡೆವಪ್ಪ, ಸಿ.ಟಿ. ತಿಪ್ಪೆಸ್ವಾಮಿ ಮೊದಲಾದವರು ಸೇರಿದರು. ಗರಡಿಯ ಪೋಷಕರಾದ ತಿಮ್ಮಣ್ಣ, ಕೃಷ್ಣಪ್ಪ, ಪುಟ್ಟಪ್ಪ, ಡ್ರೈವರ್ ಬಸಣ್ಣನವರಿಂದ ಹಿಡಿದು, ಇನ್ನು ಅನೇಕರು ಮೆರವಣಿಗೆಯಲ್ಲಿ ಸೇರಿದರು. ಹಟ್ಟಿಯ ಇಂಥಿಂಥವರೆಲ್ಲಾ ಸೇರಿದಾಗ ತಮ್ಮದೇನು ಮಹಾ ಎಂದು ಕೆಲವು ಜನರು, ಕೆಲವು ಹೆಂಗಸರೂ ಈ ಮೆರವಣಿಗೆಯ ಹಿಂದೆ ಹೊರಟರು.

ಈ ದೊಡ್ಡಗರುಡಿಯ ಸುತ್ತಮುತ್ತಲ ಜನವೆಲ್ಲಾ ಮೆರವಣಿಗೆಯಲ್ಲಿ ಸೇರಿದಾಗ ಪೌರುಷ, ಉತ್ಸಾಹಗಳು ಸಹಜವಾದವು. ಆಗ ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲುಗೊಳ್ಳಲು ಹಳ್ಳಿ ಹಳ್ಳಿಗಳವರು ಇಂಥ ಮೆರವಣಿಗೆಗಳಲ್ಲಿ ಪಾಲುಗೊಳ್ಳುತ್ತಿದ್ದರು. ಸರ್ಕಾರದ ವಿರುದ್ಧ ಪ್ರತಿಭಟಿಸಲು ಉತ್ಸಾಹದಿಂದ

ದಂಡು ಬಂತು ದಂಡು
ಯಾವೂರು ದಂಡು
ತುರುವನೂರು ದಂಡು

ಎಂದು ಹಾಡು ಹೇಳುತ್ತಾ ಮೆರವಣಿಗೆ ಸಾಗುತ್ತಿತ್ತು. ಅದನ್ನು ಅನುಕರಿಸುತ್ತ ದೊಡ್ಡಗರುಡಿಯವರು

ದಂಡು ಬಂತು ದಂಡು
ದೊಡ್ಡಗರುಡಿ ದಂಡು

ಎಂದು ಏರುಧ್ವನಿಯಲ್ಲಿ ಹಾಡುತ್ತಾ ನೀಲಕಂಠೇಶ್ವರ ದೇವಾಲಯಕ್ಕೆ ಗರುಡಿಯವರು ಬಂದರು. ಅಲ್ಲಿ ಬೇರೆ ಗರುಡಿಯವರು ಒಟ್ಟಾದರು. ಬಹುಶಃ ಹೆಚ್ಚು ಸಂಖ್ಯೆಯಲ್ಲಿದ್ದವರು ದೊಡ್ಡ ಗರುಡಿಯವರೆಂದು ಕಾಣುತ್ತದೆ. ಮೆರವಣಿಗೆ ಈಗ ಸಂತೇಪೇಟೆಯ ಮೂಲಕ ಜಿಲ್ಲಾಧಿಕಾರಿ ಕಚೇರಿಯ ಕಡೆಗೆ ಹೊರಟಿತು. ಮೆರವಣಿಗೆ ಸಾಗುತ್ತಿರುವುದನ್ನು ಕಂಡು ಊರಿನ ಅನೇಕ ಜನಗಳು ಕುತೂಹಲದಿಂದ, ಕೆಲವರು ಸ್ವಯಂ ಪ್ರೇರಣೆಯಿಂದ ಇದನ್ನು ಹಿಂಬಾಲಿಸಿದರು. ಅಂದಿನ ಕೆಲವು ರಾಜಕೀಯ ಮುಂದಾಳುಗಳೂ ಈ ಮೆರವಣಿಗೆಯಲ್ಲಿ ಪಾಲುಗೊಂಡಿದ್ದರು.

ಜಿಲ್ಲಾಧಿಕಾರಿಗಳ ಕಚೇರಿಯ ಬಳಿಗೆ ಬರುತ್ತಿದ್ದಂತೆಯೇ, ಗರುಡಿಯ ಜನಗಳು ಬರುವುದನ್ನು ಕಂಡು ಮುಂಜಾಗ್ರತಾ ಕ್ರಮವಾಗಿ ಪೋಲೀಸರನ್ನು ಸುತ್ತಲೂ ಪಹರೆ ನಿಲ್ಲಿಸಿದ್ದರು. ಬಹುಶಃ ಈ ಸಂದರ್ಭದಲ್ಲೆ ಎಚ್.ಜಿ. ಸೋಮಶೇಖರರಾವ್ ಅವರನ್ನು ಪೋಲೀಸ್

ಅಧಿಕಾರಿಯೊಬ್ಬರು ತಡೆದರೆಂದು ಕಾಣುತ್ತದೆ. ಅಲ್ಲಿದ್ದ ಪೈಲ್ವಾನ್ ನಂಜಪ್ಪ ಅಧಿಕಾರಿಯ ಬಳಿ 'ಆ ಹುಡುಗನಿಗ್ಯಾಕೆ ಹೊಡೀತೀರಿ.... ಹೊಡೆಯೋದಾದ್ರೆ ನನಗೆ ಹೊಡೆಯಿರಿ' ಎಂದು ಷರಟಿನ ಗುಂಡಿಯನ್ನು ಬಿಚ್ಚಿ ತಮ್ಮ ಎದೆಗಾರಿಕೆ ಪ್ರದರ್ಶಿಸಿದರು ! ತಮ್ಮ ನೆಚ್ಚಿನ, ಆದರ್ಶದ ಪೈಲ್ವಾನ್ ಆ ರೀತಿ ಷರಟಿನ ಗುಂಡಿ ಬಿಚ್ಚಿದ್ದನ್ನು ನೋಡಿ ಬಾಲಕನಾದ ಸೋಮಣ್ಣ ಕೂಡಾ ಷರಟಿನ ಗುಂಡಿ ಬಿಚ್ಚತೊಡಗಿದರಂತೆ ! ಧೈರ್ಯ, ಸಾಹಸದ ಸಾಂಕ್ರಾಮಿಕ ಗುಣ ಎಂದರೆ ಇದೆ ಅಲ್ಲವೆ ! ಜಿಲ್ಲಾಧಿಕಾರಿಯ ಕಚೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಬೇಕೆಂಬ ಉದ್ದೇಶವನ್ನು ಗರುಡಿಯ ಈ ಜನಗಳಿಗೆ ತಿಳಿಸಿತ್ತಾದರೂ, ಹೋರಾಟ ಅಹಿಂಸಾತ್ಮಕವಾಗಿರಬೇಕೆಂದು ಮುಂದಾಳುಗಳು ಇವರಿಗೆ ಎಚ್ಚರಿಕೆಯನ್ನು ನೀಡಿದ್ದರು. ಅಹಿಂಸಾತ್ಮಕ ಹೋರಾಟದ ಮಾತು ಒಂದು ಕಡೆಗಿರಲಿ–ಶಕ್ತಿ, ಧೈರ್ಯವನ್ನು ಅಪಾರವಾಗಿ ನಂಬಿದ್ದ ಗರುಡಿಯ ಜನಕ್ಕೆ ಪೋಲೀಸರ ತಡೆ ಒಂದು ರೀತಿ ಪ್ರಚಂಡವಾಗಿ ಇರಿಸು–ಮುರಿಸು ಉಂಟುಮಾಡಿತು. ಮುನ್ನುಗ್ಗುತ್ತಿದ್ದ ಸರ್ಪವನ್ನು ತಡೆದ ತಕ್ಷಣ, ಅದು ಸರಕ್ಕನೆ ಹಿಂದಕ್ಕೆ ತಿರುಗಿ ವೇಗವಾಗಿ ಹರಿಯುವಂತೆ, ಈ ಮೆರವಣಿಗೆಯ ಜನವೂ ಕೂಡಾ ಸರಕ್ಕನೆ ಹಿಂದಕ್ಕೆ ತಿರುಗಿ ಪಕ್ಕದಲ್ಲೆ ಇದ್ದ ತಾಲ್ಲೂಕ್ ಆಫೀಸಿನ ಕಡೆಗೆ ನುಗ್ಗಿತು.

ಒಂದು ಕಡೆ ಗುಂಪು ಶಕ್ತಿ. ಮತ್ತೊಂದು ಕಡೆ ಸೋಲರಿಯದ ಸರದಾರರಂತಿದ್ದ ಪೈಲ್ವಾನರುಗಳು. ಈ ಎರಡೂ ಒಟ್ಟುಗೂಡಿ ಅವರ ಮನಸ್ಸಿನಲ್ಲಿ ಮೂಡಿದ ಭಾವನೆಯೆಂದರೆ ರಾಷ್ಟ್ರಧ್ವಜವನ್ನು ತಾಲ್ಲೂಕ್ ಆಫೀಸಿನ ಮೇಲೆ ಹಾರಿಸಿ ತಮ್ಮ ಪ್ರತಿಭಟನೆ, ಶಕ್ತಿ ಪ್ರದರ್ಶನಗಳಿಗೆ ಸಾರ್ಥಕತೆ ತಂದುಕೊಳ್ಳಬೇಕೆಂದು ನಿರ್ಧರಿಸಿದ್ದು. ಈ ನಿರ್ಧಾರಕ್ಕೆ ಕ್ಷಿಪ್ರ ಪ್ರಯತ್ನ ಕೈ ಮಿಲಾಯಿಸಿತು.

ಪೈ. ನಂಜಪ್ಪನವರ ಹತ್ತಿಕ್ಕಲಾರದ ಹುಮ್ಮಸಿಗೆ ಅವರ ತಾರುಣ್ಯವೂ ಜೊತೆಗೂಡಿತ್ತು. ಅವರು ಈ ರಾಷ್ಟ್ರಧ್ವಜಾರೋಹಣವು ಯಾರ ಅಡೆ–ತಡೆಯಿಲ್ಲದೆ ಮುಂದುವರಿಯಬೇಕೆಂದು ಬಯಸಿದರು. ನಿರ್ಭೀತಿಯ ಮುಂದಾಳಾದ ಪೈ. ನಂಜಪ್ಪ ಮುಂಭಾಗದಲ್ಲಿದ್ದ ತಾಲ್ಲೂಕ್ ಆಫೀಸಿನ ಕಿಟಕಿಗಳ ಮೂಲಕ ಮೇಲೆ ಹತ್ತಲು ಸಿ.ಟಿ. ತಿಪ್ಪೇಸ್ವಾಮಿ, ಪೋಸ್ಟಭೀಮಣ್ಣನ ಮಗ ಅಡವೆಪ್ಪ, ಮುನಿಸ್ವಾಮಿ – ಇವರುಗಳನ್ನು ಎತ್ತಿ ಮೇಲಕ್ಕೆ ಕಳುಹಿಸಿದರು. ಅವರು ತಾಲ್ಲೂಕ್ ಆಫೀಸಿನ ಮೇಲೆ ತುರ್ತಾಗಿ ಬಾವುಟ ಹಾರಿಸಬೇಕೆಂದು ನಂಜಪ್ಪ ಆರ್ಭಟಿಸುವುದರ ಜೊತೆಗೆ, ಅವರಿಗೆ ಕುಮ್ಮಕ್ಕು ಕೊಟ್ಟು ಉತ್ತೇಜನದ ಮಾತುಗಳನ್ನು ಆಡಿದರು.

ಮೇಲೆ ಹತ್ತಿದ ಆ ಮೂರು ಜನರಲ್ಲಿ ಅಡವೆಪ್ಪನಿಗೆ ಬಾವುಟಹಾರಿಸಲು ಮತ್ತು ಅದನ್ನು ನಿಲ್ಲಿಸಲು ತಕ್ಕನಾದ ಹುರಿ ಸಿಕ್ಕಲಿಲ್ಲ. ಅದಕ್ಕಾಗಿ ಆತ ಬೇರೆ ದಾರಿ ಕಾಣದೆ ತನ್ನ ಸೊಂಟದಲ್ಲಿ ಕಟ್ಟಿಕೊಂಡಿದ್ದ ಉಡುದಾರವನ್ನೇ ಕಿತ್ತು ಬಾವುಟಕ್ಕೆ ಕಟ್ಟಬೇಕೆಂದು ಆತುರಾತುರವಾಗಿ ಪ್ರಯತ್ನಪಟ್ಟ, ಆದರೆ ಅದು ಬರಲೊಲ್ಲದು ! ಅಂತೂ ಬಾವುಟವನ್ನು ಹಾರಿಸುವ

ಶಾಸ್ತ್ರವನ್ನಾದರೂ ಮಾಡದೆಯೇ ಕೆಳಗಿಳಿಯಬಾರದೆಂದು ಶತಪ್ರಯತ್ನ ಮಾಡುತ್ತಿರುವ ಸಂದರ್ಭದಲ್ಲೆ ಪೋಲೀಸ್ ಪಡೆ ತಾಲ್ಲೂಕ್ ಆಫೀಸಿನ ಕಡೆಗೆ ಧಾವಿಸಿ ಬಂದಿತು. ಆಗಿನ ಜಿಲ್ಲಾಧಿಕಾರಿಗಳಾಗಿದ್ದ ಎಚ್.ಎನ್. ಪಾಳೇಗಾರರೂ ತಾಲ್ಲೂಕ್ ಆಫೀಸಿನ ಬಳಿಗೆ ಬಂದು ಪರಿಸ್ಥಿತಿಯ ಸೂಕ್ಷ್ಮತೆಗಳನ್ನು, ಗಾಂಭೀರ್ಯವನ್ನು ಅರಿತರೆಂದು ಹೇಳಲಾಗುತ್ತದೆ. ಅದರಲ್ಲಿಯೂ ಗುಂಪಿನ ಉತ್ಸಾಹ, ಕೇಕೆಯೆಲ್ಲಾ ದೊಡ್ಡಗರುಡಿಯವರದೆ. ಇದು ನಿಯಂತ್ರಣಕ್ಕೆ ಬಾರದೆ ಹೋಗಬಹುದೆಂದು ಮೊದಲು ಲಾಠಿಚಾರ್ಜ್ ಮಾಡಲಾಯಿತು. ಇತ್ತ ಅಡಮೆಪ್ಪ ರಾಷ್ಟ್ರಧ್ವಜ ಹಾರಿಸಿದರೂ, ಅದು ಹುರಿಯಿಂದ ಬಿಗಿಗೊಳಿಸಿರಲಿಲ್ಲವಾದ್ದರಿಂದ ಅದು ಸರಿಯಾಗಿ ಹಾರುವಂತಿರಲಿಲ್ಲ. ಉತ್ಸಾಹ, ಕೇಕೆ ಯಾವಾಗ ಗರುಡಿಯ ಜನರ ಗುಂಪಿನಿಂದ ಭೋರ್ಗರೆಯಿತೋ, ಅದು ಅಪಾಯಕಾರಿಯಾಗಿ ಪರಿಣಮಿಸಬಹುದೆಂದು ಬಗೆದ ಸರ್ಕಾರವು ಪೋಲೀಸರಿಗೆ ಗೋಲೀಬಾರ್‌ಗೆ ಆಜ್ಞಾಪಿಸಿತು.

ಯಾವಾಗ ಫೈರಿಂಗ್‌ಗೆ ಆಜ್ಞಾಪಿಸಲಾಯಿತೋ, ಆಗ ತಾಲ್ಲೂಕ್ ಆಫೀಸಿನ ಮುಂದೆ ನಡೆಯಬಾರದ ಗಲಭೆ, ಗದ್ದಲ, ಗೊಂದಲದ ವಾತಾವರಣ ಸೃಷ್ಟಿಯಾಯಿತು. ಯಾಕೆಂದರೆ ಮೆರವಣಿಗೆಯಲ್ಲಿ ಪಾಲುಗೊಂಡ ಗರುಡಿಯ ಜನ ಮಾತ್ರ ಅಲ್ಲಿ ಇರಲಿಲ್ಲ. ಈ ಮೆರವಣಿಗೆಯನ್ನು ನೋಡಲು ಕೆಲವರು ಬಂದಿದ್ದರು. ತಾಲ್ಲೂಕ್ ಆಫೀಸಿನಲ್ಲಿ ಕೆಲಸವಿದ್ದವರು ಬಂದಿದ್ದರು. ಗರುಡಿಯವರ ಜೊತೆಗೆ ಕೆಲವು ಹೆಣ್ಣುಮಕ್ಕಳು ಮೆರವಣಿಗೆಯಲ್ಲಿ ಬಂದಿದ್ದರು. ಫೈರಿಂಗ್ ಆದ ತಕ್ಷಣ ಗುಂಡಿನ ಶಬ್ದದಿಂದ ದಿಗ್ಭ್ರಮೆಗೊಂಡ ಜನ ಕಾಲಿಗೆ ಬುದ್ಧಿ ಹೇಳಿ ದಿಕ್ಕು ದಿಕ್ಕಿಗೆ ಓಡತೊಡಗಿದರು.

ಕೆಲವರು ಓಡಿ ಬಂದು ಮೆಜೆಸ್ಟಿಕ್ ಹೋಟಲಿನಲ್ಲಿ (ಅದು ಚಿತ್ರದುರ್ಗ ನಗರ ಸಭೆ ಎದುರುಗಡೆ, ಈಗ ಸ್ಥಾಪಿತವಾಗಿರುವ ಮದಕರಿನಾಯಕ ಪ್ರತಿಮೆಯ ಸರ್ಕಲ್ ಬಳಿ ಇದೆ.) ಆಶ್ರಯ ಪಡೆದರು. ಪೋಲೀಸರು ಜನರು ಕಂಡಲ್ಲಿ ಅಟ್ಟಿಸಿಕೊಂಡು ಹೋಗಿ ಗುಂಡು ಹಾರಿಸಿದರು.

ಕೆಲವರು ಮಿಡ್ಲ್‌ಸ್ಕೂಲ್ ಫೀಲ್ಡ್‌ನಲ್ಲಿ ತಪ್ಪಿಸಿಕೊಂಡು ಓಡಿಹೋದರು. ಓಲ್ಡ್ ಮಿಡ್ಲ್ ಸ್ಕೂಲ್ ಎದರುಗಡೆ ಮೊದಲು ಒಂದು ಬುಕ್ ಡಿಪ್ಪೋ ಇತ್ತು. ಹಾಗೆ ತಪ್ಪಿಸಿಕೊಂಡು ಓಡಿ ಬಂದವರು ಆ ಬುಕ್ ಡಿಪೋದಲ್ಲಿ ಅಡಗಿ ಕುಳಿತರು. ಹಾಗೆ ತಪ್ಪಿಸಿಕೊಂಡು ಓಡಿ ಬಂದು ಆ ಬುಕ್ ಡಿಪ್ಪೋದಲ್ಲಿ ಅಡಗಿ ಕುಳಿತವರಲ್ಲಿ ಪೈ. ನಂಜಪ್ಪನವರ ಶಿಷ್ಯರಾದ ಪೈಲ್ವಾನ್ ವಸಂತರಾವ್ ಕೂಡಾ ಒಬ್ಬರು. ಅವರು ಹೇಳುವ ಪ್ರಕಾರ ಪೋಲೀಸರು ಹಾರಿಸುತ್ತಿದ್ದ ಗುಂಡಿನ ಶಬ್ದ ಇಡೀ ದುರ್ಗಕ್ಕೆ ಕೇಳಿಸುತ್ತಿತ್ತು. ಚಿತ್ರದುರ್ಗವು ಗುಡ್ಡ ಬೆಟ್ಟಗಳ ಆವರಣದಲ್ಲಿದ್ದುದರಿಂದ ಆ ಗುಂಡುಗಳ ಶಬ್ದ ಮಾರ್ದನಿಸುತ್ತಿತ್ತು.

ಪೈ. ವಸಂತರಾವ್ ಹೇಳುವ ಪ್ರಕಾರ ಚಿತ್ರದುರ್ಗದಲ್ಲಿ ಅದು ಮೊದಲ ಫೈರಿಂಗ್ ಆಗಿತ್ತು. ದುರ್ಗದ ತುಂಬಾ ಗುಂಡು ಹಾರಿಸಿದ ಶಬ್ದ, ತಪ್ಪಿದರೆ ಹೊಗೆ ತುಂಬಿಕೊಂಡಂತೆ

ಭಾಸವಾಗುತ್ತಿತ್ತು. ಇಷ್ಟಾಗಿಯೂ ಆ ದಿನ ಸಾವು-ನೋವಿನ ಸಂಗತಿಗಳು ಆದಂತೆ ಕಾಣುವುದಿಲ್ಲ. ದೊಡ್ಡಗರುಡಿಯವರೇ ಆದ ಕಾರ್ಪೆಂಟರ್ ಪಾಪಣ್ಣ ಎನ್ನುವವರು ಮೆಜೆಸ್ಟಿಕ್ ಸರ್ಕಲ್‌ನಲ್ಲಿ ಬರುತ್ತಿರುವಾಗ, ಪೋಲೀಸರು ಹಾರಿಸಿದ ಗುಂಡು ಇವರ ತೊಡೆಯಲ್ಲಿ ಹಾಯ್ದು ಹೋಯಿತು. ಹೀಗೆ ಹೊಡೆತ ತಿಂದ ಪಾಪಣ್ಣನವರಿಗೆ ಪೈ. ವೀರಭದ್ರಪ್ಪ ತಕ್ಷಣ ಕರೆದೊಯ್ದು ತನ್ನ ಮನೆಯಲ್ಲಿ ಆಶ್ರಯಕೊಟ್ಟರು. ಬಳಿಕ ಶಂಕರ್ ಟಾಕೀಸ್ ಬಳಿಯಿರುವ ಡಾ. ಶಂಕರ್ ಅವರಿಂದ ಚಿಕಿತ್ಸೆ ಮಾಡಿಸಿದರು. ಈಗ ಇವರಿಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಸಿಕ್ಕುವ ಪಿಂಚಣಿ ಸಿಕ್ಕುತ್ತಿದೆ. ಹಾಗೆ ಇನ್ನು ಯಾರು ಯಾರಿಗೆ ಗುಂಡು ತಾಕಿತೋ ಗೊತ್ತಿಲ್ಲ. ಮೊಸರು ಮಾರಲು ಬಂದಿದ್ದ ಹೆಂಗಸೊಬ್ಬಳಿಗೆ ಗುಂಡು ತಾಕಿತಂತೆ. ಒಬ್ಬ ಮೋಚಿಗೆ ಈ ಸಂದರ್ಭದಲ್ಲಿ ಗುಂಡು ತಾಕಿತಂತೆ. ಚಿತ್ರದುರ್ಗವು ಕಂಡ ಮೊದಲ ಗೋಲೀಬಾರ್ ಇದಾಗಿದ್ದರೂ ಹೆಚ್ಚಿನ ಸಾವು-ನೋವು ಆಗಲಿಲ್ಲ. ಅದಕ್ಕೆ ಕಾರಣ ಪೋಲೀಸರು ಉದ್ರಿಕ್ತರಾಗಿ ಎರ್ರಾಬಿರ್ರಿ ಗುಂಡು ಹಾರಿಸದೆ ತಾಳಿದ ಮುಂಜಾಗ್ರತೆಯೂ ಕಾರಣವಿರಬಹುದು ; ಜಿಲ್ಲಾಧಿಕಾರಿಗಳು ಕೊಟ್ಟ ಮುನ್ನೆಚ್ಚರಿಕೆಯೂ ಕಾರಣವಾಗಿರಬಹುದು.

ಈ ಅರಮನೆಯ ಸತ್ಯಾಗ್ರಹದಲ್ಲಿ ಪಾಲುಗೊಂಡು ಹೋರಾಡಿದ ಅನೇಕರು ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಪಡೆಯುತ್ತಿದ್ದಾರೆ. ಅವರಲ್ಲಿ ಹಗಲು ದೀವಟಿಗೆ ಗರುಡಿಯ ಅಬ್ದುಲ್‌ಖಾದರ್ ಅವರೂ ಒಬ್ಬರು. ಈ ಪೈಲ್ವಾನರು ನಡೆಸಿದ ಧ್ವಜಾರೋಹಣದಲ್ಲಿ ಪಾಲುಗೊಂಡು ಗೋಲೀಬಾರ್ ಆದಾಗ ತಪ್ಪಿಸಿಕೊಂಡು ಪಕ್ಕದಲ್ಲಿರುವ ಗುಂಟುನೂರಿನಲ್ಲಿ ತಲೆಮರೆಸಿಕೊಂಡಿದ್ದರು. ಅಲ್ಲಿ ಇವರನ್ನು ಸೆರೆ ಹಿಡಿದು ಶಿಕ್ಷೆ ಕೊಟ್ಟರು. ಎಂಭತ್ತು ವಯಸ್ಸು ದಾಟಿರುವ ಅವರು ಈ ಅನುಭವ ಹಂಚಿಕೊಳ್ಳುತ್ತಾರೆ. ಆದರೆ ಇಲ್ಲಿಯೂ ಬಿಳಿಕಾಲರಿನ ಕಳ್ಳರು ಪ್ರವೇಶಿಸಿ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ ಪಡೆಯುತ್ತಿದ್ದಾರೆಂಬ ಮಾತು ಕೇಳಿ ಬರುತ್ತಿದೆ. ಅಹಿಂಸೆ, ಸತ್ಯ ಎಂದು ಜೀವ ತೇದ ಗಾಂಧಿಯನ್ನೇ ಮುಂದಿಟ್ಟುಕೊಂಡು ಮಾಡಿದ ಹೋರಾಟದಲ್ಲಿ, ಇಂಥ ಟೊಳ್ಳು ಜನರು, ಠಕ್ಕರು ಸೇರಿಕೊಂಡಿದ್ದು ದೇಶದ ದೌರ್ಭಾಗ್ಯ.

* * *

ನಿತ್ಯ ಮಾರಣಹೋಮ ನಡೆಯುವ ಕಡೆ ಸಾವು-ನೋವು, ಹಿಂಸೆ ಮಾಮೂಲು ಸಂಗತಿಯಾಗಿ ಬಿಟ್ಟಿರುತ್ತದೆ. ಅಂತಹ ಪ್ರಕ್ಷುಬ್ಧತೆಯನ್ನು ಎಂದೂ ಕಂಡರಿಯದ ಊರು ತಲ್ಲಣಕ್ಕೀಡಾಯಿತು. ಗರಡಿ, ಪೈಲ್ವಾನರು, ತಾಲ್ಲೂಕ್ ಆಫೀಸ್, ಬಾವುಟ, ಪೋಲೀಸರು, ಗುಂಡು - ಎಂಬುದೇ ಮನೆ ಮನೆಗಳ ಮಾತಾಯಿತು. ದೊಡ್ಡ ಗರುಡಿಯ ಜನ ಉದ್ರಿಕ್ತರಾದರು. ಅವರ ಉದ್ರಿಕ್ತತೆಗೆ ಫೈರಿಂಗ್ ನಡೆಸಿದ್ದು ಒಂದು ಕಾರಣವಾದರೆ, ಅವರ ಮನಸ್ಸನ್ನು ಕದಡಲು ಇನ್ನೊಂದು ಕಾರಣ ಎಚ್.ಎನ್. ಪಾಳೇಗಾರರು. ಅವರು ನಮ್ಮವರೇ ಆಗಿ (ಅವರು ದುರ್ಗದವರಂತೆ) ನಮ್ಮ ಜನಗಳ ಮೇಲೆ ಗುಂಡು ಹಾರಿಸಿದರು ಎಂದು ಭಾವಿಸಿ ಒಳಗೊಳಗೆ ಅವರಲ್ಲಿ ಕೋಪ ಮಸೆಯತೊಡಗಿತು.

ಅವರು ಜಿಲ್ಲೆಯ ಸರ್ಕಾರದ ಪರಮೋಚ್ಚ ಅಧಿಕಾರಿ, ಅವರ ಕೈಯಲ್ಲಿ ಎಷ್ಟು ಶಕ್ತಿ ಇರುತ್ತೆ, ಅವರನ್ನು ಕೆಣಕಿದರೆ ತಮ್ಮ ಗತಿ ಏನಾಗುತ್ತೆ ಎಂಬುದನ್ನೆಲ್ಲಾ ಯೋಚಿಸುವುದರ ಬದಲು, ಕೆಲವರು ಒಂದು ರೀತಿಯ ಸೇಡನ್ನು ಪೈಲ್ವಾನ್ ನಂಜಪ್ಪನವರಲ್ಲಿ ಪ್ರಚೋದಿಸಿದರು. ಆಗ ಪಂಚಕಲ್ಯಾಣಿ ಕುದುರೆಯ ಮೇಲೆ ಊರಲ್ಲೆಲ್ಲಾ ಮೆರೆದಾಡುತ್ತಿದ್ದ ವೀರಬಸಪ್ಪ ಎನ್ನುವ ಒಬ್ಬರು ಇದ್ದರು. ಆತನ ಮಗ ಬಸಪ್ಪ ಎನ್ನುವವನು ಪೈ. ನಂಜಪ್ಪನವರ ಗೆಳೆಯ. ಇವರಿಬ್ಬರು ಬಹುಶಃ ಆ ದಿನ ಕೊಂಚ ಹೆಚ್ಚು ಕುಡಿದಿರಬೇಕು. ಆ ಕುಡಿತದ ಅಮಲಿನಲ್ಲಿ ಬಸಪ್ಪ, ಪೈ. ನಂಜಪ್ಪರನ್ನು ಡಿ.ಸಿ. ಕಾಂಪೌಂಡಿಗೆ ನುಗ್ಗಿ ಒಳಗೆ ಹೋಗಿ ಗಲಾಟೆ ಮಾಡಲು ಪ್ರೋತ್ಸಾಹಿಸಿದ.

ಆಗ ಡಿ.ಸಿ. ಕಾಂಪೌಂಡ್ ಕಾಯುತ್ತಿದ್ದವನು ಕುರುಮರಡಿಯ ತಿಪ್ಪಯ್ಯ ಎಂಬುವವನು. ಆತನನ್ನು ಲೆಕ್ಕಿಸದೆಯೇ ನಂಜಪ್ಪ ಕಾಂಪೌಂಡಿನ ಒಳಗೆ ನುಗ್ಗಿಯೇ ಬಿಟ್ಟ. ಬಳಿಕ ಹುಚ್ಚಾಬಟ್ಟೆ ಆವೇಶದಿಂದ ಡಿ.ಸಿ. ಬಂಗ್ಲೆಯ ಬಾಗಿಲುಗಳನ್ನು ಬಡಿದು ಅವನ್ನು ತೆಗೆದುಬಿಟ್ಟ. ಅನಂತರ ತನ್ನ ಸೇಡು ತೀರಿಸಿಕೊಳ್ಳಲೆಂಬಂತೆ ಆತ ಜಿಲ್ಲಾಧಿಕಾರಿಗಳ ಮುಂದೆ ಯದ್ವಾ ತದ್ವಾ ಮಾತಾಡಿದ. ಎಚ್.ಎನ್. ಪಾಳೆಯಗಾರರು ಆಕಸ್ಮಿಕವಾಗಿ ನುಗ್ಗಿ ಬಂದು ಈತ ಸೃಷ್ಟಿಸಿದ ಹಗರಣವನ್ನು ಕಂಡು ಆ ಕ್ಷಣದಲ್ಲಿ ದಿಗ್ಭ್ರಾಂತರಾಗಿ ನಡುಗಿಹೋದರಂತೆ. ಏನೋ ಅಪಾಯ ಸಂಭವಿಸ ಬಹುದೆಂದು ಊಹಿಸಿ ತಮ್ಮ ಹೆಂಡತಿ ಮಕ್ಕಳನ್ನು ಹಿಂದಿನ ಬಾಗಿಲ ಮೂಲಕ ಕಾರಿನಲ್ಲಿ ಬಂಧುವೊಬ್ಬರ ಮನೆಗೆ ಕಳುಹಿಸಿದರೆಂದು ಊರಲ್ಲಿ ಸುದ್ದಿ ಹರಡಿತು. ತಕ್ಷಣವೇ ನಂಜಪ್ಪನನ್ನು ಹಿಡಿಯುವ ಪ್ರಯತ್ನವನ್ನು ಪೋಲೀಸರು ಬಹಳ ಗಂಭೀರವಾಗಿ ಮಾಡಿದರೆಂದು ಕಾಣುತ್ತದೆ. ಆ ಕತ್ತಲಿನಲ್ಲಿ ನಂಜಪ್ಪ ತನ್ನ ಚಾಣಾಕ್ಷತನದಿಂದ ತಪ್ಪಿಸಿಕೊಂಡು ಬಂದು ಬಿಟ್ಟ. ಹಾಗೆ ತಪ್ಪಿಸಿಕೊಂಡು ಬರಲು ಕಾವಲುಗಾರ ಕುರುಮರಡಿ ಕೆರೆಯ ತಿಪ್ಪಣ್ಣನೂ ನೆರವಾದನೆಂದು ಹೇಳಲಾಗುತ್ತದೆ.

ಊರಿನಲ್ಲಿ ಗೋಲೀಬಾರ್‌ನಿಂದ ಉಂಟಾದ ಬಿಸಿಯೇ ಆರಿರಲಿಲ್ಲ. ಅದರ ಜೊತೆಗೆ ನಂಜಪ್ಪ ಡಿ.ಸಿ. ಕಾಂಪೌಂಡಿನಲ್ಲಿ ನುಗ್ಗಿ ತಪ್ಪಿಸಿಕೊಂಡು ಬಂದ ಸುದ್ದಿ ಉರಿಯುವ ಬೆಂಕಿಗೆ ತುಪ್ಪ ಹಾಕಿದಂತಾಯಿತು. ಇದಾದ ಒಂದೆರಡು ದಿನಗಳಲ್ಲಿಯೇ ನಂಜಪ್ಪ ಮತ್ತು ಕೆಲವರನ್ನು ಬಂಧಿಸಲು ಅರೆಸ್ಟ್ ವಾರೆಂಟ್ ಬರಲಿದೆ ಎಂಬ ದಟ್ಟ ವದಂತಿ ಹರಡಿತು. ಅದು ವದಂತಿಯಲ್ಲ ನಿಜವಾದ ಸಂಗತಿ ಎಂಬುದು ದೊಡ್ಡ ಗರುಡಿಗೆ ತಲುಪಿತು. ಪೈ. ನಂಜಪ್ಪ ಮತ್ತು ಕೆಲವರನ್ನು ಬಂಧಿಸುತ್ತಾರೆ ಎಂಬ ಸುದ್ದಿಯನ್ನು ಗರುಡಿಯ ಜನಗಳಿಗೆ ಖಚಿತಪಡಿಸಿ ತಿಳಿಸಿದವರು ಅದೇ ಏರಿಯಾದಲ್ಲಿದ್ದ ಪೋಲೀಸ್ ಇಲಾಖೆಯ ಸಿದ್ದಪ್ಪ ಮತ್ತು ರಂಗಯ್ಯನವರು. ಸುದ್ದಿಯನ್ನು ತಲುಪಿಸಿದ್ದಷ್ಟೇ ಅಲ್ಲದೆ ಈ ಬಿಸಿ ಆರುವ ತನಕ ನಂಜಪ್ಪ ಮತ್ತು ಕೆಲವರು ಎಲ್ಲಾದರೂ ಕಣ್ಮರೆಯಾಗಿ ಕೆಲವು ಕಾಲ ತಪ್ಪಿಸಿಕೊಳ್ಳುವುದು ಒಳ್ಳೆಯದೆಂದು ಗುಪ್ತವಾಗಿ ಹಿತಮಾತು ಹೇಳಿದರು. ಈ ಮಾತುಗಳಿಂದ ಪೈ. ನಂಜಪ್ಪ ತನ್ನ ಮನೆ ಮತ್ತು ದೊಡ್ಡಗರುಡಿಯಿಂದ ದೂರವಿರಬೇಕಾದ ಅನಿವಾರ್ಯತೆ ಉಂಟಾಗಿ ದುರ್ಗದ ಬೆಟ್ಟಗಳಲ್ಲಿ ಅಡಗಿಬಿಟ್ಟರು.

ಆರಂಭದಲ್ಲಿ ತಿಳಿಸಿದಂತೆ ಸಂಪಿಗೆ ಸಿದ್ಧೇಶ್ವರನ ದೇವಾಲಯದ ಬಲಭಾಗಕ್ಕೆ ಹೋಗಿ ಅಲ್ಲಿಂದ ದಕ್ಷಿಣಕ್ಕೆ ತಿರುಗುವ ಕಣಿವೆಯ ಹಾದಿಯಲ್ಲಿ, ನೆಲ್ಲಿಕಾಯಿ ಸಿದ್ಧಪ್ಪನ ಬೆಟ್ಟದ ಬಳಿಯಿರುವ ಗೊಪ್ಪಯ್ಯನ ಚಾವಡಿ ಪ್ರದೇಶದಲ್ಲಿ ಬಹುಶಃ ಹತ್ತು-ಹದಿನೈದು ದಿನಗಳು ಗುಟ್ಟಾಗಿ ಇದ್ದಿರಬಹುದು. ನಿರ್ಜನವಾದ ಈ ಭಾಗದಲ್ಲಿ ನಾಲ್ಕು ದಿನ ಇರುವುದೇ ಘೋರ ಅನುಭವ. ಆದರೆ ಆತ ಇಲ್ಲಿ ಹತ್ತು-ಹದಿನೈದು ದಿನಗಳು ಇದ್ದನೆಂದರೆ ಅದು ಒಂದು ಸಾಹಸವೇ ಸರಿ. ನಂಜಪ್ಪನ ಬಗ್ಗೆ ಅಭಿಮಾನ ಬೆಳೆಸಿಕೊಂಡಿರುವ ಕೆಲವರು ತುಂಬಾ ಉತ್ಪ್ರೇಕ್ಷಿಸಿ ಬೆಟ್ಟದಲ್ಲಿ ನಂಜಪ್ಪ ಮೂರು ನಾಲ್ಕು ತಿಂಗಳು ಇದ್ದ ಅನ್ನುತ್ತಾರೆ. ಅದು ಉತ್ಪ್ರೇಕ್ಷೆಯೇ ಹೊರತು ನಿಜವಲ್ಲ. ಏಕೆಂದರೆ ಪೋಲೀಸ್ ಸಿಬ್ಬಂದಿಯ ಕಣ್ಣುತಪ್ಪಿಸಿ ಅಷ್ಟು ದಿನಗಳ ಕಾಲ, ಊರಿಗೆ ಇಷ್ಟು ಅಂಟಿಕೊಂಡಿರುವ ಬೆಟ್ಟದಲ್ಲಿರಲು ಸಾಧ್ಯವಿರಲಿಲ್ಲ.

ಈ ಸಮಯದಲ್ಲಿ ನಂಜಪ್ಪನವರ ಜೊತೆಗೆ ಪೈ. ಬಷೀರ್, ಮೀಸೆ ನಿಂಗಣ್ಣ ಇದ್ದರೆಂದು ಹೇಳುತ್ತಾರೆ. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯ ಎಂಬ ಸ್ಥಿತಿಯಲ್ಲಿದ್ದ ನಂಜಪ್ಪರಿಗೆ ಊಟದ ವ್ಯವಸ್ಥೆ ಹೇಗಾಯಿತು? ಸಾಹಸಕ್ಕೆ ತಳ್ಳಲ್ಪಟ್ಟ ನಂಜಪ್ಪರ ಜೀವನದ ಕಥೆಯೊಡನೆ ಯಾರು ಯಾರೋ ತಮ್ಮ ಹೆಸರುಗಳನ್ನೂ ಸೇರಿಸಿಕೊಂಡು ಮಿಂಚಲು ಪ್ರಯತ್ನಿಸಿದಂತೆ ಈ ಊಟದ ವ್ಯವಸ್ಥೆಯ ಬಗ್ಗೆಯೂ ಹಲವು ಹೇಳಿಕೆಗಳು ಇವೆ. ಅವನ್ನು ನಂಬಬೇಕೋ ಬಿಡಬೇಕೋ ತಿಳಿಯುತ್ತಿಲ್ಲ. ಉದಾಹರಣೆಗೆ ಕೆ.ವಿ. ಮಂಜುನಾಥರಾವ್ (ಲಾವಣಿಮಂಜಣ್ಣ) ತಮ್ಮ ಸ್ವಾತಂತ್ರ್ಯ ಹೋರಾಟದ ನೆನಪುಗಳಲ್ಲಿ ದಾಖಲಿಸಿರುವಂತೆ ಅವರು ಗುಡ್ಡದಲ್ಲಿದ್ದ ಪೈ. ನಂಜಪ್ಪನವರಿಗೆ ಊಟ ಸಾಗಿಸುತ್ತಿದ್ದೆ ಎಂದು ಹೇಳುತ್ತಾರೆ. ಹಾಗೆ ನೋಡಿದರೆ ಅವರಿಗೆ ಆ ಸಂದರ್ಭದಲ್ಲಿ ದೊಡ್ಡಗರುಡಿಯ ನಿಕಟಸಂಪರ್ಕವೇನೂ ಇದ್ದಂತೆ ಕಾಣುವುದಿಲ್ಲ. ಅವರ ಒಡನಾಟ ನಂಜಪ್ಪನ ಜೊತೆಗೆ ಹೇಗಿತ್ತು ಎಂಬ ಬಗ್ಗೆ ದೊಡ್ಡಗರುಡಿಯ ಜನಗಳು ಆ ಒಡನಾಟದ ಬಗ್ಗೆ ಅಷ್ಟೇನು ಒತ್ತು ಕೊಟ್ಟು ಮಾತನಾಡುವುದಿಲ್ಲ. ಹಾಗಾದರೆ ಅವರು ಹೇಳುವ ಈ ಮಾತಿನ ಅರ್ಥ ಎಷ್ಟು ಬೆಲೆಬಾಳುವಂಥದ್ದು ಎಂಬುದು ನಮಗೆ ಒರೆಹಚ್ಚಲು ಈಗ ಸಾಧ್ಯವಾಗುತ್ತಿಲ್ಲ.

ಇನ್ನೊಬ್ಬ ವಯೋವೃದ್ಧರು ಇಲ್ಲಿನ ಗರುಡಿಗಳ ಬಗ್ಗೆ ಸಂಬಂಧವಿಟ್ಟುಕೊಂಡು ಮಾತನಾಡುವ ನರಸಿಂಹ ಜಟ್ಟಿಯವರು ಇತ್ತೀಚೆಗೆ ಬರೆದಿರುವ ತಮ್ಮ ಲೇಖನದಲ್ಲಿ "ಈತ ತಿಂಗಳುಗಟ್ಟಲೇ ಬೆಟ್ಟದ ಗವಿಗಳಲ್ಲಿ ಇರುತ್ತಿದ್ದ. ನಾವೆಲ್ಲರೂ ಈತನಿರುವ ಜಾಗಕ್ಕೆ ಅನ್ನ ಆಹಾರಗಳನ್ನು ತೆಗೆದುಕೊಂಡು ಹೋಗಿ ಬಂಡೆಗಳ ಮೇಲೆ ಇಟ್ಟರೆ ಅದನ್ನು ತೆಗೆದುಕೊಂಡು ಹೋಗಿ ಜೀವಿಸುತ್ತಿದ್ದ" ಎಂದು ತಿಳಿಸುತ್ತಾರೆ. ನಂಜಪ್ಪನನ್ನು ಗವಿಗಳಲ್ಲಿ ವಾಸಮಾಡಿಕೊಂಡಿದ್ದ ವನ್ಯ ಪ್ರಾಣಿಯಂತೆ ಬಣ್ಣಿಸುವ ಈ ಹೇಳಿಕೆಯನ್ನು ಓದಿದರೆ ನಗು ಬರುತ್ತದೆ. ಆದರೆ ಬೆಟ್ಟದಲ್ಲಿದ್ದಾಗ ನಂಜಪ್ಪನಿಗೆ ಊಟದ ವ್ಯವಸ್ಥೆ ಮಾಡಿದವರು ದೊಡ್ಡಗರುಡಿಯ ಪೈ. ನಂಜಪ್ಪನ ನಿಕಟವರ್ತಿಗಳು ಹೇಳುವ ಪ್ರಕಾರ ಕಾರ್ಪೆಂಟರ್ ಕಿಟ್ಟಪ್ಪ ಮತ್ತು ಡಿ.ಕೆ. ನಿಂಗಪ್ಪ. ಇದು ಹೆಚ್ಚು ನಂಬಲರ್ಹವಾದ ಸಂಗತಿಯಾಗಿದೆ.

ಬೆಟ್ಟದ ಗುಪ್ತ ಸ್ಥಳಗಳಲ್ಲಿ ಕಾಲ ಕಳೆಯುತ್ತಿದ್ದರೂ ತಮಗೆ ಅಪಾಯವಿದೆ ಎಂದು ಅರಿತ ನಂಜಪ್ಪ ಅಲ್ಲಿಂದಲೂ ತಪ್ಪಿಸಿಕೊಂಡು ಆದಷ್ಟು ಜಾಗ್ರತೆ ಹೋಗಬೇಕಾದ ಅನಿವಾರ್ಯತೆಯನ್ನು ಮನಗಂಡರು. ಬೆಟ್ಟದಿಂದ ಗುಪ್ತವಾಗಿ ತಪ್ಪಿಸಿಕೊಂಡು ಹೋಗಲು ಅವರ ಆಪ್ತರು ಈ ಸಮಯದಲ್ಲಿ ನೆರವಿಗೆ ಬಂದರು. ಹಾಗೆ ತಪ್ಪಿಸಿಕೊಂಡ ನಂಜಪ್ಪ ದಾವಣಗೆರೆ ತಲುಪಿದರು. ಅದು ಅವರಿಗೆ ಮೆಚ್ಚಿನ ಸ್ಥಳ. ದಾವಣಗೆರೆಯವರಿಗೂ ನಂಜಪ್ಪ ಮೆಚ್ಚಿನ ಪೈಲ್ವಾನ್. ಹೀಗಾಗಿ ಅಲ್ಲಿನ ಪೈಲ್ವಾನ ಪಾರವ್ವರ ದುರ್ಗಪ್ಪ ಎಂಬಾತ ದಾವಣಗೆರೆಯಲ್ಲಿ ನಂಜಪ್ಪನನ್ನು ಚೆನ್ನಾಗಿ ನೋಡಿಕೊಂಡ. ಪೈ. ಚಾರ್ಲಿ ಮನೆಯವರೂ ನೋಡಿಕೊಂಡರೆಂದು ಹೇಳುತ್ತಾರೆ. ಪೈ. ಪಾರವ್ವರ ದುರ್ಗಪ್ಪ ಇಂಥ ಕಷ್ಟ ಸಮಯದಲ್ಲಿ ನಂಜಪ್ಪನನ್ನು ನೋಡಿಕೊಂಡಿದ್ದೇನೋ ಸರಿ. ಆದರೆ ಈ ಉಪಕಾರವನ್ನು ಉಪಯೋಗಿಸಿ ಕೊಂಡು ನಂಜಪ್ಪನವರ ಜೊತೆ ಕುಸ್ತಿ ಆಡುವ ಒಂದು ಅವಕಾಶ ಕಲ್ಪಿಸಿಕೊಂಡನು. ಆ ಕುಸ್ತಿಯನ್ನು ಕುರಿತು ಮುಂದೆ ನೋಡೋಣ.

ಈಗ ದಾವಣಗೆರೆಯಲ್ಲಿದ್ದ ನಂಜಪ್ಪನವರಿಗೆ ದುರ್ಗದಿಂದ ಕೊಂಚ ದೂರವಿದ್ದೇನೆ ಎನ್ನಿಸಿದರೂ ಅಪಾಯದಿಂದ ದೂರವಿದ್ದೇನೆ ಎನ್ನಿಸಲಿಲ್ಲ. ಆದ್ದರಿಂದ ಇಲ್ಲಿಂದಲೂ ದೂರವಾಗಿ ಹರಿಹರಕ್ಕೆ ಹೋಗಿ ಅಲ್ಪಕಾಲ ಅಲ್ಲಿದ್ದು ಅನಂತರ ತುಂಗಭದ್ರೆ ಹೊಳೆದಾಟಿ ರಾಣೆಬೆನ್ನೂರಿಗೆ ಹೋದರು. ಅವರು ರಾಣೆಬೆನ್ನೂರಿಗೆ ಹೋಗಲೇ ಇಲ್ಲ, ಹರಿಹರದ ರೈಲನ್ನು ಹತ್ತಿದಾಗ ಬಂಧನಕ್ಕೆ ಒಳಗಾದರು ಎಂದು ಹೇಳುವವರಿದ್ದಾರೆ. ಆದರೆ ಬಹುಜನದ ಅಭಿಪ್ರಾಯದ ಪ್ರಕಾರ ಅವರು ರಾಣೆಬೆನ್ನೂರಿಗೆ ಹೋದರು. ಅಲ್ಲಿಯೂ ಅವರ ಪೈಲ್ವಾನ್ ಗೆಳೆಯರು ಇವರನ್ನು ಚೆನ್ನಾಗಿ ನೋಡಿಕೊಂಡರು. ಅಲ್ಲಿ ಕೆಲವು ಕುಸ್ತಿಗಳನ್ನು ಇವರು ಆ ಸಂದರ್ಭದಲ್ಲಿ ಮಾಡಿದರೆಂದು ಹೇಳುತ್ತಾರೆ.

ಕೆಲವು ತಿಂಗಳು ಕಳೆದ ಬಳಿಕ ವಾತಾವರಣ ತಿಳಿಯಾಗಿದೆ, ಇನ್ನೇನೂ ಬಂಧನ–ಗಿಂಧನ ಆಗಲಾರದು ಎಂದುಕೊಂಡು ಮತ್ತೆ ರೈಲಿನಲ್ಲಿ ದುರ್ಗದ ಕಡೆಗೆ ಹೊರಟರು. ಅವರು ದಾವಣಗೆರೆ ತಲುಪಿದಾಗ ಬುರ್ಲಿ ಎಂಬ ಸಬ್ ಇನ್ಸ್‌ಪೆಕ್ಟರ್ ಆತನನ್ನು ಕಂಡು ಹಿಡಿದು ಬಂಧಿಸಿದನು. ಆತನೂ ದುರ್ಗದವನೆ. ಆತನ ಕರ್ತವ್ಯ ಆತ ಮಾಡಬೇಕಾಗಿತ್ತು. ಅವರನ್ನು ಕೋರ್ಟು ವಿಚಾರಣೆ ಮಾಡಿ ಕೆಲವು ತಿಂಗಳು ಶಿಕ್ಷೆ ವಿಧಿಸಿತು. ಆದರೆ ಅವರು ಅಷ್ಟು ಕಾಲ ಜೈಲಿನಲ್ಲಿರಲಿಲ್ಲ. ಇಲ್ಲಿನ ರಾಜಕೀಯ ಮುಖಂಡರು ಜಿಲ್ಲಾಧಿಕಾರಿಗಳನ್ನು ಕಂಡು ಸಜೆಯನ್ನು ಕಡಿತಗೊಳಿಸಿ ಬಿಡುಗಡೆ ಮಾಡಿಸಿದ್ದರ ಜೊತೆಗೆ, ಜಿಲ್ಲಾಧಿಕಾರಿಗಳ ಕ್ಷಮೆಯನ್ನು ನಂಜಪ್ಪನವರು ಕೇಳುವಂತೆ ಮಾಡಿದರೆಂದು ಹೇಳಲಾಗುತ್ತದೆ. ಅದೇ ಸಮಯದಲ್ಲಿ ಹೋರಾಟಗಾರರಿಗೆ ಜಯ ಲಭಿಸಿ, ಅರಮನೆಯ ಚಳುವಳಿಯೂ ತಣ್ಣಗಾಯಿತು.

ಈ ಚಳುವಳಿಯನ್ನು ಕುರಿತು ಒಂದು ಮಾತನ್ನು ಸ್ಪಷ್ಟಪಡಿಸಬೇಕಾಗಿದೆ. ಅನೇಕ ದೊಡ್ಡಗರುಡಿಯ ಪೈಲ್ವಾನರಗಳು ಈ ಲೇಖಕನ ಬಳಿ ದೊಡ್ಡ ಗರುಡಿಯ ಪೈಲ್ವಾನರು

ತಾಲ್ಲೂಕ್ ಆಫೀಸಿನ ಮೇಲೆ ಬಾವುಟ ಹಾರಿಸಿದ್ದು ಬ್ರಿಟಿಷ್ ಸರ್ಕಾರದ ವಿರುದ್ಧವೇ ಹೊರತು, ಮೈಸೂರು ಚಲೋ ಚಳುವಳಿಯ ಅಂಗವಾಗಿ ಅಲ್ಲ ಎಂದು ಹೇಳುತ್ತಾರೆ. ವಿದೇಶಿ ಪ್ರಭುತ್ವ ಅಥವಾ ದೇಶೀಯ ಪ್ರಭುತ್ವ ವಿರೋಧಿಸಿ, ಪ್ರಜಾಪ್ರಭುತ್ವಕ್ಕೆ ಸೆಣಸಿದ್ದು ಹೋಲಿಕೆ ಮಾಡಬೇಕಾದುದಿಲ್ಲ. ಒಂದು ಕಡಿಮೆ, ಒಂದು ಹೆಚ್ಚು ಎಂದು ಭಾವಿಸಬೇಕಾಗಿಯೂ ಇಲ್ಲ. ಇನ್ನುಳಿದಂತೆ ಎಲ್ಲಾ ಸಂಗತಿಗಳೂ ಹೊಂದಾಣಿಕೆಯಾಗುವಂತೆ ಮಾತನಾಡುತ್ತಾರೆ. ಜಿಲ್ಲಾಧಿಕಾರಿ ಎಚ್.ಎನ್. ಪಾಳೆಯಗಾರರಿದ್ದುದರ ಬಗ್ಗೆಯೂ ಈ ಪೈಲ್ವಾನರ ತಕರಾರಿಲ್ಲ. ಆದರೆ ಎಚ್.ಎನ್. ಪಾಳೆಯಗಾರರು ಜಿಲ್ಲಾಧಿಕಾರಿಗಳಾಗಿದ್ದುದೇ ೧೯೪೭ ರಿಂದ ಎಂದು ತಿಳಿದು ಬರುತ್ತದೆ. ಇದನ್ನು ಗಮನಿಸಿದರೆ ದೊಡ್ಡಗರುಡಿಯ ಪೈಲ್ವಾನರು ತಾಲ್ಲೂಕ್ ಆಫೀಸಿನ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿದ್ದು ಜವಾಬ್ದಾರಿ ಸರ್ಕಾರಕ್ಕಾಗಿ ಎಂದು ಇದುವರೆಗಿನ ನನ್ನ ಅಭ್ಯಾಸ ತಿಳಿಸುತ್ತದೆ. ಹಾಗಲ್ಲದಿದ್ದರೆ ಇದನ್ನು ಇತಿಹಾಸಕಾರರು ಖಚಿತಪಡಿಸಿ ಹೇಳಬೇಕಾದ ಅಗತ್ಯವಿದೆ ಎಂದು ನನಗೆ ಅನ್ನಿಸುತ್ತದೆ. ಜಿಲ್ಲೆಯಲ್ಲಿ ನಡೆದ ಒಂದು ಮುಖ್ಯ ಸಂಗತಿ ಅಸ್ಪಷ್ಟ ನೆಲೆಯಲ್ಲಿ ನಿಲ್ಲಬಾರದಲ್ಲವೇ ?

ಮತ್ತೆ ನಮ್ಮ ಪೈ. ನಂಜಪ್ಪನವರ ಬದುಕಿಗೆ ಬರೋಣ. ದೇಸೀಯ ಪ್ರಭುತ್ವದ ವಿರುದ್ಧ ಹೋರಾಡಿದ ಪೈ. ನಂಜಪ್ಪನವರು ತಮ್ಮ ಗರುಡಿಯ ಪ್ರಪಂಚದಿಂದ ಹೀಗೆ ಇನ್ನೊಂದು ಸಾಮಾಜಿಕ, ರಾಜಕೀಯ ಕ್ಷೇತ್ರಕ್ಕೆ ಬಂದು ತಮ್ಮ ಪೌರುಷ, ಹುಚ್ಚುಸಾಹಸ ಮೆರೆದಿದ್ದರ ಹಿನ್ನೆಲೆ ಏನು ? ಸ್ವತಃ ಪೈ. ನಂಜಪ್ಪನವರ ಅಣ್ಣನವರಾದ ಗಂಗಾಧರಪ್ಪನವರು ರಾಜಕೀಯ ಮುಂದಾಳಾಗಿ, ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲುಗೊಂಡಿದ್ದರು. ಅದರ ಹಿನ್ನೆಲೆ, ಪ್ರಭಾವವು ನಂಜಪ್ಪನವರ ಮೇಲಾಗಿರಬಹುದು.

ಅದಕ್ಕಿಂತ ಮುಖ್ಯ ಸಂಗತಿ ಎಂದರೆ ನಂಜಪ್ಪನವರು ಆಗಷ್ಟೆ ಪೈಲ್ವಾನರಾಗಿ ರೂಪುಗೊಂಡು, ಹೆಸರು ಮಾಡುತ್ತಿದ್ದುದು ಎಂದು ನಾವು ಅವರ ಬಗ್ಗೆ ಯೋಚಿಸಬೇಕಾಗುತ್ತದೆ. ಗರುಡಿಯಲ್ಲಿ ಮಾಡಿದ ಸಾಧನೆ, ಗಳಿಸಿದ ದೇಹದಾರ್ಢ್ಯ, ಮಟ್ಟಿಯಲ್ಲಿ ಕಲಿತ ಪಟ್ಟುಗಳು ಒಬ್ಬ ವ್ಯಕ್ತಿಗೆ ವಿಜಗೀಷು ಪ್ರವೃತ್ತಿಯನ್ನು ಸಹಜವಾಗಿ ಬಳುವಳಿಯನ್ನಾಗಿ ಕೊಟ್ಟುಬಿಡುತ್ತವೆ. ಅಂಥ ಅಜೇಯ ಪ್ರವೃತ್ತಿಯನ್ನು ದೊಡ್ಡಗರುಡಿ ನಂಜಪ್ಪನವರಿಗೆ ಧಾರೆಯೆರೆದು ಬೆಳಸಿದ್ದು ಹೇಗೆ ಎಂಬುದನ್ನು ಮುಂದಿನ ಪುಟಗಳಲ್ಲಿ ನೋಡೋಣ.

❑

ದೊಡ್ಡಗರುಡಿಯ ಪ್ರಸಿದ್ಧ ಪೈಲ್ವಾನ್ ನಂಜಪ್ಪನವರ ಜೀವನ ಚರಿತ್ರೆಯನ್ನು ಮುಗಿಸಿದ ಮೇಲೂ ಕೂಡಾ ಮೊದಲನೇ ಅಧ್ಯಾಯದಲ್ಲಿ ಬರುವ ಸ್ವಾತಂತ್ರ್ಯ ಚಳುವಳಿಯ ಮುಂದುವರಿಕೆಯಾಗಿ ಚಿತ್ರದುರ್ಗದಲ್ಲಿ ನಡೆದ ಅರಮನೆ ಚಳುವಳಿಯ ಬಗ್ಗೆ ಹಲವಾರು ಹಿರಿಯರಿಂದ ಮೌಖಿಕವಾಗಿ ಮತ್ತು ಕೆಲವು ಹಿರಿಯರು ಬರೆದ ಲೇಖನಗಳ ಆಧಾರದ ಮೇಲೆ ಕುತೂಹಲದಿಂದ ಹೆಚ್ಚಿನ ಮಾಹಿತಿ ಸಿಕ್ಕಬಹುದೆಂದು ಅಲ್ಲಿ-ಇಲ್ಲಿ

ವಿಚಾರಣೆ ಮಾಡಿದೆ. ಆ ಪ್ರಕಾರ ನನಗೆ ದೊರೆತ ಮತ್ತಷ್ಟು ಮಾಹಿತಿಗಳನ್ನು ಈ ಬಗ್ಗೆ ಕೊಡಲು ಇಷ್ಟಪಡುತ್ತೇನೆ.

೧) ಇಲ್ಲಿನ ಸರ್ಕಾರಿ ಕಲಾ ಕಾಲೇಜಿನ ಪ್ರಾಚಾರ್ಯರಾಗಿದ್ದ ಪ್ರೊ. ಕೆ.ಬಿ. ಪಾಲಯ್ಯನವರು ತಿಳಿಸಿದ ಪ್ರಕಾರ ಪೈ. ನಂಜಪ್ಪ ಅವರ ಪ್ರಾಥಮಿಕ ತರಗತಿಯ ಸಂಗಾತಿ. ಪೈ. ನಂಜಪ್ಪ ಮತ್ತು ಇತರ ಪೈಲ್ವಾನರು ಕೂಡಿ ನಡೆಸಿದ ಸ್ವಾತಂತ್ರ್ಯ ಹೋರಾಟವು ಮೈಸೂರಿನ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದದ್ದು. ಅವರು ಆಗ ಮೈಸೂರಿನಲ್ಲಿ ಬಿ.ಎ. (ಆನರ್ಸ್) ತರಗತಿಯಲ್ಲಿ ಓದುತ್ತಿದ್ದರು. ಜವಾಬ್ದಾರಿ ಸರ್ಕಾರಕ್ಕಾಗಿ ನಡೆಯುತ್ತಿದ್ದ ಚಳುವಳಿ ತೀವ್ರ ಸ್ವರೂಪ ತಾಳಿದ್ದರಿಂದ ಮೈಸೂರಿನಲ್ಲಿ ಶಾಲಾ, ಕಾಲೇಜು, ಹಾಸ್ಟೆಲುಗಳು ಮುಚ್ಚಲ್ಪಟ್ಟವು. ಆಗ ಅವರು ಅರಸೀಕರೆ, ತಿಪಟೂರು, ತುಮಕೂರು ಮುಂತಾದ ಕಡೆಗಳಲ್ಲಿ ಪಯಣಿಸಿ ಚಿತ್ರದುರ್ಗ ಸೇರಿದ್ದು ಕಷ್ಟವೇ ಆಯಿತು. ಆ ಸಮಯದಲ್ಲಿ ಚಿತ್ರದುರ್ಗದಲ್ಲಿ ಎಚ್.ಎನ್. ಪಾಳೇಗಾರರು ೧೯೪೭ ರಿಂದ ೪೮ರ ತನಕ ಮಾತ್ರ ಜಿಲ್ಲಾಧಿಕಾರಿಗಳಾಗಿದ್ದರು. ಅವರ ಅವಧಿಯಲ್ಲೇ ಈ ಪೈಲ್ವಾನರು ಒಂದು ದಿನದ ಮಟ್ಟಿಗೆ ಚಳುವಳಿ ಮಾಡಿ, ತಾಲ್ಲೂಕ್ ಆಫೀಸಿನ ಮೇಲೆ ರಾಷ್ಟ್ರಧ್ವಜ ಹಾರಿಸಲು ಪ್ರಯತ್ನ ಪಟ್ಟಾಗ, ಇಲ್ಲಿ ಫೈರಿಂಗ್ ಆಯಿತು. ಇದೆಲ್ಲಾ ಮುಗಿದ ಮೇಲೆ ಪೈ. ನಂಜಪ್ಪ ಪ್ರೊ. ಕೆ.ಬಿ. ಪಾಲಯ್ಯನವರಿಗೆ ಸಿಕ್ಕು ಈ ಸಂದರ್ಭದಲ್ಲಿ ಸೆರೆಮನೆವಾಸ ಅನುಭವಿಸಿದ್ದನ್ನು, ಪೋಲೀಸರ ಕೈಗೆ ಸಿಕ್ಕು ಅನುಭವಿಸಿದ ಕಿರುಕುಳವನ್ನು ಅವರ ಬಳಿ ಈತ ತೋಡಿಕೊಂಡನಂತೆ. ನನಗೆ ನನ್ನ ಗುರುಗಳಾದ ಪ್ರೊ. ಕೆ.ಬಿ. ಪಾಲಯ್ಯನವರು ಪ್ರಾಸಂಗಿಕವಾಗಿ ಮಾತನಾಡುತ್ತ ಈ ವಿಷಯ ತಿಳಿಸಿದರು.

೨) ಈ ಚಳುವಳಿಯನ್ನು ನೋಡಿದ, ಪಾಲುಗೊಂಡ ಕೆಲವು ಹಿರಿಯರು ಫೈರಿಂಗ್ ಆದ ಸಂದರ್ಭ ನೆನಪಿಸಿಕೊಳ್ಳುತ್ತಾರೆ. ಆದರೆ ಅವರಾರಿಗೂ ಖಚಿತ ದಿನಾಂಕ ತಿಳಿದಿಲ್ಲ.

೩) ನನ್ನ ಕುತೂಹಲಕ್ಕಾಗಿ ನಾಡಿನ ಹಿರಿಯ ವಿದ್ವಾಂಸರೂ, ಇತಿಹಾಸಜ್ಞರೂ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ಪಾಲುಗೊಂಡ ಬಗೆಯನ್ನು ವಿವರವಾಗಿ ಹಲವು ಸಂಪುಟಗಳಲ್ಲಿ ಬರೆದಿರುವ ಡಾ. ಸೂರ್ಯನಾಥ ಕಾಮತ್ ಅವರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ವಿಷಯ ತಿಳಿಯಲೆತ್ನಿಸಿದೆ. ಅವರು ಈ ಬಗ್ಗೆ ಉದಾರವಾಗಿ ಪ್ರೀತಿಯಿಂದ ಕೆಲವು ವಿಷಯ ತಿಳಿಸಿದರು. ಚಿತ್ರದುರ್ಗದ ಸ್ವಾತಂತ್ರ್ಯ ಹೋರಾಟ ಕುರಿತು ಬರೆಯುವಾಗ ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಶ್ರೀನಿವಾಸಮೂರ್ತಿ ಆಚಾರ್ ಮೊದಲಾದವರನ್ನು ಸಂದರ್ಶಿಸಿ, ವಿಷಯ ಸಂಗ್ರಹಿಸಿದ್ದರು. ಈ ಸ್ವಾತಂತ್ರ್ಯ ಹೋರಾಟದ ಮುಂದುವರಿಕೆಯಾಗಿ ಅರಮನೆ ಚಳುವಳಿ ನಡೆದರೂ ಅದೂ ಕೂಡಾ ಸ್ವಾತಂತ್ರ್ಯದ ಹೋರಾಟವೆ. ಏಕೆಂದರೆ ಅರಮನೆಯ ಚಳುವಳಿಯನ್ನು ಮಾಡುವಾಗ ಅವರು ತಾಲ್ಲೂಕ್ ಆಫೀಸಿನ ಮೇಲೆ ಹಾರಿಸ ಬಯಸಿದ ಧ್ವಜ, ಭಾರತದ ಧ್ವಜವೆ. ಆದ್ದರಿಂದ ಈ ಚಳುವಳಿಯನ್ನು ಸ್ವಾತಂತ್ರ್ಯ ಹೋರಾಟ ಎಂದರೆ ಕೊಂಚವೂ ತಪ್ಪಿಲ್ಲ. ಅನೇಕ ಚಳುವಳಿಗಾರರು ಈ ಕಾರಣದಿಂದಲೇ ಅದನ್ನು ಸ್ವಾತಂತ್ರ್ಯ ಹೋರಾಟವೆಂತಲೇ ಕರೆಯುತ್ತಾರೆ ಎಂದು ಸರಿಯಾದ ಸಮಜಾಯಿಷಿ ನೀಡಿದರು.

೪) ಈ ಚಳುವಳಿಯ ಅಂಗವಾಗಿ ಚಳುವಳಿಗಾರರನ್ನು ಚದುರಿಸಲು ನಡೆದ ಪೋಲೀಸ್-ಗೋಲೀಬಾರ್ ಚಿತ್ರದುರ್ಗದಲ್ಲಿಯೇ ಪ್ರಥಮವಾಗಿತ್ತು. ಅರವತ್ತು ವರ್ಷಗಳಷ್ಟು ಹಿಂದೆ ನಡೆದ ಈ ಪ್ರಮುಖ ಘಟನೆ ಯಾವ ದಿನಾಂಕದಂದು ಎಂಬುದನ್ನು ತಿಳಿಯಲು ಸಂಬಂಧಿಸಿದ ಕಚೇರಿಗಳಲ್ಲಿ ಏನಾದರೂ ದಾಖಲೆ ಸಿಕ್ಕಬಹುದೋ ಎಂದು ವಿಚಾರಿಸಿದೆ. ಹಳೆಯ ದಾಖಲೆ ಮುವ್ವತ್ತು ವರ್ಷಗಳಷ್ಟು ಹಿಂದಿನದು ಮಾತ್ರ ಸಿಕ್ಕುತ್ತದೆ. ಆದರೆ ಅದಕ್ಕಿಂತ ಹಿಂದಿನ ದಾಖಲೆ ಸಿಕ್ಕುವುದಿಲ್ಲ ಎಂದು ತಿಳಿದು ಬಂತು. ಆ ದಾಖಲೆಯ ದಿನಾಂಕವನ್ನು ಬಿಟ್ಟು ಉಳಿದ ಎಲ್ಲಾ ವಿವರಗಳನ್ನು ಹಿರಿಯರಿಂದ ಮೌಖಿಕವಾಗಿ ಮಾತ್ರ ಸಂಗ್ರಹಿಸಿ ಇಲ್ಲಿ ದಾಖಲಿಸಲಾಗಿದೆ.

೫) ತಾಲ್ಲೂಕ್ ಆಫೀಸಿನ ಮೇಲೆ ರಾಷ್ಟ್ರಧ್ವಜ ಹಾರಿಸಿದವರು ಯಾರು ಎಂಬ ಬಗ್ಗೆಯೂ ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಕೊಡುತ್ತಾರೆ. ಅದನ್ನು ಈಗಾಗಲೇ ತಿಳಿಸಲಾಗಿದೆ. ಕೆಲವರ ಪ್ರಕಾರ ಪೈ. ನಂಜಪ್ಪನವರೇ ರಾಷ್ಟ್ರಧ್ವಜವನ್ನು ಹಾರಿಸಿದರು ಎಂದು ಹೇಳುತ್ತಾರೆ. ಮಹಾಸಾಹಸಿಯಾಗಿದ್ದ ಆತ ಈ ರಾಷ್ಟ್ರಧ್ವಜವನ್ನು ಆರೋಹಣ ಮಾಡಿದ್ದರಿಂದಲೇ, ಅಲ್ಲಿ ಉದ್ರಿಕ್ತ ವಾತಾವರಣ ಸೃಷ್ಟಿಯಾಗಿ ಜಿಲ್ಲಾಧಿಕಾರಿಗಳು ಫೈರಿಂಗ್‌ಗೆ ಆಜ್ಞೆಮಾಡಿದರು ಎಂದು ಹೇಳಲಾಗುತ್ತದೆ. ಈ ಸಂಗತಿ ಪೈ. ನಂಜಪ್ಪನವರ ದೃಷ್ಟಿಯಿಂದ ಯೋಚಿಸಿದರೆ ಅಸಹಜವಾದುದೇನೂ ಇಲ್ಲ.

೨ ಬಾಲ್ಯ – ಕೌಟುಂಬಿಕ ಜೀವನ

ನಂಜಪ್ಪ ಗರಡಿಗೆ ತನ್ನನ್ನು ತಾನು ಒಪ್ಪಿಸಿಕೊಳ್ಳುವ ಮುನ್ನ ನಾವು ಸ್ವಲ್ಪ ಮಟ್ಟಿಗಾದರೂ ಆತನ ಕೌಟುಂಬಿಕ ಜೀವನ ಹುಟ್ಟು, ಬಾಲ್ಯದ ಬಗ್ಗೆ ಒಂದು ಇಣುಕು ನೋಟ ಹರಿಸುವುದು ಉತ್ತಮ. ಅದೆಷ್ಟೋ ಮನೆತನಗಳು, ಜಾತಿ–ಜನಾಂಗಗಳು ತಮ್ಮ ನೆಲೆ ಎಂದು ಒಂದು ಊರನ್ನು ಗುರುತಿಸಿಕೊಂಡರೂ, ಮೂಲ ಪರೀಕ್ಷಿಸಲು ಹೊರಟಾಗ ಅವರ ಪೂರ್ವಿಕರು ಎಲ್ಲಿಂದಲೋ ಬಂದಿದ್ದರ ಬಗ್ಗೆ ಆ ಜನ ಮಾಹಿತಿ ಒದಗಿಸುತ್ತಾರೆ, ಕೆಲವು ಐತಿಹ್ಯಗಳನ್ನು ತಿಳಿಸುತ್ತಾರೆ. ಬಹುಶಃ ಆ ರೀತಿಯ ವಲಸೆ ಹೊರಟ ಇಂತಹ ಕತೆಗಳು ಜಾತಿ ಜನಾಂಗದ್ದು ಎನ್ನುವುದಕ್ಕಿಂತ ಸೂಕ್ಷ್ಮವಾಗಿ ಗಮನಿಸಿದರೆ, ಇದು ಮನುಷ್ಯನ ಕತೆಯೆನ್ನಿಸುತ್ತದೆ !

ಈಗ ನಮ್ಮ ಪೈಲ್ವಾನ್ ನಂಜಪ್ಪನವರ ಕುಟುಂಬ ವರ್ಗದವರು ಲಾಡರು ಎನ್ನುವ ಜಾತಿಗೆ ಸೇರಿದವರು. ಇವರ ಮೂಲಪುರುಷರು ಗುಜರಾತಿನ ಕಛ್ ಪ್ರದೇಶಕ್ಕೆ ಸೇರಿದವರು. ಬಹುಶಃ ಎರಡು ಮೂರು ಶತಮಾನಗಳ ಹಿಂದೆ ಅಲ್ಲಿ ಮತೀಯ ಗಲಭೆಗಳಾಗಿ ಆ ಕುಟುಂಬದವರು ಡೆಲ್ಲಿಗೆ ಬಂದರು. ಅಲ್ಲಿಯೂ ಅವರಿಗೆ ತಾವು ಕ್ಷೇಮವಾಗಿದ್ದೇವೆ ಎನ್ನಿಸಲಿಲ್ಲ. ಈ ಲಾಡ ಜನಾಂಗದವರು ಸುಗಂಧೀವ್ಯಾಪಾರ ಮಾಡುತ್ತಿದ್ದರು. ದೆಹಲಿಯಲ್ಲಿ ತಮ್ಮ ವಾಸ ಕ್ಷೇಮವಾಗಿಲ್ಲವೆಂದು ಅರಿತ ಬಳಿಕ ದಕ್ಷಿಣ ಭಾರತಕ್ಕೆ ಬಂದು ಕರ್ನಾಟಕ ಪ್ರವೇಶಿಸಿದರು. ಬಳಿಕ ಚಿತ್ರದುರ್ಗದ ಪಾಳೆಯಗಾರರ ರಾಜ್ಯವು ತಮಗೆ ಕ್ಷೇಮವೆಂದು ನಂಜಪ್ಪನವರ ತಾತನವರು ಸುಮಾರು ನೂರೈವತ್ತು ವರ್ಷಗಳ ಹಿಂದೆ ಚಿತ್ರದುರ್ಗಕ್ಕೆ ಬಂದರು. ಇವರ ಮಗ ಲಾಡರ ಈಶ್ವರಪ್ಪನವರು ಚಿತ್ರದುರ್ಗದಲ್ಲಿ ಪ್ರಸಿದ್ಧ ವ್ಯಾಪಾರಿಯಾಗಿ ಬೆಳೆದರು. ಇವರ ಮೊಮ್ಮಕ್ಕಳು ಹೇಳುವ ಪ್ರಕಾರ, ನಂಜಪ್ಪನವರ ತಂದೆ ಈಶ್ವರಪ್ಪನವರು ತಾವೇ ಒಬ್ಬ ದೊಡ್ಡ ವ್ಯಾಪಾರಿಯಾಗುವ ಮುಂಚೆ, ಈ ಊರಿನಲ್ಲಿ ಅಂದು ಪ್ರಸಿದ್ಧವಾಗಿದ್ದ ಇನ್ನೊಬ್ಬ ವ್ಯಾಪಾರಿ ನಾರಾಯಣಶೆಟ್ಟರ ಬಳಿ ಸಂಬಳಕ್ಕೆ ಇದ್ದರಂತೆ. ತಿಂಗಳಿಗೆ ಮೂರು ಬೆಳ್ಳಿ ರೂಪಾಯಿಗಳ ಸಂಬಳ. ಅದರಲ್ಲಿ ಒಂದು ರೂಪಾಯಿ ತಿಂಗಳ ಖರ್ಚು, ಎರಡು ರೂಪಾಯಿ ಉಳಿತಾಯ ಮಾಡಿದ ಈಶ್ವರಪ್ಪನವರು ದೊಡ್ಡ ವ್ಯಾಪಾರಿಯಾಗುವ ಮುನ್ನ ಕಿರಾಣಿ ಅಂಗಡಿಯೊಂದನ್ನು ತೆರೆದರು. ಅಂದಿನ ಕಾಲದಲ್ಲಿ ನಾರಾಯಣಶೆಟ್ಟರು ಮತ್ತು ಲಾಡರ ಈಶ್ವರಪ್ಪನವರ ಅಂಗಡಿಗಳೇ ಬಹು ದೊಡ್ಡ ಅಂಗಡಿಗಳೆಂದು ಹೆಸರು ಮಾಡಿದ್ದವು. ಈ

ಲಾಡ ಜನಾಂಗದವರು ಮೈಸೂರು, ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ, ನರಸಿಂಹರಾಜ ಪುರ, ಹೊಸದುರ್ಗ, ಬೆಲಗೂರು, ಶಿರಾ ಮೊದಲಾದ ಊರುಗಳಲ್ಲಿ ನೆಲೆ ನಿಂತಿದ್ದಾರೆ.

ನಂಜಪ್ಪನವರ ತಂದೆ ಈಶ್ವರಪ್ಪನವರಿಗೆ ನಂಜಮ್ಮ ಪತ್ನಿ. ಈ ದಂಪತಿಗಳಿಗೆ ಗಂಗಾಧರಪ್ಪ ಚಿನ್ನಪ್ಪ ಮತ್ತು ನಂಜಪ್ಪ ಎಂಬ ಮಕ್ಕಳು. ನಂಜಪ್ಪ ಹುಟ್ಟಿದ ಬಳಿಕ ಅವರ ತಾಯಿ ತೀರಿಕೊಂಡರು. ನಂಜಪ್ಪ ಹುಟ್ಟಿದ್ದು ೯–೮–೧೯೨೪ ರಲ್ಲಿ. ಇವರನ್ನು ಆ ಸಂದರ್ಭದಲ್ಲಿ ತಾಯಿಯಿಲ್ಲದ್ದರಿಂದ ಈಶ್ವರಪ್ಪನವರ ಎರಡನೆಯ ಹೆಂಡತಿಯಾಗಿ ಬಂದ ಪಾಪಕ್ಕಮ್ಮನವರು ತುಂಬಾ ಚೆನ್ನಾಗಿ ಆರೈಕೆ ಮಾಡಿ ಬೆಳೆಸಿದರು. ಗಂಗಾಧರಪ್ಪನವರ ಹೆಂಡತಿ ರುಕ್ಮಿಣಮ್ಮನವರು ಕೂಡ ನಂಜಪ್ಪನವರನ್ನು ಬಾಲ್ಯದಲ್ಲಿ ಚೆನ್ನಾಗಿ ಸಾಕಿ ಸಲಹಿದರು. ಈಶ್ವರಪ್ಪನವರ ದೊಡ್ಡ ಕಿರಾಣಿ ಅಂಗಡಿಯು ಮೊದಲು ಉಚ್ಚಂಗಮ್ಮನ ಗುಡಿಯ ಬಳಿ ಕೋಳಿ ಬುರುಜನ ಹಟ್ಟಿಯಲ್ಲಿರುವ ಬಾವಿ ಕಡೆ ತಿರುಗುವ ಅವರ ಮನೆಯಲ್ಲಿತ್ತು. ಬಳಿಕ, ಉಚ್ಚಂಗಮ್ಮನ ಗುಡಿ ಎದುರಿನ ದೊಡ್ಡ ಮನೆಗೆ ಸ್ಥಳಾಂತರವಾಯಿತು. ಅದು ಕೇವಲ ಕಿರಾಣಿ ಅಂಗಡಿ ಆಗಿರದೆ ಸಗಟು ವ್ಯಾಪಾರದ ಅಂಗಡಿಯೂ ಆಗಿತ್ತೆಂದು ಕೆಲವರು ಈಗಲೂ ಸ್ಮರಿಸುತ್ತಾರೆ. ಈಶ್ವರಪ್ಪನವರು ತುಂಬಾ ಜನಾನುರಾಗಿಗಳಾಗುವುದರ ಜೊತೆಗೆ ನ್ಯಾಯವಂತರೆಂದೂ ಹೆಸರಾಗಿದ್ದರು. ಆದ್ದರಿಂದ ಅವರ ಅಂಗಡಿಯನ್ನು ನ್ಯಾಯಬೆಲೆಯ ಅಂಗಡಿಯೆಂದು ಜನ ಗುರುತಿಸಿದ್ದರು. ಆ ಅಂಗಡಿಯಲ್ಲಿ ಅಳತೆ ತೂಕಗಳಲ್ಲಿ ಮೋಸವಿರಲಿಲ್ಲ. ದೊಡ್ಡವರು ಬಂದರೂ, ಚಿಕ್ಕವರು ಬಂದರೂ ವ್ಯಾಪಾರದಲ್ಲಿ ಮೋಸವಿಲ್ಲದ್ದರಿಂದ ಸಮೃದ್ಧ ವ್ಯಾಪಾರ ಆಗುತ್ತಿತ್ತು. ಈ ನ್ಯಾಯಬೆಲೆ ಅಂಗಡಿಯನ್ನು ನಡೆಸುತ್ತಿದ್ದ ಈಶ್ವರಪ್ಪನವರು ದಾನಧರ್ಮಕ್ಕೂ ಎತ್ತಿದ ಕೈ. ಹಾಗಾಗಿ ಅವರು ಜನರಿಗೆ ಆತ್ಮೀಯರೂ, ಪ್ರೀತಿ ಗೌರವಗಳಿಗೆ ಪಾತ್ರರೂ ಆಗಿದ್ದರು.

ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ಹೀಗೆ ವ್ಯಾಪಾರದ ಮೂಲಕ ಜೀವನ ಸಾಗಿಸುತ್ತಿದ್ದ ಈಶ್ವರಪ್ಪನವರಿಗೆ, ಅಂದಿನ ಜನ ಜ್ಞಾಪಕದಲ್ಲಿಟ್ಟುಕೊಳ್ಳಬಹುದಾದ ಸಾಮಾಜಿಕ ಮುಖವೊಂದಿತ್ತು. ಅವರಿಗೆ ಹಿಂದೂ ಮುಸ್ಲಿಮರೆಲ್ಲ ಒಂದೇ. ಅದರಲ್ಲೂ ಮುಸ್ಲಿಮರು ಆಚರಿಸುವ ಮೊಹರಂ ಹಬ್ಬವು ಅವರ ಸಂತಸವನ್ನು ಹತ್ತುಪಟ್ಟು ಹಿಗ್ಗಿಸುತ್ತಿತ್ತು. ಅಂದಿನ ದಿನಗಳಲ್ಲಿ ಮೊಹರಂ ಹಬ್ಬದ ದಿನ ಮುಸ್ಲಿಮರು ಮೆರವಣಿಗೆ ಮಾಡಿಕೊಂಡು ಮುಖ್ಯರಸ್ತೆಗಳಲ್ಲಿ ಬರುತ್ತಿದ್ದರು. ಅವರ ಮೊಮ್ಮಕ್ಕಳು ಈಗ ನೆನಪಿಸಿಕೊಳ್ಳುವಂತೆ, ಆ ಮೆರವಣಿಗೆಯಲ್ಲಿ ಮುಸ್ಲಿಮರ ದೇವರ ಗಾಡಿ ಸಾಗುತ್ತಾ ಬಂದು ಈಶ್ವರಪ್ಪನವರ ಅಂಗಡಿ ಹತ್ತಿರ ಬರಬೇಕು, ಆಗ ಅವರ ಹಿಗ್ಗು ಹೇಳತೀರದು. ಮಂಡಕ್ಕಿ, ಉತ್ತುತ್ತಿ, ಹಣವನ್ನು ಈಶ್ವರಪ್ಪನವರು ಆ ದೇವರ ಉತ್ಸವದ ಮೇಲೆ ಯಥೇಚ್ಛವಾಗಿ ತೂರಿ ತೂರಿ ಖುಷಿಪಡುತ್ತಿದ್ದರು. ಹಾಗೆ ತೂರಿ ತಾವೂ ಖುಷಿಪಡುವುದರ ಜೊತೆಗೆ ಮುಸ್ಲಿಂ ಬಂಧುಗಳಿಗೂ, ಪ್ರೇಕ್ಷಕರಿಗೂ ಆ ಹಿಗ್ಗನ್ನು ಮುಟ್ಟಿಸುತ್ತಿದ್ದರು. 'ಸಂತೋಷಕ್ಕೆ ಸಾವಿರ ಖರ್ಚು ಮಾಡುವ ಮನುಷ್ಯ' ಯಾರೆಂದರೆ ಈ ಈಶ್ವರಪ್ಪನಂತವರೆ.

ಈಶ್ವರಪ್ಪನವರ ಮಕ್ಕಳು ಬೆಳೆಯುತ್ತಾ ಹೋದಂತೆ ದೊಡ್ಡ ಮಗ ಗಂಗಾಧರಪ್ಪನವರು ರಾಜಕೀಯ, ಸಾಮಾಜಿಕ ಚಟುವಟಿಕೆಗಳಲ್ಲಿ ಮುಳುಗಿದರು. ಸ್ವಾತಂತ್ರ್ಯಪೂರ್ವದಲ್ಲಿ ಅವರು ಇಲ್ಲಿನ ಪೌರಸಭೆಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಸಜೆ ಅನುಭವಿಸಿದರು. ಎರಡನೆಯವರಾದ ಚೆನ್ನಪ್ಪ ತಂದೆಯಂತೆ ಬಿಸಿನೆಸ್‌ನಲ್ಲಿ ನುರಿತು ವ್ಯಾಪಾರ ವಹಿವಾಟುಗಳಲ್ಲಿ ಮುಂದುವರೆದರು.

ನಂಜಪ್ಪನವರು ಬಾಲ್ಯದಲ್ಲಿ ಕುಸ್ತಿಯ ಕಡೆ ಒಲಿಯಲು ಒಂದೆರಡು ಕಾರಣಗಳಿವೆ. ಮೊದಲನೆಯ ಕಾರಣವೆಂದರೆ ಇವರು ವಿದ್ಯಾಭ್ಯಾಸದಲ್ಲಿ ಮುಂದುವರೆಯದೆ ಹೋದದ್ದು. ಉಚ್ಚಂಗಮ್ಮನ ಗುಡಿ ಪಕ್ಕದಲ್ಲೇ ಇದ್ದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ರಾಯಪ್ಪ ಎಂಬ ಮುಖ್ಯೋಪಾಧ್ಯಾಯರಿದ್ದರು. ಆದ್ದರಿಂದ ಅದಕ್ಕೆ ರಾಯಪ್ಪನ ಕಾಲೇಜ್ ಎಂಬ ಅಡ್ಡ ಹೆಸರು ಬಿದ್ದಿತ್ತು. ಆ ಶಾಲೆಗೆ ಸೇರಿದ ನಂಜಪ್ಪ ಆಸಕ್ತಿ ವಹಿಸಿ ಕಲಿತಂತೆ ಕಾಣುವುದಿಲ್ಲ. ಪಡ್ಡೆ ಹುಡುಗರ ಜೊತೆ ಸೇರಿ ಅಡ್ಡಾಡಿರಬೇಕು. ಈ ಹುಡುಗನ ಸಾಮರ್ಥ್ಯಕ್ಕೆ ತಕ್ಕ ದಾರಿ ತೋರಿಸಬೇಕು ಎಂದು ಈಶ್ವರಪ್ಪನವರು ಇಚ್ಚಿಸಿದರು. ಆ ಸಮಯದಲ್ಲಿ ಇವರ ಹಲವು ಪೈಲ್ವಾನ್ ಗೆಳೆಯರು ನಂಜಪ್ಪನನ್ನು ಗರಡಿಗೆ ಸೇರಿಸಲು ಸಲಹೆ ಕೊಟ್ಟರು. ಅಂದಿನ ಹೆಸರಾಂತ ಪೈಲ್ವಾನ್ ವೀರಬಸಪ್ಪನವರು ನಂಜಪ್ಪ ಗರಡಿಗೆ ಸೇರಲು ಪ್ರೇರಣೆ ಕೊಟ್ಟರು. ಅವರ ಇನ್ನೊಬ್ಬ ಸಂಬಂಧಿ ಲಾಡರ ಬರಮಣ್ಣನವರೂ ನಂಜಪ್ಪ ಗರಡಿಗೆ ಸೇರಲು ಉತ್ತೇಜಿಸಿದರು ಎನ್ನಲಾಗಿದೆ.

ನಂಜಪ್ಪನವರು ಗರಡಿಗೆ ಸೇರಲು ಇನ್ನೊಂದು ಮುಖ್ಯಕಾರಣ ಅಂದಿನ ಸಾಮಾಜಿಕ ಮೌಲ್ಯಗಳು ಎನ್ನಬಹುದು. ಪಾಳೆಯಗಾರರಿಂದ ಒಳ್ಳೆಯ ಉತ್ತೇಜನ ಪಡೆದ ಗರಡಿಗಳು ಹಾಗು ಕುಸ್ತಿಪಟುಗಳು ಇಲ್ಲಿ ಒಂದು ಪರಂಪರೆಯನ್ನೇ ಬಿಟ್ಟುಹೋಗಿದ್ದರು. ಒಳ್ಳೆಯ ಮೈಕಟ್ಟು ಆರೋಗ್ಯ, ಶೌರ್ಯ, ಧೈರ್ಯ, ಕೀರ್ತಿಯನ್ನು ಜನ ಇನ್ನಿಲ್ಲದಂತೆ ಮೆಚ್ಚುತ್ತಿದ್ದುದರಿಂದ ಗರಡಿಗೆ ಕಳುಹಿಸುವುದನ್ನು ಎಲ್ಲಾ ಜನಗಳೂ ಹೆಮ್ಮೆಯ ವಿಷಯವೆಂದು ಬಗೆದಿದ್ದರು. ಈಶ್ವರಪ್ಪನವರಾದರೂ ನಂಜಪ್ಪನನ್ನು ಗರಡಿಗೆ ಕಳುಹಿಸುವುದು ಹೆಮ್ಮೆಯ ವಿಷಯವೆಂದೇ ಬಗೆದರು. ಅಣ್ಣಂದಿರಾದ ಗಂಗಾಧರಪ್ಪ, ಚೆನ್ನಪ್ಪ ಗರಡಿಗಳ ಕಡೆ ಸುಳಿಯದಿದ್ದರೂ, ನಂಜಪ್ಪ ಗರುಡಿಗೆ ಹೋಗುವುದನ್ನು ವಿರೋಧಿಸದೆ ಈತನ ಸಾಧನೆ ಪ್ರಗತಿಯನ್ನು ನಿರೀಕ್ಷಿಸತೊಡಗಿದರು. ಒಂದು ಕಡೆಗೆ ಮನೆಯವರೆಲ್ಲರ ಉತ್ತೇಜನ ಸಿಕ್ಕರೆ, ಇನ್ನೊಂದು ಕಡೆ ಕಿರಾಣಿ ಅಂಗಡಿಯು ನಂಜಪ್ಪ ಕುಸ್ತಿಪಟುವಾಗಿ ಬೆಳೆಯಲು ಸಹಕಾರಿಯಾಯಿತು. ಯಾಕೆಂದರೆ ಕಿರಾಣಿ ಅಂಗಡಿಯಲ್ಲಿ ಹುಡುಗ ನಂಜಪ್ಪನ ತಯಾರಿಗೆ ಬೇಕಾದ ಗೋಡಂಬಿ, ದ್ರಾಕ್ಷಿ, ಬಾದಾಮಿ, ಉತ್ತುತ್ತಿ, ಒಣಕೊಬ್ಬರಿ ಎಲ್ಲೆಂದರಲ್ಲಿ ಕೈಗೆ ಸಿಗುವಷ್ಟು, ಬಾಯಿಚಪ್ಪರಿಸಿದಷ್ಟು ಯಥೇಚ್ಚವಾಗಿ ಬಿದ್ದಿತ್ತು !

ನಂಜಪ್ಪನ ಕೌಟುಂಬಿಕ ಜೀವನವನ್ನು ಕುರಿತು ಮೆಲುಕು ಹಾಕುವಾಗ ಮನೆಯವರೆಲ್ಲರ ಉತ್ತೇಜನ, ಪ್ರೋತ್ಸಾಹ ಸಂಪೂರ್ಣ ಸಿಕ್ಕಂತೆ ಕಾಣುತ್ತದೆ. ಹೀಗಾಗಿ ನಂಜಪ್ಪ ಕುಸ್ತಿಪಟುವಾಗಿ ಬಹಳ ಜಾಗ್ರತೆ ಮೇಲಕ್ಕೆ ಬಂದ. ಆತ ಪ್ರಾಯಕ್ಕೆ ಬಂದಾಗ ಮನೆಯಲ್ಲಿ ಆತನ ಮದುವೆ

ಮಾಡುವ ಪ್ರಯತ್ನಗಳು ನಡೆದವು. ತುಂಬ ದೂರದ ಸಂಬಂಧಗಳನ್ನೇನು ಹುಡುಕದೆ, ಅಕ್ಕನ ಮಕ್ಕಳನ್ನೇ ನೋಡಲಾಯಿತು. ಆದರೆ ಕುಸ್ತಿಪಟುವಾಗಿ ತಮ್ಮ ಛಾಪು ಮೂಡಿಸುತ್ತಿದ್ದ ನಂಜಪ್ಪನಿಗೆ ವಿವಾಹ ಬಂಧನವಾಗಲಿ, ಗೃಹಬಂಧನವಾಗಲಿ ಬೇಕಾಗಿರಲಿಲ್ಲ. ಇದನ್ನು ಪರೀಕ್ಷಿಸಿ ಅರಿತ ಮನೆಯವರೂ ಆತನನ್ನು ಮುಂದೆ ಮದುವೆಯಾಗುವಂತೆ ಒತ್ತಾಯಿಸಲಿಲ್ಲ.

ನಂಜಪ್ಪನವರ ಕೌಟುಂಬಿಕ ಜೀವನ ಇದರಿಂದ ಹದಗೆಡಲಿಲ್ಲ. ಅವರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ತಂದೆತಾಯಿ, ಅಣ್ಣತಮ್ಮಂದಿರು, ಅತ್ತಿಗೆಯರು, ಅತ್ತೆಯರು ಎಲ್ಲರೊಡನೆಯೂ ಪ್ರೀತಿ ಸೌಹಾರ್ದತೆಗಳಿಂದ ಕೊನೆಯ ತನಕ ವರ್ತಿಸುತ್ತಿದ್ದರು. ಅವರ ಕುಸ್ತಿಯೆಂದರೆ ಗಂಗಾಧರಪ್ಪ, ಚೆನ್ನಪ್ಪ ಎಲ್ಲರು ಎಲ್ಲಿ ನಡೆದರೂ ನೋಡಿಕೊಂಡು ಬರುತ್ತಿದ್ದರು. ಹಬ್ಬ ಹರಿದಿನಗಳಲ್ಲಿ ನಂಜಪ್ಪನವರನ್ನು ಊಟಕ್ಕೆ ಅಣ್ಣತಮ್ಮಂದಿರ ಮನೆಗಳಿಗೆ ಕರೆಯುತ್ತಿದ್ದರು. ಚೆನ್ನಪ್ಪನವರ ಮಗ ಈಶ್ವರ್ ಅವರು ನಂಜಪ್ಪರನ್ನು ಯುಗಾದಿ ಹಬ್ಬಗಳಲ್ಲಿ ಊಟಕ್ಕೆ ಕರೆತರುತ್ತಿದ್ದ ಸ್ವಾರಸ್ಯಕರ ಸಂಗತಿಗಳನ್ನು ವಿವರಿಸುತ್ತಾರೆ. ಯುಗಾದಿ ಹಬ್ಬದಲ್ಲಿನ ವಿಶೇಷವೆಂದರೆ ಮನೆಯಲ್ಲಿ ಹೋಳಿಗೆ ಸಂಭ್ರಮವಿದ್ದರೆ ಗಂಡಸರಿಗೆ ಜೂಜಿನ ಸಂಭ್ರಮ. ಜೂಜಿನಲ್ಲಿ ಉಂಟಾಗುವ ಸೋಲು ಗೆಲುವಿನ ಆಧಾರದ ಮೇಲೆ ವರ್ಷ ಭವಿಷ್ಯ ನಿರ್ಧರಿಸುವ ಒಂದು ಪರಿಪಾಠ ಅಂದಿನ ಜನಗಳ ಮನಸ್ಸಿನಲ್ಲಿತ್ತು ! ನಂಜಪ್ಪ ಇಂತಹ ಸಮಯಗಳಲ್ಲಿ ಕ್ಲಬ್ಬಿನಲ್ಲಿಯೋ, ಗರಡಿಯಲ್ಲಿಯೋ ಇಸ್ಪೀಟು ಆಟದಲ್ಲಿ ತಲ್ಲೀನರಾಗಿದ್ದರೂ, ಈಶ್ವರನನ್ನು ಕಂಡ ತಕ್ಷಣ ಪ್ರೀತಿಯಿಂದ ಊಟಕ್ಕೆ ಹೋಗುತ್ತಿದ್ದರಂತೆ.

ಇಂತಹ ಕುಟುಂಬ ಪ್ರೇಮ, ಉತ್ತೇಜನ, ಪ್ರೋತ್ಸಾಹ ಎಲ್ಲವನ್ನು ಪಡೆದ ನಂಜಪ್ಪ ಅಂದಿನ ಕುಸ್ತಿಲೋಕವನ್ನು ಪ್ರವೇಶಿಸಿ ಬೆಳೆಯಲು ಅಂದಿನ ಚಿತ್ರದುರ್ಗದ ಸಾಮಾಜಿಕ ಸ್ಥಿತಿಗತಿಗಳು, ಗರಡಿಗಳು ಮೊದಲಾದವುಗಳನ್ನು ಸ್ವಲ್ಪಮಟ್ಟಿಗೆ ಮುಂದಿನ ಅಧ್ಯಾಯದಲ್ಲಿ ತಿಳಿಯೋಣ.

❑

೩ ಗರುಡಿಗಳ ಸಾಂಸ್ಕೃತಿಕ ಲೋಕ

ಪೈಲ್ವಾನ್ ನಂಜಪ್ಪನವರು ದೊಡ್ಡಗರುಡಿಗೆ ಸೇರಿ, ಆ ಕಾಲದ ಸುಪ್ರಸಿದ್ಧ ಕುಸ್ತಿಪಟುವಾಗಿ ಬೆಳೆದ ಬಗೆಯನ್ನು ತಿಳಿಯುವ ಮುನ್ನ, ಚಿತ್ರದುರ್ಗದಲ್ಲಿ ಗರುಡಿಗಳಿಗೆ, ಕುಸ್ತಿಪಟುಗಳ ಬೆಳವಣಿಗೆಗೆ ಪೂರಕವಾಗಿ ಇದ್ದ ಇಲ್ಲಿನ ಚಾರಿತ್ರಿಕ ಹಿನ್ನೆಲೆ ಮತ್ತು ಗರುಡಿಗಳು ಬೆಳೆದು ಬಂದ ಬಗೆಯನ್ನು ಕೊಂಚ ತಿಳಿಯುವುದು ಒಳ್ಳೆಯದು. ಗಟ್ಟಿಯಾಗುವುದು, ಜಟ್ಟಿಯಾಗುವುದು ಒಂದು ಕಾಲದ ಅತಿಮುಖ್ಯವಾದ ಮೌಲ್ಯವಾಗಿದ್ದ ಪಾಳೆಯಗಾರರಿಂದ ಆಳಲ್ಪಟ್ಟ ಚಿತ್ರದುರ್ಗದಲ್ಲಿ ಗರುಡಿಗಳಿಗೆ ತನ್ನದೇ ಆದ ಸ್ಥಾನ-ಮಾನಗಳಿದ್ದವು.

ಪಾಳೆಯಗಾರರ ಕಾಲದಿಂದಲೂ ಇಲ್ಲಿ ಜಟ್ಟಿ ಜನಾಂಗದವರು ವಿಶೇಷವಾಗಿ ಕುಸ್ತಿಪಟುಗಳಾಗಿ ಮೆರೆದು, ಪಾಳೆಯಗಾರರಿಗೆ ಮತ್ತು ಇತರರಿಗೆ ಗರುಡಿಗಳಲ್ಲಿ ಕುಸ್ತಿವಿದ್ಯೆಯನ್ನು ಕಲಿಸಿಕೊಡುತ್ತಿದ್ದರೆಂದು ತಿಳಿದುಬರುತ್ತದೆ. ಈ ಜಟ್ಟಿ ಜನಾಂಗದವರು ಕುಸ್ತಿಪಟುಗಳಾಗಿದ್ದಂತೆ, ಆಯುರ್ವೇದದ ವೈದ್ಯಕೀಯದಲ್ಲೂ ಪರಿಣಿತರಾಗಿ ಪಾಳೆಯಗಾರರಿಗೆ ಯುದ್ಧ ಸಮಯದಲ್ಲಿ ನೆರವಾಗುತ್ತಿದ್ದರಂತೆ. ಜಟ್ಟಿ ಜನಾಂಗದವರು ಕಲಾವಿದರೂ ಆಗಿದ್ದುದರಿಂದ ಇಲ್ಲಿನ ಪಾಳೆಯಗಾರರ ವೇಷ-ಭೂಷಣಗಳನ್ನು, ಕಿರೀಟಗಳನ್ನು ರಾಜೋಚಿತವಾಗಿ ವಿನ್ಯಾಸಗೊಳಿಸಿ ಕೀರ್ತಿ ಸಂಪಾದಿಸಿದ್ದರೆಂದು ಹೇಳುತ್ತಾರೆ. ಮಲ್ಲವಿದ್ಯೆಯಲ್ಲಿ ಪರಿಣಿತರಾದ ಈ ಜಟ್ಟಿಗಳು ಕುಸ್ತಿ ಕಲೆಯಲ್ಲಿ ತಮ್ಮ ವೈವಿಧ್ಯಮಯ ಕೌಶಲಗಳನ್ನು ಪ್ರದರ್ಶಿಸಿ ಜನರ ಮನಸ್ಸನ್ನು ಗೆದ್ದಿದ್ದರು.

ಪಾಳೆಯಗಾರರ ಚಾರಿತ್ರಿಕ ಕಾಲದಿಂದಲೂ ಗರುಡಿಗಳು ತಮ್ಮ ಪ್ರಭಾವ ಬೀರುತ್ತ ಬಂದಂತೆ ಕಾಣುತ್ತದೆ. ಪಾಳೆಯಗಾರರ ತಾಣವಾಗಿದ್ದ ಮೇಲುದುರ್ಗದಲ್ಲಿ, ಅಂದರೆ ಬೆಟ್ಟದ ಪ್ರದೇಶದಲ್ಲಿ ಹಲವು ಗರುಡಿಗಳು ಇದ್ದಂತೆ ಕಾಣುತ್ತವೆ. ಏಕನಾಥೇಶ್ವರಿ ದೇವಾಲಯದ ಹಿಂಭಾಗಕ್ಕೆ ವಾಯುವ್ಯ ದಿಕ್ಕಿನಲ್ಲಿರುವ ಗವಿಯೊಂದು ಗರಡಿಯಾಗಿತ್ತು. ಇದನ್ನು ಜನ ಸಾಮಾನ್ಯರು 'ಪೀಕನಾಯಕನ ಗರಡಿ' ಎಂದು ಕರೆಯುತ್ತಾರೆ. ಆದರೆ ಶಿಲಾಲೇಖದಲ್ಲಿ ಉಲ್ಲೇಖವಾಗಿರುವಂತೆ ಇದು 'ಪೆರೆನಾಯಕನ ಮಗ ಗೋಪೆನಾಕ ಆಯಗಳ ಗರುಡಿ' ಯಾಗಿದೆ. ಇದು ೧೫ನೇ ಶತಮಾನದಲ್ಲಿ ಸ್ಥಾಪಿತವಾಗಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಈಗ 'ಅರಮನೆಯ ಬಯಲು' ಎಂದು ಗುರುತಿಸಲಾಗುವ ಪ್ರದೇಶದಲ್ಲಿಯೂ ಕೆಲವು ಗರಡಿಗಳಿದ್ದವೆಂದು ವಿದ್ವಾಂಸರು ಅಭಿಪ್ರಾ.ಯಪಡುತ್ತಾರೆ.

ಈ ಐತಿಹಾಸಿಕ ಗರುಡಿಯನ್ನು ಮತ್ತು ಅರಮನೆಯ ಬಯಲಿನಲ್ಲಿ ಇದ್ದಿರಬಹುದಾದ ಗರುಡಿಗಳನ್ನು ಬಿಟ್ಟರೆ, ಚಿತ್ರದುರ್ಗದಲ್ಲಿ ಇನ್ನು ಕೆಲವು ಗರುಡಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ ; ಕೆಲವು ಗರುಡಿಗಳು ಕಣ್ಮರೆಯಾಗಿವೆ. ಚಿತ್ರದುರ್ಗದ ದೊಡ್ಡಗರುಡಿ, ಸಣ್ಣಗರುಡಿ, ಬುರುಜನಹಟ್ಟಿಯ ಗರುಡಿ, ಹಗಲು ದೀವಟಿಗೆ ಗರುಡಿ ಬಹಳ ಕಾಲದಿಂದಲೂ ಉಳಿದು ಬಂದಿರುವ ಗರಡಿಗಳು. ರಾಯರಹಟ್ಟಿ ಗರುಡಿ, ಆಂಜನೇಯಸ್ವಾಮಿ ಗರುಡಿ, ಹೊರಪೇಟೆಯ ಅಂಜುಮನ್ ಗರುಡಿಗಳು ಒಂದು ಕಾಲದಲ್ಲಿ ಹೆಸರಾಗಿದ್ದು, ಈಗ ಅವು ಕಣ್ಮರೆಯಾಗಿವೆ. ಚಿತ್ರದುರ್ಗದ ಬೃಹನ್ಮಠದಲ್ಲಿಯೂ ಒಂದು ಗರುಡಿಯಿದೆ.

ಒಂದು ಕಾಲದಲ್ಲಿ ಪಾಳೆಯಗಾರರಿಂದ ಅಪರಿಮಿತ ಪ್ರೋತ್ಸಾಹ, ವಿಶೇಷ ಆಶ್ರಯ ಪಡೆದ ಗರಡಿಗಳು, ಪಾಳೆಯಗಾರರ ಬಳಿಕವೂ ಉಳಿದು–ಬೆಳೆದು ಬಂದ ಬಗೆಯು ವಿಶಿಷ್ಟವಾಗಿದೆ. ಪಾಳೆಯಗಾರರ ಬಳಿಕ ಗರುಡಿಗಳನ್ನು ಪೋಷಿಸಿ ಅಭಿವೃದ್ಧಿಗೆ ತಂದ ಬಹುಪಾಲು ಕೀರ್ತಿ ಇಲ್ಲಿನ ಪೋಷಕರು ಮತ್ತು ಅಭಿಮಾನಿಗಳಿಗೆ ಸಲ್ಲುತ್ತದೆ. ಅವರು ತೋರಿಸಿದ ಔದಾರ್ಯ, ಕೊಟ್ಟ ಪ್ರೋತ್ಸಾಹಗಳಿಂದ ಗರುಡಿಗಳು ಉಳಿದು ಬಂದವು, ಪೈಲ್ವಾನರು ಉಲ್ಲಸಿತರಾಗಿ ಕುಸ್ತಿಕಲೆಯನ್ನು ಮತ್ತಷ್ಟು ಚೆನ್ನಾಗಿ ಕಲಿತರು.

ಇನ್ನು ಪೈಲ್ವಾನರ ದೇಹದಾರ್ಢ್ಯದ ಬಗ್ಗೆ ಸ್ವತಃ ಪೈಲ್ವಾನರಿಗೆ ಮತ್ತು ಊರಿನ ಜನಗಳಿಗೆ ಅದು ಹೆಮ್ಮೆಯ ವಿಷಯವಾಗಿದ್ದಿತು. ಕಲ್ಲಿನಲ್ಲಿ 'ಮಿಸ್ಟೇಕ್' ಬಂದರೆ ಬರಬಹುದು, ಆದರೆ ಪೈಲ್ವಾನರ ದೇಹದಲ್ಲಿ ಮಿಸ್ಟೇಕ್ ಬರುವುದಿಲ್ಲ ಎಂಬ ಅಚಲ ನಂಬಿಕೆ ಇಲ್ಲಿನ ಕುಸ್ತಿಪಟುಗಳಿಗೆ ಇದ್ದಿತು. ಪೈಲ್ವಾನನನ್ನು ಕೊಬ್ಬಿದ ಗೂಳಿಗೆ ಹೋಲಿಸಲಾಗುತ್ತದೆ. ಕೊಬ್ಬಿದ ಗೂಳಿ ದೇಹದಾರ್ಢ್ಯ ಹೊಂದಿ ನೋಡುವವರ ಕಣ್ಣಿನಲ್ಲಿ ಭೀತಿ ಸೃಷ್ಟಿಸುತ್ತದೆ. ಆದರೆ ಅದು ಮನಸ್ಸಿನಲ್ಲಿ ಸಾಧುವಾಗಿರುತ್ತದೆ. ತನ್ನ ಕಾಲುಗಳಡಿಯಲ್ಲಿ ಹಸುಮಗು ತೂರಿ ಹೋದರೂ ಇರಿಯುವುದಿಲ್ಲ. ಈ ಪೈಲ್ವಾನ್ ಕೂಡ ನೋಡಿದರೆ ಭೀಕರವಾಗಿ ಕಂಡರೂ ಮನುಷ್ಯ ಸಾಧು !

ಕಾಡುಗಳಲ್ಲಿದ್ದ ಹಿಂದಿನ 'ಗುರುಕುಲ'ಗಳ ಯುಗ ಈಗ ಮುಗಿದು ಹೋಗಿದ್ದರೂ ಗರಡಿಯ ದೃಷ್ಟಿಯಿಂದ ನೋಡಿದಾಗ ಗುರು ಮತ್ತು ಶಿಷ್ಯರ ಸಂಬಂಧ ಅತ್ಯಂತ ಉದಾತ್ತ ಸ್ಥಿತಿಯಲ್ಲಿದ್ದುದು ಕಂಡು ಬರುತ್ತದೆ. ಉಸ್ತಾದನು ತನ್ನ ಶಿಷ್ಯನನ್ನು ಸದಾ ಕಾಪಾಡಿ ಅವನ ಗೆಲುವನ್ನು ಹಾರೈಸುವವನು. ಗುರುವಿಗೆ ಅವಮರ್ಯಾದೆಯಾಗದಂತೆ ಶಿಷ್ಯನು ನಡೆದುಕೊಂಡು ಹೆಸರು ತರಲು ಪ್ರಯತ್ನಿಸುವುದು ಪೈಲ್ವಾನನ ಕರ್ತವ್ಯವೆಂದು ಬಗೆದಂತೆ ಕಾಣುತ್ತದೆ. ಇಲ್ಲಿನ ಪ್ರಖ್ಯಾತ ಉಸ್ತಾದ್‌ಗಳು ಮತ್ತು ಪೈಲ್ವಾನರ ಬದುಕನ್ನು ಗಮನಿಸಿದರೆ ಈ ಸಂಬಂಧದ ಲಕ್ಷಣಗಳು ಪರಿಚಯವಾಗುತ್ತವೆ. ಅವರ ಗೌರವ ಮತ್ತು ವಾತ್ಸಲ್ಯಭಾವಗಳು ಮನದಟ್ಟಾಗುತ್ತವೆ.

ಗರುಡಿಗಳೆಂದರೆ ಪೈಲ್ವಾನರು, ಕುಸ್ತಿಗಳು ಎಂದು ಸುಲಭ ತೀರ್ಮಾನಕ್ಕೆ ಬಂದರೆ ಗರುಡಿಗಳ ಬಗ್ಗೆ ಏನೇನೂ ತಿಳಿದಂತೆ ಆಗುವುದಿಲ್ಲ. ಗರಡಿಗಳ ಆಂತರಿಕ ವ್ಯವಸ್ಥೆ, ಆಚರಣೆಗಳು, ನಂಬಿಕೆಗಳು ಮುಂತಾದವುಗಳನ್ನು ಗಮನಿಸಿದರೆ ಮಾತ್ರ ಇವುಗಳ ಒಂದು ವಿಶಿಷ್ಟ ಸಾಂಸ್ಕೃತಿಕ ಲೋಕ ಅನಾವರಣವಾಗುತ್ತದೆ. ಗರಡಿಗಳ ಆಚರಣೆಗಳಲ್ಲಿ, ನಂಬಿಕೆಗಳಲ್ಲಿ ಇಡಿ ಊರು ಏಕೀಭವಿಸಿದಂತೆ ಕಾಣುತ್ತದೆ. ಶ್ರಾವಣದಲ್ಲಿ ಬರುವ ನೂಲುಹುಣ್ಣಿಮೆಯಲ್ಲಿ ಗರುಡಿಯವರು ಆಚರಿಸುವ ಮಟ್ಟಿಪೂಜೆಯನ್ನು ಗಮನಿಸಬೇಕು. ಚಿತ್ರದುರ್ಗದ ಸಿಹಿ ನೀರು ಹೊಂಡ, ಸಂತೇ ಹೊಂಡ, ಚಂದ್ರಮೌಳೇಶ್ವರನ ಹೊಂಡಗಳು ಒಂದೊಂದೂ ಒಂದೊಂದು ದಿಕ್ಕಿನಲ್ಲಿವೆ. ಇಲ್ಲಿನ ಗರುಡಿಗಳು ಆ ದಿನ ತಮ್ಮ ಗರುಡಿಯ ದೇವರುಗಳನ್ನು ಮಡಿಮಾಡಿಕೊಂಡು ಬರಲು ಒಬ್ಬೊಬ್ಬರು ಒಂದೊಂದು ಹೊಂಡಕ್ಕೆ ಹೋಗುತ್ತಾರೆ. ಇಡೀ ಊರಿನ ಸಂಬಂಧ ಈ ಆಚರಣೆಯಲ್ಲಿರುವಂತೆ ಭಾಸವಾಗುತ್ತದೆ.

ಹೀಗೆ ಮಡಿಮಾಡಿಕೊಂಡು ಬರಲು 'ಗಂಗಾಪೂಜೆ'ಗೆಂದು ಹೊರಟಾಗ ಪ್ರತಿ ಗರುಡಿಯೂ ತನ್ನ ಶಕ್ತಿ, ಸಾಮರ್ಥ್ಯಗಳ ಪ್ರದರ್ಶನಕ್ಕೆ ಇದೊಂದು ಅವಕಾಶವೆಂದು ಬಗೆಯುತ್ತಾರೆ. ತಮ್ಮ ಗರುಡಿಯ ಆರಾಧ್ಯದೈವಗಳನ್ನು ಪಲ್ಲಕ್ಕಿ ಅಥವಾ ಅಲಂಕೃತ ಗಾಡಿಗಳಲ್ಲಿ ಮೆರವಣಿಗೆಯಲ್ಲಿ ಊರಿನ ಮುಖ್ಯ ರಸ್ತೆಗಳಲ್ಲಿ ಕೊಂಡೊಯ್ಯುತ್ತಾರೆ. ಆಗ ಗರುಡಿಯ ಹಿರಿಯ/ಕಿರಿಯ ಪೈಲ್ವಾನರು ಹನುಮಾನ್ ಚಡ್ಡಿಯಲ್ಲಿ ತಪ್ಪಿದರೆ ಕಾಚಾದಲ್ಲಿ ಮೈಗೆಲ್ಲಾ ಮಟ್ಟಿಯ ಮಣ್ಣನ್ನು ಲೇಪಿಸಿಕೊಂಡು ಮೆರವಣಿಗೆಯಲ್ಲಿ ಪಾಲುಗೊಳ್ಳುತ್ತಾರೆ. ಈ ಸಂದರ್ಭದಲ್ಲಿ ಎರಡು ಮೂರು ಅಡಿಗಳಿಂದ ಹಿಡಿದು ಏಳೆಂಟು ಅಡಿಗಳಿಗೂ ಎತ್ತರವಿರುವ ಮರಗಾಲುಗಳನ್ನು ಕಟ್ಟಿಕೊಂಡು ಬರುವ ಗರುಡಿಯ ಆಳುಗಳು, ಅವರ ವೇಷಭೂಷಣಗಳಲ್ಲಿ ರಂಜಿಸುತ್ತ ಪ್ರೇಕ್ಷಕರಿಗೆ ಒಂದು ರೋಮಾಂಚನಕಾರಿ ಅನುಭವ ನೀಡುತ್ತಾರೆ. ಈ ಮರಗಾಲು ಕುಣಿತ ಒಂದು ಜನಾಂಗದ ಜೀವನೋತ್ಸಾಹದ ಸಂಕೇತ ಎನ್ನಿಸಿ ಬಿಡುತ್ತದೆ. ಹೀಗೆ ಗಂಗಾಪೂಜೆ ಮುಗಿಸಿ ಮೆರವಣಿಗೆಯಲ್ಲಿ ಹಿಂದಿರುಗಿದ ಗರುಡಿಯವರು ಮಟ್ಟಿಯ ಮಣ್ಣನ್ನೆಲ್ಲಾ ರಾಶಿಹಾಕಿ ಬೇರೆ ಗರುಡಿಯ ಪೈಲ್ವಾನರಿಗೆ, ಪೋಷಕರಿಗೆ, ಊರಿನ ದೊಡ್ಡ ಮನುಷ್ಯರಿಗೆ ಆಹ್ವಾನ ಹೋಗುತ್ತದೆ. ಈ ಆಚರಣೆಯು ಗರಡಿಗೂ–ಊರಿಗೂ ಇರುವ ಅವಿನಾ ಸಂಬಂಧವನ್ನು ಸಾರಿ ಹೇಳುತ್ತದೆ.

ಚಿತ್ರದುರ್ಗದ ಗರುಡಿಗಳಿಗೂ, ಪಾಳೆಯಗಾರರಿಗೂ ಇವರು ಆಚರಿಸುವ ಸಂಪ್ರದಾಯಗಳಿಗೂ ಏನೇನೋ ಸಂಬಂಧವಿರುವಂತೆ ಕಾಣುತ್ತದೆ. ಚಿತ್ರದುರ್ಗದ ದೊಡ್ಡಗರುಡಿಯ ಸಂಕೇತವಾಗಿ ಅವರು ಬಳಸುವ ನಿಶಾನೆಯಲ್ಲಿ ಕಲ್ಗಿಯ (ಮಾವಿನಕಾಯಿ ಆಕಾರ) ಗುರುತು ಇದೆ. ಹಗಲು ದೀವಟಿಗೆ ಗರುಡಿಯಲ್ಲಿ ಹೂ ಗುಚ್ಚಿನಂತೆ ಇರುವ ಗೊಂಡೆಯನ್ನು ನಿಶಾನೆಯಲ್ಲಿ ತೋರಿಸಲಾಗಿದೆ. ಸಣ್ಣಗರುಡಿಯ ನಿಶಾನೆಯಲ್ಲಿ ತುರಾ(ಯಿ) ಇದೆ. ಈ ಮೂರೂ ಗರುಡಿಗಳ ಒಡೆಯ ಇಲ್ಲಿನ ಪಾಳೆಯಗಾರ ಎಂದು ಸೂಚಿಸಲು

ವೆಂಕಟರಮಣಜಟ್ಟಿ ಎಂಬಾತ ಭರಮಣ್ಣನಾಯಕನು ಧರಿಸುವ ಕಿರೀಟದಲ್ಲಿ ಕಲ್ಗಿ, ತುರಾ(ಯಿ)ಮತ್ತು ಗೊಂಡೆಗಳ ಸಂಕೇತಗಳನ್ನು ಬಳಸಿ ಆ ಕಿರೀಟ ವಿನ್ಯಾಸಗೊಳಿಸಿದ ಎಂದು ಹೇಳಲಾಗುತ್ತದೆ. ಆದರೆ ಕಲ್ಗಿ-ತುರಾ ಹೆಣ್ಣು-ಗಂಡುಗಳ ಮಹತ್ವವನ್ನು ಸಾರಿ ಹೇಳುವ ಲಾವಣಿ ಮಟ್ಟುಗಳು ಎಂದು ದೊಡ್ಡಗರುಡಿ ಸಣ್ಣಗರುಡಿಯವರು ಹಾಡುತ್ತಿದ್ದ ಲಾವಣಿಗಳು ಮತ್ತು ಸವಾಲು-ಜವಾಬುಗಳ ಬಗ್ಗೆ ಕೇಳಿದರೆ ತಿಳಿಯುತ್ತದೆ.

ಗರುಡಿಗಳು ಮೊದಲೇ ತಿಳಿಸಿದಂತೆ ಕುಸ್ತಿಗಳಿಗೆ ಮಾತ್ರ ಹೆಸರಾಗದೆ, ಅವು ಸಾಂಸ್ಕೃತಿಕವಾಗಿ ಊರಿನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದವು. ಚಿತ್ರದುರ್ಗದಲ್ಲಿ ಪ್ರಖ್ಯಾತವಾದ ಗ್ರಾಮದೇವತೆಗಳ ಉತ್ಸವಗಳಾದ ಸಿಡಿ, ಭೇಟಿ, ಜಾತ್ರೆಗಳಲ್ಲಿ ಗರುಡಿಯ ಜನಗಳು ಅತ್ಯುತ್ಸಾಹದಿಂದ ಪಾಲುಗೊಳ್ಳುತ್ತಿದ್ದರು. ಸಿಡಿ, ಭೇಟಿಯ ಸಂದರ್ಭಗಳಲ್ಲಿ ಗರುಡಿಗಳ ಬಳಿ ಅಥವಾ ಆ ಹಟ್ಟಿಗಳಲ್ಲಿ ರಾತ್ರಿ ಪೂರ್ತಿ ನಡೆಯುವ ನಾಟಕಗಳನ್ನು (ಈಗ ಅವನ್ನು ದೊಡ್ಡಾಟವೆಂದು ಕರೆಯುತ್ತಾರೆ) ಆಡಲು ಈ ಗರುಡಿಯ ಜನಗಳೇ ನೆರವಾಗುತ್ತಿದ್ದರು. ಹಾಗಾಗಿ ದಕ್ಷಯಜ್ಞ, ಪಾರ್ಥಪಾಂಚಾಲಿ, ಇಂದ್ರಕೀಲ ಪಾಂಡುವಿಜಯ, ಮೊದಲಾದ ನಾಟಕಗಳನ್ನು ಅಗಸರ ಕೆಂಚಜ್ಜ, ತಿಪ್ಪಣ್ಣ ಮೊದಲಾದವರು ಆಡಿಸಿ ಜನಪ್ರಿಯರಾಗಿದ್ದರು. ಇಂಥ ಗ್ರಾಮೀಣ ಸೊಗಡು ಚಿತ್ರದುರ್ಗದಲ್ಲಿ ಬಹಳ ಕಾಲ ಉಳಿಯಲು ಕಾರಣರಾಗಿದ್ದರು.

ದೊಡ್ಡಗರುಡಿ ಇಂಥ ದೊಡ್ಡಾಟಗಳನ್ನು ಆಡಿಸುತ್ತಲೇ, ಕಾಲಕ್ಕೆ ತಕ್ಕಂತೆ ಬದಲಾಗಿ 'ನವಭಾರತ ತರುಣ ಕಲಾವಿದರ ಸಂಘ' ಕಟ್ಟಿ ಇನ್ನೂ ಉತ್ತಮ ನಾಟಕಗಳನ್ನು ಪ್ರದರ್ಶಿಸಿತು, ಇಲ್ಲಿನ ಕಲಾವಿದರನ್ನು ಪತ್ತೆ ಹಚ್ಚಿ ಊರಿಗೆ, ನಾಡಿಗೆ ಪರಿಚಯಿಸಿತು. ಅದೇ ಒಂದು ದೊಡ್ಡ ಸಂಗತಿ. ಕಾಲ ಕಾಲಕ್ಕೆ ಬದಲಾವಣೆಯನ್ನು ಮಾಡಿಕೊಂಡು ಬೆಳೆಯುತ್ತ ಬಂದ ದೊಡ್ಡ ಗರುಡಿಯು ಸ್ವಾತಂತ್ರ್ಯ ಹೋರಾಟದ ಕೊನೆ ಕೊನೆಯ ದಿನಗಳಲ್ಲಿ ತಾನೂ ಪಾಲುಗೊಂಡಿದ್ದು, ಪೈ. ನಂಜಪ್ಪ ತೋರಿಸಿದ ಅಸೀಮ ಧೈರ್ಯ-ಉತ್ಸಾಹಗಳನ್ನು ಈಗಾಗಲೇ ಬಣ್ಣಿಸಲಾಗಿದೆ.

ಗರುಡಿಗಳು ಒಂದು ಚೌಕಟ್ಟು, ಎಲ್ಲೆಯನ್ನು ಕೊರೆದುಕೊಂಡು ನಿಂತಂತೆ ಹೊರ ಮುಖದಲ್ಲಿ ಕಾಣಿಸಿದರೂ, ಅವು ಎಲ್ಲೆ ಮೀರಿ ತಮ್ಮ ತಮ್ಮ ಒಳಗೆ ವೈಶಾಲ್ಯ ತೋರಿಸಿವೆ. ಕರ್ನಾಟಕದಲ್ಲಿರುವ ಅನೇಕ ಹೆಸರಾಂತ ಗರುಡಿಗಳು ತಮ್ಮ ಉಸ್ತಾದ್, ಪೈಲ್ವಾನರನ್ನಷ್ಟೆ ಬೆಳೆಸದೆ ನಾಡಿನ ಇತರೆ ಭಾಗದಿಂದ ಬಂದ ಅನೇಕ ಉಸ್ತಾದಗಳಿಗೆ, ಪೈಲ್ವಾನರುಗಳಿಗೆ ಆಶ್ರಯಕೊಟ್ಟು ಸಾಕಿವೆ. ಕೊಲ್ಲಾಪುರದಿಂದ ಕುಸ್ತಿ ಆಡಲೆಂದು ಬಂದ ಫಲೀದ್ ಎಂಬ ಪೈಲ್ವಾನ್ ಚಿತ್ರದುರ್ಗದ ದೊಡ್ಡಗರುಡಿಯಲ್ಲಿ ಆರು ತಿಂಗಳು ಇದ್ದ. ಕಾಶ್ಮೀರದಿಂದ ಮೆಹಬೂಬ್ ಎಂಬ ಪೈಲ್ವಾನ್ ಹುಣಿಸೆಕಟ್ಟೆ ಸಿದ್ಧಪ್ಪ ಎಂಬುವವನ ಮೇಲೆ ಕುಸ್ತಿ ಆಡಲು ಚಿತ್ರದುರ್ಗಕ್ಕೆ ಬಂದ. ಆತ ಆಗ ಇದ್ದುದು ಹಗಲು ದೀವಿಟಿಗೆ ಗರುಡಿಯಲ್ಲಿ. ಹುಣಸೇಕಟ್ಟೆ

ಸಿದ್ದಪ್ಪ ಇದ್ದುದು ದೊಡ್ಡಗರುಡಿಯಲ್ಲಿ. ಹಾಗೆಯೇ ದೊಡ್ಡಗರುಡಿಯ ಪೈಲ್ವಾನರುಗಳು ಕುಸ್ತಿ ಆಡಲೆಂದು ಹೋದಾಗ ಬೆಂಗಳೂರು, ಮೈಸೂರು, ಶಿವಮೊಗ್ಗ, ದಾವಣಗೆರೆ, ರಾಣೆಬೆನ್ನೂರು ಮೊದಲಾದ ಊರುಗಳಲ್ಲಿದ್ದ ಗರುಡಿಗಳವರು ಇವರಿಗೆ ಆಶ್ರಯ, ಆಹಾರ ಕೊಟ್ಟು ಉಪಚರಿಸಿದ್ದಾರೆ. ಅಂಗಸಾಧನೆ ಮಾಡುವವರೂ ಕೂಡಾ ಒಂದು ಜಾತಿ, ಒಂದು ಧರ್ಮ, ಒಂದು ಮತಕ್ಕೆ ಸೇರಿದವರಲ್ಲ. ಗರುಡಿಗಳಲ್ಲಿ ಪೂಜಿಸುವ ದೇವರುಗಳು ಕೂಡಾ ನಾನಾ ರೀತಿಯವು. ಆಂಜನೇಯ ಸ್ವಾಮಿ, ಶ್ರೀಕೃಷ್ಣ, ಲಕ್ಷ್ಮಿ, ಭೇತಾಳಸ್ವಾಮಿ ಹೀಗೆ ನಾನಾ ರೀತಿಯ ದೇವರುಗಳ, ನಂಬಿಕೆಗಳ ಸಂಗಮ ಗರುಡಿಯ ಮನೆ. ಗರುಡಿಗಳು ಶೌರ್ಯ, ಧೈರ್ಯ, ಸಾಹಸಗಳನ್ನು ಮೌಲ್ಯವಾಗಿ ಸ್ವೀಕರಿಸಿ, ಜಾತ್ಯತೀತವಾಗಿ, ಧರ್ಮಾತೀತವಾಗಿ, ಮತಾತೀತವಾಗಿ ಬೆಳೆದ ಸಂಸ್ಥೆ. ಇಂಥ ಅಸಂಖ್ಯಾತ ಸಾಂಸ್ಕೃತಿಕ ಪದರುಗಳನ್ನು ದಟ್ಟವಾಗಿ ಹೊಂದಿ ಗರುಡಿಗಳು ಮೆರೆಯುತ್ತಿದ್ದ ಕಾಲದಲ್ಲಿ ಪೈ. ನಂಜಪ್ಪ ತಮ್ಮ ಗರುಡಿಯ ಪ್ರವೇಶ ಮಾಡಿದರು. ಗರುಡಿಯ ಎಲ್ಲಾ ಸತ್ತ್ವಗಳನ್ನೂ ಹೀರಿ ಶಕ್ತಿಶಾಲಿಯಾದ ಪೈಲ್ವಾನನಾಗಿ ಬೆಳೆದರು.

❑

೪ ಪೈಲ್ವಾನ್ ನಂಜಪ್ಪನವರನ್ನು ರೂಪಿಸಿದ ಉಸ್ತಾದ್‌ಗಳು

ಚಿತ್ರದುರ್ಗದ ದೊಡ್ಡಗರುಡಿಯು ಇಲ್ಲಿನ ಪ್ರಸಿದ್ಧ ಗರುಡಿಗಳಲ್ಲೊಂದು. ಇದು ಕರುವಿನ ಕಟ್ಟೆಯಲ್ಲಿರುವ ತಿಪ್ಪಿನಗಟ್ಟಮ್ಮನ ಹಳೆಯ ಗುಡಿಯಿಂದ ಪಶ್ಚಿಮಕ್ಕೆ ಹತ್ತಿಪ್ಪತ್ತು ಹೆಜ್ಜೆ ನಡೆದರೆ ಸಿಕ್ಕುತ್ತದೆ. ದೊಡ್ಡಗರುಡಿಯ ಇರವನ್ನು ಸಾರುವಂತೆ ಒಂದು ದೊಡ್ಡ ಅರಳಿಮರವು ಗರುಡಿಯ ಕಾಂಪೌಂಡಿನಲ್ಲಿ ಬೆಳೆದು ನಿಂತಿದೆ. ಕೆಲವರು ತಿಳಿಸುವ ಪ್ರಕಾರ ಚಿತ್ರದುರ್ಗದ ಎಲ್ಲಾ ಪ್ರಸಿದ್ಧ ಗರುಡಿಗಳೂ ಒಂದು ಕಾಲದಲ್ಲಿ ಇಲ್ಲಿನ ಜಟ್ಟಿಜನಾಂಗದವರ ಕೈಯಲ್ಲಿ ಇದ್ದವು. ಅವರು ಕುಸ್ತಿಪಟುಗಳಾಗಿ ಪ್ರಖ್ಯಾತರಾಗಿದ್ದುದಲ್ಲದೆ, ವೈದ್ಯಕೀಯದಲ್ಲೂ ಪರಿಣಿತಿ ಪಡೆದು, ಪಾಳೆಯಗಾರರ ಆಶ್ರಯ ಪಡೆದು ಬಹಳ ಕಾಲ ಇಲ್ಲಿನ ಎಲ್ಲಾ ಗರುಡಿಗಳ ಒಡೆಯರಾಗಿ, ಉಸ್ತುವಾರಿಯನ್ನು ನೋಡಿಕೊಂಡಿದ್ದರು. ಪಾಳೆಯಗಾರರ ಅವನತಿಯ ಬಳಿಕ ಈ ಜಟ್ಟಿ ಜನಾಂಗದವರು ಇಟ್ಟುಕೊಂಡಿದ್ದ ಗರುಡಿಗಳ ಮೇಲಿನ ಒಡೆತನ, ಹಿಡಿತ ಸಡಿಲಗೊಂಡಂತೆ ಕಾಣುತ್ತದೆ.

ದೊಡ್ಡಗರುಡಿಯೂ ಕೂಡಾ ಈ ಜಟ್ಟಿ ಜನಾಂಗದವರ ಹಿಡಿತದಲ್ಲಿತ್ತು. ಬಹುಶಃ ಇಪ್ಪತ್ತನೆ ಶತಮಾನದ ಮೊದಲ ದಶಕಗಳಲ್ಲಿ ಆ ಜನಾಂಗದವರ ಕೈಯಲ್ಲಿ ಗರಡಿಯ ಕಂದಾಯವನ್ನು ಕಟ್ಟಲಾಗದೆ ಈಗಿರುವ ದೊಡ್ಡಗರುಡಿಯು ಹರಾಜಿಗೆ ಬಂದಿತು. ಹೀಗೆ ಹರಾಜಿಗೆ ಬಂದ ಗರುಡಿಯನ್ನು ಪೈ. ವೀರಭದ್ರಪ್ಪನವರ ತಂದೆ ಮುರಿಗೆಜ್ಜನವರು ಕೊಂಡುಕೊಂಡು, ಅದನ್ನು ಅಲ್ಲಿನ ಪೈಲ್ವಾನರಿಗಾಗಿ ಬಿಟ್ಟುಕೊಟ್ಟರು ಎಂದು ಹೇಳಲಾಗುತ್ತದೆ.

ಹೆಚ್ಚೂ ಕಡಿಮೆ ಕಳೆದ ಶತಮಾನದ ಮೊದಲಭಾಗದಲ್ಲಿ ಈ ಗರುಡಿಯಲ್ಲಿ ಸಾಧನೆ ಮಾಡುತ್ತಿದ್ದ ಪೈಲ್ವಾನರುಗಳ ಬಗ್ಗೆಯಾಗಲಿ, ಉಸ್ತಾದ್‌ಗಳ ಬಗ್ಗೆಯಾಗಲಿ ತಿಳಿಯುವುದು ಅತ್ಯಲ್ಪ. ಇಲ್ಲಿನ ಹಿರಿಯ ಪೈಲ್ವಾನರೊಬ್ಬರು ನೆನಪಿಸಿಕೊಂಡು ಹೇಳುವಂತೆ ದೊಡ್ಡಗರುಡಿಯಲ್ಲಿ ಬಳೆಗಾರ ಈರಣ್ಣ ಎಂಬ ಹೈಕ್ಲಾಸ್ ಪೈಲ್ವಾನ್ ಇದ್ದ. ಆತನನ್ನು ಬಿಟ್ಟರೆ ಚಕ್ಕಲಿ ರುದ್ರಪ್ಪ ಅಥವಾ ಶಿವರುದ್ರಪ್ಪ ಎಂಬ ಇನ್ನೊಬ್ಬ ಪೈಲ್ವಾನ್ ಬಗ್ಗೆ ತಿಳಿಸುತ್ತಾರೆ. ಈ ಬಳೆಗಾರ ಈರಣ್ಣ ದಾವಣಗೆರೆಯ ಕೆರೆಗರಡಿಯ ಪೈಲ್ವಾನ್ ಸಣ್ಣನೀಲಪ್ಪ ಎಂಬುವವರನ್ನು

ಸೋಲಿಸಿದ್ದನಂತೆ. ಆತ ಪೈಲ್ವಾನ್ ನಂಜಪ್ಪನಿಗಿಂತ ಮಿಕ್ಕ ಪೈಲ್ವಾನನಾಗಿ ಮೆರೆದವನು. ಆದರೆ ಆತನ ಹೆಸರು ಅಷ್ಟಾಗಿ ಕೇಳಿಬರದಿರಲು ಕಾರಣ ಆಗಿನ ಕುಸ್ತಿಗಳೆಲ್ಲಾ ಜಾತ್ರೆ ಉತ್ಸವಗಳಲ್ಲಿ ನಡೆಯುತ್ತಿದ್ದುದು. ಈ ಪೈಲ್ವಾನರ ಬಗ್ಗೆ ಇಷ್ಟಾದರೂ ಹೇಳುವ ಆ ಹಿರಿಯ ಪೈಲ್ವಾನರು ಉಸ್ತಾದ್‌ಗಳ ಬಗ್ಗೆ ಕೇಳಿದರೆ ಅವರ ಬಳಿ ಯಾರ ಬಗ್ಗೆಯೂ ಮಾಹಿತಿಯಾಗಲಿ, ಸ್ಮರಣೆಯಾಗಲಿ ಇದ್ದಂತೆ ಇಲ್ಲ ಅನ್ನಿಸುತ್ತದೆ.

ಆದರೆ ಪಡ್ಡೆ ಹುಡುಗರ ಜೊತೆ ಅಡ್ಡಾಡುತ್ತ ಕಾಲಹರಣ ಮಾಡುತ್ತಿದ್ದ ನಂಜಪ್ಪನನ್ನು ಆತನ ತಂದೆ ಲಾಡರ ಈಶ್ವರಪ್ಪನವರು ಮನಸ್ಸು ಮಾಡಿ ದೊಡ್ಡ ಗರುಡಿಗೆ ಸೇರಿಸಿದ ಕಾಲವು ಬಹುಶಃ ದೊಡ್ಡಗರುಡಿಯ ದೃಷ್ಟಿಯಿಂದ ಸುವರ್ಣಯುಗ ಎನ್ನಬಹುದು. ಏಕೆಂದರೆ ಆಗ ದೊಡ್ಡ ಗರುಡಿಯಲ್ಲಿ ಪೈಲ್ವಾನ್ ನಂಜಪ್ಪನವರಂತೆ, ಪೈ. ರಾಮಪ್ಪ, ಪೈ. ಬಷೀರ್, ಪೈ. ಹನುಮಂತಿ ಮೊದಲಾದ ಒಳ್ಳೆಯ ಕುಸ್ತಿಪಟುಗಳು ಸಾಧನೆ ಮಾಡುತ್ತಿದ್ದಂತೆ, ಇನ್ನೂ ಅನೇಕ ಹಿರಿಯ-ಕಿರಿಯ ಪೈಲ್ವಾನರುಗಳಿಂದ ಗರುಡಿಯು ತುಂಬಿಹೋಗಿತ್ತು. ಈ ಕುಸ್ತಿಪಟುಗಳ ಜೊತೆಗೆ ಅಂದಿನ ಉಸ್ತಾದಿಗಳ ಬಗ್ಗೆಯೂ ಅನೇಕರು ತಿಳಿಸುತ್ತಾರೆ.

ಒಬ್ಬ ಕುಸ್ತಿಪಟುವಿನ ಹಿಂದೆ ಈ ಉಸ್ತಾದ್‌ಗಳ ಪರಿಶ್ರಮ, ಉಸ್ತುವಾರಿ ಅವರು ಸಂಪಾದಿಸಿದ್ದ ಗೌರವಯುತ ವ್ಯಕ್ತಿತ್ವ ಬಹಳಷ್ಟು ಕೆಲಸ ಮಾಡುವುದರಿಂದ, ಈ ಉಸ್ತಾದ್‌ಗಳಿಗೆ ಗೌರವಪೂರ್ವಕವಾಗಿ ನಮನ ಸಲ್ಲಿಸಿ, ಪೈಲ್ವಾನರು ಕುಸ್ತಿಯ ಜಗತ್ತಿಗೆ ಬರುವುದು ಒಳ್ಳೆಯ ಪ್ರವೇಶವೆಂದು ಕಾಣುತ್ತದೆ.

ದೊಡ್ಡಗರುಡಿಯ ಉಸ್ತಾದ್‌ಗಳಲ್ಲಿ ಕೇಳಿಬರುವ ಒಂದು ದೊಡ್ಡ ಹೆಸರೆಂದರೆ ಕಾಲುಂಗುರದ ಬುಡ್ಡಣ್ಣ. ಈತನನ್ನು ಬುಡ್ಡಪ್ಪ ಎಂತಲೂ ಕರೆಯುತ್ತಾರೆ. ಈತನ ಅಣ್ಣ ಭೀಮಣ್ಣ. ಇವರ ಮನೆತನದ ಕಸುಬು ಲಂಬಾಣಿ ಜನಕ್ಕೆ ಬೇಕಾದ ಕಾಲುಂಗುರ ಮತ್ತು ಇತರೆ ಆಭರಣಗಳನ್ನು ತಯಾರಿಸುವುದು. ಇವನ್ನು ಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ಅವರು ಮರಾಠಿ ಜನಾಂಗದವರು. ಭೀಮಣ್ಣ ಮತ್ತು ಬುಡ್ಡಣ್ಣ ಇಬ್ಬರೂ ಮದುವೆಯಾಗಲಿಲ್ಲ. ಕಡಿಮೆ ಸಂಖ್ಯೆಯಲ್ಲಿದ್ದ ಈ ಮನೆತನದವರು ಚಿತ್ರದುರ್ಗದಲ್ಲಿ ಈಗ ಸಂಪೂರ್ಣವಾಗಿ ಕಣ್ಮರೆಯಾಗಿರುವಂತೆ ಕಾಣುತ್ತದೆ. ಇವರು ಕಾಲುಂಗುರವನ್ನು ತಯಾರಿಸುತ್ತಿದ್ದುದರಿಂದ ಇವರ ಹೆಸರಿನ ಮುಂದೆ ಕಾಲುಂಗುರ ಪದವನ್ನು ಗುಣವಾಚಕವಾಗಿ ಬಳಸಲಾಗುತ್ತದೆ.

ಕಾಲುಂಗುರದ ಬುಡ್ಡಣ್ಣ ತೀರಾ ಎತ್ತರವಲ್ಲದ ಆಕೃತಿ. ಸ್ವಲ್ಪಮಟ್ಟಿಗೆ ಗೌರವರ್ಣ. ಕುಸ್ತಿಪಟುವಿಗೆ ಒಪ್ಪುವ ದೇಹಸೌಷ್ಠವ. ಅವರ ತೋಳುಗಳು, ತೊಡೆಗಳು ಚೆನ್ನಾಗಿ ಸಾಧನೆ ಮಾಡಿದ್ದರಿಂದ ಪೈಲ್ವಾನರಿಗೆ ಒಪ್ಪುವಂತೆ ಸುಂದರವಾಗಿ ಕಾಣುತ್ತಿದ್ದವು. ಆತ ತೊಡುತ್ತಿದ್ದ ಪಂಚೆ, ಷರಟಿನ ಜೊತೆಗೆ ತಲೆಗೆ ರುಮಾಲು ಸುತ್ತುತ್ತಿದ್ದರು. ಉಸ್ತಾದ್ ಆಗಿ ಗರುಡಿಯೊಡನೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಬುಡ್ಡಣ್ಣ ಕುಸ್ತಿ ಆಡಿದ್ದರ ಬಗ್ಗೆ ಹೆಚ್ಚು ಮಾಹಿತಿ ಸಿಕ್ಕುವುದಿಲ್ಲ.

ಆದರೆ ಈ ಊರಿನ ಹಿರಿಯ ಪೈಲ್ವಾನರೊಬ್ಬರು ಹೇಳುವಂತೆ ಅವರು ಬಾಲ್ಯದಲ್ಲಿ ಬುಡ್ಡಪ್ಪನ ಒಂದು ಕುಸ್ತಿಯನ್ನು ಉಚ್ಚಂಗಮ್ಮನ ಗುಡಿಯ ಮುಂದೆ ನೋಡಿದ್ದರಂತೆ. ಅಷ್ಟು ಬಿಟ್ಟರೆ ಅವರು ಆಡಿದ ಕುಸ್ತಿಗಳ ಬಗ್ಗೆ ಈಗ ಹೇಳುವವರು ಯಾರೂ ಇದ್ದಂತೆ ಕಾಣುವುದಿಲ್ಲ.

ಆದರೆ ಕಾಲುಂಗುರದ ಬುಡ್ಡಣ್ಣ ಉಸ್ತಾದ್ ಆಗಿ ದೊಡ್ಡಗರುಡಿಯಲ್ಲಿ ಶಿಸ್ತನ್ನು ಕಾಪಾಡಿದ ಬಗೆಯನ್ನು, ಅಂಗಸಾಧನೆ, ಲಡತ್ ಮಾಡಿಸುತ್ತಿದ್ದುದನ್ನು ಇನ್ನೊಬ್ಬ ಹಿರಿಯ ಪೈಲ್ವಾನ್ ವಸಂತರಾವ್ ತಿಳಿಸುತ್ತಾರೆ. ಸ್ವತಃ ಬುಡ್ಡಣ್ಣನೇ ಶಿಸ್ತಿನ ಮನುಷ್ಯನೆಂದು ಸುತ್ತು ಮುತ್ತ ಖ್ಯಾತನಾಗಿದ್ದನು. ಅಂತಹ ಶಿಸ್ತನ್ನು ಗರುಡಿಗೆ ಬರುತ್ತಿದ್ದ ಪೈಲ್ವಾನರಿಂದಲೂ ಅಪೇಕ್ಷಿಸುತ್ತಿದ್ದನು. ಗರುಡಿಯ ಪಾವಿತ್ರ್ಯತೆಯ ಬಗ್ಗೆ ಆತ ಕಟ್ಟುನಿಟ್ಟಿನ ಮನುಷ್ಯ. ಗರುಡಿಗೆ ಬರುವ ಯಾರಾದರೂ ಹೆಣ್ಣಿನ ಜೊತೆ ಅಶ್ಲೀಲ ಸಂಬಂಧ ಹೊಂದಿದ್ದಾನೆ ಎಂದರೆ, ಅಂಥ ಮನುಷ್ಯ ಗರುಡಿಯೊಳಗೆ ಬಂದಿದ್ದಾನೆ ಎಂದರೆ ಬುಡ್ಡಣ್ಣನಿಗೆ ಕೆಂಡದಂಥ ಕೋಪ. ಗರುಡಿ ಎಂಬುದು ಪವಿತ್ರ, ಶುದ್ಧ ಸ್ಥಳ ಎಂಬುದನ್ನು ಆತ ಇತರರಿಗೆ ಮನವರಿಕೆ ಮಾಡಿಕೊಡುತ್ತಿದ್ದನು.

ದೊಡ್ಡ ಗರುಡಿಯ ತನ್ನ ಪೈಲ್ವಾನ್ ಶಿಷ್ಯರು ಕುಸ್ತಿಗೆಂದು ಹೊರಟಾಗ ಬುಡ್ಡಪ್ಪ ಅವರನ್ನು ಗರುಡಿಯಿಂದ ಹೊರಡಿಸುತ್ತಿದ್ದ ಬಗೆಯೇ ವಿಶಿಷ್ಟವಾದದು. ರುಮಾಲು ಸುತ್ತಿಕೊಂಡ ಬುಡ್ಡಪ್ಪ ಠೀವಿಯಿಂದ ಮೊದಲು ಗರುಡಿಯಿಂದ ಹೊರಡಬೇಕು. ಬೀದಿಯಲ್ಲಿದ್ದ ಹೆಂಗಸರಿಗೆಲ್ಲಾ ಹೊರಗೆ ಬರದಂತೆ ತಾಕೀತು ಮಾಡುತ್ತ ಆತ ದೊಡ್ಡಪೇಟೆ ತಲುಪುತ್ತಿದ್ದ. ಅಲ್ಲಿ ಯಾವ ಹೆಣ್ಣುಗಳೂ ಕಣ್ಣಿಗೆ ಬೀಳುತ್ತಿಲ್ಲವೆಂದು ಬುಡ್ಡಪ್ಪನಿಗೆ ಖಚಿತವಾದ ಮೇಲೆ ಆತ ಗರುಡಿಯ ಕಡೆಗೆ ತಿರುಗಿ ಜೋರು ಚಪ್ಪಾಳೆ ತಟ್ಟಿ ಸೂಚನೆ ಕೊಡಬೇಕು ! ಅದನ್ನು ಕೇಳಿದ ಬಳಿಕ, ಸೂಚನೆ ತಲುಪಿದ ಬಳಿಕ, ಸಿದ್ಧವಾಗಿ ನಿಂತಿದ್ದ ಪೈಲ್ವಾನರು ಗರುಡಿಯಿಂದ ಗಂಭೀರವಾಗಿ ಹೆಜ್ಜೆಯಿಡುತ್ತ ಹೊರಗೆ ಬರಬೇಕು ! ಅಖಾಡದ ಕಡೆ ಸಾಗಬೇಕು ! ಹೀಗಿತ್ತು ಬುಡ್ಡಣ್ಣನ ಶಿಸ್ತು ಮತ್ತು ಮಾರ್ಗದರ್ಶನ ! ಪೈಲ್ವಾನ್ ನಂಜಪ್ಪ ಬುಡ್ಡಣ್ಣನ ಶಿಷ್ಯನಾಗಿ ಈ ರೀತಿಯಾಗಿಯೇ ಕುಸ್ತಿಗಳಿಗೆ ಹೊರಡಬೇಕಾಗಿತ್ತು.

ಕಾಲುಂಗುರದ ಬುಡ್ಡಣ್ಣನ ಬಳಿ ಶಿಷ್ಯನಾಗಿ ನಂಜಪ್ಪ ದೊಡ್ಡಗರುಡಿಗೆ ಬರತೊಡಗಿದಾಗ ಆತನಿಗೆ ಹದಿಹರೆಯದ ವಯಸ್ಸು. ಅನುಕೂಲಸ್ತರ ಕುಟುಂಬದಲ್ಲಿ ಹುಟ್ಟಿ, ಪಡ್ಡೆಹುಡುಗರ ಜೊತೆಗೆ ಅಲೆದು ಗರುಡಿಗೆ ಬಂದ ನಂಜಪ್ಪ ಬುಡ್ಡಣ್ಣನಂಥ ಗುರುವಿನ ಕೈಯಲ್ಲಿ ಸಿಕ್ಕು ಬಹಳ ಕಷ್ಟದಿಂದ ಮೊದಮೊದಲು ಪಳಗಿರಬೇಕು ಎಂದು ಕಾಣುತ್ತದೆ. ಉಸ್ತಾದ್‌ಗಳಿಗೆ ತಮ್ಮ ಶಿಷ್ಯರ ಬಗ್ಗೆ ಅಪಾರ ಪ್ರೀತಿ, ಅಪಾರ ವಿಶ್ವಾಸ. ಕುಸ್ತಿ ಪಟುವಾಗಿ ಒಬ್ಬ ಶಿಷ್ಯ ನಾಲ್ಕು ಹೆಜ್ಜೆ ಮುಂದೆ ಹೋಗಿ ಕೀರ್ತಿ ತರುತ್ತಾನೆ ಎಂಬಂಥವನನ್ನು ಕಂಡರೆ, ಉಸ್ತಾದ್‌ಗಳು ಅಂಥವರ ಬಗ್ಗೆ ಮತ್ತಷ್ಟು ಮುತುವರ್ಜಿಯಿಂದ ಕಲಿಸುತ್ತಾರೆ ಮತ್ತು ಎಚ್ಚರಿಕೆಯ ಒಂದು ಕಣ್ಣು ಇಟ್ಟಿರುತ್ತಾರೆ. ಬುಡ್ಡಣ್ಣನಾದರೂ ಅಷ್ಟೆ. ಕುಸ್ತಿ ಲೋಕದಲ್ಲಿ ನಂಜಪ್ಪ ಮೇಲೆ ಬಂದು ಮಿರುಗುತ್ತಾನೆ ಎಂದು ಬುಡ್ಡಣ್ಣನಿಗೆ ಮನವರಿಕೆಯಾದ ತಕ್ಷಣ, ಆತ ನಂಜಪ್ಪನಿಗೆ ಮಟ್ಟೆಯಲ್ಲಿ ಕುಸ್ತಿಗಳ ಪಟ್ಟನ್ನು, ಗುಟ್ಟನ್ನೂ ಚೆನ್ನಾಗಿ ಮನದಟ್ಟಾಗುವಂತೆ ಹೇಳಿಕೊಡತೊಡಗಿದನು.

ಪ್ರತಿಯೊಬ್ಬ ಉಸ್ತಾದನೂ ತನ್ನ ಶಿಷ್ಯ ತನ್ನ ಆಣತಿಯಂತೆ ನಡೆದುಕೊಳ್ಳಬೇಕೆಂದು ಇಚ್ಛಿಸುತ್ತಾನೆ. ಕಾರಣ ತಪ್ಪು ಹೆಜ್ಜೆಯಿಟ್ಟು ತನ್ನ ಶಿಷ್ಯ ಸೋಲಬಾರದೆಂದು. ಇಂಥ ಆಶಯ, ಪ್ರೀತಿಯನ್ನು ಇಟ್ಟುಕೊಂಡಿದ್ದ ಬುಡ್ಡಣ್ಣ ಒಮ್ಮೆ ತನ್ನ ಶಿಷ್ಯ ಪೈಲ್ವಾನ್ ನಂಜಪ್ಪನ ಬಗ್ಗೆ ಮುನಿಸು ತೋರಿದ ಒಂದು ಸಂಗತಿ ಆರಂಭದ ದಿನಗಳಲ್ಲಿ ನಡೆಯಿತು. ಅದೇನೆಂದರೆ ಆಗಷ್ಟೇ ಕಾಂಟ್ರ್ಯಾಕ್ಟ್ ಕುಸ್ತಿಗಳು ಅಥವಾ ಟಿಕೆಟ್ ಕುಸ್ತಿಗಳು ಚಿತ್ರದುರ್ಗದಲ್ಲಿ ನಡೆಯ ತೊಡಗಿದ್ದವು. ಆರಂಭದ ಇಂಥ ಕುಸ್ತಿಗಳು ಸೊಪ್ಪಿನ ಮಾರ್ಕೆಟ್ ಬಳಿ ಇರುವ ನಾರ್ಮಲ್ ಸ್ಕೂಲಿನ (ಈಗ ವಾಸವಿ ಶಾಲೆ) ಆವರಣದಲ್ಲಿ ನಡೆಯುತ್ತಿದ್ದವು. ಅಂಥ ಒಂದು ಕುಸ್ತಿಯಲ್ಲಿ ತನ್ನ ಉಸ್ತಾದ್‌ನ ಆಣತಿಯಿಲ್ಲದೆ ನಂಜಪ್ಪ ಪಾಲುಗೊಳ್ಳಬೇಕೆಂದು ಬಯಸಿ ಮರುಡಪ್ಪ ಎಂಬ ಪೈಲ್ವಾನನ ಮೇಲೆ 'ಜೊತೆ' ಮಾಡಿಕೊಂಡನು. ಆತ ಭರ್ಜರಿ ಎತ್ತರದ, ಗಾತ್ರದ, ಅಂದಿನ ಕಾಲದ ಪ್ರಸಿದ್ಧ ಪೈಲ್ವಾನ್.

ಆಗ ಕುಸ್ತಿಗಳು ನಡೆಯುವಾಗ ಉಸ್ತಾದಿಗಳೂ, ಪೋಷಕರೂ ಅಖಾಡದಲ್ಲಿ ಒಂದೆಡೆ ಕುಳಿತು ತಮ್ಮ ಶಿಷ್ಯರಿಗೆ ಪ್ರೋತ್ಸಾಹ, ಆತ್ಮಸ್ಥೈರ್ಯ ತುಂಬುವುದು ಒಂದು ಸಂಗತಿ. ಆದರೆ ತನ್ನ ಮಾತು ಮೀರಿ ಈ ಹುಡುಗ ನಂಜಪ್ಪ ಕುಸ್ತಿ ಜೊತೆ ಮಾಡಿಕೊಂಡಿದ್ದಾನೆ ಎಂದು ಸಿಟ್ಟಾಗಿ ಬುಡ್ಡಪ್ಪ ಈ ಕುಸ್ತಿಯನ್ನು–ಬಹುಶಃ ನಂಜಪ್ಪನ ಮೊದಲ ಕುಸ್ತಿ ನೋಡಲು ಹೋಗಲೇ ಇಲ್ಲ. ಶಿಷ್ಯರ ಬಗ್ಗೆ ಅಷ್ಟು ಮುನ್ನೆಚ್ಚರಿಕೆಯನ್ನು, ಆಸಕ್ತಿಯನ್ನು ಉಸ್ತಾದ್‌ಗಳು ಹೊಂದಿರುತ್ತಿದ್ದರು ಎಂಬುದನ್ನು ತೋರಿಸಲು ಹಿರಿಯರು ಈ ಸಂಗತಿಯನ್ನು ಸ್ಮರಿಸಿಕೊಂಡು ಹೇಳುತ್ತಾರೆ. ಇಂಥ ಕಟ್ಟುನಿಟ್ಟಿನ ಉಸ್ತಾದಿಯ ಬಳಿ ಎಳಮೆಯಲ್ಲಿ ಕುಸ್ತಿ ವಿದ್ಯೆಯನ್ನು ಕಲಿಯಲು ನಂಜಪ್ಪಗೆ ಅವಕಾಶವಾಗಿದ್ದು ಆತನ ಪಾಲಿನ ಪುಣ್ಯವೆಂದೇ ಕರೆಯಬೇಕು.

ಈ ಮರುಡಪ್ಪನ ಜೊತೆ ಕುಸ್ತಿ ಆಡಲು ನಂಜಪ್ಪ ಕೈ ಮಿಲಾಯಿಸಿದ್ದು ಆತನ ಭವಿಷ್ಯದ ಕುಸ್ತಿಗಳಿಗೆ ಬರೆದ ಭಾಷ್ಯದಂತಿದೆ. ಏಕೆಂದರೆ ಐದಡಿಯಷ್ಟು ಎತ್ತರದ ನಂಜಪ್ಪ ತನ್ನ ಬಹುಪಾಲು ಕುಸ್ತಿಗಳಲ್ಲಿ ಜೊತೆ ಹಾಕಿಕೊಂಡ ಎದುರಾಳಿ ಪೈಲ್ವಾನರು ತನಗಿಂತ ದೇಹದಾರ್ಢ್ಯದಲ್ಲಿ, ಎತ್ತರದಲ್ಲಿ ಭಾರೀ ಆಳುಗಳಾಗಿದ್ದವರೆ ಆಗಿದ್ದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ನಂಜಪ್ಪ ಈ ಕುಸ್ತಿಯಲ್ಲಿ ಜಯಗಳಿಸಿ ಸರ್ವ ಕುಸ್ತಿ ಪ್ರೇಮಿಗಳನ್ನೂ ಹರ್ಷಗೊಳಿಸಿದನು. ತನ್ನ ಗುರು ಬುಡ್ಡಪ್ಪನನ್ನೂ ಸಂತಸಗೊಳಿಸಿದನು.

ನಂಜಪ್ಪನ ಇನ್ನೊಬ್ಬ ಗುರು ನಾರಾಣಪ್ಪನವರು. ದೊಡ್ಡ ಗರುಡಿಗೆ ಹೊಂದಿ ಕೊಂಡಂತೆಯೇ ಇವರ ಮನೆ. ಅಂದಿನ ದಿನಗಳಲ್ಲಿ ಪೈಲ್ವಾನರಾಗಿದ್ದ ಸಾಧಾರಣ ಎತ್ತರದ ಮನುಷ್ಯ. ಶಿಷ್ಯರ ಮೇಲೆ ಅಪಾರ ಪ್ರೀತಿ, ವಿಶ್ವಾಸ ವ್ಯಕ್ತಪಡಿಸುತ್ತಿದ್ದ ನಾರಣಪ್ಪ, ಕಲಿಯಲು ಉತ್ಸಾಹ ತೋರಿಸುವ ಕುಸ್ತಿಪಟುಗಳನ್ನು ಕಂಡರೆ ಇನ್ನಷ್ಟು ಖುಶಿಯಿಂದ ಉತ್ಸಾಹದಿಂದ ಹೇಳಿಕೊಡುತ್ತಿದ್ದರು. ಉಸ್ತಾದಿಯಾಗಿ ಈ ಗುಣವನ್ನು ಮೈಗೂಡಿಸಿಕೊಂಡಿದ್ದ ಅವರಿಗೆ ಭೇದ, ಭಾವವಿರಲಿಲ್ಲ. ಅವರು ಮೊದಲು ದೊಡ್ಡ ಗರುಡಿಯಲ್ಲಿ ಉಸ್ತಾದ್

ಆಗಿದ್ದರು. ಆಗ ನಂಜಪ್ಪಗೆ ಅವರು ಏಕ್‌ಲಾಂಗ್, ಉಕಾಡ್ ಮೊದಲಾದ ಪಟ್ಟುಗಳನ್ನು ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರುವಂತೆ ಕಲಿಸಿದರು. ನಂಜಪ್ಪ ತಮ್ಮ ಕುಸ್ತಿ ಜೀವನದಲ್ಲಿ 'ದೋಬೀಚಾಟ್'ಗೆ ಪ್ರಖ್ಯಾತಿಯಾಗಿದ್ದರೂ, ಏಕ್‌ಲಾಂಗ್, ಉಕಾಡ್‌ಗಳಲ್ಲಿ ಎದುರಾಳಿ ಪೈಲ್ವಾನರುಗಳನ್ನು ಚಿತ್ತಾಗಿಸುವುದರಲ್ಲಿ ತೋರಿದ ಕೌಶಲ ಈ ಉಸ್ತಾದಿಯಿಂದ ಕಲಿತದ್ದೆಂದು ಹೇಳಲಾಗುತ್ತದೆ.

ಇವರು ಒಂದು ಸಣ್ಣ ಮನಸ್ತಾಪದಿಂದ ದೊಡ್ಡಗರುಡಿಯ ಉಸ್ತಾದ್ ಆಗಿ ಮುಂದುವರಿಯಲಿಲ್ಲ. ಬಳಿಕ ಇವರು ಸಣ್ಣಗರುಡಿಯ ಉಸ್ತಾದ್ ಆಗಿ ಅನೇಕ ಪೈಲ್ವಾನರನ್ನು ತಯಾರು ಮಾಡಿದರು. ಉಸ್ತಾದ್‌ಗಳಲ್ಲಿ ಅಡಗಿರುವ ವಿದ್ಯೆಯನ್ನು ಗೌರವಿಸುತ್ತಿದ್ದ ಗರುಡಿಯ ಜನ, ಆ ಉಸ್ತಾದ್ ಯಾವ ಗರುಡಿಗೆ ಸೇರಿದ್ದರೂ ತಮ್ಮ ಗರುಡಿಗೆ ಅವರನ್ನು ಕರೆದು ಆ ವಿದ್ಯೆಯನ್ನು ಹೇಳಿಸಿಕೊಳ್ಳುತ್ತಿದ್ದರು. ಹೀಗಾಗಿ ಉಸ್ತಾದ್ ನಾರಾಣಪ್ಪನವರು ಹಗಲು ದೀವಟಿಗೆ ಗರುಡಿಗೂ ಹೋಗಿ ಅಲ್ಲಿನ ಅನೇಕ ಪೈಲ್ವಾನರಿಗೆ ತಮ್ಮ ವಿದ್ಯೆಯನ್ನು ಹೇಳಿಕೊಟ್ಟು ಸೈ ಎನ್ನಿಸಿಕೊಂಡರು.

ನಾರಾಣಪ್ಪನವರು ತಮ್ಮ ಶಿಷ್ಯರ ಬಗ್ಗೆ ಅಪಾರ ವಿಶ್ವಾಸ, ಆತ್ಮಾಭಿಮಾನ ಉಳ್ಳವರಾಗಿದ್ದರು. ಶೌರ್ಯ, ಧೈರ್ಯಗಳನ್ನು ಎತ್ತಿ ಹಿಡಿದು ತಮ್ಮ ಕೀರ್ತಿಗಾಗಿ ಪಣಕಟ್ಟಿ ಹೋರಾಡುತ್ತಿದ್ದ ಅಂದಿನ ದಿನಗಳಲ್ಲಿ, ಉಸ್ತಾದ್‌ಗಳ ಜೀವನ, ಅವರ ವ್ಯಕ್ತಿತ್ವದ ಎತ್ತರ ಹೇಗಿತ್ತು ಎಂಬುದನ್ನು ತಿಳಿಯಲು ಪೈಲ್ವಾನರ ಜಗತ್ತಿನಲ್ಲಿ ಹಲವು ಕಥೆಗಳು ಪ್ರಚಲಿತವಾಗಿವೆ. ಇದಕ್ಕೆ ನಮ್ಮ ಉಸ್ತಾದ್ ನಾರಾಣಪ್ಪನವರ ಬದುಕಿನಲ್ಲಿಯೇ ಒಂದು ಸಂಗತಿ ಪ್ರಚಲಿತವಾಗಿದೆ.

ಹಿಂದೆ ಚಿತ್ರದುರ್ಗದಲ್ಲಿ ಕುಸ್ತಿ ಆಡಲು ಅಂದು ಘಟಾನುಘಟಿಗಳಾದ ಪೈಲ್ವಾನರು ಆಗಮಿಸುತ್ತಿದ್ದರು. ಹಾಗೆ ಆಗಮಿಸಿದ ಪೈಲ್ವಾನರುಗಳಲ್ಲಿ ದಾವಣಗೆರೆಯ ಕೆಂಪು ಸಿದ್ಧಪ್ಪ ಎಂಬುವವನು ಒಬ್ಬನು. ಆತನ ಹೆಸರು ಕೇಳಿದರೆ ಯಾರೂ ಜೊತೆಹಾಕಿಕೊಳ್ಳಲು ಮುಂದೆ ಬರುತ್ತಿರಲಿಲ್ಲ. ಅವನು ಎಂದೂ ಅಖಾಡದಲ್ಲಿ ಬಿದ್ದ ವ್ಯಕ್ತಿಯೇ ಅಲ್ಲ ಎಂದು ಕೀರ್ತಿ ಸಂಪಾದಿಸಿದವನು. ಆತನ ಮೇಲೆ ಉಸ್ತಾದ್ ನಾರಾಣಪ್ಪನವರ ಶಿಷ್ಯ ಈರಣ್ಣ ಒಮ್ಮೆ ಜೊತೆ ಹಾಕಿಕೊಂಡು ಕುಸ್ತಿ ಆಡಿದ. ಅದು ಭಾರೀ ಕುಸ್ತಿ. ಅರ್ಧ, ಮುಕ್ಕಾಲು ಗಂಟೆಯಾಡಿದ ಈ ಕುಸ್ತಿಯಲ್ಲಿ ಪೈಲ್ವಾನ್ ಈರಣ್ಣ ಗೆದ್ದುಬಿಟ್ಟ. ಅವನು ಗೆದ್ದಿದ್ದಕ್ಕೆ ದುರ್ಗದವರು ಸಂತೋಷಪಟ್ಟು ಹರ್ಷೋದ್ಗಾರ ಮಾಡಿದರು. ಕೆಂಪು ಸಿದ್ಧಪ್ಪನ ಗುರು ಸಣ್ಣ ನೀಲಪ್ಪ ಎನ್ನುವಾತನಿಗೆ ಇದರಿಂದ ಬಹಳ ನೋವಾಯಿತು. ಆ ನೋವು ಸಣ್ಣ ನೀಲಪ್ಪನಲ್ಲಿ ರೋಷವಾಗಿ ಪರಿಣಮಿಸಿ, ಪಣವಾಗಿ ಮಾರ್ಪಾಟು ಆಯಿತು. ಆತ ಅಖಾಡದೊಳಕ್ಕೆ ನುಗ್ಗಿ ಬಂದು ಪೈಲ್ವಾನ್ ಈರಣ್ಣನ ಮೇಲೆ ಚಾಲೆಂಜ್ ಮಾಡಬೇಕಾಗಿತ್ತು. ಅದರ ಬದಲು ಪೈಲ್ವಾನ್ ಈರಣ್ಣನನ್ನು ಕುರಿತು – "ನಿನ್ನ ಗುರುವಿನ ಮೇಲೆ ನನ್ನ ಸವಾಲ್ !" ಎಂದು ಅಖಾಡದಲ್ಲಿ ಗರ್ಜಿಸಿಬಿಟ್ಟ. ಆದರೆ ಅವರು ಸಿಟ್ಟಾಗಲಿಲ್ಲ. ಅವರು ತಾಳ್ಮೆ ಕಳೆದುಕೊಳ್ಳದೆ "ನಾನ್ಯಾಕಪ್ಪ ನಿನ್ನ ಸವಾಲ್ ಸ್ವೀಕರಿಸಬೇಕು?

ನಿನ್ನ ಸವಾಲಿಗೆ ನನ್ನ ಶಿಷ್ಯನೇ ಸಾಕು !" ಎಂದರು. ಆದರೆ ಕುಸ್ತಿ ವ್ಯವಸ್ಥಾಪಕರು, ದೊಡ್ಡವರು ಎನ್ನಿಸಿಕೊಂಡವರು ಈ ಪ್ರಕರಣ ಜಟಾಪಟಿಗೆ ಹೋಗದಂತೆ ತಡೆದು ಇಬ್ಬರನ್ನೂ ಸಂತೈಸಿದರು.

ಹೀಗೆ ಸವಾಲ್ ಹಾಕಿ ಸೆಡ್ಡು ಹೊಡೆದಾಗ ಉಸ್ತಾದ್ ಸಣ್ಣ ನೀಲಪ್ಪನಿಗೆ ಆಗಲೇ ವಯಸ್ಸು ಅರವತ್ತು ದಾಟಿತ್ತು. ನಾರಾಣಪ್ಪರಿಗೂ ಹೆಚ್ಚೂ ಕಡಿಮೆ ಅರವತ್ತು ವಯಸ್ಸು ದಾಟಿತ್ತು. ಈ ಇಬ್ಬರ ವರ್ತನೆ ವಿಶ್ಲೇಷಣೆ ಮಾಡಿದರೆ ಈ ಇಬ್ಬರು ಉಸ್ತಾದ್‌ಗಳಲ್ಲಿಯೂ ವ್ಯಕ್ತವಾಗುವುದು ಶಿಷ್ಯವಾತ್ಸಲ್ಯ; ತಮ್ಮ ಗರುಡಿಗಳ ಬಗ್ಗೆ ಇರುವ ಅಭಿಮಾನ. ಈ ಇಬ್ಬರು ಉಸ್ತಾದ್‌ಗಳಲ್ಲಿ ಯಾರನ್ನು ಮೆಚ್ಚುವುದು? ಯಾರನ್ನು ಮೆಚ್ಚದಿರುವುದು? ಇಂಥ ನಾರಾಣಪ್ಪನವರು ನಂಜಪ್ಪ ತಮ್ಮ ಶಿಷ್ಯನಾಗಿರುವ ತನಕ, ಉತ್ತಮ ಕುಸ್ತಿಪಟುವಾಗಲು ಬೇಕಾದ ವಿದ್ಯೆಯೆಲ್ಲವನ್ನು ಶಿಷ್ಯನಿಗೆ ಕಲಿಸಿದರು.

ನಂಜಪ್ಪನವರ ಇನ್ನೊಬ್ಬ ಗುರು ಪರಿಪೈಗರ್ ಸಾಹೇಬರು. ಪೈಗರ್ ಎಂಬ ಹೆಸರಿಗೆ ಟೈಗರ್ ಎಂಬ ರೈಮ್ ಹೊಂದುತ್ತದೆಯಲ್ಲವೆ? ಎತ್ತರ, ಧೃಡಕಾಯ, ಗೌರವರ್ಣ, ಮುಖದಲ್ಲಿ ಹುರಿಮೀಸೆಯಿಂದ ಶೋಭಿಸುವ ಪರಿಪೈಗರ್ ಏಳುಮೆಟ್ಟಿನ ಟೈಗರ್ ತರವೇ ಇದ್ದರು ! ಸಂಬಂಧದ ವಿಲಕ್ಷಣ ಗುಣವನ್ನು ಕಂಡಾಗ ಅಲ್ಲಮನ 'ಎತ್ತಣ ಮಾಮರ ಎತ್ತಣ ಕೋಗಿಲೆ' ಎಂಬ ಮಾತು ನೆನಪಿಗೆ ಬರುತ್ತದೆಯಲ್ಲವೆ ? ಪೈಲ್ವಾನರ ಜಗತ್ತಿನಿಂದ ನೋಡಿದಾಗ ಈ ಮಾತು ಎಷ್ಟು ಸತ್ಯ ಎಂಬ ಅರಿವಾಗುತ್ತದೆ. ಅದರಲ್ಲಿಯೂ ಪರಿಪೈಗರ್‌ರಂಥ ಗುರು ನಂಜಪ್ಪನಂಥ ಶಿಷ್ಯರನ್ನು ಕಂಡಾಗ ಮೊದಲ ನೋಟಕ್ಕೆ ಈ ಮಾತು ಸರಿ ಅನ್ನಿಸಿಬಿಡುತ್ತದೆ. ಬಯಲು ಸೀಮೆಯ ಮೈಸೂರು ರಾಜ್ಯದ ಚಿತ್ರದುರ್ಗವೆಲ್ಲಿ ! ಉತ್ತರದ ಪಂಜಾಬ್ ಎಲ್ಲಿ ! ಪಂಜಾಬಿನ ಪರಿಪೈಗರ್ ಅವರು ದುರ್ಗದ ನಂಜಪ್ಪರಿಗೆ ಉಸ್ತಾದ್ ಆಗಿ ಪರಿಣಮಿಸಿದ್ದು ಒಂದು ಉಲ್ಲೇಖಾರ್ಹವಾದ ಸುಂದರ ಸಹಜ ಕಥೆ ! ಅದು ನಡೆದದ್ದು ಹೀಗೆ :

ಸಿ.ಟಿ. ಮಲ್ಲಪ್ಪನವರು ಚಿತ್ರದುರ್ಗ ಪುರಸಭೆಯ ಕೌನ್ಸಿಲರ್ ಆಗಿ ಹೆಸರು ಮಾಡಿದ್ದ ದೊಡ್ಡ ಮನುಷ್ಯರು. ವೃತ್ತಿಯಲ್ಲಿ ಅವರು ಈರುಳ್ಳಿ ವ್ಯಾಪಾರಿಗಳು. ಅವರು ದೊಡ್ಡಗರಡಿಯ ಪೋಷಕ ಮಹನೀಯರಲ್ಲಿ ಒಬ್ಬರು. ಅವರು ಈರುಳ್ಳಿ ವ್ಯಾಪಾರಕ್ಕಾಗಿ ಆಗಾಗ್ಗೆ ಬೆಂಗಳೂರು, ಮೈಸೂರುಗಳಿಗೆ ಹೋಗಿ ಬರುತ್ತಿದ್ದರು. ಹೀಗೆ ಈರುಳ್ಳಿ ವ್ಯಾಪಾರಕ್ಕಾಗಿ ಒಮ್ಮೆ ಮೈಸೂರಿಗೆ ಹೋಗಿದ್ದಾಗ ಅಲ್ಲಿ ಕೆಲವು ಕಾಡಾಕಾಡಿ (ಖಡಾಖಡಿ) ಕುಸ್ತಿಗಳು ನಡೆಯುತ್ತಿದ್ದವು. ಆಗ ಅಲ್ಲಿಗೆ ಕುಸ್ತಿ ಆಡಲು ಪಂಜಾಬಿನಿಂದ ಪರಿಪೈಗರ್ ಬಂದಿದ್ದರು. ಅವರು ತಮ್ಮ ಮಗ ಆಶಿಕ್ ಹುಸೇನ್ ಅವರನ್ನೂ ಜೊತೆಗೆ ಕರೆತಂದಿದ್ದರು. ಕುಸ್ತಿ ಪ್ರೇಮಿಗಳಾಗಿದ್ದ ಸಿ.ಟಿ. ಮಲ್ಲಪ್ಪನವರು ಪರಿಪೈಗರ್ ಕುಸ್ತಿಯನ್ನು ನೋಡಿ ಮೆಚ್ಚಿದರು. ಬಳಿಕ ಅವರ ಕಣ್ಣಮುಂದೆ ಬಂದು ನಿಂತಿದ್ದು ದೊಡ್ಡಗರಡಿ. ಅವರಿಗೆ ತಕ್ಷಣ ಅನ್ನಿಸಿತು – 'ನಾನೇಕೆ ಈ ಪರಿಪೈಗರ್‌ರನ್ನು ದುರ್ಗಕ್ಕೆ ಕರೆದೊಯ್ಯಬಾರದು?' ನಂಜಪ್ಪ ಮತ್ತಿತರ ಪೈಲ್ವಾನರಿಗೆ ಈತನಿಂದ ಕುಸ್ತಿಯ ಪಟ್ಟು ಚಮತ್ಕಾರಗಳನ್ನು ಕಲಿಸುವಂತೆ ಮಾಡಬಾರದು? ಇವರನ್ನು ಕರೆದೊಯ್ದು ನಂಜಪ್ಪ,

ರಾಮಪ್ಪ, ಹನುಮಂತಿ, ಕುಂಟುರಾಮಪ್ಪ ಮೊದಲಾದವರಿಗೆ ಟ್ರೈನಿಂಗ್ ಕೊಡಿಸಿದರೆ ಅವರಿಗೂ ಹೆಸರು ಬರುತ್ತದೆ, ಗರಡಿಯ ಕೀರ್ತಿಯೂ ಹೆಚ್ಚುತ್ತೆ ಎನ್ನಿಸಿ, ಅವರು ನೇರ ಪರಿಫೈಗರ್ ಅವರನ್ನು ಕಂಡು ಒಪ್ಪಿಸಿದರು. ಮತ್ತು ಸ್ವಂತ ಖರ್ಚಿನಲ್ಲಿ ಅವರನ್ನು ದುರ್ಗಕ್ಕೆ ಕರೆತಂದರು. ಹೀಗೆ ಸಿ.ಟಿ. ಮಲ್ಲಪ್ಪನವರ ಮೂಲಕ ಚಿತ್ರದುರ್ಗದ ದೊಡ್ಡಗರಡಿಗೆ ಆಗಮಿಸಿದ ಪರಿಫೈಗರ್ ಸಾಹೇಬರು ಇಲ್ಲಿನ ಅನೇಕ ಪೈಲ್ವಾನರಿಗೆ ಉಸ್ತಾದಿಯಾದರು. ಬಹಳ ಮುಖ್ಯವಾಗಿ ದಿನದಿನಕ್ಕು ಪ್ರವರ್ಧಮಾನಕ್ಕೆ ಬರುತ್ತಿದ್ದ ನಂಜಪ್ಪನವರಿಗೆ ಮೆಚ್ಚಿನ ಗುರುವಾದರು.

ಪರಿಫೈಗರ್ ಅವರು ಹಿಂದಿನ ಲಾಹೋರ್ ನಗರಕ್ಕೆ ಸಮೀಪದ ಗುಜರನ್‌ವಾಲ ಎಂಬ ಊರಿನವರು. ಅವರ ಮೊದಲಿನ ಹೆಸರು ಅಲೀ ಮೊಹಮದ್. ಆದರೆ ಅವರು ಪರಿಫೈಗರ್ ಎಂಬ ಹೆಸರಿನಿಂದಲೇ ಸುಪರಿಚಿತರಾಗಿದ್ದಾರೆ. ಪೇಶಾವರ, ದಿಲ್ಲಿಯಿಂದ ಹಿಡಿದು ಕನ್ಯಾಕುಮಾರಿಯವರೆಗೆ ಭಾರತಾದ್ಯಂತ ಕುಸ್ತಿ ಮಾಡಿದ್ದ ಶ್ರೇಷ್ಠಮಟ್ಟದ ಪೈಲ್ವಾನರಾದ ಪರಿಫೈಗರ್ ಅವರು ತಮ್ಮ ೫೫–೬೦ನೇ ವಯಸ್ಸಿನಲ್ಲಿ ಚಿತ್ರದುರ್ಗಕ್ಕೆ ಬಂದರು. ಬಳಿಕ ಪಂಜಾಬಿಗೆ ಮತ್ತೆ ಹಿಂದಿರುಗಲಿಲ್ಲ.

ಪರಿಫೈಗರ್ ಗೌರವರ್ಣದ ಎತ್ತರದ ಆಳು. ಪೈಲ್ವಾನರಿಗೆ ಒಪ್ಪುವ ಮೈಕಟ್ಟು. ಮುಖಕ್ಕೆ ಗಂಡುಕಳೆಯನ್ನು ಚಿಮ್ಮಿಸುವಂತಹ ಹುರಿಮೀಸೆ. ಆದರೆ ಮೃದು ಸ್ವಭಾವದ ಪರಿಫೈಗರ್ ಇಲ್ಲಿನ ಪೈಲ್ವಾನ ಜನರಿಗೆಲ್ಲ ಪ್ರಿಯವಾಗುವಂತೆ ಬಾಳಿ ಬದುಕಿದರು. ಅವರು ಈ ನೆಲದವರೇ ಆಗಿ ಕೊನೆಯ ತನಕ ಇಲ್ಲಿಯೇ ಇದ್ದು, ಇಲ್ಲಿಯೇ ಸತ್ತು ಸಮಾಧಿಯಾದರು. ಅವಿವಾಹಿತರಾದ ಇವರ ಮಗ ಆಶಿಕ್ ಹುಸೇನ್ ಕೂಡ ಚಿತ್ರದುರ್ಗದಲ್ಲಿದ್ದು ಇಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದರು.

ಪರಿಫೈಗರ್ ಸಾಹೇಬರನ್ನು ಸಿ.ಬಿ. ಮಲ್ಲಪ್ಪನವರು ತಂದು ಬಿಟ್ಟಾಗ, ಇಲ್ಲಿನ ಅನೇಕರು 'ಮಲ್ಲಪ್ಪ ಬಿಟ್ಟಿದ್ದು ಬಿಟ್ಟು ಒಬ್ಬ ಅಜ್ಜನ್ನ ಗರಡಿಗೆ ಕರೆದುಕೊಂಡು ಬಂದಿದ್ದಾರಲ್ಲ... ಇವನೇನು ಪಟ್ಟು ಕಲಿಸ್ತಾನಪ್ಪ' ಎಂದುಕೊಂಡಿದ್ದರಂತೆ. ಆದರೆ ಅವರ ಗುರುತ್ವ, ಪೈಲ್ವಾನ್ ಲಕ್ಷಣಗಳು ಗೊತ್ತಾಗಿದ್ದು ಅವರು ಮಟ್ಟಿಯಲ್ಲಿಳಿದಾಗಲೆ. ಆಗ ಗರಡಿಯಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಪೈಲ್ವಾನರುಗಳಾದ ನಂಜಪ್ಪ, ರಾಮಪ್ಪ ಮೊದಲಾದ ನಾಲ್ಕೈದು ಜನ ಮಟ್ಟಿಯಲ್ಲಿ ಲಡತ್ತಿಗಿಳಿದಾಗ ಅಷ್ಟೂ ಪೈಲ್ವಾನರು ಸುತ್ತ ಇದ್ದ ಗೋಡೆಗಳನ್ನು ಹಿಡಿದುಕೊಳ್ಳುವಂತೆ ಪರಿಫೈಗರ್ ತಳ್ಳಿಬಿಡುತ್ತಿದ್ದರಂತೆ ! ಅದು ಪರಿಫೈಗರ್ ಅವರ ಉಸ್ತಾದಿಯ ಗತ್ತು, ಪೈಲ್ವಾನ್ ದೇಹದ ತಾಕತ್ತು ! ಪಂಜಾಬಿನ ಈ ಪೈಲ್ವಾನ್ ಕುಸ್ತಿಯ ನಾನಾ ಪಟ್ಟುಗಳಲ್ಲಿ ಪರಿಣಿತ. ಅತೀ ಎತ್ತರದ ಪರಿಫೈಗರ್ ನಂಜಪ್ಪನನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡು ಬಿಡುತ್ತಿದ್ದರು. ಪರಿಫೈಗರ್ ಮತ್ತು ನಂಜಪ್ಪ ಮಟ್ಟಿಯಲ್ಲಿ ಲಡತ್ ಮಾಡುವುದನ್ನು ನೋಡುವುದೇ ಪ್ರೇಕ್ಷಕರ ಕಣ್ಣಿಗೆ ಹಬ್ಬ ಎಂದು ಕೆಲವರು ಹೇಳುತ್ತಾರೆ. ಬಹಳ ಪ್ರಖ್ಯಾತಿಯಾದ ದೋಭಿಚಾಟ್ ಪಟ್ಟನ್ನು ನಂಜಪ್ಪಗೆ ಪರಿಫೈಗರ್ ಬಹಳ ಪರಿಣಾಮಕಾರಿಯಾಗಿ ಕಲಿಸಿದರೆಂದು ಹೇಳುತ್ತಾರೆ. ಅವರು

ಇದರ ಜೊತೆಗೆ ಲಾಂಗ್‌ಚಾಂಗ್, ಸವಾರಿ ಮೊದಲಾದ ಪಟ್ಟುಗಳನ್ನು ಕಲಿಸಿದರೆಂದು ಹೇಳುತ್ತಾರೆ. ನಂಜಪ್ಪರಿಗೆ ದಕ್ಷಿಣ ಭಾರತದಲ್ಲಿ ಪ್ರಚಲಿತವಿದ್ದ ಪಟ್ಟುಗಳನ್ನು ಈಗಾಗಲೇ ಕಾಲುಂಗರದ ಬುಡ್ಡಣ್ಣ ಮತ್ತು ನಾರಣಪ್ಪ ಕಲಿಸಿದ್ದರು. ಉತ್ತರಭಾರತದ, ಮುಖ್ಯವಾಗಿ ಪಂಜಾಬಿನ ಕೆಲವು ವಿಶಿಷ್ಟ ಪಟ್ಟುಗಳನ್ನು ನಂಜಪ್ಪನಿಗೆ ಪರಿಪೈಗರ್ ಕಲಿಸಿ, ಒಬ್ಬ ಸಾರ್ಥಕ ಪೈಲ್ವಾನ್ ಆಗಲು ನೆರವಾದರು. ಹೊತ್ತಿಸಿದರೆ ಸಾಕು ಉರಿಯುವ ಒಣಸೌದೆಯಂತಿದ್ದ ನಂಜಪ್ಪ ಪರಿಪೈಗರ್ ಕಲಿಸಿಕೊಟ್ಟ ಪಟ್ಟುಗಳನ್ನೂ ಕಲಿತರು. ಜೊತೆಗೆ ಕುಸ್ತಿಕಲೆಯ ಎಲ್ಲಾ ಸೂಕ್ಷ್ಮಗಳನ್ನು ತಿಳಿದುಕೊಂಡರು. ಈ ಪಟ್ಟುಗಳ ಪ್ರಯೋಗದಿಂದ ಅವರೂ ಕೀರ್ತಿ ಪಡೆದರು, ತಮ್ಮ ಗುರುವಿಗೂ ಕೀರ್ತಿ ತಂದರು.

ನಂಜಪ್ಪನವರು ಹಲವು ಕಡೆ ಕುಸ್ತಿಯಾಡಿದರು. ಒಮ್ಮೆ ಬೆಳಗಾಮಿಗೆ ಕೆಲವೇ ಕೆಲವು ಕಿಲೋಮೀಟರ್ ದೂರದಲ್ಲಿದ್ದ ಅಗಡಿ ಎಂಬ ಊರಿನಲ್ಲಿ ಒಂದು ಕುಸ್ತಿಯಾಡುವ ಅವಕಾಶ ಸಿಕ್ಕಿತು. ಆಗ ಅಗಡಿಯ ಜಾತ್ರೆಯಲ್ಲಿ ಕುಸ್ತಿಯನ್ನು ಆಡಿಸುತ್ತಿದ್ದವರು ಬಸಪ್ಪ ದೇಸಾಯಿ ಎಂಬುವವರು. ಆತ ತನ್ನ ಸ್ವಂತ ಖರ್ಚಿನಲ್ಲಿ ಈ ಕುಸ್ತಿಗಳನ್ನು ಆಡಿಸುತ್ತಿದ್ದ. ಅದು ಅಗಡಿಯ ಜಾತ್ರೆಯೋ ಅಥವಾ ಕುಸ್ತಿಯ ಜಾತ್ರೆಯೋ ಎಂಬಂತಿರುತ್ತಿತ್ತು. ಏಕೆಂದರೆ ಮೂರುದಿನ ನಡೆಯುತ್ತಿದ್ದ ಆ ಜಾತ್ರೆಯಲ್ಲಿ ದಿನಕ್ಕೆ ನೂರು ಕುಸ್ತಿ ನಡೆಯುತ್ತಿದ್ದವಂತೆ. ಅಂದರೆ ಮೂರು ದಿನಕ್ಕೆ ಮುನ್ನೂರು ಕುಸ್ತಿಗಳ ವ್ಯವಸ್ಥೆಯಾಗಿತ್ತು. ಈ ಕುಸ್ತಿಗಳ ವ್ಯವಸ್ಥಾಪಕರು ಚಿತ್ರದುರ್ಗದ ದೊಡ್ಡಗರಡಿಯ ಪೈಲ್ವಾನರುಗಳು ಈ ಕುಸ್ತಿಗಳಲ್ಲಿ ಪಾಲ್ಗೊಳ್ಳಬೇಕೆಂದು ಕೋರಿ ಒಂದು ದೊಡ್ಡ ಆಹ್ವಾನಪತ್ರಿಕೆ ಕಳುಕಹಿಸಿದ್ದರು. ಈ ಆಹ್ವಾನದಿಂದ ಪ್ರಚೋದಿತರಾದ ಪೈಲ್ವಾನ್ ನಂಜಪ್ಪನವರು ತಮ್ಮ ಕೆಲವು ಗೆಳೆಯರೊಡಗೂಡಿ ಅಗಡಿಗೆ ಹೋದರು. ಹಾಗೆ ಹೋಗಿದ್ದು ಬಹುಶ: ೧೯೩೪ರಲ್ಲಿರಬೇಕು. ಇವರು ಕುಸ್ತಿಯಾಡಲು ಅಗಡಿಗೆ ಹೋದರೂ ಇವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಟ್ಟಿದ್ದು ಬೆಳಗಾವಿಯಲ್ಲಿ.

ಎಂಥ ಪೈಲ್ವಾನರಿಗೂ ಅಲ್ಲಿನ ಕುಸ್ತಿಗಳು, ಪರಿಸರ ಉತ್ಸಾಹ ಉಕ್ಕಿಸುವಂತಿತ್ತು. ಏಕೆಂದರೆ ಒಂದುಕಡೆ ಕುಸ್ತಿಪಟುಗಳು ಎದೆಯುಬ್ಬಿಸಿ ಓಡಾಡುತ್ತಿದ್ದರು. ಇನ್ನೊಂದು ಕಡೆ ಕುಸ್ತಿ ಪ್ರೇಮಿಗಳು ಸಂತೋಷದಿಂದ ಕುಸ್ತಿಗಳನ್ನು ಎದುರು ನೋಡುತ್ತಿದ್ದರು. ಈ ಕುಸ್ತಿಗಳಿಗೊಂದು ಶೋಭೆ ತರುವಂತೆ ಅಲ್ಲಿಗೆ ಭಾರತದ ಅಂದಿನ ಜಗದ್ವಿಖ್ಯಾತ ಪೈಲ್ವಾನ್ ಗಾಮಾನ ಮಕ್ಕಳು (ಅಂದರೆ, ಬಹುಶ: ಆತನ ಅಣ್ಣನ ಮಕ್ಕಳು) ಅಲ್ಲಿಗೆ ಬಂದಿದ್ದರು.

ಇಲ್ಲಿನ ಕುಸ್ತಿ ಗಮ್ಮತ್ತಿಗಾಗಿ ನಾವು ಕೆಲವು ಕ್ಷಣ ಗಾಮಾನನ್ನು ನೆನೆಯುವುದು ಹಿತವೆನಿಸುತ್ತದೆ. ೧೯೧೦ ರಲ್ಲಿ ಲಂಡನ್ನಲ್ಲಿ ನಡೆದ ಜಾನ್‌ಬುಲ್ ವಿಶ್ವಕುಸ್ತಿ ಪ್ರಶಸ್ತಿಗೆ ಗಾಮಾ ಮತ್ತು ಇಮಾಮ್ ಭಕ್ಷ್ ಎಂಬ ಇಬ್ಬರು ಪೈಲ್ವಾನರನ್ನು ಬಂಗಾಳದ ಅತೀದೊಡ್ಡ ಶ್ರೀಮಂತರಾದ ಸರತ್‌ಕುಮಾರ್ ಮಿತ್ರರು ಕರೆದೊಯ್ದರು. ೫ ಅಡಿ ೭ ಅಂಗುಲವಿದ್ದ ಗಾಮಾ ಎತ್ತರ, ತೂಕ ಎಲ್ಲದರಲ್ಲಿಯೂ ಹೆಚ್ಚಾಗಿದ್ದ. ಅದಕ್ಕಿಂತ ಮುಖ್ಯವಾಗಿ ಅಹಂಕಾರ

ಪೀಡಿತನಾಗಿದ್ದ. ಪೈಲ್ವಾನರುಗಳು ಈತನ ಜೊತೆ ಹಾಕಿಕೊಂಡು ಕುಸ್ತಿಯಾಡಲು ಯಾರೂ ಬರಲಿಲ್ಲ. ತನ್ನ ಬಗ್ಗೆ ಅಪಾರ ಆತ್ಮವಿಶ್ವಾಸವಿಟ್ಟುಕೊಂಡಿದ್ದ ಗಾಮಾ ಗೆದ್ದವರಿಗೆ ತಾನೇ ಹದಿನೈದು ಪೌಂಡ್ ಕೊಡುವುದಾಗಿ ಅಖಾಡದಲ್ಲಿ ಚಾಲೆಂಜ್ ಮಾಡಿ ಹನ್ನೆರಡು ಜನರಿಗೆ ಮಣ್ಣು ಮುಕ್ಕಿಸಿದರು. ಬಳಿಕ ೧೯೧೦ ರಲ್ಲಿ ಗಾಮಾ ಪೈಲ್ವಾನ್ ಅಮೆರಿಕಾದ ಪೈಲ್ವಾನ್ ಈ. ರೋಲರ್‌ನನ್ನು ಹದಿನೈದು .ನಿಮಿಷದಲ್ಲಿ ಹನ್ನೆರಡು ಬಾರಿ ಸೋಲಿಸಿ ಪ್ರೇಕ್ಷಕರಿಗೆ ರೋಮಾಂಚನಗೊಳಿಸಿದನಂತೆ. ಗಾಮಾನ ದೈಹಿಕ ಶಕ್ತಿ ಎಂಥದ್ದು ಎಂದರೆ ಕಡ್ಲೆಕಾಯಿಯನ್ನು ಕುಕ್ಕಿ ತಿನ್ನುವಂತೆ ತನ್ನ ಎರಡೇ ಬೆರಳುಗಳಲ್ಲಿ ಬಾದಾಮಿಯನ್ನು ಬಿಡಿಸಿ ತಿನ್ನುತ್ತಿದ್ದನಂತೆ ! ಇಂತಹ ಘನ ಪೈಲ್ವಾನನ ಕುಟುಂಬದವನಾದ ಪೈಲ್ವಾನ್ ಭೋಲ್ಟಾ ಎನ್ನುವವನು ಅಂದು ಅಗಡಿಯಲ್ಲಿ ನಡೆಯುತ್ತಿದ್ದ ಕುಸ್ತಿಗಳ ಉದ್ಘಾಟನೆಗೆ ಹಾಗು ಕುಸ್ತಿಗಳ ವೀಕ್ಷಣೆಗೆ ಸಾಧ್ಯವಾದರೆ ಜೊತೆ ಸಿಕ್ಕರೆ ಕುಸ್ತಿ ಆಡುವುದಕ್ಕೆ ಬಂದಿದ್ದನಂತೆ. ಆ ಪಯಲ್ವಾನ್ ಭೋಲ್ಟಾನ ಮೈಕಟ್ಟು ಗಾಮಾನ ಕುಟುಂಬದವರೆಂದು ಹೇಳಿಕೊಳ್ಳುವವರಿಗೆ ತಕ್ಕಂತೆ ಇತ್ತು. ಇಷ್ಟಿಷ್ಟು ದಪ್ಪ ತೊಡೆಗಳು ಆತನಿಗೆ. ಆತ ಕುಸ್ತಿ ನೋಡಲೆಂದು ಕುರ್ಚಿಯಲ್ಲಿ ಕುಳಿತಿದ್ದರೆ, ಭರ್ಜರಿಯಾಗಿ ಕುರ್ಚಿ ತುಂಬ ಕುಳಿತಿದ್ದನಂತೆ. ಪೈಲ್ವಾನ್ ಭೋಲ್ಟಾನ ಎದುರಿನಲ್ಲಿ ಚಿತ್ರದುರ್ಗದಿಂದ ಹೋಗಿದ್ದ ಪೈಲ್ವಾನ್ ನಂಜಪ್ಪ ಒಬ್ಬ ಭಾರೀ ದಾಂಡಿಗ ಪೈಲ್ವಾನನ ಮೇಲೆ ಜೊತೆ ಹಾಕಿಕೊಂಡು ಕುಸ್ತಿಯಾಡಿದನು.

ಆ ಕುಸ್ತಿಯ ಅಖಾಡದಲ್ಲಿ ಕೊಂಚ ವಾಮನಮೂರ್ತಿಯಂತೆ ಕಾಣುತ್ತಿದ್ದ ಪೈಲ್ವಾನ್ ನಂಜಪ್ಪ ಎದುರಾಳಿ ದಾಂಡಿಗ ಪೈಲ್ವಾನ್‌ನನ್ನು ಕೆಲವೇ ನಿಮಿಷಗಳಲ್ಲಿ ಚಿತ್ತು ಮಾಡಿದನು. ಈ ಕುಸ್ತಿಯನ್ನು ತದೇಕ ಚಿತ್ತದಿಂದ ವೀಕ್ಷಿಸುತ್ತಿದ್ದ ಭೋಲ್ಟಾ ಪೈಲ್ವಾನ್ ನಂಜಪ್ಪನನ್ನು ಹತ್ತಿರ ಕರೆದು ತನ್ನ ಮೆಚ್ಚುಗೆ ಸೂಚಿಸಿದ. ಪೈಲ್ವಾನ್ ನಂಜಪ್ಪ ಹಾಕಿದ್ದ ಪಟ್ಟು ವಿಶಿಷ್ಟ ಬಗೆಯದಾಗಿತ್ತು. ಅದನ್ನು ಗಮನಿಸಿದ್ದ ಭೋಲ್ಟಾ ಪೈಲ್ವಾನ್ ನಂಜಪ್ಪನಿಗೆ 'ನೀನು ಇದನ್ನು ಎಲ್ಲಿ ಕಲಿತೆ? ಯಾರು ಕಲಿಸಿದರು?' ಎಂದು ಕೇಳಿದ. ಆಗ ನಂಜಪ್ಪ ತನ್ನ ಗುರು ಪರಿಪೈಗರ್ ಎಂದು ಹೇಳುತ್ತಲೇ ಆತನಿಗೆ ಆಶ್ಚರ್ಯವಾಯಿತು. ಯಾಕೆಂದರೆ ನಂಜಪ್ಪ ಎದುರಾಳಿ ಪೈಲ್ವಾನನ್ನು ಚಿತ್ತು ಮಾಡಿದ್ದು ಪರಿಪೈಗರ್ ಅವರಿಗೆ ಮಾತ್ರ ವಿಶೇಷವಾಗಿ ಸಿದ್ಧಿಸಿದ್ದ ಪಟ್ಟುಗಳಿಂದ. ಅವನು ವಿಸ್ಮಯದಿಂದ 'ಯಾರು ಪಂಜಾಬಿನ ಪೈಲ್ವಾನ್ ಪರಿಪೈಗರ್ ನಿಮ್ಮ ಗುರುಗಳಾ?' ಎಂದು ಮತ್ತೆ ವಿಚಾರಿಸಿದ. ಇವರು ಹೌದು ಎನ್ನುತ್ತಲು, 'ಅವರು ಇನ್ನೂ ಬದುಕಿದ್ದಾರ, ಎಲ್ಲಿದ್ದಾರೆ?' ಎಂದು ಕೇಳಿದ. ಆಗ ನಂಜಪ್ಪ ಅವರು ಈಗ ಚಿತ್ರದುರ್ಗದಲ್ಲಿದ್ದಾರೆ ಎಂದು ಹೇಳಿದ್ದನ್ನು ಕೇಳಿ ಭೋಲ್ಟಾ ಹರ್ಷಪಟ್ಟ. ಗಾಮಾ ಪೈಲ್ವಾನ್ ತನ್ನ ಬಳಿ ಪರಿಪೈಗರ್ ಬಗ್ಗೆ ಹೇಳಿದ್ದನಂತೆ. ಅಂದಿನ ಕುಸ್ತಿಗಳ ಬಗೆಯನ್ನು ಭೋಲ್ಟಾ ಪೈಲ್ವಾನ್ ಹೇಳಿದನಂತೆ. ಆತ ಹೇಳುವಂತೆ ಪರಿಪೈಗರ್ ಸಾಹೇಬರು ಪಂಜಾಬಿನಲ್ಲಿಯೇ ಹೆಸರುವಾಸಿಯಾದ ಪೈಲ್ವಾನರಾಗಿದ್ದರು. ಆಗ ಕೋಳಿಯನ್ನು ಬಾಜೀ ಕಟ್ಟಿ ಕುಸ್ತಿ ಮಾಡುವ ಪದ್ಧತಿಯಿತ್ತು. ಹೀಗೆ

ಬಾಜಿ ಕಟ್ಟಿ ಆಡಿದ್ದ ನೂರಾರು ಕುಸ್ತಿಗಳಲ್ಲಿ ಪರಿಪೈಗರ್ ಗೆದ್ದಿದ್ದರಂತೆ. ಇದರ ದೆಸೆಯಿಂದ ಅವರು ಪಂಜಾಬಿನ ಮನೆ ಮಾತಾಗಿದ್ದರು. ಅಂತಹ ಪ್ರಖ್ಯಾತ ಪೈಲ್ವಾನ್ ದಕ್ಷಿಣದ ಕಡೆಗೆ ಕುಸ್ತಿ ಆಡಲು ಹೋಗಿ, ಚಿತ್ರದುರ್ಗದಲ್ಲಿರುವುದನ್ನು ಕೇಳಿ ಭೋಲ್ಡಾ ಪೈಲ್ವಾನ್ ಬಹಳಷ್ಟು ಖುಷಿ ಪಟ್ಟನಂತೆ. ಜೊತೆಗೆ ಪರಿಪೈಗರ್ ಕಲಿಸಿದ ಪಟ್ಟಿನಿಂದಲೇ ಎದುರಾಳಿ ಪೈಲ್ವಾನನನ್ನು ಸೋಲಿಸಿದ ನಂಜಪ್ಪನನ್ನು ಕಂಡು ಅಭಿಮಾನವುಕ್ಕಿ ಆತನನ್ನು ತಬ್ಬಿಕೊಂಡು ಹರ್ಷ ವ್ಯಕ್ತಪಡಿಸಿದನಂತೆ.

ಇಂತಹ ಪರಿಪೈಗರ್ ಸಾಹೇಬರು ಕೆಲವು ಕಾಲ ದೊಡ್ಡಗರಡಿಯಲ್ಲಿಯೇ ವಾಸ್ತವ್ಯ ಮಾಡಿದ್ದರು. ದುರ್ಗದ ಶ್ರೀಮಂತ ಮನೆತನದಿಂದ ಬಂದ ನಂಜಪ್ಪ ಕುಸ್ತಿಪಟುವಾಗಿ ಬೆಳೆಯಬೇಕೆಂದು ಆಶಿಸಿ ತನ್ನ ಬದುಕನ್ನೇ ದೊಡ್ಡಗರಡಿಗೆ ಸಮರ್ಪಿಸಿಕೊಂಡಂತೆ, ಆತ ಬಹುಪಾಲು ಜೀವನವನ್ನು ದೊಡ್ಡಗರಡಿಯಲ್ಲಿಯೇ ಕಳೆದ. ತಮ್ಮ ಗುರು ಪರಿಪೈಗರ್ ಮಾಡಿದ ಅಡುಗೆಯನ್ನು ರುಚಿ ನೋಡಿದ, ಬಾದಾಮಿ ಹಾಲನ್ನು ಕುಡಿದ ದುರ್ಗದವರಿಗೆ ಅಂದು ಗೊತ್ತಿರದಿದ್ದ 'ಲಸ್ಸಿ'ಯ ರುಚಿಯನ್ನು ಈ ಪರಿಪೈಗರ್ ಸಾಹೇಬರು ಇಲ್ಲಿನ ಪೈಲ್ವಾನರಿಗೆ ಪರಿಚಯಿಸಿದರು, ತಮ್ಮ ವಿದ್ಯೆಯನ್ನು ಧಾರೆಯೆರೆದರು. ಅಷ್ಟರಲ್ಲಾಗಲೇ ಕುಡಿತದ ಚಟಕ್ಕೆ ಬಲಿಯಾಗುತ್ತಿದ್ದ ನಂಜಪ್ಪನನ್ನು ಕಂಡರೆ, ಪರಿಪೈಗರ್ ಅವರಿಗೆ ಒಂದು ರೀತಿಯ ತಹತಹ. ಅದನ್ನು ಅವರು ಹೇಳಲಾರರು. ಆದರೂ ಒಮ್ಮೊಮ್ಮೆ "ನೀನು ಕುಡಿಯುವುದನ್ನು ಬಿಟ್ಟುಬಿಡು ಪೈಲ್ವಾನ್, ನಿನಗೆ ಇಂಡಿಯಾದಲ್ಲೇ ಕುಸ್ತಿ ಚಾಂಪಿಯನ್ ಮಾಡುತ್ತೇನೆ" ಎಂದು ಹೇಳುತ್ತಿದ್ದರು. ನಂಜಪ್ಪ ಕುಡಿದರೆಷ್ಟು ಬಿಟ್ಟರೆಷ್ಟು ತಾನೊಬ್ಬ ದೊಡ್ಡ ಪೈಲ್ವಾನ್ ಎಂಬುದನ್ನು ಆತ ಬಾಳಿ ತೋರಿಸಿದ. ತಾನೂ ಕೂಡ ಉಸ್ತಾದ್ ಆಗಿ ಹಲವು ಶಿಷ್ಯರನ್ನು ಬೆಳೆಸಿದ.

❑

೫ ಪೋಷಕರು

ಕಳೆದ ಶತಮಾನದ ಮಧ್ಯಭಾಗದ ತನಕ ಚಿತ್ರದುರ್ಗದ ಸಮಾಜ, ಜನಜೀವನವನ್ನು ಕೊಂಚ ಗಮನಿಸಿದರೆ, ಇಡೀ ಊರು ಬಹುಮಟ್ಟಿಗೆ ಒಂದು ರೀತಿಯ ಗ್ರಾಮೀಣ ಸಮಾಜದ ಲಕ್ಷಣಗಳನ್ನು ಹೊಂದಿರುವಂತೆ ಕಾಣುತ್ತದೆ. ಕೊಂಚ ಬಿಡಿಸಿ ಹೇಳುವುದಾದರೆ ಚಿತ್ರದುರ್ಗ ಜಿಲ್ಲಾ ಕೇಂದ್ರ ಪಟ್ಟಣ ಎನ್ನಿಸಿಕೊಂಡಿದ್ದರೂ ನಗರ ಸಂಸ್ಕೃತಿಯಲ್ಲಿ ಕಾಣುವ ಹಣಗಳಿಕೆ, ಸರಕು ಸಂಗ್ರಹಗಳಂಥವು ಪ್ರಧಾನವಾಗಿ ಇಲ್ಲಿ ಗೋಚರಿಸದೆ, ಒಟ್ಟು ಊರಿನ ಸಂಬಂಧಗಳು ಇನ್ನೂ ಉಳಿಸಿಕೊಂಡಂತೆ ಕಾಣುತ್ತಿದ್ದವು. ಕಳೆದ ಶತಮಾನದ ಪೂರ್ವಾರ್ಧದ ಸಾಮಾಜಿಕ ಸ್ಥಿತಿಗತಿಗಳನ್ನು ಕೊಂಚ ಅಭ್ಯಾಸ ಮಾಡಿದರೆ ಗೋಚರಿಸುವ ಸತ್ಯವನ್ನು ಅರ್ಥೈಸಿಕೊಳ್ಳಲು ಹಲವು ಉದಾಹರಣೆಗಳನ್ನು ಕೊಡಬಹುದು. ಸದ್ಯಕ್ಕೆ ಈ ದೃಷ್ಟಿಯನ್ನು ಸಮರ್ಥಿಸಲು ಇಲ್ಲಿರುವ ಗರುಡಿಗಳು ಅತ್ಯುತ್ತಮ ಉದಾಹರಣೆಗಳಾಗಿವೆ. ಇಲ್ಲಿನ ಎಂಟು ಗರಡಿಗಳಲ್ಲಿ ಈಗಲೂ ಉಳಿದಿರುವ ಗರುಡಿಗಳೆಂದರೆ ದೊಡ್ಡಗರುಡಿ, ಸಣ್ಣಗರುಡಿ, ಬುರುಜನಹಟ್ಟಿ ಗರುಡಿ, ಹಗಲು ದೀವಟಿಗೆ ಗರುಡಿಗಳನ್ನು ನಾವು ಗಮನಿಸಿದರೆ ಅವು ಜನಜೀವನದ ಜೊತೆಗೆ ಇಟ್ಟುಕೊಂಡ ಜೀವಂತ ಸಂಬಂಧ ನಮಗೆ ಸ್ಪಷ್ಟವಾಗುತ್ತದೆ.

ಒಂದು ಕಾಲದಲ್ಲಿ ರಾಜಾಶ್ರಯದಲ್ಲಿ, ಪಾಳೆಯಪಟ್ಟಿನ ಆಶ್ರಯದಲ್ಲಿ ಈ ಗರುಡಿಗಳು ತಮ್ಮ ಜೀವಂತಿಕೆಯನ್ನು ಉಳಿಸಿಕೊಂಡಿದ್ದವು. ಪಾಳೆಯಪಟ್ಟಿನ ಆಶ್ರಯದಲ್ಲಿದ್ದ ಗರುಡಿಗಳಲ್ಲಿ ಅಂಗಸಾಧನೆ ಮಾಡುತ್ತಿದ್ದ ಜಟ್ಟಿಗಳು ಕಟ್ಟಾಳುಗಳಾದ ಬಳಿಕ ಸಂದರ್ಭಾನುಸಾರವಾಗಿ ಸೇನಾಪಡೆ ಸೇರುವ ಸಾಧ್ಯತೆಗಳು ಹೆಚ್ಚಾಗಿತ್ತು. ರಾಜರು, ಪಾಳೆಯಗಾರರ ಕಾಲದಲ್ಲಿಯೂ ಗರುಡಿಯ ಪೈಲ್ವಾನರ ಕುಸ್ತಿಗಳು ಕ್ರೀಡೆಯಾಗಿ ಮನರಂಜನೆ ನೀಡುತ್ತಿತ್ತು. ರಾಜ, ಮಹಾರಾಜರ, ಪಾಳೆಯಗಾರರ ಕಾಲ ಮುಗಿದ ಬಳಿಕ ಗರುಡಿಯಲ್ಲಿ ತಯಾರಾದ ಕಟ್ಟಾಳುಗಳನ್ನು ಸಂದರ್ಭಾನುಸಾರವಾಗಿ ಸೇನೆಗೆ ರವಾನಿಸುವ ಒಂದು ಸಾಮಾಜಿಕ ಜವಾಬ್ದಾರಿಯು ತಪ್ಪಿದ ಬಳಿಕ, ಈ ಕಟ್ಟಾಳುಗಳು ಪಕ್ಕಾ ಕುಸ್ತಿಪಟುಗಳಾಗಿ, ಕುಸ್ತಿ ಒಂದು ಸುಂದರ ಕ್ರೀಡಾಕಲೆಯಾಗಿ ನಿಧಾನವಾಗಿ ವಿಕಾಸವಾಗಿ, ಆ ಮೂಲಕ ಗರುಡಿ ತನ್ನ ಅಸ್ತಿತ್ವವನ್ನು ಸಮಾಜದಲ್ಲಿ ತೋರಿಸಿದಂತೆ ಕಾಣುತ್ತದೆ. ಗರುಡಿಯ ಈ ಕುಸ್ತಿಪಟುಗಳು ತಮ್ಮ ಅಸಾಧಾರಣ ಶಕ್ತಿ ಸಾಮರ್ಥ್ಯಗಳನ್ನು ದೇಹದಲ್ಲಿ ಅಡಗಿಸಿಕೊಂಡು, ಕುಸ್ತಿ ಕಲಾವಿದರಾಗಿ, ಅಖಾಡದಲ್ಲಿ ಮೆರೆದು,

ಕೀರ್ತಿ ಹೆಸರು ಪಡೆದು ಸಮಾಜದಲ್ಲಿ ಪ್ರತಿಷ್ಠೆಯ ಸ್ಥಾನ-ಮಾನ ಹೊಂದಿದರು. ಇಂಥ ಪ್ರತಿಷ್ಠೆಯ ಸ್ಥಾನ-ಮಾನಗಳನ್ನು ಸಮಾಜದಲ್ಲಿ ಗರುಡಿಗಳು ಹೊಂದಬೇಕಾದರೆ ರಾಜಾಶ್ರಯ, ಪಾಳೆಯಗಾರರ ಆಶ್ರಯಗಳಿಂದ ವಂಚಿತವಾದ ಇವನ್ನು ಉಳಿಸಿ ಬೆಳೆಸಿದವರು ಯಾರು? ಈ ಪ್ರಶ್ನೆಗೆ ತಕ್ಕ ಉತ್ತರ ಎಂದರೆ ಪೋಷಕರು ಎನ್ನಬೇಕಾಗುತ್ತದೆ.

ಚಿತ್ರದುರ್ಗದ ಗರುಡಿಗಳನ್ನು ಕೊಂಚ ಅಭ್ಯಾಸ ಮಾಡಿದರೆ ಸಾಕು ಇಲ್ಲಿನ ಗರುಡಿಗಳ ಉಳಿವಿಗೆ ಉಸ್ತಾದ್‌ಗಳು, ಪೈಲ್ವಾನರು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಹಾಗೂ ಅನಿವಾರ್ಯ ಅಂಗವಾಗಿ ಈ ಪೋಷಕರಿದ್ದರು ಎಂಬುದು ಮನದಟ್ಟಾಗುತ್ತದೆ. ಮೇಲೆ ಉದಾಹರಿಸಿದ ಯಾವ ಗರುಡಿಯನ್ನು ತೆಗೆದುಕೊಂಡರೂ, ಇಲ್ಲಿನ ಹಿರಿಯರು ಮತ್ತು ಕುಸ್ತಿಪಟುಗಳು ಈ ಪೋಷಕರನ್ನು ಅತ್ಯಂತ ಗೌರವದಿಂದ ನೆನೆಯುತ್ತಾರೆ. ನಮ್ಮ ಪೈಲ್ವಾನ್ ನಂಜಪ್ಪ ಅಭ್ಯಾಸ ಮಾಡಿದ ದೊಡ್ಡಗರುಡಿಗೆ ಕಳೆದ ಶತಮಾನದ ಮಧ್ಯಭಾಗದಲ್ಲಿ ಹತ್ತಾರು ಜನ ಪೋಷಕರಿದ್ದುದು ಕಂಡುಬರುತ್ತದೆ. ದೊಡ್ಡಗರುಡಿಯ ಪೋಷಕರಾಗಿ ಕಂಟ್ರ್ಯಾಕ್ಟರ್ ತಿಪ್ಪಯ್ಯ, ಸಿ.ಬಿ. ಮಲ್ಲಪ್ಪ, ಕಂಟ್ರ್ಯಾಕ್ಟರ್ ತಿಮ್ಮಣ್ಣ, ದಸ್ತಗೀರ್ ಸಾಹೇಬ್, ಸಿ.ಎನ್. ಕಲ್ಲಪ್ಪ, ಬುಕ್ ಡಿಪೋ ಬಸವರಾಜ್, ಬೊಮ್ಮಣ್ಣ, ಅಗಸರ ಮಲ್ಲಣ್ಣ, ಮುನಿಸಿಪಲ್ ದಫೇದಾರ್ ನಿಂಗಪ್ಪ ಮಣೆಗಾರ ಕೃಷ್ಣಪ್ಪ ತೆಲುಗರ ಅಪ್ಪಣ್ಣ, ತಿಮ್ಮರಾಯಪ್ಪ ಮೊದಲಾದವರು ಗರುಡಿಗಾಗಿ ಸಲ್ಲಿಸಿದ ಸೇವೆ, ತಾಳಿದ ಅಭಿಮಾನ ನಿಜವಾಗಿಯೂ ದೊಡ್ಡದು.

ಈ ಗರಡಿಗಳನ್ನು ನೋಡಿಕೊಂಡ ಈ ಪೋಷಕರು ನಮ್ಮ ನಿಮ್ಮ ನಡುವೆ ಇದ್ದ ಸಾಮಾನ್ಯರು, ಅನುಕೂಲಸ್ಥರು. ಆಗರ್ಭ ಶ್ರೀಮಂತರು ಎನ್ನಿಸಿಕೊಂಡವರು ವಿರಳ. ಪೋಷಕರು ಒಂದು ಜಾತಿಗೆ ಸೇರಿದವರಲ್ಲ. ಒಂದು ಮತಕ್ಕೆ ಸೇರಿದವರಲ್ಲ. ಅವರಲ್ಲಿದ್ದ ಮುಖ್ಯಭಾವನೆಯೆಂದರೆ ನಮ್ಮ ನಡುವೆ ಇರುವ ಗರುಡಿಯ ಪೈಲ್ವಾನರು ಊರಿನಲ್ಲಿ, ನಾಡಿನ ಮೂಲೆ ಮೂಲೆಗಳಲ್ಲಿ ಕೀರ್ತಿ, ಹೆಸರು ತರಬೇಕು ಎಂಬುದಾಗಿತ್ತು. ಈ ಉದಾರಭಾವನೆಯ ಪೋಷಕರು ಪೈಲ್ವಾನರು ಮತ್ತು ಉಸ್ತಾದ್‌ಗಳನ್ನು ಹೇಗೆ ನೋಡಿಕೊಂಡರು ಎಂಬುದನ್ನು ಕೊಂಚ ತಿಳಿಯೋಣ.

ಪೈಲ್ವಾನರು ಗರುಡಿಗೆ ಬಂದು ತಮ್ಮ ಅಂಗಸಾಧನೆ ಎಷ್ಟು ಮಾಡಿದರೂ ಅವರಿಗೆ ತಯಾರಿ ಬೇಕು. ತಯಾರಿ ಎಂದರೆ ಏನು – ಪೌಷ್ಟಿಕ ಆಹಾರ, ಹಾಲು, ಬಾದಾಮಿ, ಮೊಟ್ಟೆ, ಮಾಂಸ ಇತ್ಯಾದಿ. ಗರುಡಿಯ ಪೈಲ್ವಾನರ ಜೊತೆ ಒಡನಾಡಿದ ಹಿರಿಯರೊಬ್ಬರು ತಮಾಷೆಗೆ ಬಣ್ಣಿಸುವಂತೆ 'ಪೈಲ್ವಾನರೆಂದರೆ ಏನಪ್ಪ? ಆನೆಯಂತೆ ಯಾವಾಗಲೂ ಮೇಯ್ತಾ ಇರಬೇಕು!' ಎಂದರು. ನಿಜ ಪೈಲ್ವಾನರಿಗೆ ಅವರು ತಿನ್ನುವ ಊಟದಲ್ಲಿ ಪೌಷ್ಟಿಕ ಅಂಶ ಎಷ್ಟೋಸಾರಿ ದೊರೆಯದಿರುವ ಸಾಧ್ಯತೆಯಿದೆ. ಅನೇಕ ಪೈಲ್ವಾನರನ್ನು ತಯಾರಿ ಮಾಡಿದ ಗರುಡಿಯೊಂದು ಕಣ್ಮರೆಯಾಗಿದ್ದರ ಕಾರಣವನ್ನು ಈ ಲೇಖಕ ಅಲ್ಲಿನ ಹಿರಿಯರೊಬ್ಬರಿಗೆ ಕೇಳಿದಾಗ ಅವರು – 'ಹಿಂದೆ ಗರುಡಿಗೆ ಬರುವ ಪೈಲ್ವಾನರು ಬೆಳಿಗ್ಗೆ ಅಚ್ಚೇರು ಹಾಲು,

ರಾತ್ರಿ ಅಚ್ಚೇರು ಹಾಲು ಕುಡಿಯೋರು... ಈಗೆಲ್ಲೈತೆ ಸ್ವಾಮಿ ಅಂಥ ಸುಭಿಕ್ಷದ ಕಾಲ... ಗರುಡಿಗಳು ಮುಚ್ಚದೆ ಇನ್ನೇನಾಗ್ತದೆ?' ಎಂದು ಹೇಳಿದ್ದರು. ಪೈಲ್ವಾನರಿಗೆ ತಯಾರಿ ಎಷ್ಟು ಮುಖ್ಯ ಎನ್ನುವುದನ್ನು ಈ ಮಾತುಗಳು ಒತ್ತಿ ಹೇಳುತ್ತವೆ. ಇಂಥ ಕನಿಷ್ಠ ಪೌಷ್ಟಿಕ ಆಹಾರವನ್ನು ಒದಗಿಸುವ ಜವಾಬ್ದಾರಿ ಈ ಪೋಷಕರ ಮೇಲೆ ಇರುತ್ತಿತ್ತು. ಸಾಧನೆ, ಲಡತ್‌ಗಳನ್ನು ಮುಗಿಸಿದ ಬಳಿಕ ಬಾದಾಮಿಯನ್ನು ಅರೆಸಿ, ಅದನ್ನು ಹಾಲಿನಲ್ಲಿ ಸೇರಿಸಿ ಪೈಲ್ವಾನರು ಕುಡಿಯುವುದು ರೂಢಿ. ಇದನ್ನು ಪೋಷಕರು ಸಾಮಾನ್ಯವಾಗಿ ಗರುಡಿಗಳಲ್ಲಿ ತಾವೇ ಖುದ್ದಾಗಿ ನಿಂತು ಪ್ರೀತಿಯಿಂದ ಪೈಲ್ವಾನರಿಗೆ ವಿತರಿಸುತ್ತಿದ್ದರು. ದೊಡ್ಡ ಗರುಡಿಯಲ್ಲಿ ಇಂಥ ಔದಾರ್ಯವನ್ನು ತೋರಿಸುತ್ತಿದ್ದವರು ಸಿ.ಬಿ. ಮಲ್ಲಪ್ಪನವರು. ಅನ್ನದಾನ ಮತ್ತು ಬಾದಾಮಿ ಮಿಶ್ರಿತ ಅಮೃತದಾನಗಳ ವಿತರಣೆ ಮತ್ತು ವ್ಯವಸ್ಥೆಯನ್ನು ಈ ಪೋಷಕರು ಪ್ರತಿ ಗರುಡಿಗಳಲ್ಲಿಯೂ ನಡೆಸಿಕೊಂಡು ಬಂದಿದ್ದರು. ಚಿತ್ರದುರ್ಗದ ಹಗಲು ದೀವಟಿಗೆ ಗರುಡಿಯಲ್ಲಿ ಖಾಸೀಂಸಾಬ್ ಎಂಬ ಪೋಷಕರೂ ಮತ್ತು ಉಸ್ತಾದರು ಒಬ್ಬರಿದ್ದರು. ಅವರು ನೂರಾಹತ್ತು ವರ್ಷಗಳ ದೀರ್ಘ ಆಯಸ್ಸನ್ನು ಬಾಳಿದವರು. ಅವರನ್ನು ಬಾರುದ್ ಗರ್ ಎಂದು ಗುರುತಿಸುತ್ತಿದ್ದರು. ಇವರ ಮನೆತನದವರು ಮತಾಪು, ಪಟಾಕಿ, ಮದ್ದು – ಗುಂಡಗಳನ್ನು ತಯಾರಿಸಿಕೊಡುತ್ತಿದ್ದುದರಿಂದ ಹಾಗೆ ಬಾರುದ್‌ಗರ್ ಎಂದು ಗುರುತಿಸುತ್ತಿದ್ದರು. ಈ ಉದಾರ ಮನಸ್ಸಿನ ಖಾಸೀಂಸಾಹೇಬರು ತಾವೇ ಬಾದಾಮಿ ಅರೆದು, ಹಾಲಿಗೆ ಬೆರೆಸಿ ಹದವಾದ ಪಾನೀಯ ಮಾಡಿ ಪೈಲ್ವಾನರಿಗೆ ತಮ್ಮ ಕೈಯಿಂದಲೇ ಕೊಟ್ಟು, ಕುಡಿಸಿ ಸಂತೋಷಪಡುತ್ತಿದ್ದರು:

ಚಿತ್ರದುರ್ಗದ ಸಣ್ಣಗರುಡಿಯಲ್ಲು ಇಂಥ ಕೆಲವು ಪೋಷಕರಿದ್ದರು. ಸ್ವತ: ಪೈಲ್ವಾನರು, ಸುಪ್ರಸಿದ್ಧ ವಕೀಲರು, ಒಮ್ಮೆ ವಿಧಾನಸಭೆಯ ಶಾಸಕರೂ ಆಗಿದ್ದ ಕೆಂಚಪ್ಪನವರು ಉದಾಹರಿಸಬಹುದಾದ ಇನ್ನೊಬ್ಬ ಪೋಷಕರು. ಈ ಪೋಷಕರು ಇಂಥ ಔದಾರ್ಯವನ್ನು ತಮ್ಮ ಗರುಡಿಯ ಪೈಲ್ವಾನರ ಬಗ್ಗೆ ಮಾತ್ರ ತೋರಿಸುವ ಸೀಮಿತ ಮನಸ್ಸಿನವರೆಂದು ತಿಳಿಯಬಾರದು. ಒಮ್ಮೆ ಹರಿ ಎಂಬ ಪೈಲ್ವಾನ್ ಕುಸ್ತಿ ಆಡಲೆಂದು ಬೇರೆ ಊರಿನಿಂದ ಚಿತ್ರದುರ್ಗಕ್ಕೆ ಬಂದಿದ್ದನು. ಆತನು ಸಣ್ಣ ಗರುಡಿಯಿಲ್ಲಿ ಅಂಗಸಾಧನೆ, ಲಡತ್ ಮಾಡುತ್ತಿದ್ದನು. ವಕೀಲ್ ಕೆಂಚಪ್ಪನವರು ಆತನಿಗೆ ಇಲ್ಲಿದ್ದ ವೆಂಕಟಾಚಲಯ್ಯನ ಚತ್ರದಲ್ಲಿ ವಸತಿ ಕಲ್ಪಿಸಿಕೊಟ್ಟು, ಊಟದ ವ್ಯವಸ್ಥೆಯ ಪೂರ್ತಿ ಖರ್ಚನ್ನು ಕೆಲವು ತಿಂಗಳ ಕಾಲ ತಾವೇ ಭರಿಸಿದರು. ಈ ಹರಿ ಎಂಬ ಪೈಲ್ವಾನ್ ದಾವಣಗೆರೆಯ ಸುಪ್ರಸಿದ್ಧ ಪೈಲ್ವಾನ್ ಚಾರ್ಲಿಯ ಅಣ್ಣ ಪೈಲ್ವಾನ್ ಚಮನ್ ಮೇಲೆ ಕುಸ್ತಿ ಆಡಿ ವಿಜೇತನಾದನು.

ಈ ಉದಾರತೆ ದೊಡ್ಡಗರುಡಿಯ ಪೋಷಕರಾಗಿದ್ದ ಸಿ.ಬಿ. ಮಲ್ಲಪ್ಪನವರಿಗೂ ಇತ್ತು. ಪೈಲ್ವಾನ್ ನಂಜಪ್ಪನಿಗೆ ಗುರುವಾಗಲು ಲಾಯಖ್ ಆಗಿದ್ದಾರೆ ಎಂದು ಮೈಸೂರಿನಿಂದ ಪಂಜಾಬಿನ ಪರಿಪ್ಪೆಗರ್ ಅವರನ್ನು ಮಲ್ಲಪ್ಪನವರು ಕರೆತಂದಿದ್ದನ್ನು ಈಗಾಗಲೇ ತಿಳಿಸಲಾಗಿದೆ.

ಆಗ ಪರಿಪೈಗರ್ ಜೊತೆಗೆ ಅವರ ಮಗ ಆಶಿಕ್ ಹುಸೇನ್ ಕೂಡಾ ಇಲ್ಲಿಗೆ ಬಂದಿದ್ದರು. ಅವರಿಬ್ಬರ ಖರ್ಚು–ವೆಚ್ಚವನ್ನು ಕೊನೆಯತನಕ ಸಿ.ಬಿ. ಮಲ್ಲಪ್ಪನವರು ವಹಿಸಿದ್ದರು ಎಂಬುದನ್ನು ಇಲ್ಲಿನ ಹಿರಿಯರು ಹೇಳುತ್ತಾರೆ.

ಇದು ಚಿತ್ರದುರ್ಗ ಗರುಡಿಗಳ ಹೆಗ್ಗಳಿಕೆಯೆಂದು ತಿಳಿಯಬಾರದು. ನಾಡಿನ ಬಹುಪಾಲು ಗರಡಿಗಳಲ್ಲಿ ಇಂತಹ ಪೋಷಕರು ಇದ್ದರು ಎನ್ನಬಹುದು. ಬೆಂಗಳೂರಿನ ಅರಳೇಪೇಟೆಯಲ್ಲಿ ದೊಡ್ಡಗರಡಿ ಸಣ್ಣಗರಡಿಗಳೆಂಬ ಎರಡು ಗರಡಿಗಳಿದ್ದವು. ಚಿತ್ರದುರ್ಗದಿಂದ ಪೈಲ್ವಾನ್ ವಸಂತರಾವ್ ಮತ್ತು ಪೈಲ್ವಾನ್ ಮೂಗಪ್ಪ ಕುಸ್ತಿ ಆಡಲೆಂದು ಬೆಂಗಳೂರಿಗೆ ಹೋಗಿದ್ದಾಗ ಅಲ್ಲಿನ ಸಣ್ಣಗರಡಿ ಪೋಷಕರು ಇವರಿಬ್ಬರಿಗು ಆರು ತಿಂಗಳು ಕಾಲ ಇಟ್ಟುಕೊಂಡು, ಇವರ ಸಕಲ ವ್ಯವಸ್ಥೆಯನ್ನು ಮಾಡಿದ್ದರು. ಹೀಗೆಯೇ ಪೈಲ್ವಾನ್ ನಂಜಪ್ಪನವರು ಬೆಂಗಳೂರಿನಲ್ಲಿದ್ದಾಗ ಅಲ್ಲಿನ ದೊಡ್ಡಗರಡಿಯ ಪೋಷಕರು ೫–೬ ತಿಂಗಳ ತನಕ ಅವರ ಊಟೋಪಚಾರದ ವ್ಯವಸ್ಥೆಯನ್ನು ಮಾಡಿದ್ದರು. ಇಂತಹ ಪ್ರೋಷಕರ ಔದಾರ್ಯವೇ ಪೈಲ್ವಾನರ ಮೈಉಬ್ಬಿಗೆ ಕಾರಣ ಎಂದರೆ ಉತ್ಪ್ರೇಕ್ಷೆಯಲ್ಲ!

ಇನ್ನು ಗರಡಿಯ ಪೈಲ್ವಾನರಿಗೆ ಪ್ರೋಷಕರು ತಾಳಿದ್ದ ವಿಶೇಷ ಗುಣವೆಂದರೆ ಅವರು ಕೊಡುತ್ತಿದ್ದ ಉತ್ತೇಜನ ಮತ್ತು ಪ್ರೋತ್ಸಾಹ. ಪೈಲ್ವಾನರು ಮುಂಜಾನೆ ಮತ್ತು ಸಂಜೆಯಲ್ಲಿ ಅಂಗಸಾಧನೆಯನ್ನು ಮಾಡುತ್ತಿದ್ದರು. ಸಂಜೆಯ ಅಂಗಸಾಧನೆ ಮುಗಿದ ಬಳಿಕ ಮಟ್ಟಿಯಲ್ಲಿ ಕುಸ್ತಿಗೆ ಸಂಬಂಧಿಸಿದ ತಾಲೀಮು ಮಾಡುತ್ತಿದ್ದರು. ಇವು ಕೇವಲ ಯಾಂತ್ರಿಕವಾಗಿ ನಡೆಯುತ್ತಿದ್ದವೆಂದು ಭಾವಿಸಬಾರದು. ಸಂಜೆಯ ಅಂಗಸಾಧನೆ ಮುಗಿದ ಮೇಲೆ ಹಿರಿಕಿರಿಯ ಪೈಲ್ವಾನರುಗಳು ಮುಂದಿನ ಹಂತವಾಗಿ ಮಟ್ಟಿಗೆ ಇಳಿಯುತ್ತಿದ್ದರು. ಇಷ್ಟು ಹೊತ್ತಿಗೆ ಗರಡಿಗೆ ಪೋಷಕರು ಯಜಮಾನರು ಎನ್ನಿಸಿಕೊಂಡವರು ಒಬ್ಬೊಬ್ಬರೇ ಗರಡಿಗೆ ಬಂದು ಮಟ್ಟಿಯ ಬಳಿ ಆಸೀನರಾಗುತ್ತಿದ್ದರು. ಹೀಗಾಗಿ ಲಡತ್ ಮಾಡುವುದು ಹುಡುಗಾಟವಾಗದೆ, ಅದಕ್ಕೊಂದು ಗಾಂಭೀರ್ಯ ಒದಗುತ್ತಿತ್ತು. ದೊಡ್ಡವರ ಸಮ್ಮುಖದಲ್ಲಿ ಲಡತ್ ಮಾಡುವುದಕ್ಕೆ ಒಂದು 'ಖದರ್' ಕೂಡ ಬರುತ್ತಿತ್ತು. ಹೀಗಾಗಿಯೇ ನಂಜಪ್ಪ ಮತ್ತು ರಾಮಪ್ಪ, ನಂಜಪ್ಪ ಮತ್ತು ನಾಗಪುರದ ದಿವಾನ್ ಇವರು ಲಡತ್‌ಗೆ ತೊಡಗಿದರೆ ಈ ಹಿರಿಯರ ಸಮ್ಮುಖದಲ್ಲಿ ಹುಮ್ಮಸ್ಸು ಅಧಿಕವಾಗಿ ಜಿದ್ದಾಜಿದ್ದಿ ಕುಸ್ತಿಯೇ ಆರಂಭವಾಯಿತೆನ್ನುವಂತೆ ಲಡತ್ ಒಳ್ಳೇ ಭರಾಟೆಯಿಂದ ಸಾಗುತ್ತಿತ್ತು. ಆಗ ಪ್ರೇಕ್ಷಕರ ಸ್ಥಾನದಲ್ಲಿದ್ದ ಈ ಪೋಷಕರು ಕುಸ್ತಿಪ್ರೇಮಿಗಳಾಗಿ ಪೈಲ್ವಾನರುಗಳಿಗೆ ಕೆಲವು ಸಲಹೆಯನ್ನು ಕೊಡುತ್ತಿದ್ದರು.

ಈ ಪ್ರೋಷಕರು ಕುಸ್ತಿ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುತ್ತಿದ್ದರು. ಏಕೆಂದರೆ ಇವರಲ್ಲಿ ಕೆಲವರು ಕುಸ್ತಿ ಕಂಟ್ರಾಕ್ಟರುಗಳಾಗಿ ಊರಿನ ಕೆಲವು ಪ್ರಮುಖ ಸ್ಥಳಗಳಲ್ಲಿ ಇಂತಹ ಕುಸ್ತಿಗಳನ್ನು ಏರ್ಪಾಡು ಮಾಡುತ್ತಿದ್ದರು. ದೊಡ್ಡ ಗರಡಿಯ ಕಲ್ಲಪ್ಪ, ಬುಕ್‌ಡಿಪ್ಪೋ ಬಸವರಾಜ್, ದಸ್ತಗೀರ್‌ಸಾಬ್, ಕಂಟ್ರಾಕ್ಟರ್ ತಿಮ್ಮಣ್ಣ ಮೊದಲಾದವರು ಇಂತಹ ಕುಸ್ತಿ ವ್ಯವಸ್ಥಾಪಕರಾಗಿ

ಅನೇಕ ಕಾಡಾಕಾಡಿ ಕುಸ್ತಿಗಳು ನಡೆಯಲು ಅವಕಾಶ ಮಾಡಿಕೊಟ್ಟರು. ಸೊಪ್ಪಿನ ಮಾರ್ಕೆಟ್ ಬಳಿ ಇರುವ ನಾರ್ಮಲ್ ಸ್ಕೂಲ್, ರಂಗಯ್ಯನ ಬಾಗಿಲುಬಳಿ ಜಯದೇವ ಹಾಸ್ಟೆಲ್‌ನ ಹಿಂಭಾಗದಲ್ಲಿ ಇಂತಹ ಕುಸ್ತಿಗಳು ಏರ್ಪಾಟಾಗುತ್ತಿದ್ದವು. ಜಯದೇವ ಹಾಸ್ಟೆಲಿನ ಹಿಂಭಾಗದಲ್ಲಿ ನಡೆಯುತ್ತಿದ್ದ ಕುಸ್ತಿಗಳು ಜಯದೇವ ಜಂಗೀ ಕುಸ್ತಿಗಳೆಂದೇ ಪ್ರಖ್ಯಾತವಾಗಿದ್ದವು. ಇಲ್ಲಿನ ಮುರುಘಾಮಠದ ಹಿಂದಿನ ಸ್ವಾಮಿಗಳಾದ ಜಯದೇವ ಸ್ವಾಮಿಗಳು ಈ ಕುಸ್ತಿಗಳಿಗೆ ಪ್ರೋತ್ಸಾಹ ಕೊಟ್ಟಿದ್ದರಿಂದಲೇ ಇಲ್ಲಿ ನಡೆಯುವ ಕುಸ್ತಿಗಳನ್ನು ಹಾಗೆ ಕರೆಯಲಾಗುತ್ತಿತ್ತು. ಈ ಮಠದವರು ಒಂದು ಕಾಲದಲ್ಲಿ ಪಾಳೆಯಗಾರರಿಗೆ ರಾಜಗುರುಗಳಾಗಿದ್ದರಿಂದ ಈ ಕುಸ್ತಿಗಳಿಗೆ ಐತಿಹಾಸಿಕ ಕೊಂಡಿಯೊಂದು ಏರ್ಪಟ್ಟು, ಒಂದು ರೀತಿಯ ಹೊಗರಿನಿಂದ ಈ ಕುಸ್ತಿಗಳ ಪ್ರಚಾರ ನಡೆಯುತ್ತಿತ್ತು. ಜಯದೇವ ಜಂಗೀಕುಸ್ತಿಗಳ ವ್ಯವಸ್ಥಾಪಕರು ಪೈಲ್ವಾನ್ ಸಂಗಪ್ಪನವರು. ಇಂತಹ ಕುಸ್ತಿಗಳ ವ್ಯವಸ್ಥೆಯಾದುದರಿಂದಲೇ ಪೈಲ್ವಾನ್ ನಂಜಪ್ಪ, ಪೈಲ್ವಾನ್ ರಾಮಪ್ಪ, ಪೈಲ್ವಾನ್ ಬಷೀರ್, ಪೈಲ್ವಾನ್ ವಸಂತರಾವ್ ಮೊದಲಾದವರು ದೊಡ್ಡಗರಡಿಯ ಪೈಲ್ವಾನರಾಗಿ ಹೆಸರು ಮಾಡಲು ಸಾಧ್ಯವಾಯಿತು. ಹಾಗೆಯೇ ಇಲ್ಲಿನ ಇತರೆ ಗರಡಿಯ ಪೈಲ್ವಾನರಿಗು ಇವು ಅವಕಾಶ ಕಲ್ಪಿಸಿದವು.

ಹಿಂದೆ ತಿಳಿಸಿದಂತೆ ಲಡತ್ ಮಾಡುವಾಗ ಪೋಷಕರು ಗರಡಿಯನ್ನು ವೀಕ್ಷಿಸಲೆಂದು ಬರುತ್ತಿದ್ದರು. ಲಡತ್ ನೋಡಿದ ಬಳಿಕ ಈ ಪೋಷಕರು ಲೋಕಾಭಿರಾಮವಾಗಿ ಮಾತನಾಡುತ್ತ ನಾಡಿನ ಅನೇಕ ಹಿರಿಯ ಪೈಲ್ವಾನರ ಕುಸ್ತಿಗಳನ್ನು ಕುರಿತು ಹೇಳುತ್ತಿದ್ದರು. ಜೊತೆಗೆ ತಮ್ಮ ಗರಡಿಯ ಅಭಿವೃದ್ಧಿ ಹೊಂದುತ್ತಿರುವ ಪೈಲ್ವಾನರುಗಳು ಯಾರ್‍ಯಾರ ಜೊತೆ ಕುಸ್ತಿ ಜೊತೆ ಹಾಕಿಕೊಂಡರೆ ಗರಡಿಯ ಕೀರ್ತಿ ಹೆಚ್ಚುತ್ತದೆ ಎಂಬುದನ್ನು ತಿಳಿಸಿ, ಅಂತಹ ಪೈಲ್ವಾನರ ಬೆನ್ನುತಟ್ಟುತ್ತಿದ್ದರು. ಕಂಟ್ರಾಕ್ಟರ್ ತಿಮ್ಮಣ್ಣನವರು ಎಷ್ಟೋ ಸಾರಿ ಪೈಲ್ವಾನ್ ನಂಜಪ್ಪ ಯಾರ ಮೇಲೆ ಕುಸ್ತಿಯಾಡಬೇಕು ಎಂದು ಕೆಣಕಿ ಆತನಿಗೆ ಪ್ರಚೋದಿಸುತ್ತಿದ್ದರು. ಇದರಿಂದ ಪೈಲ್ವಾನರ ಬೆಳವಣಿಗೆಗೆ ಸಹಕಾರಿಯಾಯಿತು.

ಇಂತಹ ಪೋಷಕರ ಅತ್ಯಭಿಮಾನ ಎಷ್ಟಿತ್ತು ಎಂಬುದಕ್ಕೆ ಸಿ.ಬಿ. ಮಲ್ಲಪ್ಪನಂತವರು ಶ್ರೇಷ್ಠ ಉದಾಹರಣೆಯಾಗಿದ್ದಾರೆ. ಇಲ್ಲದಿದ್ದರೆ ಪರಿಪೈಗರ್‌ನಂತಹ ಉಸ್ತಾದನನ್ನು ನಂಜಪ್ಪರಿಗೆ ದೊರಕಿಸಲು ಪ್ರಯತ್ನಿಸುತ್ತಿದ್ದರೇ? ಇಂತಹ ಗೋಚರ ಅಗೋಚರ ಪೋಷಕರ ಕೈಗಳು ಒಂದೇ ಸಮನಾಗಿ ಗರಡಿಯ ರಕ್ಷಣೆಗೆ ಇದ್ದುದರಿಂದಲೇ ಅವು ಉಳಿಯಲು, ಬೆಳೆಯಲು ಕಾರಣವಾಯಿತು. ನಗರೀಕರಣ, ಹಣ ಮಾಡುವ ದಂಧೆ ಚಿತ್ರದುರ್ಗದಂತಹ ಊರಿಗೆ ವ್ಯಾಪಕವಾಗಿ ಹರಡಿದ್ದರ ಪರಿಣಾಮವಾಗಿ ಇಂದು ಇಂಥ ಪೋಷಕರ ಕೈಗಳು ಮತ್ತೆ ಕಾಣಿಸದಂತೆ ಕುಸಿದು ಬಿದ್ದಿವೆ. ಅದಕ್ಕೆ ಸರಿಯಾಗಿ ಗರಡಿಗಳು ಇರಲೋ ಬೇಡವೋ ಎಂಬಂತೆ ಏದುಸಿರು ಬಿಡುತ್ತಿವೆ.

❑

೬ ಪ್ರಸಿದ್ಧ ಪೈಲ್ವಾನನ ಸಾಧನೆ - ಲಡತ್

ಗರಡಿಯು ಅಂಗಸಾಧನೆ ದೇಹದಾರ್ಢ್ಯಗಳನ್ನು ಕಲಿಸುವ ಕೇಂದ್ರ. ಇದಿಷ್ಟೇ ಉದ್ದೇಶವಿಟ್ಟುಕೊಂಡು ದೇಹಾರೋಗ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಗರಡಿಗೆ ಬರುವವರು ಇರುತ್ತಾರೆ. ಆದರೆ ಕುಸ್ತಿಪಟುವಾಗಿ ಮುಂದುವರಿಯಲು ಗರಡಿಯಲ್ಲಿರುವ ಮಟ್ಟಿಯಲ್ಲಿ ಲಡತ್ ಮಾಡುವುದು ಅಗತ್ಯವಾಗಿರುತ್ತದೆ. ನಂಜಪ್ಪ ದೊಡ್ಡಗರಡಿಗೆ ಸೇರಿ ಅಲ್ಪ ಅವಧಿಯಲ್ಲಿಯೇ ಪ್ರಖ್ಯಾತ ಪೈಲ್ವಾನನಾಗಿ ಮೇಲಕ್ಕೆ ಬಂದುದರಿಂದ ಆತ ಗರಡಿಯಲ್ಲಿ ಮಾಡಿದ ಅಂಗಸಾಧನೆ ಮತ್ತು ಲಡತ್‌ಗಳನ್ನು ಕುರಿತು ವಿಶೇಷ ಬಣ್ಣನೆಗಳು ನಮಗೆ ಸಿಕ್ಕುವುದಿಲ್ಲ. ಆತ ಹುಟ್ಟಾ ಪೈಲ್ವಾನ್ ಹಾಗು ಕುಸ್ತಿಪಟುವಾದ್ದರಿಂದ ಇದು ಸಹಜವಾದುದು. ಆದರೂ ನಂಜಪ್ಪರ ಸಾಧನೆ ಮತ್ತು ಮಟ್ಟಿಯ ಲಡತ್‌ಗಳನ್ನು ಕುರಿತು ಅಂದು ಗರಡಿಯಲ್ಲಿ ಪಾಲ್ಗೊಂಡ ಕೆಲವರು ಹೀಗೆ ಬಣ್ಣಿಸುತ್ತಾರೆ.

ಸಾಯಂಕಾಲವಾದ ತಕ್ಷಣ ಪೈಲ್ವಾನರುಗಳು ಗರಡಿಗೆ ಬರತೊಡಗಿದರು. ಕೊಂಚ ಸಮಯದಲ್ಲೆ ಹನುಮಾನ್ ಕಾಚ, ಚೆಡ್ಡಿ ಹಾಕಿಕೊಂಡು ಸಾಧನೆ ಮಾಡುತ್ತಿರುವ ಪೈಲ್ವಾನರುಗಳನ್ನು ಇಡೀ ಗರಡಿಯ ಹೊರಗೆ, ಒಳಗೆ ಎಲ್ಲೆಡೆಯು ನೋಡಬಹುದಿತ್ತು. ಸಂಜೆಯ ಹೊತ್ತಲ್ಲಿ ಈ ಪೈಲ್ವನರುಗಳ ಜೊತೆಯಲ್ಲಿ ನಂಜಪ್ಪ ಅಂಗಸಾಧನೆಯಲ್ಲಿ ತೊಡಗುತ್ತಿದ್ದರು. ಪ್ರತಿಯೊಬ್ಬ ಪೈಲ್ವಾನರು ಅಂಗಸಾಧನೆ ಮಾಡುವಾಗ ಬೆವರು ಕೀಳುವಂತೆ ಮಾಡಬೇಕು. ಇದಕ್ಕೆ ನಂಜಪ್ಪನವರೂ ಹೊರತಾಗಿರಲಿಲ್ಲ. ಅವರು ಸಾಮು ಮಾಡುವಾಗ ಕುಂತು ಎದ್ದರೆ 'ಝುಲ್ ಝುಲ್' ಎಂದು ನೀರು ಸಿಡಿಯುತ್ತಿದ್ದವು. ಅವರ ಜೊತೆಯಲ್ಲಿ ಅಂಗಸಾಧನೆ ಮಾಡುತ್ತಿದ್ದ ಮರಿಶಿಷ್ಯ ಕೆ. ನಾಗರಾಜ್ ಕಂಡರೆ ಅವರಿಗೆ ಬಲುಪ್ರೀತಿ. ತಮ್ಮ ಜೊತೆಗೆ ಈ ಹುಡುಗನಿಗೂ ಸಾಮು ತೆಗೆಯುಲು ಹೇಳುತ್ತಿದ್ದರು. ಆದರೆ ನಾಗರಾಜ್‌ಗೆ ದೇಹ ಪ್ರಕೃತಿಯ ದೆಸೆಯಿಂದಲೋ ಏನೋ ಎಷ್ಟು ಸಾರಿ ಕುಂತು ಎದ್ದರೂ ಮೈಯಲ್ಲಿ ನೀರು ಕೀಳುತ್ತಿರಲಿಲ್ಲ! ಅದಕ್ಕೆ ಶಿಷ್ಯನ ಮೇಲೆ ಕೊಪಗೊಂಡು ಸರಿಯಾಗಿ ಸಾಮು ತೆಗೆಯುತ್ತಿಲ್ಲವೆಂದು ನಂಜಪ್ಪ ಗದರುತ್ತಿದ್ದರು. ಈ ಹುಡುಗ ಅವರನ್ನು ಮೆಚ್ಚಿಸಲು ಪಕ್ಕದಲ್ಲಿದ್ದ ತೊಟ್ಟಿಯಲ್ಲಿನ ನೀರನ್ನೆಲ್ಲ ಚಿಮುಕಿಸಿಕೊಂಡು ಬಂದು ಸಾಮು ಮಾಡುವಾಗ ಮೈಯಲ್ಲಿ ಬೆವರು ಕ್ಕಿತ್ತಿದೆ ಎಂದು ತೋರಿಸಬೇಕಾಗುತ್ತಿತ್ತು! ಅದಕ್ಕೆ ನಂಜಪ್ಪ "ಇದೀರಾ ನೀವು, ಮಾಡ್ತೀನಿ

ತಡಿ" ಎಂದು ಗೊಣಗುಟ್ಟುತ್ತಲೇ ತಮ್ಮ ಸಾಮು ಮುಂದುವರೆಸುತ್ತಿದ್ದರು. ನಂಜಪ್ಪನವರ ಜೊತೆಗೆ ಪೈಲ್ವಾನ್ ರಾಮಪ್ಪ ಪೈಲ್ವಾನ್ ಬಷೀರ್, ಪೈಲ್ವಾನ್ ಹನುಮಂತಿ ಮೊದಲಾದವರು ಸಾಮು ಮಾಡುತ್ತಿದ್ದರು.

ಅಂಗಸಾಧನೆ ಆರುಗಂಟೆಯ ಹೊತ್ತಿಗೆ ಮುಗಿಯುತ್ತಿತ್ತು. ಈಗ ಮಟ್ಟಿಯಲ್ಲಿ ಲಡತ್ ಆರಂಭಗೊಳ್ಳುತ್ತಿತ್ತು. ಈ ಸಮಯಕ್ಕೆ ಸರಿಯಾಗಿ ದೊಡ್ಡ ಗರಡಿಯ ಪೋಷಕರೂ ಹಿರಿಯರೂ ಆದ ಕಂಟ್ರಾಕ್ಟರ್ ತಿಮ್ಮಣ್ಣ, ಕಲ್ಲಪ್ಪ, ಪುಟ್ಟಣ್ಣ, ದಸ್ತಗೀರ್ ಸಾಬ್, ಬೊಮ್ಮಣ್ಣ, ಸಿ.ಬಿ. ಮಲ್ಲಪ್ಪ, ಚೋಗಣ್ಣರ ತಿಪ್ಪಣ್ಣ, ಎಂ.ಕೃಷ್ಣಪ್ಪ ಮೊದಲಾದವರು ಒಬ್ಬೊಬ್ಬರೇ ಗರಡಿಯೊಳಕ್ಕೆ ಬರತೊಡಗುತ್ತಿದ್ದರು. ಇವರೆಲ್ಲ ಗರಡಿಯ ಚಟುವಟಿಕೆಗಳನ್ನು ನೋಡಿ, ಮೆಚ್ಚಿ ಬೆನ್ನು ತಟ್ಟಲೆಂದು ಆ ಸಮಯದಲ್ಲಿ ಇರುತ್ತಿದ್ದರು.

ನಂಜಪ್ಪ ಮಟ್ಟಿಯಲ್ಲಿ ಲಡತ್ ಮಾಡುತ್ತಿದ್ದುದೇ ಒಂದು ವಿಶೇಷ ನೆನಪಾಗಿ ಹಲವರಲ್ಲಿ ಉಳಿದಿದೆ. ಅವರ ಜೊತೆಯಲ್ಲಿ ಲಡತ್ ಮಾಡುತ್ತಿದ್ದವರೆಂದರೆ ಪೈಲ್ವಾನ್ ಬಷೀರ್, ಪೈಲ್ವಾನ್ ಹನುಮಂತಿ ಮೊಧಲಾದವರು. ಇವರು ಆತನ ಜೊತೆಯಲ್ಲಿ ಲಡತ್ ಮಾಡಲು ಹೋಗಿ ಸುಸ್ತು ಹೊಡೆದುಬಿಡುತ್ತಿದ್ದರು. ಆದರೆ ಪೈಲ್ವಾನ್ ರಾಮಪ್ಪ ನಂಜಪ್ಪರ ಜೊತೆಯಲ್ಲಿ ಲಡತ್ ಮಾಡುತ್ತಿದ್ದ ದೃಶ್ಯಮಾತ್ರ ರೋಮಾಂಚನಕಾರಿಯಾಗಿರುತ್ತಿತ್ತು. ಪೈಲ್ವಾನ್ ರಾಮಣ್ಣನದು ಒಳ್ಳೆಯ ಮೈಕಟ್ಟು, ನಂಜಪ್ಪನಿಗಿಂತ ಎತ್ತರ. ಹಲವಾರು ಕುಸ್ತಿ ಮಾಡಿ, ನಂಜಪ್ಪನಂತೆಯೇ ಹೆಸರು ಮಾಡಿದವನು. ರಾಮಪ್ಪ ಲಡತ್ ಮಾಡುವಾಗ ನಂಜಪ್ಪನಿಗೆ ಸಮಸಮವಾಗಿ ಫೈಟ್ ಕೊಡುತ್ತಿದ್ದ. ಅಂದಿನ ಗರಡಿ ಜಗತ್ತಿನಲ್ಲಿ, "ನಂಜಪ್ಪನದು ಯುಕ್ತಿ, ರಾಮಪ್ಪನದು ಶಕ್ತಿ" ಎಂಬ ಮಾತು ಚಾಲ್ತಿಯಲ್ಲಿತ್ತು. ಅದು ಮಟ್ಟಿಯಲ್ಲಿ ಮನವರಿಕೆಯಾಗುವಂತೆ ಇವರಿಬ್ಬರ ಲಡತ್ ನಡೆಯುತ್ತಿತ್ತು. ಅದು ಕೇವಲ ಲಡತ್ ಎನ್ನಿಸಿಕೊಳ್ಳದೆ ಜಿದ್ದಾಜಿದ್ದಿಯ ಕುಸ್ತಿಯು ಅಖಾಡದಲ್ಲಿಯೇ ನಡೆಯುತ್ತಿದೆಯೇನೊ ಎಂಬಂತೆ ಮಟ್ಟಿಯಲ್ಲಿ ಸೆಣಸಾಟ, ಹೋರಾಟ ಪಟ್ಟುಗಳು ಪ್ರದರ್ಶನಗೊಂಡು ವೀಕ್ಷಕರಿಗೆ ಮೈ ಬೆಚ್ಚಗೆ ಮಾಡಿಬಿಡುತ್ತಿದ್ದವು. ರಸಪೂರ್ಣವಾದ ನಾಟಕವೊಂದನ್ನು ರಂಗಭೂಮಿಯಲ್ಲಿ ನೋಡುವ ಮೊದಲು ತಾಲೀಮು ಮಾಡುವಾಗ ನೋಡಿದ ಅನುಭವವು ಈ ನಂಜಪ್ಪ–ರಾಮಪ್ಪರ ಲಡತ್ ನೋಡುವಾಗ ಆಗುತ್ತಿತ್ತೆಂದು ಅನೇಕರು ಈಗಲೂ ಸ್ಮರಿಸುತ್ತಾರೆ.

ಇಂಥ ಲಡತ್ತನ್ನು ನಂಜಪ್ಪ ನಾಗಮರದ ಪೈಲ್ವಾನ್ ದಿವಾನ್ ಜೊತೆಯಲ್ಲಿ ಮಾಡುವಾಗಲೂ ಪ್ರದರ್ಶಿಸುತ್ತಿದ್ದರು. ನಾಗಮರದಿಂದ ಕುಸ್ತಿಮಾಡಲು ಬಂದಿದ್ದ ಪೈಲ್ವಾನ್ ದಿವಾನ್ ಕುಸ್ತಿ ನಡೆಯುವ ಮುನ್ನ ಕೆಲಕಾಲ ಸರ್ಕಾರಿ ಆಸ್ಪತ್ರೆಯ ಬಳಿ ಇರುವ ವೆಂಕಟಾಚಲಯ್ಯನವರ ಛತ್ರದಲ್ಲಿ ಇಳಿದುಕೊಂಡಿದ್ದ. ಸಾಧನೆ ಮತ್ತು ಲಡತ್‌ಗಾಗಿ ಈತ ದೊಡ್ಡ ಗರುಡಿಗೆ ಬರುತ್ತಿದ್ದ. ಈತನ ಜೊತೆಯಲ್ಲಿ ನಂಜಪ್ಪ ಲಡತ್ ಮಾಡುವಾಗ ಅಖಾಡದಲ್ಲಿ ಹೇಗೆ ಕುಸ್ತಿ ಮಾಡಬಹುದು ಎಂಬುದನ್ನು ಮಟ್ಟಿಯಲ್ಲೇ ಮಾಡಿ ತೋರಿಸಿಬಿಡುತ್ತಿದ್ದರು.

ಈ ಪೈಲ್ವಾನರನ್ನು ಬಹಳ ಮುಖ್ಯವಾಗಿ ನಂಜಪ್ಪರನ್ನು ಪೋಷಕರು ಕಣ್ತುಂಬ ನೋಡಿ, ಹರಸಿ ಹಾರೈಸುತ್ತಿದ್ದರು.

ಹೀಗೆ ಲಡತ್ ಮುಗಿಸಿದ ಈ ಪ್ರಖ್ಯಾತ ಪೈಲ್ವಾನರುಗಳು ಮಟ್ಟಿಯಲ್ಲಿಯೇ ವಿಶ್ರಾಂತಿ ಪಡೆಯುತ್ತಾ ಕುಳಿತುಕೊಳ್ಳುತ್ತಿದ್ದರು. ಆಗ ಕಿರಿಯ ಪೈಲ್ವಾನರುಗಳು ಮಟ್ಟಿಗಿಳಿದು ತಮ್ಮ ಸಮವಯಸ್ಕರೊಡನೆ ಲಡತ್ ಮಾಡತೊಡಗುತ್ತಿದ್ದರು. ಆಗ ಡಾವು ಅಥವಾ ಪಟ್ಟುಗಳಲ್ಲಿ ಈ ಕಿರಿಯ ಪೈಲ್ವಾನರುಗಳು ತಪ್ಪಾಗಿ ಮಾಡುತ್ತಿದ್ದರೆ, ಮಟ್ಟಿಯಲ್ಲಿ ವಿಶ್ರಾಂತಿ ಪಡಿಯುತ್ತಿದ್ದ ನಂಜಪ್ಪ ತಕ್ಷಣ ಎದ್ದು ಬಂದು ಅವರಿಗೆ ಒಂದು ರೀತಿಯಲ್ಲಿ ಹೇಗೆ ಮಾಡಬೇಕೆಂಬುದನ್ನು ಡೆಮಾನ್‌ಸ್ಟ್ರೇಶನ್ ಮಾಡುತ್ತಿದ್ದರು. ನಂಜಪ್ಪರಿಗೆ ತನ್ನ ಶಿಷ್ಯರು, ಕಿರಿಯ ಪೈಲ್ವಾನರುಗಳನ್ನು ಕಂಡರೆ ಬಹಳ ಪ್ರೀತಿ. ಮಟ್ಟಿ ಕಿರಿಯರಿಗೆ ಆತ ಆತ್ಮವಿಶ್ವಾಸ ತುಂಬಿ ಉತ್ತೇಜನ ಕೊಡುತ್ತಿದ್ದ. ಆತ ಡೆಮಾನ್‌ಸ್ಟ್ರೇಶನ್ ಮಾಡಿ ತೋರಿಸುತ್ತಿದ್ದ ಬಗೆಯನ್ನು ಆತನ ಮರಿಶಿಷ್ಯ ನಾಗರಾಜ್ ಚೆನ್ನಾಗಿ ಬಣ್ಣಿಸುತ್ತಾರೆ. ಆ ಸಮಯದಲ್ಲಿ ಆತ ದೋಭೀಚಾಟ್ ಪಟ್ಟು ಕಲಿಸಬೇಕಾಗಿದೆ ಎಂದಿಟ್ಟುಕೊಳ್ಳೋಣ. ಅದನ್ನು ಕಿರಿಯರಿಗೆ ಹೇಳಿಕೊಟ್ಟು, ತಾನೇ ಆ ಪಟ್ಟಿಗೆ ಬಿದ್ದು ಅವರಿಗೆ ಕಲಿಸುತ್ತಿದ್ದ. ಆ ಕಿರಿಯರಲ್ಲಿ ನಂಜಪ್ಪ ಬಿದ್ದ ಎಂಬುದಕ್ಕಿಂತ ಅವರ ಹೃದಯದಲ್ಲಿ ಉಳಿದಿದ್ದ ಎಂಬುದೇ ದಿಟವಾದ ಮಾತು.

ಶಿಷ್ಯರಿಗೆ ಪಟ್ಟು ಕಲಿಸುವಾಗ ನಂಜಪ್ಪ ತೋರುತ್ತಿದ್ದ ಪ್ರೀತಿ ಕಕ್ಕುಲತೆ ಮಿತಿಗೆ ಒಳಗಾಗುವಂತದ್ದಲ್ಲ. ಒಮ್ಮೆ ಹುಣಿಸೇಕಟ್ಟೆ ಸಿದ್ದಪ್ಪ ಎಂಬ ಪೈಲ್ವಾನ್ ಕಾಶ್ಮೀರದ ಬಾಬು ಎಂಬ ಪೈಲ್ವಾನನ ಮೇಲೆ ಕುಸ್ತಿಯಾಡಬೇಕಾಯಿತು. ಆತ ದೊಡ್ಡ ಗರಡಿಯಲ್ಲಿ ಸಾಧನೆ ಲಡತ್‌ಗಳನ್ನು ಮಾಡುತ್ತಿದ್ದ. ಕುಸ್ತಿಗೆ ಹೊರಡುವ ದಿನ ಪೈಲ್ವಾನ್ ವಸಂತರಾವ್ ಜೊತೆಯಲ್ಲಿ ದಮ್ಮು ಕಟ್ಟುವುದನ್ನು ಅಭ್ಯಾಸ ಮಾಡುವುದಕ್ಕಾಗಿ ಮಟ್ಟಿಯಲ್ಲಿ ಲಡತ್ ಮಾಡುತ್ತಿದ್ದ. ಆತ ಹೀಗೆ ಮಟ್ಟಿಯಲ್ಲಿ ಲಡತ್ ಮಾಡುವಾಗ ಒಂದು ಪಟ್ಟಿಗೆ ವಸಂತರಾವ್ ಕೆಳಗೆ ಬಿದ್ದರು. ಮಾರನೇ ದಿನ ಅವರು ನಂಜಪ್ಪನಿಗೆ ಈ ಪಟ್ಟಿನಲ್ಲಿ ತಾವು ಏಕೆ ಕೆಳಗೆ ಬೀಳಬೇಕಾಯಿತು ಎಂದು ಕೇಳಿದರು. ಅದಕ್ಕೆ ನಂಜಪ್ಪ ವಸಂತರಾವನ್ನು ಕುರಿತು ಆ ಪಟ್ಟಿನ ವಿವರಣೆಯನ್ನೆಲ್ಲಾ ತಿಳಿಸಿ, "ನಮ್ಮಂತ ಉದ್ದನೆಯ ಪೈಲ್ವಾನರಿಗೆ ಇದು ಇನ್ನೂ ಸುಲಭ. ಇದು ಹಳೆಯ ಪಟ್ಟು" ಎಂದು ತಿಳಿಸಿ ಹಾಗೇ ಬೀಳುವುದನ್ನು ನಾಲ್ಕು ಪಟ್ಟುಗಳಲ್ಲಿ ತೋರಿಸಿದರು. ಆತನಿಗೆ ಮಲ್ಲವಿದ್ಯೆ ಅಷ್ಟು ಕರಗತವಾಗಿತ್ತು. ನಂಜಪ್ಪನಿಗೆ ಕುಸ್ತಿ, ಮಟ್ಟಿ, ಪಟ್ಟುಗಳೆಂದರೆ ಮಹಾಗೌರವ. ಮಟ್ಟಿಯಲ್ಲಿ ನಡೆಯತ್ತಿದ್ದ ಪಟ್ಟುಗಳನ್ನು ಕಂಡು ಡ್ರೈವರ್ ಬಸಣ್ಣ ಒಮ್ಮೆ ತುಂಬಾ ಉದಾಸೀನವಾಗಿ ಮಾತನಾಡಿದನಂತೆ. ನಂಜಪ್ಪನಿಗೆ ಅಸಾಧ್ಯಕೋಪ ಬಂತು. ಮಟ್ಟಿ, ಕುಸ್ತಿ ಗೊತ್ತಿಲ್ಲದೆ ಹಾಗೆ ಮಾತಾಡಬೇಡ ಎಂದು ಹೇಳುತ್ತ ಸಮೀಪದಲ್ಲಿಯೇ ನಿಂತಿದ್ದ ಡ್ರೈವರ್ ಬಸಣ್ಣನ ಬಳಿಗೆ ಹೋಗಿ ಒಂದು ಸಣ್ಣ ಪಟ್ಟನ್ನು ಅವನ ಮೇಲೆ ಪ್ರಯೋಗಿಸಿ ತಟ್ಟನೆ ಮಟ್ಟಿಯಲ್ಲಿ ಧಡಾರನೆ ಬೀಳುವಂತೆ ಮಾಡಿದರಂತೆ. ಇದು ನಂಜಪ್ಪನಿಗೆ ರಕ್ತಗತವಾಗಿದ್ದ ಒಲಿದಿದ್ದ ಮಲ್ಲವಿದ್ಯೆ.

ಪೈಲ್ವಾನ್ ವಸಂತರಾವ್ ಬೆಂಗಳೂರಿನಲ್ಲಿ ಮಾಲ್ ಎಂಬ ಪೈಲ್ವಾನನ ಮೇಲೆ ಕುಸ್ತಿಯಾಡಬೇಕಾಗಿತ್ತು. ಆತ ಹಲವು ಪಟ್ಟುಗಳಲ್ಲಿ ಪರಿಣಿತನೆಂದು ವಸಂತರಾವ್ ಕೇಳಿ ತಿಳಿದಿದ್ದರು. ಆತ ಕೆಲವು ಪಟ್ಟುಗಳನ್ನು ತಮ್ಮ ಮೇಲೆ ಪ್ರಯೋಗಿಸಿದರೆ ಅದನ್ನು ಬಿಡಿಸಿಕೊಳ್ಳುವುದು ಹೇಗೆಂದು ಚಿಂತಿಸುತ್ತಿದ್ದರು. ದೊಡ್ಡ ಪೇಟೆಯಲ್ಲಿರುವ ತಮ್ಮ ಟೈಲರಿಂಗ್ ಶಾಪಿನಲ್ಲಿ ಕುಳಿತಿರುವಾಗ ಅಲ್ಲಿಗೆ ಅಕಸ್ಮಾತ್ ನಂಜಪ್ಪ ಬಂದು ಕುಳಿತರು. ಆಗ ಮಾಲ್ ಪೈಲ್ವಾನನ ಕೆಲವು ಪಟ್ಟುಗಳ ಬಗ್ಗೆ ತಿಳಿಸಿದರು. ನಂಜಪ್ಪ ಟೈಲರಿಂಗ್ ಶಾಪಿನ ಬಾಗಿಲನ್ನು ಮುಂದುಮಾಡಿ ಅಲ್ಲಿಯೇ ಹತ್ತಿಪ್ಪತ್ತು ಪಟ್ಟುಗಳನ್ನೂ ಅವುಗಳಿಂದ ಬಿಡಿಸಿಕೊಳ್ಳುವುದನ್ನೂ ಹೇಳಿಕೊಟ್ಟರಂತೆ. ಆತನಿಗೆ ಒಂದು ಕೇಳಿದರೆ ಹತ್ತು ಪಟ್ಟುಗಳು ಗೊತ್ತಿದ್ದವು. ಆತನ ಮೂರು ಜನ ಗುರುಗಳು ಹೇಳಿ ಕೊಟ್ಟಿದ್ದಕ್ಕಿಂತಲು ನೂರು ಹೊಸಪಟ್ಟುಗಳನ್ನು ಕಲಿತಿದ್ದ ಮಹಾಜಾಣ ಎಂದು ಪೈಲ್ವಾನ್ ವಸಂತರಾವ್ ಹೇಳುತ್ತಾರೆ.

ಪೈಲ್ವಾನರ ಕತ್ತು, ತೋಳು, ತೊಡೆ ಮೈಕೈಗಳು ತುಂಬಿಕೊಂಡು ಶಕ್ತಿಯುತವಾಗಲು, ಬಾಗಲು ಬಗ್ಗಲು, ಸೆಟೆದು ನಿಲ್ಲಲು ಸಹಾಯಕವಾಗುವಂತಹ ಗದೆ, ಲೋಡು, ಕಲ್ಲಿನ ದೊಡ್ಡ ಬಳೆಗಳು, ಮಲ್ಲಕಂಬ ಮೊದಲಾದ ಸಾಧನಗಳು ಇದ್ದೇ ಇರುತ್ತವೆ. ಬಸ್ತಿ, ಬೈಠಕ್, ದಂಡೆ ಮೊದಲಾದವುಗಳನ್ನು ಮಾಡುವುದರ ಜೊತೆಗೆ ಈ ಸಾಧನಗಳನ್ನು ಪೈಲ್ವಾನರು ಬಳಸಬೇಕಾಗುತ್ತದೆ. ನಂಜಪ್ಪನವರ ಸಾಧನೆಯಲ್ಲಿ ಯಾವುದೇ ಮುಕ್ಕು ಇರಲಿಲ್ಲ. ಇವೆಲ್ಲವನ್ನು ಮಾಡುವುದರ ಜೊತೆಗೆ ವಾರಕ್ಕೊಮ್ಮೆ, ಅಥವಾ ಎರಡು ಮೂರು ಸಾರಿ ನಂಜಪ್ಪ ಎಣ್ಣೆ ಮಾಲೀಶ್ ಮಾಡಿಸಿಕೊಳ್ಳುತ್ತಿದ್ದುದೂ ಉಂಟು ಈ ಎಣ್ಣೆ ಮಾಲೀಶನ್ನು ನಂಜಪ್ಪಗೆ ಮಾಡುತ್ತಿದ್ದವರು ತಿಪ್ಪೇಶಿ, ಜನಾರ್ಧನಸ್ವಾಮಿ, ನಾಗರಾಜ್ ಮೊದಲಾದವರು. ಒಬ್ಬ ಪ್ರತಿಷ್ಠಿತ ಪೈಲ್ವಾನನಿಗೆ ಎಣ್ಣೆ ಮಾಲೀಶ್ ಮಾಡುವ ಕೆಲಸ ನಮಗೆ ಸಿಕ್ಕಿದೆ ಎಂಬ ಹೆಮ್ಮೆಯಿಂದ ಇವರು ಮಾಲೀಶ್ ಮಾಡುತ್ತಿದ್ದರು. ಆದರೆ ಇವರು ಅದನ್ನು ಕಾಟಾಚಾರಕ್ಕೆ ಮಾಡುವಂತಿರಲಿಲ್ಲ. ಆ ರೀತಿ ಕಾಟಾಚಾರಕ್ಕೆ ಮಾಡಿ ನಿಲ್ಲಿಸುವ ಸೂಚನೆ ಕೊಟ್ಟರೆ ಈ ಹುಡುಗರ ಕಡೆಗೆ ನಂಜಪ್ಪ ತಪಸ್ವಿಗಳು ಕಣ್ಣು ತೆರೆದಂತೆ ಒಮ್ಮೆ ಅರೆಕಣ್ಣು ತೆರೆದು ಬಿಡುತ್ತಿದ್ದರಂತೆ! ಅಷ್ಟಕ್ಕೇ ಈ ಹುಡುಗರು ಹೆದರಿ ತಮ್ಮಷ್ಟಕ್ಕೆ ತಾವೇ ಮಾಲೀಶ್ ಮುಂದುವರೆಸುತ್ತಿದ್ದರಂತೆ.

ಪೈಲ್ವಾನರ ದೇಹದಾರ್ಢ್ಯ ಅಂದಿನ ಕಾಲದಲ್ಲಿ ಬಹಳ ವಿಶೇಷವಾಗಿ ಗಮನಿಸ ಲಾಗುತ್ತಿತ್ತು ಎಂದು ಕಾಣುತ್ತದೆ. ಬಹುಶಃ ಕೆಟ್ಟಕಣ್ಣಿನ ದೃಷ್ಟಿ ಪೈಲ್ವಾನರ ಮೈಮೇಲೆ ಬೀಳಬಾರದು ಎನ್ನುವ ನಂಬಿಕೆಯು ಆಗ ಇದ್ದಂತೆ ಕಾಣುತ್ತದೆ. ಲಡತ್ ಮಾಡಿದ ಬಳಿಕ ನಂಜಪ್ಪ ಗರಡಿಯಲ್ಲಿ ತಣ್ಣೀರಲ್ಲಿ ಸ್ನಾನ ಮಾಡುವಾಗ ಬಟ್ಟೆಯನ್ನು ಅಡ್ಡಹಿಡಿದು ಮರೆಮಾಡುತ್ತಿದ್ದರಂತೆ. ಸ್ನಾನ ಮುಗಿದು ಬಟ್ಟೆ ಹಾಕಿಕೊಳ್ಳುವ ತನಕ ಹೀಗೆ ಬಟ್ಟೆ ಮರೆ ಮಾಡಿಯೇ ನಿಲ್ಲುತ್ತಿದ್ದರಂತೆ. ಆತನ ದರ್ಶನ ಏನಿದ್ದರೂ ಬಟ್ಟೆ ಹಾಕಿಕೊಂಡ ಮೇಲೆಯೇ. ಆಗಲೇ ಆತನಿಗೆ ಗರಡಿಯಲ್ಲಿ ಸಿದ್ಧಪಡಿಸುತ್ತಿದ್ದ ಬಾದಾಮಿ ಹಾಲು ಕೈಗೆ ಬರುತ್ತಿತ್ತು. ❑

೭ ಕುಸ್ತಿಲೋಕದ ಧ್ರುವತಾರೆ

ಸಾಮಾನ್ಯವಾಗಿ ಪೈಲ್ವಾನರುಗಳು ತಮ್ಮ ದೇಹದಾರ್ಢ್ಯಕ್ಕಾಗಿ ಪ್ರಖ್ಯಾತಿಯಾಗಿರುತ್ತಾರೆ. ಅವರು ಗಟ್ಟಿಮುಟ್ಟಾದ ದೇಹ ಹೊಂದುವ ಉದ್ದೇಶದಿಂದಲೇ ತಮ್ಮ ಆಹಾರದಲ್ಲಿ ಸಾಮಾನ್ಯವಾಗಿ ಮಾಂಸ, ಮೊಟ್ಟೆ, ಚಪಾತಿ, ಬೆಣ್ಣೆ, ತುಪ್ಪ, ಹಾಲು ಮೊದಲಾದವನ್ನು ಹೇರಳವಾಗಿ ಬಳಸುತ್ತಾರೆ. ಇದರ ಜೊತೆಗೆ ಬಾದಾಮಿಹಾಲು ಕೂಡಾ ಸೇರುತ್ತದೆ. ಇವೆಲ್ಲಾ ಆಹಾರ ಪಾನೀಯಗಳ ಜೊತೆ, ದಿನ ನಿತ್ಯ ಗರುಡಿಯಲ್ಲಿ ಮಾಡುವ ಅಂಗಸಾಧನೆ, ಲಡತ್‌ಗಳ ಮೂಲಕ ಸದೃಢ ದೇಹದ ಜೊತೆಗೆ, ಸಮಪ್ರಮಾಣದ ದೇಹದ ಅವಯವಗಳನ್ನು ಬೆಳಸಿ ಒಳ್ಳೆಯ ಕುಸ್ತಿಪಟುವಾಗಿ ಅಖಾಡದಲ್ಲಿ ಎದುರಾಳಿಗಳಿಗೆ ಒಂದುರೀತಿ ಸವಾಲು ಆಗುತ್ತಾರೆ. ಇವರ ದೇಹದ ಶಕ್ತಿ–ಸಾಮರ್ಥ್ಯಗಳ ಬಗ್ಗೆಯೇ ಕುಸ್ತಿಗಳ ಬೀಡಾಗಿದ್ದ ಚಿತ್ರದುರ್ಗದಲ್ಲಿ ಕೆಲವು ಕಥೆಗಳು ಪ್ರಚಲಿತವಾಗಿವೆ. ಇಲ್ಲಿನ ಗರುಡಿಗಳಲ್ಲಿದ್ದ ಮೊದಲಿನ ಪೈಲ್ವಾನರು ವಿಶೇಷವಾಗಿ ಜೆಟ್ಟಿ ಜನಾಂಗಕ್ಕೆ ಸೇರಿದವರು. ಅಂಥ ಒಬ್ಬ ಪ್ರಸಿದ್ಧ ಜೆಟ್ಟಿಯ ಕುಸ್ತಿ ದಾವಣಗೆರೆ ಸಮೀಪದಲ್ಲಿರುವ ಮಾಯಕೊಂಡದಲ್ಲಿ ಏರ್ಪಾಟಾಗಿದ್ದಿತು. ಅಷ್ಟೊಂದು ಸಾರಿಗೆ–ಸಂಪರ್ಕವಿಲ್ಲದ ಆ ಕಾಲದಲ್ಲಿ ಆ ಜೆಟ್ಟಿಯು ಸಮಯಕ್ಕೆ ಸರಿಯಾಗಿ ಅಲ್ಲಿರಬೇಕೆಂದು ತಾನು ಸಾಕಿದ ಎತ್ತಿನಮೇಲೆ ಪಯಣ ಹೊರಟ. ಮಾಯಕೊಂಡಕ್ಕೆ ಕೆಲವೇ ಮೈಲಿಗಳಿವೆ ಎನ್ನುವಾಗ, ಮಳೆಯ ದೆಸೆಯಿಂದಲೋ ದುರಸ್ತಿಯಲ್ಲಿದ್ದ ರಸ್ತೆಯ ದೆಸೆಯಿಂದಲೋ, ಜೆಟ್ಟಿಯನ್ನು ಹೊತ್ತುಕೊಂಡು ಹೋಗುತ್ತಿದ್ದ ಎತ್ತು ಕುಂಟತೊಡಗಿತು. ಕರಾರುವಾಕ್ಕಾದ ಸಮಯಕ್ಕೆ ಹಾಜರಾಗಿ ಅಭ್ಯಾಸವಿದ್ದ ಜಟ್ಟಿಗೆ ಕುಂಟುವ ಎತ್ತನ್ನು ನೋಡಿ ಚಿಂತೆಯಾಯಿತು. ಬಳಿಕ ಸ್ವಲ್ಪ ದೂರವಿದ್ದ ಮಾಯಕೊಂಡಕ್ಕೆ ತಾನು ಸಾಕಿದ ಎತ್ತನ್ನು ಬಿಟ್ಟು ಹೋಗಲಾರದೆ, ಅಖಾಡದ ತನಕ ಹೊತ್ತುಕೊಂಡು ಹೋದನಂತೆ! ಅದನ್ನು ನೋಡಿದ ಎದುರಾಳಿ ಪೈಲ್ವಾನ್ ಕುಸ್ತಿ ಆಡದೆಯೇ ತನ್ನ ಸೋಲು ಒಪ್ಪಿಕೊಂಡನಂತೆ! ಇದು ಕಥೆಯಾದರು ಅಂದಿನಿಂದ ಹಿಡಿದು ಇಂದಿನತನಕ ಈ ರೀತಿ ದೈಹಿಕ ಸಾಮರ್ಥ್ಯ ತೋರಿಸುತ್ತಲೇ ಬಂದಿದ್ದಾರೆ.

ಇಷ್ಟೆಲ್ಲಾ ಹೇಳುವ ಉದ್ದೇಶವೇನೆಂದರೆ ನಮ್ಮ ಪ್ರಖ್ಯಾತ ಪೈಲ್ವಾನ್ ನಂಜಪ್ಪ ಪೈಲ್ವಾನರಲ್ಲಿ ಅಪೇಕ್ಷಿಸುವ ಧಾಂಡಿಗ ದೇಹಧಾರಿ ಈತನಲ್ಲ. ಸುಮಾರು ೫ ಅಡಿ ೨ ಅಂಗುಲಕ್ಕಿಂತಲೂ ಕೊಂಚ ಕಮ್ಮಿ ಎನ್ನಬಹುದಾದ ಎತ್ತರ. ಆದರೆ ಸದೃಢ ದೇಹ ಹೊಂದಿದ್ದ ಸುಂದರಕಾಯದ

ಪುರುಷನೀತ. ಪೈಲ್ವಾನನ ಜೀವನದಲ್ಲಿ ಜಯವಿರುವುದು ದೇಹದಲ್ಲಿ ಅಲ್ಲ; ಕುಸ್ತಿ ವಿದ್ಯೆಯನ್ನು ಸರಿಯಾಗಿ ಕೈವಶಮಾಡಿಕೊಳ್ಳುವುದರಲ್ಲಿ ಎಂದು ಬಲವಾಗಿ ನಂಬಿದ್ದ ನಂಜಪ್ಪ. ಅಂತೆಯೇ ತನ್ನ ಜೀವನದ ಕೊನೆಯ ತನಕ ಈ ಕುಸ್ತಿ ವಿದ್ಯೆಯ ಹಲವು ಮುಖಗಳನ್ನು ಪ್ರೇಕ್ಷಕರಿಗೆ ಪ್ರದರ್ಶಿಸಿ ತೋರಿಸಿದ.

ಈಗ್ಗೆ ಸುಮಾರು ಅರವತ್ತು-ಎಪ್ಪತ್ತು ವರ್ಷಗಳ ಹಿಂದೆ ಇಲ್ಲಿನ ಎಲ್ಲಾ ಗರುಡಿ ಮನೆಗಳು ಹಿರಿಯ-ಕಿರಿಯ ಪೈಲ್ವಾನರುಗಳಿಂದ ಗಿಜಿಗುಟ್ಟುತ್ತಿದ್ದವು. ಈ ಕುಸ್ತಿ ಪಟುಗಳು ಕುಸ್ತಿ ಪಂದ್ಯದಲ್ಲಿ ಹೇಗೆ ಪಾಲುಗೊಳ್ಳುತ್ತಿದ್ದರು? ಇದ್ದ ಮಾರ್ಗವೆಂದರೆ ಅಂದು ನಡೆಯುತ್ತಿದ್ದ ಜಾತ್ರೆ – ಉತ್ಸವಗಳಲ್ಲಿ, ವಿವಿಧ ಊರುಗಳಲ್ಲಿ. ಪೈಲ್ವಾನ್ ನಂಜಪ್ಪನವರ ಸಮಕಾಲೀನರೂ, ಅವರ ಗೆಳೆಯರೂ ಆಗಿದ್ದ ಹಗಲು ದೀವಟಿಗೆ ಗರುಡಿಯ ಸುಮಾರು ಎಂಬತ್ತು ವಯಸ್ಸಿನ ಪೈಲ್ವಾನ್ ಮಹಮ್ಮದ್ ಖಾದರ್ ಅವರು ಇಂಥ ಜಾತ್ರೆಗಳಲ್ಲಿ ಕುಸ್ತಿ ಆಡಿ ಮೂರುಬಳೆ, ಬೆಳ್ಳಿ ಗದೆ ಪಡೆದಿದ್ದರಂತೆ. ಈ ಗೆಲುವನ್ನು ಸಂಭ್ರಮದಿಂದ ಆಚರಿಸಲು ಅವರ ಜನಾಂಗದವರು ಈತನನ್ನು ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿದ್ದರಂತೆ! 'ನಂಜಪ್ಪ ಇಂಥ ಜಾತ್ರೆಗಳಲ್ಲಿ ಕುಸ್ತಿಮಾಡಲಿಲ್ಲವೆ?' ಎಂದು ವಿಚಾರಿಸಲಾಗಿ, ಖಾದರ್ ಹೇಳಿದ್ದು – 'ಆತ ಹೈಕ್ಲಾಸ್ ಪೈಲ್ವಾನ್, ದೊಡ್ಡ ಪೈಲ್ವಾನ್. ಇಂಥ ಚಿತ್ರಿ ಪತ್ರಿ ಕುಸ್ತಿ ಆಡಲಿಲ್ಲ. ಆತ ಕುಸ್ತಿ ಆಡೋ ಸಮಯಕ್ಕೆ ಟಿಕೆಟ್ ಕುಸ್ತಿ ಶುರುವಾದವು. ಏನಿದ್ರು ಆತನವು ಟಿಕೆಟ್ ಕುಸ್ತಿಗಳೆ!'

ಅಂದರೆ ಪೈಲ್ವಾನ್ ನಂಜಪ್ಪ ಕುಸ್ತಿಪಟುವಾಗಿ ಅಖಾಡಕ್ಕೆ ಬರುವ ಹೊತ್ತಿಗೆ ಚಿತ್ರದುರ್ಗದಲ್ಲಿ ಜಾತ್ರೆಯಲ್ಲಿ ನಡೆಯುತ್ತಿದ್ದ ಕುಸ್ತಿಗಳಿಗಿಂತಲೂ ಟಿಕೆಟ್ ಕುಸ್ತಿಗಳು ಆರಂಭವಾಗಿದ್ದವು. ಟಿಕೆಟ್ ಕುಸ್ತಿಗಳು ಪೈಲ್ವಾನರಿಗೆ ಹೆಚ್ಚಿನ ಗೌರವವನ್ನು ತಂದುಕೊಟ್ಟರೆ, ಅವುಗಳನ್ನು ವ್ಯವಸ್ಥೆಮಾಡುತ್ತಿದ್ದ ಕಂಟ್ರ್ಯಾಕ್ಟರ್‌ಗಳಿಗೆ ಲಾಭ ತರುತ್ತಿದ್ದವು ಎಂಬುದನ್ನು ಮರೆಯುವಂತಿಲ್ಲ. ಈ ರೀತಿಯ ಕುಸ್ತಿಗಳು ನಾಡಿನ ಎಲ್ಲಾ ನಗರಗಳಲ್ಲೂ ಆರಂಭವಾಗಿದ್ದವು ಎಂದು ಕಾಣುತ್ತದೆ. ಚಿತ್ರದುರ್ಗದಲ್ಲಿ ಬಹಳ ಮುಖ್ಯವಾಗಿ ಇಂಥ ಕುಸ್ತಿಗಳನ್ನು ಆರಂಭಿಸಿದವರು ಕಲ್ಲಪ್ಪ, ಅಂಗಡಿ ಬಸವರಾಜ್ ಮತ್ತು ದಸ್ತಗೀರ್‌ಸಾಬ್. ಇವು ಇಲ್ಲಿನ ಸೊಪ್ಪಿನ ಮಾರ್ಕೆಟ್ ಬಳಿ ಇರುವ ನಾರ್ಮಲ್ ಸ್ಕೂಲಲ್ಲಿ ಆರಂಭವಾದವು. ಬಳಿಕ ಎಸ್. ಜೆ. ಎಂ ಕಾಲೇಜಿನ ಅಂದರೆ ಈಗಿನ ಡೆಂಟಲ್ ಕಾಲೇಜಿನ ಹಿಂಭಾಗದಲ್ಲಿ ಜಯದೇವ ಜಂಗೀ ಕುಸ್ತಿಗಳನ್ನು ಏರ್ಪಡಿಸಿದವರು ಸಂಗಪ್ಪ. ಕೆಲವು ಇಂಥ ಕುಸ್ತಿಗಳು ರಂಗಯ್ಯನ ಬಾಗಿಲು ಬಳಿಯ ಬಯಲಲ್ಲು ನಡೆದವು ಎಂದು ಹೇಳುತ್ತಾರೆ. ಇನ್ನು ಕೆಲವರು ಹೇಳುವ ಪ್ರಕಾರ ಈ ರೀತಿಯ ಕುಸ್ತಿಗಳು ಕೋಟೆಯ ಆವರಣದಲ್ಲಿರುವ ಬಸವನ ಬುರುಜಿನಲ್ಲಿಯೂ ನಡೆದವು ಎನ್ನುತ್ತಾರೆ. ಪೈಲ್ವಾನ್ ನಂಜಪ್ಪನವರ ಕುಸ್ತಿಯ 'ಅರಂಗೇಟ್ರಂ' ಬಹುಶಃ ಸೊಪ್ಪಿನ ಮಾರ್ಕೆಟ್ ಬಳಿ ಇರುವ ನಾರ್ಮಲ್ ಸ್ಕೂಲಲ್ಲಿ ಅಂದಿನ ಕಾಲದಲ್ಲಿ ದೊಡ್ಡ ಹೆಸರು ಮಾಡಿದ್ದ ಪೈಲ್ವಾನ್ ಮರುಡಪ್ಪನ ಮೇಲೆ ಕುಸ್ತಿಯ ಜೊತೆ ಹಾಕಿಕೊಳ್ಳುವುದರ ಮೂಲಕ ಆರಂಭವಾಯಿತೆಂದು ಹೇಳುತ್ತಾರೆ.

ಈಗಾಗಲೇ ಅಂದಿನ ಕಾಲದ ಉಸ್ತಾದ್‌ಗಳು ಶಿಷ್ಯರ ಮೇಲೆ ಸದಾ ಒಂದು ಎಚ್ಚರಿಕೆಯ ಕಣ್ಣು ಇಟ್ಟಿರುತ್ತಾರೆ, ಹಾಗೆಯೇ ನಂಜಪ್ಪನ ಗರುಡಿಯ ಮೊದಲ ಉಸ್ತಾದ್ ಬುಡ್ಡಪ್ಪ ಈ ಕುಸ್ತಿಯನ್ನು ನೋಡಲು ಬರಲೇ ಇಲ್ಲ ಎನ್ನುತ್ತಾರೆ. ಹಾಗೆ ಬರದಿರಲು ಕಾರಣ ಮರುಡಪ್ಪ ಪೈಲ್ವಾನನ ಖ್ಯಾತಿ. ಈತ ಅಂದಿನ ಕಾಲದಲ್ಲಿ ಹೆಸರಾಗಿದ್ದ ರಾಣೆಬೆನ್ನೂರಿನ ಒಬ್ಬ ಪೈಲ್ವಾನನ್ನು ಸೋಲಿಸಿದ್ದ ದೊಡ್ಡ ಪೈಲ್ವಾನ್. ನಂಜಪ್ಪ ಕುಸ್ತಿಯ ಜಗತ್ತಿನಲ್ಲಿ ಕಣ್ಣುಬಿಡುತ್ತಿರುವ ಹುಡುಗ. ಈಡು–ಜೋಡು ಇಲ್ಲದ ಹುಡುಗ ಸೋತು ಬರುತ್ತಾನೆ ಎಂದು ಬುಡ್ಡಣ್ಣನಿಗೆ ಶಿಷ್ಯನ ಮೇಲೆ ಸಿಟ್ಟು ಬಂದಿತ್ತು.

ಈ ಮೊದಲ ಕುಸ್ತಿಯಲ್ಲಿ ನಂಜಪ್ಪ ತನ್ನ ಕುಸ್ತಿಯ ಕೌಶಲ ತೋರಿಸಿದ. ಹಂಗೆ ಹಿಂಗೆ ಎನ್ನುವುದರೊಳಗೆ ಅಖಾಡದಲ್ಲಿ ಬಿದ್ದುಬಿಟ್ಟ. ಮರುಡಪ್ಪ ಹೀಗೆ ಬಿದ್ದಿರುವ ನಂಜಪ್ಪನನ್ನು ಯಾವ ಹಿಡಿತದಲ್ಲಿ ಹಿಡಿದು ನೆಲಕ್ಕೆ ಕುಕ್ಕಬೇಕು ಎಂಬುದನ್ನು ಯೋಚಿಸುವವನಂತೆ ಧೀರಗಾಂಭೀರ್ಯದಲ್ಲಿ ನಿಂತಿದ್ದ. ಈ ಸಮಯ ಸಾಧಿಸಿ ಮರಿಪೈಲ್ವಾನ್ ನಂಜಪ್ಪ ಕಾಲುಗಳಿಂದ ಕತ್ತರಿ ಪಟ್ಟು ಹಾಕಿ ಮರುಡಪ್ಪನನ್ನು ಒಂದೇ ಏಟಿಗೆ ಅಂಗಾತ ಕೆಡವಿಬಿಟ್ಟ ಎಂದರೆ 'ಸಾಫ್‌ಚಿತ್ತು' ಮಾಡಿದ ಎಂದೇ ಅರ್ಥ! ಪ್ರೇಕ್ಷಕರು ಖುಷಿಪಟ್ಟು ಇವನ ಭವಿಷ್ಯದ ಬಗ್ಗೆ ಭರವಸೆ ತಾಳಿದರು. ಉಸ್ತಾದ್ ಬುಡ್ಡಣ್ಣನ ಸಿಟ್ಟು ಇಳಿಯಿತು, ದೊಡ್ಡ ಗರಡಿಯವರಿಗೆಲ್ಲ ಖುಷಿಯಾಯಿತು.

ಈ ಮೊದಲ ಕುಸ್ತಿಯಲ್ಲಿ ನಂಜಪ್ಪನಿಗೆ ಸಿಕ್ಕ ಸಂಭಾವನೆ ಐದು ರೂಪಾಯಿಗಳೆಂದು ಅದೇ ಸಂದರ್ಭದಲ್ಲಿ ಕುಸ್ತಿ ಆಡಿದ ಪೈಲ್ವಾನ್ ಮಹಮದ್ ಸೈಯದ್ ಖಾದರ್ ಹೇಳುತ್ತಾರೆ. ಅದು ಐದು ರೂಪಾಯಿಯೇ ಆದರೂ ಆರಂಭದ ವಿಜಯ ಅದು ಆಗಿದ್ದರಿಂದ ಐದುಸಾವಿರ ರೂಪಾಯಿಗಿಂತಲೂ ಹೆಚ್ಚಿನ ಸಂತೋಷವನ್ನು ನಂಜಪ್ಪನಿಗೆ ತಂದುಕೊಟ್ಟಿರಬೇಕು. ನಂಜಪ್ಪ ಕುಸ್ತಿಗೋಸ್ಕರ ಕುಸ್ತಿಯಾಡುತ್ತೇನೆ. ಆದ್ದರಿಂದ ಒಬ್ಬ ಸಾಮಾನ್ಯ ಕುಸ್ತಿಪಟುವಿನ ಮೇಲೆ ಆಡಿ ಗೆಲ್ಲುತ್ತೇನೆ ಎಂಬ ಜಾಯಮಾನದವನಲ್ಲ ಎಂಬುದನ್ನು ಈ ಮೊದಲ ಕುಸ್ತಿಯಿಂದ ಸಾಬೀತಾಯಿತು. ಈ ನಾರ್ಮಲ್ ಸ್ಕೂಲಿನ ಕಾಂಪೌಂಡ್‌ನಲ್ಲಿ ಆರಂಭದ ಇನ್ನೂ ಒಂದೆರಡು ಕುಸ್ತಿಗಳನ್ನು ಈ ರೀತಿಯ ಆಯ್ಕೆಯ ದೃಷ್ಟಿಯಿಂದಲೇ ಉಲ್ಲೇಖಿಸಬಹುದು. ಇದೇ ಆವರಣದಲ್ಲಿ ನಂಜಪ್ಪ ಶಂಕರ್ ಪೈಲ್ವಾನನ ಮೇಲೆ ಕುಸ್ತಿಯಾಡಿದ. ಈತ ಬಹುಶಃ ಮೈಸೂರು ಅಥವಾ ತಿಪಟೂರು ಕಡೆಯವನು. ಆಗಿನ ಕಾಲದ ಪೈಲ್ವಾನರು ಮತ್ತು ಪ್ರೇಕ್ಷಕರು ಗುರುತಿಸುವಂತೆ ಶಂಕರ್ ಪೈಲ್ವಾನ್ ಜಾತಿಯಲ್ಲಿ ಬ್ರಾಹ್ಮಣನಿರಬೇಕು. ಎತ್ತರವಾದ ಕಟ್ಟುಮಸ್ತಾದ, ಗೌರವರ್ಣದ ಭಾರೀ ಆಳು ಆತ. ನಂಜಪ್ಪ ಆತನ ಮುಂದೆ ಏನೂ ಅಲ್ಲ. ಆದರೆ ಪೈಲ್ವಾನ್ ಶಂಕರ್ ಕುಸ್ತಿ ಪಟುವಿಗೆ ಬೇಕಾದ ದೇಹದಾರ್ಢ್ಯ ಹೊಂದಿದ್ದಂತೆ ಕುಸ್ತಿಪಟುವಿಗೆ ಬೇಕಾದ ಚುರುಕುತನ, ಪಟ್ಟುಗಳನ್ನು ಒಲಿಸಿಕೊಂಡಂತೆ ಕಾಣಲಿಲ್ಲ. ಅಗೋ ಇಗೋ ಎನ್ನುವುದರಲ್ಲಿ ಪೈಲ್ವಾನ್ ನಂಜಪ್ಪ ಈತನನ್ನು ಅನಾಮತ್ತು ಮೇಲೆ ಎತ್ತಿ ನೆಲಕ್ಕೆ ಕೆಡವಿಬಿಟ್ಟ. ಈತ ಹಾಗೆ ಕೆಳಗೆ ಬಿದ್ದಾಗ ಅಖಾಡದಲ್ಲಿ ಎದ್ದ ಮಣ್ಣಿನ ಧೂಳು ಸಣ್ಣಗೆ ಹೊಗೆಯಂತೆ ಕಾಣುತ್ತಿತ್ತು. ಈ

ನಾರ್ಮಲ್ ಸ್ಕೂಲ್ ಆವರಣದಲ್ಲಿ ನಂಜಪ್ಪ ಆಡಿದ ಮತ್ತೊಂದು ಕುಸ್ತಿ ನಾಗಪುರದ ಅಣ್ಣಪ್ಪನ ಮೇಲೆ. ನಾಗಪುರದ ಅಣ್ಣಪ್ಪ, ನಾಗಪುರದ ಇನ್ನೊಬ್ಬ ಪೈಲ್ವಾನ್ ದಿವಾನ್ ಎನ್ನುವವನ ತಮ್ಮ. ಈ ಇಬ್ಬರೂ ಅಣ್ಣ ತಮ್ಮಂದಿರೂ ಕುಸ್ತಿ ಕಲಿತು ಅವಕಾಶಕ್ಕಾಗಿ ಅಲ್ಲಿ ಇಲ್ಲಿ ಅಲೆದು ಚಿತ್ರದುರ್ಗಕ್ಕೆ ಬಂದಿದ್ದರೆಂದು ಕಾಣುತ್ತದೆ. ಇವರಲ್ಲಿ ದಿವಾನ್ ಎಂಬುವವನ ಜೊತೆಯಲ್ಲಿ ದೊಡ್ಡಗರಡಿಯಲ್ಲಿ ನಂಜಪ್ಪ ವಿಶೇಷವಾಗಿ ಲಡತ್ ಮಾಡುತ್ತಿದ್ದನೆಂದು ಈಗಾಗಲೇ ತಿಳಿಸಿದೆ. ದಿವಾನ್ ಮತ್ತು ಅಣ್ಣಪ್ಪ ಮುಂದೆ ಕೆಳಗೋಟೆಯಲ್ಲಿರುವ ಚೆನ್ನಕೇಶವ ದೇವಾಲಯದ ಆವರಣದಲ್ಲಿದ್ದ ಚೆನ್ನಕೇಶವಸ್ವಾಮಿ ಗರಡಿಯ ಪೈಲ್ವಾನರಿಗೆ ಕುಸ್ತಿ ಕೆಲಸ ಕಲಿಸುತ್ತಿದ್ದರೆಂದು ತಿಳಿದು ಬರುತ್ತದೆ. ತಾರುಣ್ಯದಲ್ಲಿದ್ದ ಈ ಪೈಲ್ವಾನರು ಅವಕಾಶ ಅರಸುತ್ತ ಬಂದು ನಾರ್ಮಲ್ ಸ್ಕೂಲ್ ಆವರಣದಲ್ಲಿ ಕುಸ್ತಿಗಳು ನಡೆಯುತ್ತವೆಂದು ತಿಳಿದು ಒಳಗೆ ಹೋಗದೆ ಸೊಪ್ಪಿನ ಮಾರ್ಕೆಟ್‌ನಲ್ಲಿ ಕುಳಿತಿದ್ದರು. ಆ ದಿನ ನಂಜಪ್ಪನ ಕುಸ್ತಿ ಇತ್ತು. ಆದರೆ ನಂಜಪ್ಪನ ಜೊತೆ ಹಾಕಿಕೊಂಡಿದ್ದ ಎದುರಾಳಿ ಪೈಲ್ವಾನ್ ಆ ದಿನ ಬಂದಿರಲಿಲ್ಲ. ಈ ಕುಸ್ತಿಯನ್ನು ತಪ್ಪಿಸಬಾರದೆಂದು ವ್ಯವಸ್ಥಾಪಕರು ಯೋಚಿಸುತ್ತಿದ್ದಾಗ ಸೊಪ್ಪಿನ ಮಾರ್ಕೆಟ್‌ನಲ್ಲಿ ಕುಳಿತಿದ್ದ ಅಣ್ಣಪ್ಪನಿಗೆ ನಂಜಪ್ಪನ ಜೊತೆಯಲ್ಲಿ ಆಡಲು ಅವಕಾಶ ಕಲ್ಪಿಸಲಾಯಿತು. ಈ ಸಂಗತಿಯನ್ನು ಕುಸ್ತಿ ವ್ಯವಸ್ಥಾಪಕರಲ್ಲಿ ಒಬ್ಬರಾದ ಕಲ್ಲಪ್ಪನವರ ಮಗ ಸಿ.ಕೆ. ಚಂದ್ರಪ್ಪ ತಾವು ಬಾಲ್ಯದಲ್ಲಿ ನೋಡಿದ್ದನ್ನು ಜ್ಞಾಪಿಸಿಕೊಳ್ಳುತ್ತಾರೆ. ಪೈಲ್ವಾನ್ ಅಣ್ಣಪ್ಪ ಉದಾಸೀನ ಮಾಡುವಂತಹ ಪೈಲ್ವಾನ್ ಅಲ್ಲ ಎಂದು ಅಂದಿನ ಪ್ರೇಕ್ಷಕರಿಗೆ ಆತ ಮನವರಿಕೆ ಮಾಡಿಕೊಟ್ಟ. ನಂಜಪ್ಪನಿಗೆ ಆತ ಸರಿಯಾಗಿ ಫೈಟ್ ಕೊಟ್ಟ. ಒಂದು ಹಂತದಲ್ಲಿ ಅಣ್ಣಪ್ಪ ನಂಜಪ್ಪನನ್ನು ಸೋಲಿಸಿಬಿಟ್ಟನೇನೋ ಎಂದು ಪ್ರೇಕ್ಷಕರು ಬೆರಗಿನಿಂದ ನೋಡುವಂತಾಯಿತು. ಆದರೆ ನಂಜಪ್ಪ ಬಹಳ ಪ್ರಯಾಸದಿಂದ, ಪ್ರಯತ್ನದಿಂದ ಅಂತೂ ಅಣ್ಣಪ್ಪನನ್ನು ಸೋಲಿಸಿದ. ಈ ಕುಸ್ತಿಗಳು ನಂಜಪ್ಪ ಒಬ್ಬ ಅಸಾಧಾರಣ ಪೈಲ್ವಾನ್ ಎಂಬುದನ್ನು ಸಾಬೀತುಪಡಿಸಿದವು. ಇಲ್ಲಿಂದ ಆತನ ಕುಸ್ತಿಗಳ ಜೈತ್ರ ಯಾತ್ರೆಯೇ ನಡೆಯಿತೆನ್ನಬೇಕು. ಜೊತೆಗೆ ಕುಸ್ತಿಯ ಅನುಭವಗಳೂ ಸಮೃದ್ಧವಾದವು.

ನಂಜಪ್ಪ ಕುಸ್ತಿಯಾಡಿ ತನ್ನ ಕುಶಲತೆಯನ್ನು ಪ್ರೇಕ್ಷಕರಿಗೆ ತೋರಿಸಿದ ಬಳಿಕ ಆತನ ಕುಸ್ತಿಗಳು ದಾವಣಗೆರೆ, ಬೆಂಗಳೂರು, ಹರಿಹರ, ಶಿವಮೊಗ್ಗ, ಹೊಸಪೇಟೆ, ಹುಬ್ಬಳ್ಳಿ, ಬೆಳಗಾಂ, ಬಳ್ಳಾರಿ ಮೊದಲಾದ ಕಡೆ ಭರ್ಜರಿ ಪ್ರಚಾರದೊಡನೆ ನಡೆದವು. ಅವುಗಳಲ್ಲಿ ನಾವು ಕೆಲವು ಸ್ಮರಣೀಯ ಕುಸ್ತಿಗಳನ್ನಾದರೂ ಮೆಲುಕು ಹಾಕೋಣ.

ನಂಜಪ್ಪ ಮಾಡಿದ ಕುಸ್ತಿಗಳಲ್ಲಿ ಬೆಂಗಳೂರಿನಲ್ಲಿ ಮಾಡಿದ ಒಂದು ಕುಸ್ತಿ ಸ್ವಾರಸ್ಯಕರವಾಗಿದೆ. ನಂಜಪ್ಪರು ಇದುವರೆಗೂ ಬೆಂಗಳೂರಿನಲ್ಲಿ ಯಾವ ಕುಸ್ತಿಯನ್ನೂ ಆಡಿರಲಿಲ್ಲ. ಪ್ರತಿಯೊಬ್ಬ ಕುಸ್ತಿಪಟುವೂ ಮಹತ್ವಾಕಾಂಕ್ಷಿಯಾಗಿರುತ್ತಾನೆ. ಇವನು ಗೆಲ್ಲುತ್ತಾನೆ ಎಂಬಂತಹ ಜೊತೆಯವನೊಡನೆ ಕುಸ್ತಿಯಾಡುವುದಕ್ಕಿಂತ, ಇವನು ಗೆಲ್ಲಲಾರ ಎಂಬಂತಹ ಎದುರಾಳಿಯನ್ನು ತನ್ನ ಕುಸ್ತಿಗೆ ಆಯ್ಕೆ ಮಾಡಿಕೊಳ್ಳುತ್ತಾನೆ. ನಂಜಪ್ಪರ ಬಹಳಷ್ಟು ಕುಸ್ತಿಗಳು

ಈ ರೀತಿಯವು. ಅವರ ಜೊತೆಗೆ ಆಡಿದವರೆಲ್ಲ ಅವರಿಗಿಂತ ದೇಹದಾರ್ಢ್ಯ, ಪರಿಣತಿಗಳಲ್ಲಿ ಈಗಾಗಲೇ ಹೆಸರು ಮಾಡಿದಂತವರು. ಈಗ ಬೆಂಗಳೂರಿನಲ್ಲಿ ಜೊತೆ ಹಾಕಿಕೊಂಡ ಎದುರಾಳಿ ಅಮ್ಮೀಸಿಂಗ್ ಎಂಬುವವನು. ಈತ ಮಿಲಿಟರಿಯಲ್ಲಿ ಆಫೀಸರ್ ಆಗಿದ್ದವನು. ಅಮ್ಮೀಸಿಂಗ್ ೬–೬ ೧/೨ ಅಡಿಯ ಭರ್ಜರಿ ಆಳು.

ಇಂತಹ ಭರ್ಜರಿ ಆಳಿನ ಜೊತೆ ನಂಜಪ್ಪನವರನ್ನು ಹೋಲಿಸಿದರೆ ಆಳೇ ಅಲ್ಲ. ಇಲ್ಲಿತನಕ ನಂಜಪ್ಪ ಒಂದೂ ಕುಸ್ತಿಯನ್ನು ಬೆಂಗಳೂರಿನಲ್ಲಿ ಆಡಿಯೂ ಇರಲಿಲ್ಲ, ಹೆಸರೂ ಮಾಡಿರಲಿಲ್ಲ. ಅಮ್ಮೀಸಿಂಗ್ ಬಳಿ ನಂಜಪ್ಪ ನಿಂತರೆ ಅಂತಹ ಹೈಟ್ ಇಲ್ಲ, ಕುಳ್ಳಗೆ ಇದ್ದರು. ಅಮ್ಮೀಸಿಂಗ್ ಎತ್ತರದ ಆಳು ಮತ್ತು ಮಿಲಿಟರಿ ಗತ್ತು. ಕುಸ್ತಿಯಾಡಲು ಜೊತೆ ಹಾಕಿಕೊಳ್ಳುವುದಕ್ಕೆಂದು ನಂಜಪ್ಪ ಅಮ್ಮೀಸಿಂಗ್ ಬಳಿಗೆ ಬಂದರೆ, ಆತ ನಂಜಪ್ಪನನ್ನು ಕಂಡ ತಕ್ಷಣ ತಾತ್ಸಾರ. ನಂಜಪ್ಪನನ್ನು ನೋಡಿದ ಕೂಡಲೇ, "ಕ್ಯಾ ಪೈಲ್ವಾನ್... ಜಾಂವ್ ಜಾಂವ್... ತುಮ್ ಕ್ಯಾ ಖೇಲೇಂಗೆ?" ಎಂದು ಲೇವಡಿ ಮಾಡಿ ಕಳುಹಿಸಿಬಿಡುತ್ತಿದ್ದ ಒಂದು ವಾರವಾಯಿತು, ಎರಡು ವಾರವಾಯಿತು, ಮೂರು ವಾರವಾಯಿತು. ಆದರೇನು ಜೊತೆ ಹಿಡಿಯೋಕ್ಕೆ ಅಂತ ಅಮ್ಮೀಸಿಂಗ್ ಬಳಿ ನಂಜಪ್ಪ ಹೋದಾಗಲೆಲ್ಲ ಇದೇ ತಿರಸ್ಕಾರದ ಮಾತು ಆಡುತ್ತಿದ್ದ. ಮುಖದಲ್ಲಿ ಉದಾಸೀನ ಭಾವವನ್ನು ತೀವ್ರವಾಗಿ ಚಿಮ್ಮಿಸುತ್ತಿದ್ದ. ಅಮ್ಮೀಸಿಂಗ್ ಕುಸ್ತಿಯ ಪರ್ವತ ! ನಂಜಪ್ಪ ಅಳಿಲು !

ಈಗಾಗಲೇ ಕುಸ್ತಿಪಟುಗಳ ಕುಸ್ತಿ ಪ್ರದರ್ಶನಕ್ಕೆ ಕುಸ್ತಿ ಪ್ರೇಮಿಗಳ ಮನ ತಣಿಸುವುದಕ್ಕೆ ರಂಗವೊಂದನ್ನು ಸೃಷ್ಟಿಸುವುದರ ಮೂಲಕ ಕುಸ್ತಿ ಕಲೆ ಜೀವಂತವಾಗಿ ಉಳಿಯಲು ಮತ್ತು ಅದಕ್ಕೊಂದು ಘನತೆ ಗೌರವ ಬರಲು ಪೋಷಕರ ಮತ್ತು ವ್ಯವಸ್ಥಾಪಕರ ಪಾತ್ರವು ನಿಸ್ಸಂಶಯವಾಗಿ ದೊಡ್ಡದು. ಹೀಗೆ ಪೋಷಕರೂ ವ್ಯವಸ್ಥಾಪಕರೂ ಆಗಿ ಬೆಂಗಳೂರಿನಲ್ಲಿ ಹೆಸರು ಮಾಡಿದ್ದವರು ಅಣ್ಣಯ್ಯಪ್ಪನವರು. ಅವರು ಸ್ವತಃ ಪೈಲ್ವಾನರು ಕೂಡ ಆಗಿದ್ದರು. ಬೆಂಗಳೂರಿನ ಅರಳೇಪೇಟೆ, ಚಿಕ್ಕಪೇಟೆಯಲ್ಲಿದ್ದ ಎರಡು ಗರಡಿಗಳ ಉಸ್ತುವಾರಿಯನ್ನು ಅಣ್ಣಯ್ಯಪ್ಪ ಮತ್ತು ಇವರ ಸೋದರರು ನೋಡಿಕೊಳ್ಳುತ್ತಿದ್ದರು. ಹೀಗೆ ಕುಸ್ತಿ ವ್ಯವಸ್ಥೆ ಮಾಡುವಾಗ ಬೇರೆ ಊರಿನಿಂದ ಬರುವ ಪೈಲ್ವಾನರುಗಳಿಗೆ ಇವರು ತಿಂಗಳುಗಟ್ಟಲೆ ಅವರ ಊಟೋಪಚಾರ, ತಯಾರಿ, ವಸತಿ ಎಲ್ಲದಕ್ಕೂ ಉದಾರವಾಗಿ ವ್ಯವಸ್ಥೆ ಮಾಡುತ್ತಿದ್ದರು. ಬಂದವರು ಇಲ್ಲಿನ ಸಣ್ಣಗರಡಿ, ದೊಡ್ಡಗರಡಿಗಳಲ್ಲಿ ಸಾಮು, ಅಂಗಸಾಧನೆ, ಲಡತ್ ಎಲ್ಲಾ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತಿದ್ದರು. ಬೆಂಗಳೂರಿನಲ್ಲಿ ಕುಸ್ತಿ ಮಾಡಲೆಂದು ಬಂದಿದ್ದ ನಂಜಪ್ಪನವರಿಗೂ ಈಗ ಆರು ತಿಂಗಳಿಂದ ಅಣ್ಣಯ್ಯಪ್ಪರೇ ಈ ವ್ಯವಸ್ಥೇ ಮಾಡಿಕೊಟ್ಟಿದ್ದರು. ಆಗ ನಂಜಪ್ಪ ಅರಳೇಪೇಟೆಯಲ್ಲಿದ್ದ ಕೆಂಪಣ್ಣನವರ ದೊಡ್ಡಗರಡಿಯಲ್ಲಿದ್ದರು. ಕುಸ್ತಿಗಳನ್ನು ಜೊತೆ ಮಾಡಿಕೊಡುತ್ತಿದ್ದವರು ಅಣ್ಣಯ್ಯಪ್ಪನವರೇ.

ಈಗ ಮೂರು ವಾರಗಳಿಂದ ಅಮ್ಮೀಸಿಂಗ್ ತೋರಿಸುತ್ತಿದ್ದ ಉದಾಸೀನ ವರ್ತನೆಯನ್ನು ಅಣ್ಣಯ್ಯಪ್ಪ ಗಮನಿಸುತ್ತಲೇ ಇದ್ದರು. ಅವರಿಗೆ ಇದು ಸರಿ ಕಾಣಲಿಲ್ಲ. ಅವರು ಒಂದು ದಿನ ಅಮ್ಮೀಸಿಂಗ್‌ನನ್ನು ಕುರಿತು, "ನೋಡಪ್ಪ ಅಮ್ಮೀಸಿಂಗ್ ಇವರು ನಂಜಪ್ಪ ಅಂತ ದುರ್ಗದಿಂದ ಬಂದಿದ್ದಾರೆ. ಒಳ್ಳೆಯ ಪೈಲ್ವಾನ್. ನಿನ್ನ ಮೇಲೆ ಕುಸ್ತಿಯಾಡಬೇಕು ಅಂತ ಖಾಯಿಷ್‌ಪಟ್ಟಿದ್ದಾರೆ. ನೀನು ಯಾಕಪ್ಪ ಆಡಲ್ಲ ಅಂತೀಯ? ನಂಜಪ್ಪರ ಜೊತೆ ಆಡಪ್ಪ... ಆಡು... ಅದರಲ್ಲಿ ತಪ್ಪೇನು ಇಲ್ಲ" ಎಂದು ಬುದ್ಧಿಮತು ಹೇಳಿದರು. ಅಣ್ಣಯ್ಯಪ್ಪನ ಮಾತಿಗೆ ಒಪ್ಪಿಕೊಂಡ ಅಮ್ಮೀಸಿಂಗ್ ನಂಜಪ್ಪನವರ ಜೊತೆ ಕುಸ್ತಿಯಾಡಲು ಹಾತ್ ಮಿಲಾಯಿಸಿದ. ಕುಸ್ತಿ ಇನ್ನು ಹದಿನೈದು ದಿನಕ್ಕೆ ನಡೆಯುವುದೆಂದು ನಿರ್ಧರಿಸಲಾಯಿತು. ಈಗಾಗಲೇ ಆರು ತಿಂಗಳ ಹಿಂದೆ ಕುಸ್ತಿಯಾಡಲೆಂದೇ ಬಂದಿದ್ದ ನಂಜಪ್ಪ ಉಳಿದ ಹದಿನೈದು ದಿನಗಳಲ್ಲಿ ಅಂಗಸಾಧನೆ, ಲಡತ್‌ಗಳನ್ನು ಚುರುಕುಗೊಳಿಸಿದ.

ಈ ಕುಸ್ತಿ ಆಡುವ ದಿನವೂ ಬಂತು. ಪೈಲ್ವಾನ್‌ಗೆ ತಕ್ಕಂತೆ ಭರ್ಜರಿ ದೇಹದ ಅಮ್ಮೀಸಿಂಗ್ ಅಖಾಡದಲ್ಲಿ ನಿಂತಿದ್ದರೆ, ನಂಜಪ್ಪ ಪೀಚು ಪೀಚು ಎನ್ನಬೇಕು. ಆದರೆ ನಂಜಪ್ಪ ತಾವೇ ತಮ್ಮ ಪೈಲ್ವಾನ್‌ಗಿರಿಯನ್ನು ಒರೆಗೆ ಹಚ್ಚುವಂತೆ ಜೊತೆ ಹಾಕಿಕೊಂಡಿದ್ದ ಈ ಭರ್ಜರಿ ಪೈಲ್ವಾನನನ್ನು ಕಂಡರೂ ಕೇರ್ ಮಾಡಲಿಲ್ಲ. ಅಂತಹ ಅಂಜದ, ಅಳುಕದ ಆತ್ಮವಿಶ್ವಾಸ ಅವರದು. ಮೊದಲಿನಿಂದಲೂ ನಂಜಪ್ಪ ದೋಭೀಚಾಟ್ ಪಟ್ಟಿನಲ್ಲಿ ಎದುರಾಳಿಯನ್ನು ಕೆಡುವುದಕ್ಕೆ ಪ್ರಖ್ಯಾತಿಯಾಗಿದ್ದರು. ಈಗ ಅದೇ ದೋಭೀಚಾಟ್ ಪಟ್ಟು ಬಳಸಿ ಅಮ್ಮೀಸಿಂಗ್ ನಂತಹ ಪೈಲ್ವಾನನನ್ನು ಅಖಾಡದಲ್ಲಿ ಎತ್ತಿ ಎತ್ತಿ ಮೂಲೆ ಮೂಲೆಗೆ ಎಸೆದರು. ದೋಭೀ ಚಾಟ್ ಪಟ್ಟು ಬಳಸಿ, ಆ ರೀತಿ ಎತ್ತಿ ಹಾಕಿದರೂ ಬೆನ್ನು ಮಣ್ಣಿಗೆ ಸರಿಯಾಗಿ ತಾಕದಿದ್ದರೆ ಸೋತಂತೆ ಅಲ್ಲ. ಆದರೆ ನಂಜಪ್ಪನವರು ಅದೇ ದೋಭಿಚಾಟಿನಲ್ಲಿ ಅಮ್ಮೀಸಿಂಗನನ್ನು ಸಾಫ್‌ಚಿತ್ ಮಾಡಿದರು.

ಅಷ್ಟು ದೊಡ್ಡ ಪೈಲ್ವಾನ್ ಅಮ್ಮೀಸಿಂಗ್ ಸೋತರೂ ಬೇಜಾರು ಮಾಡಿಕೊಳ್ಳಲಿಲ್ಲ. ಆ ದೊಡ್ಡ ಪೈಲ್ವಾನ್ ತನ್ನ ದೊಡ್ಡ ಗುಣವನ್ನು ತೋರಿಸಿ ಸಂತೋಷಪಟ್ಟ. ಅದಕ್ಕೆ ಕಾರಣ, ಎಂಥೆಂಥ ಪಟ್ಟುಗಳು, ವಿದ್ಯೆಗಳು ಯಾವ್ಯಾವ ಪೈಲ್ವಾನರಲ್ಲಿ ಅಡಗಿರುತ್ತವೆ ಎಂಬುದನ್ನು ಯೋಚಿಸಿ ಆತ ಸಂತೋಷಪಡುವುದರ ಜೊತೆಗೆ ನಂಜಪ್ಪನನ್ನು ಹೊಗಳಿ ಅಭಿನಂದಿಸಿದ. ಪ್ರೇಕ್ಷಕವರ್ಗಕ್ಕೆ ಅಂದು ನಂಜಪ್ಪರು ಕುಸ್ತಿಕಲೆಯ ಸಂತೋಷವನ್ನು ಕಣ್ಣಾರ ತಣಿಯುವಷ್ಟು ಉಣ್ಣಿಸಿದರು ಎನ್ನಬಹುದು.

ಬೆಂಗಳೂರಿನಲ್ಲಿ ನಂಜಪ್ಪ ಮಾಡಿದ ಇನ್ನೊಂದು ಕುಸ್ತಿ ರಾಮ್‌ಸಿಂಗ್ ಎಂಬುವವನ ಮೇಲೆ. ಇದಾದ ಬಳಿಕ ಬೆಂಗಳೂರಿನಲ್ಲಿ ನಡೆದ ಹಲವು ಕುಸ್ತಿಗಳಲ್ಲಿ ನಂಜಪ್ಪ ಪಾಲುಗೊಂಡು, ಅಲ್ಲಿನ ಪ್ರೇಕ್ಷಕರ ಮನಸ್ಸಿನಲ್ಲಿ ಚಿರವಾಗಿ ಉಳಿದರು.

ನಂಜಪ್ಪ ಮಾಡಿದ ಬಹಳಷ್ಟು ಕುಸ್ತಿಗಳು ನಡೆದಿದ್ದು ದಾವಣಗೆರೆಯಲ್ಲಿ. ಅವುಗಳಲ್ಲಿ ಎರಡು ಗಮನಾರ್ಹ ಕುಸ್ತಿಗಳು ನಡೆದದ್ದು ಅಲ್ಲಿಯೆ. ದಾವಣಗೆರೆಗೂ ದುರ್ಗಕ್ಕೂ ಕುಸ್ತಿಯ

ವಿಚಾರದಲ್ಲಿ ಅಂದಿನ ಕಾಲದಲ್ಲಿ ಬಹಳ ನಂಟು. ನಂಜಪ್ಪನ ಕುಸ್ತಿ ನಡೆಯುತ್ತದೆ ಎಂದರೆ ದುರ್ಗದಿಂದ ಹಲವು ಗೆಳೆಯರು, ಪೈಲ್ವಾನರು, ಕುಸ್ತಿಪ್ರೇಮಿಗಳು ಅವರ ಹಿಂದೆ ಹೊರಟುಬಿಡುತ್ತಿದ್ದರು. ದಾವಣಗೆರೆಯಲ್ಲಿ ನಡೆದರಂತೂ ಐವತ್ತು ಅರವತ್ತರಿಂದ ಕೆಲವು ಸಾರಿ ಅದು ನೂರಾರು ಸಂಖ್ಯೆಯನ್ನು ಮೀರಿಬಿಡುತ್ತಿತ್ತು. ದಾವಣಗೆರೆಯ ಕುಸ್ತಿಪ್ರೇಮಿಗಳಾದರೂ ಅಷ್ಟೆ, ಗಿಜಿಗುಟ್ಟಿಕೊಂಡು ಕಲೆತುಬಿಡುತ್ತಿದ್ದರು.

ಹೀಗೆ ಕುಸ್ತಿಪ್ರೇಮಿಗಳು ಖಾಯಶ್ ಪಡುತ್ತಿರುವಾಗ ನಂಜಪ್ಪ ಬೆಳಗಾಮಿನ ಕೃಷ್ಣಾಜಿ ಎಂಬುವವನ ಮೇಲೆ ಕುಸ್ತಿ ಆಡುವ ಸಂದರ್ಭ ಬಂದಿತು. ಅಖಾಡದಲ್ಲಿ ಕೃಷ್ಣಾಜಿ ಮತ್ತು ನಂಜಪ್ಪ ಇಳಿದರು. ಕೃಷ್ಣಾಜಿ ಕುಸ್ತಿ ಕಲೆಯಲ್ಲಿ ಪರಿಣಿತ. ಜೊತೆಗೆ ಅಹಂಕಾರ ಪೀಡಿತ. ಆಗಿನ ಕಾಲದ ಕುಸ್ತಿಗಳು ನಡೆದ ಬಗೆಯನ್ನು ತಿಳಿಯುವುದೇ ಒಂದು ಸ್ವಾರಸ್ಯಕರ ಕಥೆ ಓದಿದ ಹಾಗೆ ! ಅಖಾಡದಲ್ಲಿ ಕೃಷ್ಣಾಜಿ ಮತ್ತು ನಂಜಪ್ಪ ಸೆಣಸತೊಡಗಿದರೆ ಪ್ರೇಕ್ಷಕರು ಆಸಕ್ತಿಯಿಂದ ಯಾರು ಗೆಲ್ಲುತ್ತಾರೆ ಎಂಬುದನ್ನು ನಿರೀಕ್ಷಿಸುತ್ತಿರುತ್ತಾರೆ.

ಆಗ ಕುಸ್ತಿಯ ವ್ಯವಸ್ಥಾಪಕ ಮಾನಿ ಉಜ್ಜಪ್ಪ ಎಲ್ಲರಿಗಿಂತ ಹೆಚ್ಚು ಕುತೂಹಲದಿಂದ ಯಾರು ಗೆಲ್ಲುತ್ತಾರೆ ಎಂದು ನಿರೀಕ್ಷಿಸುತ್ತಿದ್ದ. ಮಾನಿ ಉಜ್ಜಪ್ಪ ಯಾವಾಗಲೂ ನಂಜಪ್ಪನ ಪಕ್ಷಪಾತಿ. ಆತ ಸದಾ ನಂಜಪ್ಪನ ಗೆಲುವನ್ನು ಮಾತ್ರ ಹಾರೈಸುತ್ತಿದ್ದ. ಅದಕ್ಕೆ ಕಾರಣ ನಂಜಪ್ಪನ ಕುಸ್ತಿ ಇದೆ ಎಂದರೆ ಮಾನಿ ಉಜ್ಜಪ್ಪನ 'ಕಲೆಕ್ಷನ್' ಜಾಸ್ತಿಯಾಗುತ್ತಿತ್ತು ! ಆದರೆ ಇಂದು ಕಲೆಕ್ಷನ್ ಮರೆತು ಅವನು ಭಾವೋದ್ವೇಗದಿಂದ, ಕೋಪೋದ್ರೇಕದಿಂದ ಕೂಡಿದ್ದ. ಅವನ ಕೋಪ, ಭಾವೋದ್ವೇಗ ಶಮನವಾಗಲು ನಂಜಪ್ಪ ತಕ್ಷಣ ಗೆಲ್ಲಬೇಕಾಗಿತ್ತು ! ಕೃಷ್ಣಾಜಿ ನೆಲಕ್ಕೆ ಬೆನ್ನು ಮುಟ್ಟಿಸಬೇಕಾಗಿತ್ತು ! ಮಾನಿ ಉಜ್ಜಪ್ಪ ಈ ಭಾವೋದ್ವೇಗವನ್ನು ಅಡಗಿಸಲಾರದೆ ಅಖಾಡದೊಳಕ್ಕೆ ನುಗ್ಗಿಬಂದು ನಂಜಪ್ಪನನ್ನು ಕುರಿತು – 'ಕತ್ತೆಗೊಡೆದಂತೆ ಹೊಡೆಯಾ ನಂಜ... ಇನ್ನು ಎಷ್ಟು ಹೊತ್ತು' ಎಂದು ಉತ್ತೇಜಿಸಿದ. ಇದರಿಂದ ಸ್ಫೂರ್ತಿಗೊಂಡವನಂತೆ ನಂಜಪ್ಪ ತನಗೆ ಬಹಳಷ್ಟು ಸಿದ್ಧಿಸಿದ್ದ ದೋಬೀಚಾಟ್ ಪಟ್ಟಿನಲ್ಲಿ ಕೃಷ್ಣಾಜಿಯನ್ನು ಎತ್ತಿಹಾಕಲು ನೋಡಿದ. ಪೈಲ್ವಾನ್ ಎಂಬ ಅಹಂಭಾವವನ್ನು ಅಂಗುಷ್ಠದಿಂದ ನೆತ್ತಿಯ ತನಕ ತುಂಬಿಕೊಂಡಿದ್ದ ಕೃಷ್ಣಾಜಿ 'ದೋಬೀಚಾಟ್ ಮೈ ಮಾರ್‍ತು ದೇಖೋ!' ಎಂದು ಅದೇ ದೋಬೀಚಾಟ್‌ನಲ್ಲಿ ನಂಜಪ್ಪನನ್ನು ಎತ್ತಿ ಬಿಸಾಕಿದ. ಅದಷ್ಟೇ ಅಲ್ಲ, ಸಾವರಿಸಿಕೊಂಡು ಎದ್ದ ನಂಜಪ್ಪನನ್ನು ಮತ್ತೆ ಅದೇ ದೋಬೀಚಾಟ್‌ನಲ್ಲಿ ಮತ್ತೊಮ್ಮೆ ಎತ್ತಿ ಬಿಸಾಡಿ ಸೊಂಟದ ಮೇಲೆ ಕೈಯಿಟ್ಟುಕೊಂಡು ಕೃಷ್ಣಾಜಿ ನಗಬೇಕು... ಅಷ್ಟರಲ್ಲಿ ಮಿಂಚಿನ ಮರಿಯಂತಿದ್ದ ನಂಜಪ್ಪ ಅವನನ್ನು 'ನಿಕಾಲ್'ನಲ್ಲಿ ಚಿತ್ತು ಮಾಡಿದ ! ಕೃಷ್ಣಾಜಿ ಮರು ಮಾತಿಲ್ಲದೆ ತಕರಾರು ತೆಗೆಯದೆ ತನ್ನ ಸೋಲು ಒಪ್ಪಿಕೊಂಡ.

ಬೆಳಗಾಮಿನ ಕೃಷ್ಣಾಜಿ ನಂಜಪ್ಪನ ಜೊತೆ ಅಖಾಡದಲ್ಲಿ ಕುಸ್ತಿಗೆಂದು ಇಳಿದಾಗ ಪೈಲ್ವಾನ್ ಎಂಬ ಅಹಂಕಾರದಿಂದ ಬೀಗಿದರೂ, ಆತ ತನ್ನ ಸೋಲನ್ನು ಒಪ್ಪಿಕೊಂಡ ರೀತಿ,

ಒಬ್ಬ ಶ್ರೇಷ್ಠ ಪೈಲ್ವಾನನಿಗೆ ಒಪ್ಪುವಂಥದ್ದು. ಆಗಿನ ಕಾಲದ ಪೈಲ್ವಾನರು ತಮ್ಮ ಸೋಲು ಗೆಲವುಗಳನ್ನು ತಮ್ಮದೇ ಆದ ರೀತಿಯಲ್ಲಿ ಅಳೆಯುತ್ತಿದ್ದರು. ಇದು ತಮ್ಮ ಶಕ್ತಿಗೆ ಒಡ್ಡಿದ ಪಣ, ನಮ್ಮ ಗರುಡಿಯ ಕೀರ್ತಿಗೆ ಒಡ್ಡಿದ ಸವಾಲು ಎಂದಾಗ ಆ ಸೋಲು-ಗೆಲುವನ್ನು ಸ್ವೀಕರಿಸುತ್ತಿದ್ದ ಪರಿಯೇ ಬೇರೆ. ಆದರೆ ಪೈಲ್ವಾನ್ ಒಬ್ಬನು ಕುಸ್ತಿ ಕಲೆಯಲ್ಲಿ ಪ್ರಬುದ್ಧತೆಯನ್ನು ಪಡೆದಂತೆಲ್ಲಾ ಇನ್ನೊಬ್ಬನ ಗೆಲುವಿನ ಬಗ್ಗೆ ಅಪಾರ ಮೆಚ್ಚುಗೆ ಸೂಸುತ್ತಿದ್ದನು. ಏಕೆಂದರೆ ತನ್ನಂತೆಯೇ ಪೈಲ್ವಾನ್ ಆಗಿರುವ ಈತನಲ್ಲಿ ನಾನು ಕಲಿಯದ ಬೇರೆ ವಿದ್ಯೆಗಳು ಯಾವುವು ಎಂಬುದನ್ನು ಅರಿತು ವಿಸ್ಮಯ, ಸಂತಸ ಪಡುವುದು ಇಂಥ ಪ್ರಬುದ್ಧತೆ ಸಾಧಿಸಿದ ಪೈಲ್ವಾನರ ಲಕ್ಷಣ. ಇದೊಂದು ರೀತಿಯ 'ಸ್ಪೋರ್ಟಿವ್ ಸ್ಪಿರಿಟ್' ಎನ್ನಬಹುದು. ಕೃಷ್ಣಾಜಿ ಪೈಲ್ವಾನ್ ವ್ಯಕ್ತಪಡಿಸಿದ ಮೆಚ್ಚುಗೆ ಮತ್ತು ಸಂತೋಷ ಈ ಬಗೆಯದು.

ಈ ಕೃಷ್ಣಾಜಿ ಮತ್ತು ನಂಜಪ್ಪನ ಕುಸ್ತಿಯ ಕತೆಯ ಹಿಂದೆ ಮರೆಯಬಾರದ ಇನ್ನೊಂದು ಮುಖ್ಯ ಸಂಗತಿ ಅಡಗಿದೆ. ಅದನ್ನು ನಾವು ತಿಳಿಯಲೇಬೇಕು ! ದಾವಣಗೆರೆಯಲ್ಲಿ ಈಗ್ಗೆ ಐದಾರು ದಶಕಗಳ ಹಿಂದೆ ಕುಸ್ತಿಕಲೆ ಮನೆಮಾತಾಗುವಷ್ಟು ಜನಪ್ರಿಯಗೊಳಿಸಿದವರಲ್ಲಿ ನೆನೆಯಬೇಕಾದ ಒಂದು ಹೆಸರು ಎಂದರೆ ಮಾನಿ ಉಜ್ಜಪ್ಪ.

ಮಾನಿ ಉಜ್ಜಪ್ಪ ದಾವಣಗೆರೆಯ ಕುಸ್ತಿ ಕಂಟ್ರ್ಯಾಕ್ಟರ್. ಅಗಾಧ ಕುಸ್ತಿಪ್ರೇಮಿ. ಒಮ್ಮೆ ಈತ ಜಗದ್ವಿಖ್ಯಾತ ಗಾಮಾ ಪೈಲ್ವಾನ್ ಮತ್ತು ಅವನ ಮಗನನ್ನು ದಾವಣಗೆರೆಗೆ ಕರೆಸಿದ್ದ. ಚಿತ್ರದುರ್ಗ-ದಾವಣಗೆರೆ ಸುತ್ತಿನಲ್ಲಿ ಜಬರ್‌ದಸ್ತ್ ಮಾಡುವವರನ್ನು 'ನೀನು ಗಾಮ ಪೈಲ್ವಾನನೇನೋ? ಬಾರೋ ಒಂದು ಕೈ ನೋಡೋಣ' ಎಂಬ ನುಡಿಗಟ್ಟೇ ರೂಪಿತವಾಗಿದೆ. ಅಂಥ ಪೈಲ್ವಾನರ ಮೇಲೆ ಜೊತೆಹಾಕಿಕೊಂಡು ಕುಸ್ತಿಯಾಡಲು ಯಾರು ಮುಂದೆ ಬರುತ್ತಾರೆ? ಯಾರಿಗಿರುತ್ತದೆ ಧೈರ್ಯ? ಆದರೆ ಮಾನಿ ಉಜ್ಜಪ್ಪನ ಕುಸ್ತಿಪ್ರೇಮ ಎಷ್ಟಿತ್ತೆಂದರೆ, ಪೈಲ್ವಾನರ ಮೇಲೆ ಅಭಿಮಾನ ಎಷ್ಟಿತ್ತೆಂದರೆ ಗಾಮಾ ಮತ್ತು ಅವನ ಮಗನನ್ನು ಕಾಚಾ ಕಟ್ಟಿಸಿ, ಅಖಾಡದಲ್ಲಿ ಓಡಾಡಿಸಿ, ನೋಡಿ ಸಂತೋಷಪಟ್ಟು, ಕೊಡಬೇಕಾದ ಸಂಭಾವನೆ ಕೊಟ್ಟು ಕಳುಹಿಸಿದನಂತೆ! ಕುಸ್ತಿಲೋಕದಲ್ಲಿ ಮಾನಿ ಉಜ್ಜಪ್ಪನಂಥವರ ಸಂತತಿ ಚಿರಾಯುವಾಗಲಿ ಎಂದು ಸಂತಸದಿಂದ ಹರಸಿ ಹಾರೈಸಿ ಬಿಡುವಂತಾಗುತ್ತದೆಯಲ್ಲವೆ !!

ಮಾನಿ ಉಜ್ಜಪ್ಪನ ಕುಸ್ತಿಪ್ರೇಮ ಪ್ರಶ್ನಾತೀತವಾದರೂ, ಗಾಮಾ ಪೈಲ್ವಾನ್ ಜೊತೆ ಯಲ್ಲಿ ನೇರವಾಗಿ ವರ್ತಿಸಿದಂತೆ, ಸಂಭಾವನೆಯ ದೃಷ್ಟಿಯಿಂದ ಇತರೆ ಪೈಲ್ವಾನರ ಜೊತೆ ಹಾಗೆ ವರ್ತಿಸುತ್ತಿರಲಿಲ್ಲ. ಕೊಂಚ ಮಿಜಿಗಾಟ ಜಾಸ್ತಿ. ಅಂದರೆ ಕುಸ್ತಿ ಮುಗಿದ ಬಳಿಕ ಸಂಭಾವನೆಗೆಂದು ಕರಾರು ಮಾಡಿಕೊಂಡಷ್ಟು ಹಣವನ್ನು ಪೈಲ್ವಾನರಿಗೆ ಕೊಡುತ್ತಿರಲಿಲ್ಲ. ಕಡಿಮೆ ತಗೊಳ್ರಿ ಎಂದು ಚೌಕಾಸಿ ಮಾಡುತ್ತಿದ್ದ. ಉಜ್ಜಪ್ಪನ ಗುಣ ಗೊತ್ತಿದ್ದರಿಂದ ಬೇರೆ ಪೈಲ್ವಾನರು ಅಷ್ಟಾಗಿ ತಕರಾರು ತೆಗೆಯದೆ ಸುಧಾರಿಸಿಕೊಳ್ಳುತ್ತಿದ್ದರು. ಈ ಸಾರಿ ಕೃಷ್ಣಾಜಿ ಸುಧಾರಿಸಿಕೊಳ್ಳಲಿಲ್ಲ. ಕೊಡೋ ಹಣ ಮುಂದಿಟ್ಟರೆ ಮಾತ್ರ ಕುಸ್ತಿ ಆಡ್ತೀನಿ ಅಂದ. ಬೇರೆ ದಾರಿ ಕಾಣದೆ ಮಾನಿ ಉಜ್ಜಪ್ಪ ಕೃಷ್ಣಾಜಿಗೆ ಹಣ ಮುಂದಿಟ್ಟೇ ಒಪ್ಪಿಸಬೇಕಾಯಿತು.

ಆಮೇಲೇನಾಯಿತು ಎಂದರೆ ಮಾನಿ ಉಜ್ಜಪ್ಪ ತನ್ನ ಈ ಸಣ್ಣ ಅಪಮಾನವನ್ನು ಹೇಗಾದರೂ ನಿವಾರಿಸಿಕೊಳ್ಳಲು ಬಯಸಿ, ನಂಜಪ್ಪನ ಮೊರೆ ಹೊಕ್ಕ ! ಆಗ ದುರ್ಗ – ದಾವಣಗೆರೆಯ ಪೈಲ್ವಾನರೆಲ್ಲಾ ಒಂದೆ. ಆತ ನಂಜಪ್ಪನನ್ನು ಕಂಡು – 'ನೋಡು ನಂಜಪ್ಪ... ಅವನು ಹೆಂಗೆ ಹಟ ಮಾಡಿದ... ನೀನು ಅವನನ್ನು ಒಂದೇ ಏಟಿಗೆ ಚಿತ್ತು ಮಾಡಿ ನನಗೆ ಖುಷಿಪಡಿಸಬೇಕು...' ಅಂದ. ನಂಜಪ್ಪ ಅಂತೂ ಕೃಷ್ಣಾಜಿಯನ್ನು ಚಿತ್ತುಮಾಡಿ ಉಜ್ಜಪ್ಪನ ಚಿತ್ತಕ್ಕೆ ಮುದ ನೀಡಿದ.

ಆಗಿನ ಕಾಲದಲ್ಲಿ ನಂಜಪ್ಪನ ಕುಸ್ತಿಗಳನ್ನು ನೋಡಿದ ಪೈಲ್ವಾನರನ್ನು ಬಿಟ್ಟು ಕುಸ್ತಿಪ್ರೇಮಿಗಳನ್ನು ಕೇಳಿ ನೋಡಬೇಕು. ನಂಜಪ್ಪನ ಕುಸ್ತಿಗಳನ್ನು ಮೈಯುಬ್ಬಿಸಿ ಬಣ್ಣಿಸುತ್ತಾರೆ. ನಂಜಪ್ಪ ನಾಲ್ಕಾರು ಕುಸ್ತಿಗಳನ್ನು ಆಡಿದರೆ ಎದುರಾಳಿಗಳ ಹೆಸರುಗಳು ಎಲ್ಲರಿಗೂ ನೆನಪಿರುತ್ತಿದ್ದವು. ಹಲವಾರು ಊರುಗಳಲ್ಲಿ ನೂರಾರು ಕುಸ್ತಿಗಳನ್ನು ಆಡಿ ಗೆದ್ದಿರುವ ನಂಜಪ್ಪನವರ ಕುಸ್ತಿಗಳನ್ನು ಜನ ಚಪ್ಪರಿಸುತ್ತಾರೆ. ಆದರೆ ಅನೇಕರಿಗೆ ನಲವತ್ತು, ಐವತ್ತು ವರ್ಷಗಳ ಹಿಂದೆ ನಡೆದ ಈ ಕುಸ್ತಿಗಳಲ್ಲಿ ಅವರ ಎದುರಾಳಿಗಳ ಹೆಸರುಗಳು ಅನೇಕರಿಗೆ ಮರೆತುಹೋಗಿವೆ. ಆದರೆ ನಾವು ಕುಸ್ತಿ ನೋಡಿದ ಒಬ್ಬೊಬ್ಬರಿಗೆ ಕೇಳಿದರೆ ಒಬ್ಬೊಬ್ಬರು ನಂಜಪ್ಪ ಗೆದ್ದ ಹತ್ತು ಕುಸ್ತಿಗಳನ್ನು ಕುರಿತು ಹೇಳುತ್ತಾರೆ. ದಾವಣಗೆರೆಯಲ್ಲಿ ನಂಜಪ್ಪ ಲಿಂಗದಳ್ಳಿ ಚೆನ್ನಬಸಪ್ಪ ಅನ್ನೋ ಪೈಲ್ವಾನ್ ಮೇಲೆ ಕುಸ್ತಿ ಆಡಿದರು. ಆತನನ್ನು 'ಮುಲ್ತಾನಿ' ಪಟ್ಟುಗಳಲ್ಲಿ ಹೊಡೆದರು. ಮೈಸೂರಿನಲ್ಲಿ ದೋಬೀರಾಮ ಎನ್ನುವವನ ಮೇಲೆ ಕುಸ್ತಿ ಆಡಿದಾಗ ಆತನನ್ನು ನಂಜಪ್ಪ 'ಸಖೀ' ಪಟ್ಟಿನಲ್ಲಿ ಸೋಲಿಸಿದರು. ನಂಜಪ್ಪನ ಕುಸ್ತಿಯನ್ನು ನೋಡಿ ಬಂದ ಪ್ರೇಕ್ಷಕರು ಅದನ್ನು ಇನ್ನೊಬ್ಬರಿಗೆ ಬಂದು ಬಣ್ಣಿಸಿದರೆ, ಕೇಳಿದ ವ್ಯಕ್ತಿ ಅದನ್ನು ಮರೆಯುತ್ತಿರಲಿಲ್ಲ. ಬೆಂಗಳೂರಿನಲ್ಲಿ ನಂಜಪ್ಪ ಒಮ್ಮೆ ಪ್ರಖ್ಯಾತ ಪೈಲ್ವಾನನ ಜೊತೆ ಕುಸ್ತಿ ಆಡಿದರು. ಆತ ನಂಜಪ್ಪನ ಬಲಗಾಲು ಹಿಡಿದುಕೊಂಡ. ಆಗ ನಂಜಪ್ಪ ಆತನನ್ನು ಕತ್ತರಿಪಟ್ಟಲ್ಲಿ ಸೋಲಿಸಿದರು. ನಂಜಪ್ಪನ ಕುಸ್ತಿಯನ್ನು ಬಣ್ಣಿಸುವವರು ಗರುಡಿಯ ಪೈಲ್ವಾನರು ಮಾತ್ರವಲ್ಲ, ತೀರ ಸಾಮಾನ್ಯ ಕುಸ್ತಿಪ್ರೇಮಿಗಳೂ ಕೂಡ. ಆದರೆ ಈ ಕುಸ್ತಿ ಪ್ರೇಮಿಗಳು ನಂಜಪ್ಪ ಗೆದ್ದ ಕುಸ್ತಿಗಳ ಪಟ್ಟುಗಳನ್ನೆಲ್ಲಾ ಸ್ವಲ್ಪವೂ ತಪ್ಪಿಲ್ಲದೆ ಹೇಳುವುದನ್ನು ನೋಡಿದರೆ ಅವರ ಅಭಿರುಚಿ ಪೂರ್ವಸಿದ್ಧತೆಯಿಂದ ಕೂಡಿ ಪ್ರಬುದ್ಧವಾಗಿದ್ದಿತ್ತೆಂದು ನಿಸ್ಸಂಶಯವಾಗಿ ಹೇಳಬಹುದು.

ನಂಜಪ್ಪನ ಕುಸ್ತಿಗಳು ಬಹಳಷ್ಟು ನಡೆದದ್ದು ದಾವಣಗೆರೆಯಲ್ಲಿ. ದಾವಣಗೆರೆಯ ಪ್ರೇಕ್ಷಕರಿಗಂತು ನಂಜಪ್ಪ ಕುಸ್ತಿಯ 'ರಸದೌತಣ'ವನ್ನು ಮಾಡಿಸುತ್ತಿದ್ದರೆಂದೇ ಹೇಳಬೇಕು. ಅವರ ಕುಸ್ತಿಗಳನ್ನು ಜನ ಕಣ್ಣು ಮಿಟುಕಿಸದೆ, ತದೇಕಚಿತ್ತದಿಂದ ನೋಡುತ್ತಿದ್ದರು. ಏಕೆಂದರೆ ನಂಜಪ್ಪನ ಕುಸ್ತಿಗಳು ಅಖಾಡದಲ್ಲಿ ಬಹಳ ಹೊತ್ತು ನಡೆಯುತ್ತಿರಲಿಲ್ಲ. ಅವರಿಗೆ ಎದುರಾಳಿ ಪೈಲ್ವಾನನನ್ನು ಅಖಾಡದಲ್ಲಿ ಉರುಳಾಡಿಸುತ್ತ, ತಪ್ಪಿಸಿಕೊಳ್ಳುತ್ತ, ಸತಾಯಿಸಿಕೊಂಡು ಕುಸ್ತಿ ಆಡುವುದು ಸುತರಾಂ ಇಷ್ಟವಿರಲಿಲ್ಲ. ಪ್ರೇಕ್ಷಕರು ಹೇಳುವ ಪ್ರಕಾರ 'ನಂಜಪ್ಪನ ಕುಸ್ತಿ ಬೆಂಕಿ

ಕಡ್ಡಿ ಹಚ್ಚಿ ಬೀಡಿ ಹೊತ್ತಿಸುವುದರೊಳಗೆ ಮುಗಿದಿರೋದು'. ನಂಜಪ್ಪ ಗೆಲ್ಲುವ ಈ 'ರಸಗಳಿಗೆ'ಯನ್ನು, ರೋಮಾಂಚನದ ಅನುಭವವನ್ನು ಕಳೆದುಕೊಳ್ಳಲಾಗದೆ ಎಷ್ಟೋ ಜನ ಬೀಡಿ–ಬೆಂಕಿಪೊಟ್ಟಣಕ್ಕೆ ಕೈಹಾಕದೆ ನಿಬ್ಬೆರಗಾಗಿ ಅಖಾಡದ ಕಡೆ ದೃಷ್ಟಿ ನೆಟ್ಟಿರುತ್ತಿದ್ದರು ! ಒಮ್ಮೆ ನಂಜಪ್ಪ ಕುಸ್ತಿ ಆಡುವಾಗ ಎದುರಾಳಿ ಪೈಲ್ವಾನನ ಸೊಂಟ ಹಿಡಿದುಕೊಂಡರು. ಸೊಂಟ ಹಿಡಿದುಕೊಂಡ ಕೂಡಲೇ ದಾವಣಗೆರೆಯ ಪ್ರೇಕ್ಷಕರು ಸಂಭ್ರಮದಿಂದ ಅರಚ ತೊಡಗಿದರು ! ಯಾಕೆಂದರೆ ಪೈಲ್ವಾನ್ ನಂಜಪ್ಪ ಎದುರಾಳಿಯ ಸೊಂಟ ಹಿಡಿದರೆಂದರೆ ಜಯ ನೂರಕ್ಕೆ ನೂರರಷ್ಟು ನಂಜಪ್ಪನದೇ ಆಗಿರುತ್ತಿತ್ತು ! ಅಂಥ ಭಾವೋದ್ರೇಕ, ಸಂಭ್ರಮ, ಸಂತೋಷವನ್ನು ಈ ಮಹಾನ್ ಕುಸ್ತಿಪಟು ಕುಸ್ತಿಪ್ರೇಮಿಗಳ ಎದೆಯಲ್ಲಿ ಉಕ್ಕಿಸುತ್ತಿದ್ದ. ನಂಜಪ್ಪನವರ ಅಣ್ಣ ಗಂಗಾಧರಪ್ಪನವರ ಮಗ ವಿಶ್ವನಾಥ್ ನಂಜಪ್ಪರ ಹಲವು ಕುಸ್ತಿ ನೋಡಿದ್ದಾರೆ. "ನಮ್ಮ ಚಿಕ್ಕಪ್ಪಗೆ ಎದುರಾಳಿಯ ಹೆಬ್ಬೆರಳು ಸರಿಯಾಗಿ ಹಿಡಿತಕ್ಕೆ ಸಿಕ್ಕರೆ ಸಾಕು... ಆತ ಆ ಕ್ಷಣದಲ್ಲಿ ನಮ್ಮ ಚಿಕ್ಕಪ್ಪ ಗೆದ್ದ ಅಂತಲೇ ಅರ್ಥ" ಎನ್ನುತ್ತಾರೆ. ಈ ಯಾವ ಮಾತುಗಳೂ ಉಡಾಫೆಯವ್ರೂ ಅಲ್ಲ, ಉತ್ಪ್ರೇಕ್ಷೆಯವ್ರೂ ಅಲ್ಲ ಎನ್ನುವುದು ಅವರು ಗೆದ್ದ ಸಾಲು ಸಾಲು ಕುಸ್ತಿಗಳು ಸಾರಿ ಹೇಳುತ್ತವೆ.

ಪೈಲ್ವಾನ್ ನಂಜಪ್ಪ ತಮ್ಮ ಕುಸ್ತಿ ಪಂದ್ಯಗಳಲ್ಲಿ ಬಹುವಾಗಿ ಬಳಸುತ್ತಿದ್ದುದು 'ದೋಬಿಚಾಟ್' ಪಟ್ಟು. ಆದ್ದರಿಂದ ನಂಜಪ್ಪನಿಗೂ ಮತ್ತು ದೋಬಿಚಾಟಿಗೂ ಒಂದು ಅವಿನಾಸಂಬಂಧ ಬೆಳೆದುಬಿಟ್ಟಿತ್ತು. ಅವರ ಹೆಸರು ಹೇಳಿದರೆ ಜನ ಈಗಲೂ ಜ್ಞಾಪಿಸಿ ಕೊಳ್ಳುವುದು ದೋಬಿಚಾಟ್ ಪಟ್ಟನ್ನು. ಪೈಲ್ವಾನ್ ನಂಜಪ್ಪ ಗಳಿಸಿದ ಈ ದೋಬಿಚಾಟ್ ಖ್ಯಾತಿ, ಅವರು ಸಾಧನೆ ಮಾಡಿದ ದೊಡ್ಡಗರುಡಿಗೂ ಅಂಟಿಕೊಂಡಿತು. ಪೈಲ್ವಾನ್ ನಂಜಪ್ಪನ ಸಮಕಾಲೀನರು, ಅವರ ಶಿಷ್ಯರು, ಇತರೆ ಪೈಲ್ವಾನರು ಈ ಪಟ್ಟು ಬಳಸಿ ಜನಪ್ರಿಯ ಗೊಳಿಸುವುದರ ಮೂಲಕ ದೊಡ್ಡಗರುಡಿಗೆ ಕೀರ್ತಿ ತಂದರು.

ಆದರೆ ನಂಜಪ್ಪನಂಥ ಪೈಲ್ವಾನರನ್ನು ಈ ದೋಬಿಚಾಟ್ ಪಟ್ಟಿನ ಕೀರ್ತಿಯೊಂದಿಗೆ ಕಟ್ಟಿಹಾಕಿ ನೋಡುವುದು ಅಷ್ಟು ಉಚಿತವಲ್ಲವೆಂದು ನನ್ನ ಭಾವನೆ. ಯಾಕೆಂದರೆ ಪೈಲ್ವಾನ್ ನಂಜಪ್ಪ ಕುಸ್ತಿಲೋಕದ ಸವ್ಯಸಾಚಿ. ಅವರು ಗೆದ್ದಿರುವ ಅಸಂಖ್ಯಾತ ಕುಸ್ತಿಗಳಲ್ಲಿ ಅಗಣಿತ ಪಟ್ಟುಗಳನ್ನು ಬಳಸಿ, ಕುಸ್ತಿಪಟುವಿಗೆ ಇರುವ ಎಲ್ಲ ಅರ್ಹತೆಗಳನ್ನು ಪ್ರದರ್ಶಿಸಿದ್ದಾರೆ. ಆದ್ದರಿಂದಲೇ ನಂಜಪ್ಪ ಅದ್ಭುತ ಗ್ರಹವಲ್ಲ; ಕುಸ್ತಿಯ ಆಕಾಶದಲ್ಲಿ ಮಿನುಗುವ ಧೃವತಾರೆ. ❑

೮ ಕೆಲವು ನಗಣ್ಯ ಸೋಲುಗಳು

ಪೈಲ್ವಾನ್ ನಂಜಪ್ಪ ಕುಸ್ತಿ ಜಗತ್ತಿನಲ್ಲಿ ವಿಶಿಷ್ಟ ಛಾಪು ಮೂಡಿಸಿದ ಕುಸ್ತಿಪಟು ವಾದುದರಿಂದ ಬಹಳ ಜನ ಆತನ ಕುಸ್ತಿ ಪ್ರೇಕ್ಷಕರು ಆತನನ್ನು 'ಅಜೇಯ' ಎಂಬಂತೆ ಮೈಯುಬ್ಬಿಸಿ ಬಣ್ಣಿಸುತ್ತಾರೆ. ಅವರ ಅಮಿತೋತ್ಸಾಹದ ಇಂಥ ಹೇಳಿಕೆಗೆ ಕಾರಣವೂ ಇದೆ. ನಂಜಪ್ಪ ಬಿದ್ದ ಕುಸ್ತಿಗಳಿಗಿಂತ ಗೆದ್ದ ಕುಸ್ತಿಗಳು ಲೆಕ್ಕವಿಲ್ಲದಷ್ಟು. ಎರಡನೆಯದಾಗಿ ಆತ ಅಖಾಡದಲ್ಲಿ ಮಿಂಚಿನಷ್ಟು ವೇಗದಲ್ಲಿ ಗಳಿಸುತ್ತಿದ್ದ ವಿಜಯ. ಇವುಗಳಿಂದ ಸಂಭ್ರಮಿಸಿದ, ಸಂತೋಷಿಸಿದ ಪ್ರೇಕ್ಷಕರು ನಂಜಪ್ಪನನ್ನು ಸೋಲಿನ ಸ್ಥಾನದಲ್ಲಿ ನಿಲ್ಲಿಸಿ ನೋಡಲು ಕಿಂಚಿತ್ತಾದರೂ ಇಷ್ಟಪಡುವುದಿಲ್ಲ. ಅವರ ಕುಸ್ತಿಗಳಲ್ಲಿ ಸೋಲುಗಳು ನಗಣ್ಯವಾದರೂ ಅವನ್ನು ಗುರುತಿಸುವುದು ಉತ್ತಮವೆಂದು ಕಾಣುತ್ತದೆ.

ಅವರು ಸೋಲು ಅನುಭವಿಸಿದ ಕುಸ್ತಿಗಳಲ್ಲಿ ಹೊಸಪೇಟೆಯಲ್ಲಿ ಆಡಿದ ಹೊಸಪೇಟೆಯ ಭೀಮ ಎಂಬುವವನ ಜೊತೆಯಲ್ಲಿ ಆಡಿದ್ದು. ಈ ಹೊಸಪೇಟೆಯ ಭೀಮ ತನ್ನ ಬಣ್ಣದ ದೆಸೆಯಿಂದ ಕರಿಭೀಮ ಎಂದೇ ಹೆಸರಾಗಿದ್ದ. ಅಂದಿನ ಸುಪ್ರಸಿದ್ಧ ಪೈಲ್ವಾನರ ಬಗ್ಗೆ ಒಂದು ಜನಪ್ರಿಯ ಕಥೆ ಹರಿಯಬಿಟ್ಟಿರುತ್ತಾರೆ. ಅದೆಂದರೆ ಆ ಪ್ರದೇಶದ ತಾಯಂದಿರು ತಮ್ಮ ಎದೆಹಾಲನ್ನು ಇವನಿಗೆ ಉಣ್ಣಿಸಿ ಬೆಳೆಸಿದರು ಎಂದು. ಕರಿಭೀಮನ ಜೊತೆಗೂ ಇಂಥ ಕಥೆಯೊಂದು ಸೇರಿಕೊಂಡಿದೆ. ಕರಿಭೀಮ ಬಹಳ ಶಕ್ತಿವಂತ ಪೈಲ್ವಾನ್ ಎಂಬುದರಲ್ಲಿ ಎರಡು ಮಾತಿಲ್ಲ. ಏಕೆಂದರೆ ಅಖಾಡದಲ್ಲಿ ಅವನು ಕಾಲೂರಿ ನಿಂತಿದ್ದರೆ ಅದನ್ನು ಅಲುಗಾಡಿಸಲು ಎದುರಾಳಿಯ ಪೈಲ್ವಾನನ ಕೈಲಿ ಸಾಧ್ಯವಿರಲಿಲ್ಲ ಎಂಬುದು ಪ್ರತ್ಯಕ್ಷ ದರ್ಶಿಗಳ ಹೇಳಿಕೆ. 'ಎನ್ನ ಕಾಲೇ ಕಂಭ' ಎಂಬುದು ಕರಿಭೀಮನಂಥವರು ನಿರ್ಭಯವಾಗಿ ಹೇಳಿಕೊಳ್ಳುವ ಹಾಡಾಗಿರಬೇಕು ! ನಂಜಪ್ಪ ಇಂಥ ಕಾಲುಳ್ಳ ಪೈಲ್ವಾನನಿಗೆ ಹೆದರಿ ಕೊಳ್ಳುವ ಪೈಕಿಯಲ್ಲವಾದರೂ, ಅಕಸ್ಮಾತ್ ಸೋಲಬೇಕಾಯಿತು. ಸೋತಿದ್ದನ್ನು ಅವರು ಒಪ್ಪಿಕೊಂಡುಬಿಟ್ಟರು. ಆದರೆ ನಂಜಪ್ಪನಂಥವರು ಸೋತಿದ್ದು ಹೇಗೆ ಎಂಬುದು ಒಗಟಿನಂತೆಯೇ ಉಳಿದುಬಿಟ್ಟಿತ್ತು. ಒಮ್ಮೆ ಅವರ ಶಿಷ್ಯರಲ್ಲಿ ಒಬ್ಬರಾದ ಪೈಲ್ವಾನ್ ವಸಂತರಾವ್ ಈ ಬಗ್ಗೆ ಕೇಳಿ ತಿಳಿಯಬೇಕೆಂದು ಆಶಿಸಿದರು. ಆಗ ನಂಜಪ್ಪರು ಕೊಟ್ಟ ವಿವರಣೆ ಹೀಗಿತ್ತು.

ಈ ಕುಸ್ತಿ ನಡೆದಾಗ ಪ್ರೇಕ್ಷಕರಲ್ಲಿ ಬಹಳ ಕುತೂಹಲ ಮೂಡಿಸಿತ್ತು. ಚಾಣಾಕ್ಷರಾದ ನಂಜಪ್ಪ ಎದುರಾಳಿಯನ್ನು ಯಾವ ಪಟ್ಟಿನಲ್ಲಿ ಸಿಕ್ಕಿಸಿಕೊಳ್ಳಬೇಕೆಂದು ಹೊಂಚು ಹಾಕುತ್ತಿದ್ದರು. ಅಷ್ಟರಲ್ಲಿ ಕರಿಭೀಮ ಅಂಥ ಪಟ್ಟಿಗೆ, ಪೇಚಿಗೆ ಸಿಕ್ಕಿಹಾಕಿಕೊಂಡೇಬಿಟ್ಟ. ಸಮಯ ನೋಡಿ ನಂಜಪ್ಪ ಆತನ ಕಾಚಕ್ಕೆ ಕೈ ಹಾಕಿ, ಸೊಂಟವನ್ನು ಹಿಡಿದರು. ಇನ್ನೇನು ನಂಜಪ್ಪರು ಗೆಲವು ಸಾಧಿಸಲು ಒಂದೆರಡು ಕ್ಷಣಗಳು ಮಾತ್ರ ಉಳಿದಿದ್ದವು. ಅಷ್ಟರಲ್ಲಿ ಕುಸ್ತಿ ಆಡಿಸುತ್ತಿದ್ದ ರೆಫರಿ ನಂಜಪ್ಪರಿಗೆ 'ಚೆಡ್ಡಿ ಬಿಡು... ಚೆಡ್ಡಿ ಬಿಡು... ಫೌಲ್ ಅಗುತ್ತದೆ' ಎಂದು ಎಚ್ಚರಿಕೆ ಕೊಡತೊಡಗಿದ.

ಹೀಗೆ ಚೆಡ್ಡಿಯನ್ನು ಎರಡೂ ಕಡೆ ಹಿಡಿದು ತನ್ನ ಚತುರತೆಯಿಂದ ಎದುರಾಳಿಯನ್ನು ಸೋಲಿಸುವುದು ಆಗಿನ ಕಾಲದಲ್ಲಿ ಪಂಜಾಬಿನಲ್ಲಿ ಚಾಲ್ತಿಯಲ್ಲಿತ್ತು. ಬಹುಶಃ ಇಷ್ಟು ಹೊತ್ತಿಗೆ ಈ ಪಟ್ಟನ್ನು ಪೈಲ್ವಾನ್ ನಂಜಪ್ಪ ತಮ್ಮ ಗುರು ಪಂಜಾಬಿನ ಪರಿಪೈಗರ್ ಅವರಿಂದ ಚೆನ್ನಾಗಿ ಕಲಿತಿದ್ದರೆಂದು ಕಾಣುತ್ತದೆ. ನಂಜಪ್ಪನ ಕಣ್ಣಮುಂದೆ ಗೆಲುವು ಹೇಗೆ ಎಟುಕಿಸಿಕೊಳ್ಳಬೇಕೆಂಬ ಚಿತ್ರ ಕಾಣುತ್ತಿದ್ದುದರಿಂದ ಅವರಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಈಗ ಆ ಗೆಲುವನ್ನು ಮರೆತು ರೆಫರಿಯ ಮಾತುಗಳ ಕಡೆಗೆ ಗಮನ ಕೊಟ್ಟರು. ಹಿಡಿದಿದ್ದ ಚೆಡ್ಡಿಯನ್ನು ಬಿಟ್ಟು ಎರಡು ಕ್ಷಣ ನಿಂತರು. ಆ ಸಮಯವನ್ನೇ ಕಾದಿದ್ದು ಅದರ ಸದುಪಯೋಗಪಡಿಸಿಕೊಂಡ ಕರಿಭೀಮ ಸರಕ್ಕನೆ ನಂಜಪ್ಪರ ಎರಡೂ ಕಾಲುಗಳನ್ನು ಎಳೆದುಬಿಟ್ಟ. ಅಗೊ–ಇಗೊ ಎನ್ನುವುದರಲ್ಲಿ ನಂಜಪ್ಪ ಬೆನ್ನು ಮಣ್ಣಾಗಿ ಎದ್ದರು – ಸೋತೆ ಎನ್ನಿಸಿಕೊಂಡು ! ಸದಾ ಜಾಗ್ರತನಾಗಿರಬೇಕು ಎಂಬುದು ಎಲ್ಲಾ ಕ್ಷೇತ್ರಗಳಲ್ಲಡಗಿರುವ ಸತ್ಯವಾಗಿರುವಂತೆ, ಕುಸ್ತಿ ಕ್ಷೇತ್ರದಲ್ಲಿ ವಿಜಯ ಗಳಿಸಬೇಕು ಎಂಬ ಮಹದಂಬಲವಿಟ್ಟು ಕೊಂಡವರು ನೆನಪಿಡಬೇಕಾದ ಸತ್ಯ ಇದು. ಈ ಸತ್ಯದ ಅರಿವು ನಂಜಪ್ಪರಿಗೆ ಈ ಕುಸ್ತಿಯಿಂದ ಉಂಟಾಯಿತೆನ್ನಬೇಕು.

ಅವರು ಕುಸ್ತಿ ಆಡಲು ಶುರುವು ಮಾಡಿದ ಆರಂಭದ ದಿನಗಳಲ್ಲಿ ನಾರಾಯಣ ಸಾ ಎಂಬ ಪೈಲ್ವಾನನಿಗೆ ಸೋತಿದ್ದರಂತೆ. ಇದನ್ನು ನೆನಪಿಸಿಕೊಂಡು ಹೇಳಿದವರು ಮೊಹಮ್ಮದ್ ಖಾದರ್ – ನಂಜಪ್ಪನ ಸಮಕಾಲೀನ ಪೈಲ್ವಾನ. ಇದನ್ನು ಬಿಟ್ಟರೆ ಅವರು ಕುಸ್ತಿಯ ಪುಟ್ಟ ಎಂಬುವವನ ಮೇಲೆ ಕುಸ್ತಿಯಲ್ಲಿ ಸೋತರಂತೆ. ಕುಸ್ತಿ ಪುಟ್ಟ ಜಟ್ಟಿ ಜನಾಂಗದವನು. ಆತ ಕುಸ್ತಿಯಲ್ಲಿ ಚೆನ್ನಾಗಿ ಪಳಗಿದವನು. ಆತ ನಂಜಪ್ಪನನ್ನು ಸೋಲಿಸಿದನಂತೆ.

ಇಂಥ ಬೆರಳೆಣಿಕೆಯ ಕುಸ್ತಿಗಳಲ್ಲಿ ನಂಜಪ್ಪ ಸೋತಿರುವುದು ನಿಜ. ಆದ್ದರಿಂದಲೇ ಅನೇಕರಿಗೆ ಅವರು ಯಾವ ಕುಸ್ತಿಯಲ್ಲೂ ಸೋಲಲೇ ಇಲ್ಲ ಎಂಬ ಭಾವನೆ ಬರಲು ಕಾರಣವಾಗಿದೆ.

❑

೬ ನಾವು ಸಮ ನಿನಗೆ ಎಂದವರು

ಪೈಲ್ವಾನ್ ನಂಜಪ್ಪ ಗೆದ್ದ ಕುಸ್ತಿಗಳು ಅಧಿಕವಾಗಿರುವುದರಿಂದ ಆತನ ಪೈಲ್ವಾನ್ ವ್ಯಕ್ತಿತ್ವವನ್ನು ಬಣ್ಣಿಸುವವರೆಲ್ಲಾ ಆತನನ್ನು 'ಅಜೇಯ'ನೆಂದೇ ಬಣ್ಣಿಸುತ್ತಾರೆ. ಆದರೆ ಮನುಷ್ಯನ ಬದುಕಿಗೆ ಕೆಲವು ಇತಿ ಮಿತಿಗಳು ಇದ್ದೇ ಇರುತ್ತವೆ. ಇವುಗಳನ್ನು ಗುರುತಿಸಲಾದರೂ ನಂಜಪ್ಪನವರು ಪೈಲ್ವಾನನಾಗಿ ಸೋತ ಕೆಲವು ಕುಸ್ತಿಗಳನ್ನು, ಸಮ ಮಾಡಿಕೊಂಡ ಕೆಲವು ಕುಸ್ತಿಗಳನ್ನು ಪರಿಚಯ ಮಾಡಿಕೊಳ್ಳಬೇಕಾಗಿದೆ.

ದಾವಣಗೆರೆಯ ಮಾನಿ ಉಜ್ಜಪ್ಪ ಕುಸ್ತಿ ಕಂಟ್ರ್ಯಾಕ್ಟರ್ ಆಗಿ ತನ್ನ ಬದುಕನ್ನೇ ಕರಗಿಸಿದವನು. ಅವನಿಗೆ ನಂಜಪ್ಪನ ಬಗ್ಗೆ ಅಪಾರ ವಿಶ್ವಾಸ, ಕೆಲವು ವಿಚಿತ್ರ ನಂಬಿಕೆಗಳು ಇದ್ದವು. ಆ ನಂಬಿಕೆಗಳಲ್ಲಿ ಆತನಿಗೆ ಲುಕ್ಸಾನು ಕೈಕಚ್ಚಿದಾಗಲೆಲ್ಲ ನಂಜಪ್ಪನನ್ನು ಕರೆಸಿ ಕುಸ್ತಿ ಆಡಿಸಿದರೆ ಆತನ ದೆಸೆ ತಿರುಗುತ್ತಿತ್ತು.

ಮಾನಿ ಉಜ್ಜಪ್ಪ ಈ ಕಾರಣದಿಂದ ಒಮ್ಮೆ ದುರ್ಗದ ದೊಡ್ಡಗರಡಿಗೆ ಬಂದವನು ಪೈಲ್ವಾನ್ ನಂಜಪ್ಪನನ್ನು ಮೂರು ಕುಸ್ತಿಗಳಿಗೆ ಒಪ್ಪಿಸಿದ. ತಿಂಗಳಿಗೊಂದರಂತೆ ಮೂರು ಕುಸ್ತಿಗಳನ್ನು ನಂಜಪ್ಪ ಆಡಬೇಕಾಗಿತ್ತು. ನಂಜಪ್ಪ ಕುಸ್ತಿ ಆಡಬೇಕಾದ ಪೈಲ್ವಾನರು ಬೆಳಗಾವಿಯ ಅಪ್ಪಾಜಿ, ಇನ್ನೊಬ್ಬ ಸಾಣೆ ಇಮ್ಯಾ ಮತ್ತು ಹೊಸಪೇಟೆಯ ಕರಿಭೀಮ. ಈ ಮೂರು ಜೊತೆ ಕುಸ್ತಿಗಳನ್ನು ಫಿಕ್ಸ್ ಮಾಡಿ ನಂಜಪ್ಪನಿಗೆ ಒಂದು ಸಾವಿರ ರೂಪಾಯಿ ಅಡ್ವಾನ್ಸ್ ಕೂಡ ಉಜ್ಜಪ್ಪ ಕೊಟ್ಟು ಹೋದ. ಈ ಕುಸ್ತಿಗಳಲ್ಲಿ ಅಪ್ಪಾಜಿಯ ಮೇಲೆ ಮಾತ್ರ ಕುಸ್ತಿ ನಡೆಯಿತು. ಇನ್ನಿಬ್ಬರ ಕುಸ್ತಿಗಳು ಕಾರಣಾಂತರಗಳಿಂದ ನಡೆಯಲಿಲ್ಲ. ಪೈಲ್ವಾನ್ ಅಪ್ಪಾಜಿಯ ಮೇಲೆ ದಾವಣಗೆರೆಯಲ್ಲಿ ಕುಸ್ತಿ ನಡೆದದ್ದು ಸುಮಾರು ೧೯೫೨–೫೩ರಲ್ಲಿರಬೇಕು.

ಬೆಳಗಾವಿಯ ಅಪ್ಪಾಜಿ ಪೈಲ್ವಾನ್ ಕಾಲೇಜಿನಲ್ಲಿ ಡ್ರಿಲ್ ಇನ್‌ಸ್ಟ್ರಕ್ಟರ್. ಆತ ಒಳ್ಳೆಯ ಬಾಡಿ ಬಿಲ್ಡರ್ ಜೊತೆಗೆ ಕುಸ್ತಿಪಟು. ಆತ ನಂಜಪ್ಪನ ಮೇಲೆ ಜೊತೆ ಹಾಕಿಕೊಳ್ಳಬೇಕಾದರೆ ಸಾಮಾನ್ಯ ಪೈಲ್ವಾನ್ ಏನೂ ಆಗಿರಲಿಲ್ಲ. ನಂಜಪ್ಪನವರ ಹೊಡೆತ, ಪಟ್ಟುಗಳಿಗೆ ಆತನೇನು ಬಗ್ಗಿರಲಿಲ್ಲ. ಹಂಗೆ ನೋಡಿದರೆ ನಂಜಪ್ಪನಂತಹ ಪೈಲ್ವಾನನನ್ನು ಅಖಾಡದಲ್ಲಿ ಮೆತ್ತಗೆ ಮಾಡುವಂತಹ ಶಕ್ತಿವಂತ, ಯುಕ್ತಿವಂತ ಆಗಿದ್ದ.

ಅಪ್ಪಾಜಿ ಅಖಾಡಕ್ಕೆ ಬರಬೇಕಾದರೆ ಕಾಲೇಜ್ ಸ್ಟೂಡೆಂಟ್ ತರಹ ಪ್ಯಾಂಟು ಶರ್ಟು ಹಾಕಿಕೊಂಡು ಬರುತ್ತಿದ್ದ. "ಆದರೆ ಅಖಾಡದಲ್ಲಿ ಬಟ್ಟೆ ಬಿಚ್ಚಿ ನಿಂತ ಅಂದರೆ, ಆತ ಅಪ್ಪಾಜಿನೂ ಅಲ್ಲ, ಸ್ಟೂಡೆಂಟೂ ಅಲ್ಲ; ಆಂಜನೇಯ... ಆಂಜನೇಯ ಅವನು !" ಎಂದು ನಂಜಪ್ಪನ ಶಿಷ್ಯ ವಸಂತರಾವ್ ಆತನ ವ್ಯಕ್ತಿಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾರೆ. ಪೈಲ್ವಾನನಿಗೆ ಒಪ್ಪುವ ಕಟ್ಟುಮಸ್ತಾದ ಮಾಂಸಖಂಡಗಳು. ನೋಡಬೇಕೆನ್ನಿಸುವ ಆಳು. ಬಟ್ಟೆ ಹಾಕಿದಾಗ ಏನೂ ಅನ್ನಿಸದ ಅಪ್ಪಾಜಿ ಅಖಾಡಕ್ಕಿಳಿದಾಗ ಎದುರಾಳಿಗೆ ಏದುಸಿರು ಬಿಡಿಸಿಬಿಡುತ್ತಿದ್ದ. ಆತ ಈಗಾಗಲೇ ಎರಡು ಸಾರಿ ನಂಜಪ್ಪನ ಮೇಲೆ ಜೊತೆ ಹಾಕಿಕೊಂಡು ಕುಸ್ತಿಯಾಡಿದ್ದ. ಒಂದು ಕುಸ್ತಿ ಶಿವಮೊಗ್ಗದಲ್ಲಿ ಆಡಿದ್ದ. ಕುಸ್ತಿ ಪಟ್ಟುಗಳಲ್ಲಿ ಒಂದು ಪಟ್ಟು 'ಗಲ್ಸೋಡ್' ಎನ್ನುವುದು ಇರುತ್ತದೆ. ಅದು ಕುತ್ತಿಗೆಗೆ ಹಾಕುವ ಪಟ್ಟು. ಅದನ್ನು ಹಾಕಿದರೆ ಎದುರಾಳಿಗೆ ಉಸಿರು ಕಟ್ಟಿಸಿಬಿಡುತ್ತೆ. ಶಿವಮೊಗ್ಗದಲ್ಲಿ ಆಡುವಾಗ ಅಪ್ಪಾಜಿಯು ಈ ಗಲ್ಸೋಡ್ ಪಟ್ಟನ್ನು ನಂಜಪ್ಪನಿಗೆ ಪ್ರಯೋಗಿಸಿ ಅವರನ್ನು ಅಖಾಡದಲ್ಲಿ ಐದು ಹತ್ತು ನಿಮಿಷದ ತನಕ ಸುಸ್ತು ಮಾಡಿಬಿಟ್ಟಿದ್ದ. ಆ ಕುಸ್ತಿ ಡ್ರಾ ಆಗಿತ್ತು. ದಾವಣಗೆರೆಯಲ್ಲಿ ನಡೆದ ಕುಸ್ತಿಯೂ ಡ್ರಾ ಆಯಿತು.

ಗರಡಿಯಲ್ಲಿ ಆಡಿ ಬೆಳೆದ ಹುಟ್ಟು ಪೈಲ್ವಾನ್ ನಂಜಪ್ಪನಂಥವರು ಅಪ್ಪಾಜಿಯನ್ನು ಸೋಲಿಸದೆ ಡ್ರಾ ಮಾಡಿಕೊಂಡರು ಎಂದರೆ ಅಪ್ಪಾಜಿಯ ತಾಕತ್ತು ಎಷ್ಟಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಅದಕ್ಕಿಂತ ಮಿಗಿಲಾಗಿ ವಿದ್ಯಾವಂತರೂ ಕೂಡ ಈ ಕುಸ್ತಿ ಕ್ರೀಡೆಗಳಲ್ಲಿ ಎಷ್ಟು ಸಕ್ರಿಯವಾಗಿ ಶ್ರದ್ಧೆಯಿಂದ ಪಾಲ್ಗೊಳ್ಳುತ್ತಿದ್ದರು ಎಂಬುದು ಗೊತ್ತಾಗುತ್ತದೆ.

ನಂಜಪ್ಪನವರು ಸಮಮಾಡಿಕೊಂಡ ಕುಸ್ತಿಗಳಲ್ಲಿ ಪೈಲ್ವಾನ್ ವಸಂತ್ ಮೇಲೆ ಮಾಡಿದ ಕುಸ್ತಿಯೂ ಕೂಡ ಒಂದು. ಈತನ ಮತ್ತು ನಂಜಪ್ಪನ ಕುಸ್ತಿಯು ಚಿತ್ರದುರ್ಗದಲ್ಲಿ ಜಯದೇವ ಹಾಸ್ಟೆಲಿನ ಹಿಂಭಾಗದಲ್ಲಿ ನಡೆಯಿತು. ಇಲ್ಲಿ ನಡೆಯುತ್ತಿದ್ದ ಕುಸ್ತಿಗಳು ಜಯದೇವ ಜಂಘೀ ಕುಸ್ತಿಗಳೆಂದೇ ಪ್ರಖ್ಯಾತಿಯಾಗಿದ್ದವು. ಇವರಿಬ್ಬರ ಕುಸ್ತಿ ನಡೆಯುವ ದಿವಸ ಸುಪ್ರಸಿದ್ಧ ನಾಟಕಕಾರ ಮಾಸ್ಟರ್ ಹಿರಣ್ಣಯ್ಯನವರು ಚಿತ್ರದುರ್ಗದಲ್ಲಿ ನಾಟಕವಾಡಿದ್ದರು. ಅವರು ಈ ಕುಸ್ತಿಗಳನ್ನು ಉದ್ಘಾಟನೆ ಮಾಡಿ ಇಬ್ಬರು ಪೈಲ್ವಾನರಿಗೂ ಹಾರಗಳನ್ನು ಹಾಕಿ ಹಾರೈಸಿದರು. ಪೈಲ್ವಾನ್ ವಸಂತ್ ಭಾರೀ ಆಳು. ಕುಸ್ತಿ ಕಲೆಯಲ್ಲಿ ಕುಶಲನಾದವನು. ಇವರಿಬ್ಬರ ಕುಸ್ತಿಯು ಮುಕ್ಕಾಲು ಗಂಟೆಯ ತನಕ ನಡೆದು ಪ್ರೇಕ್ಷಕರು ಉಸಿರು ಕಟ್ಟಿ ನೋಡುತ್ತಿದ್ದರು. ಆದರೂ ಕೊನೆಯಲ್ಲಿ ಈ ಕುಸ್ತಿ ಸಮವಾಯಿತು.

ರಾಣೇಬೆನ್ನೂರಿನ ಪೈಲ್ವಾನ್ ಸಹದೇವ್ ಮೇಲೆ ನಂಜಪ್ಪನ ಕುಸ್ತಿ ದಾವಣಗೆರೆಯಲ್ಲಿ ಒಮ್ಮೆ ನಡೆಯಿತು. ಅರ್ಧ ಘಂಟೆಯಾದರೂ ಕುಸ್ತಿ ಮುಗಿಯದಿದ್ದುದರಿಂದ 'ಸಮ' ಎಂದು ರೆಫರಿಗಳು ತೀರ್ಮಾನಿಸಿದರು. ಹೊಸಪೇಟೆಯಲ್ಲಿ ನಂಜಪ್ಪ ಖರ್ಜಗಿ ಬಾಷಾ ಎನ್ನುವವನ ಮೇಲೆ ಕುಸ್ತಿ ಆಡಿದಾಗಲೂ ಅದು ಸಮವಾಯಿತು.

ನಂಜಪ್ಪ ಸಮ ಮಾಡಿಕೊಂಡ ಇನ್ನೊಂದು ಕುಸ್ತಿ, ಅದು ತನ್ನದೇ ಆದ ಕಥೆಯನ್ನು ಹೊಂದಿದೆ. ದಾವಣಗೆರೆಯಲ್ಲಿ ಆಗ ದುರ್ಗಪ್ಪ ಎಂಬ ಹೆಸರಿನ ಹಲವು ಜನ ಪೈಲ್ವಾನರುಗಳಿದ್ದರು. ಅವರಲ್ಲಿ ಪಾರವ್ವರ ದುರ್ಗಪ್ಪ ಎಂಬುವವರ ಮೇಲೆ ಕುಸ್ತಿಯಾಡುವ ಅನಿವಾರ್ಯತೆಯಲ್ಲಿ ನಂಜಪ್ಪ ಸಿಕ್ಕಿಹಾಕಿಕೊಂಡರು. ಅದೊಂದು ಕ್ಷುದ್ರ, ನಗಣ್ಯ ಜೊತೆ. ಅದು ನಂಜಪ್ಪನ ಸರಳತೆ ಮುಗ್ಧತೆಗಳನ್ನು ತೋರಿಸುವ ಸಂಗತಿಯಾಗಿದೆ.

ಅದು ನಡೆದಿದ್ದು ಹೀಗೆ: ಮಹಾ ಉತ್ಸಾಹಶಾಲೀ, ಧೈರ್ಯಶಾಲೀ, ಶಕ್ತಿಶಾಲೀ ಎನ್ನಿಸಿದ್ದ ನಂಜಪ್ಪನವರು ೧೯೪೭-೪೮ರಲ್ಲಿ ಮೈಸೂರ್ ಚಲೋ ಚಳವಳಿಯಲ್ಲಿ ದೊಡ್ಡಗರಡಿಯ ಜನಗಳ ಜೊತೆ ಪಾಲುಗೊಂಡು ಚಿತ್ರದುರ್ಗ ತಾಲ್ಲೂಕಾಫೀಸಿನ ಮೇಲೆ ಧ್ವಜ ಹಾರಿಸಲು ಮಾಡಿದ ಪ್ರಯತ್ನ, ಸಿಕ್ಕಿಹಾಕಿಕೊಂಡ ತೊಡಕುಗಳು ಇತ್ಯಾದಿಗಳನ್ನು ಈಗಾಗಲೇ ವಿವರಿಸಲಾಗಿದೆ. ಗುಡ್ಡ ಬೆಟ್ಟಗಳಲ್ಲಿದ್ದರೂ ತಮಗೆ ಸರ್ಕಾರದಿಂದ ಅಪಾಯ ಕಾದಿದೆ ಎಂಬುದನ್ನು ಅರಿತ ನಂಜಪ್ಪ ತಮಗೆ ಕ್ಷೇಮವಾದ ಜಾಗ ಯಾವುದು ಎಂದು ಹುಡುಕಿ ತಲೆ ತಪ್ಪಿಸಿಕೊಂಡು ದಾವಣಗೆರೆಗೆ ಬಂದರು. ಅಲ್ಲಿಂದ ಮುಂದೆ ರಾಣೆಬೆನ್ನೂರಿಗೆ ಹೋದರು.

ದಾವಣಗೆರೆಯಲ್ಲಿದ್ದಾಗ ನಂಜಪ್ಪನವರಿಗೆ ಸಹಜವಾಗಿ ಅಲ್ಲಿನ ಹಲವು ಪೈಲ್ವಾನರು ಗುಟ್ಟಾಗಿರಲು ಅನುವು ಮಾಡಿಕೊಟ್ಟರು. ಅವರಲ್ಲಿ ಪಾರವ್ವರ ದುರ್ಗಪ್ಪ ಪೈಲ್ವಾನನೂ ಒಬ್ಬ.

ಪಾರವ್ವರ ದುರ್ಗಪ್ಪ ಅಂತಹ ಹೆಸರಾಂತ ಪೈಲ್ವಾನನೇನೂ ಅಲ್ಲ. ಆದರೆ ಕೆಲವರ ಮೇಲೆ ಅದೃಷ್ಟ ಕೃಪೆ ತೋರಿಸಿಬಿಡುತ್ತದೆ. ಅಂತಹ ಅದೃಷ್ಟದ ಬಣ್ಣದ ಬೆಳಕು ಈ ದುರ್ಗಪ್ಪನ ಮೇಲೆ ಬಿತ್ತು. ಆಗಿನ ಕಾಲದಲ್ಲಿ ಹೆಸರಾಂತ ಪೈಲ್ವಾನ್ ಆಗಿದ್ದ ರಾಣೆಬೆನ್ನೂರಿನ ನಂಜಪ್ಪನ ಮೇಲೆ ದುರ್ಗಪ್ಪ ಕುಸ್ತಿ ಆಡಿ ಅಕಸ್ಮಾತ್ ಅವರನ್ನು ಸೋಲಿಸಿದ್ದ. ದುರ್ಗಪ್ಪನ ಕೀರ್ತಿ ದಾವಣಗೆರೆಯಲ್ಲಿ ಒಮ್ಮೆಲೇ ಮನೆಮಾತಾಯಿತು! ಈಗ ಈತನಿಗೆ ಹೆಸರು ಗಳಿಸಬೇಕೆಂಬ, ಕೀರ್ತಿ ಗಳಿಸಬೇಕೆಂಬ ಶನಿ ಬೆನ್ನು ಅಂಟಿತು. ಅದಕ್ಕಾಗಿ ನಂಜಪ್ಪ ಈತನ ಜೊತೆ ಕುಸ್ತಿ ಆಡಬೇಕಾಯಿತು.

ಪಾರವ್ವರ ದುರ್ಗಪ್ಪ ನಂಜಪ್ಪನನ್ನು ತನ್ನ ಜೊತೆ ಕುಸ್ತಿಯಾಡಲು ಪ್ರಚೋದಿಸಿದ. ಅದಷ್ಟೇ ಅಲ್ಲ, ನಂಜಪ್ಪ ದುರ್ಗದಿಂದ ತಲೆತಪ್ಪಿಸಿಕೊಂಡು ಬಂದಾಗ ತಾನು ಆಶ್ರಯ ಕೊಟ್ಟಿದ್ದನ್ನು ಜ್ಞಾಪಿಸಿದ. ರಾಣೆಬೆನ್ನೂರು ನಂಜಪ್ಪನನ್ನು ಗೆದ್ದ ಸಂಗತಿಯನ್ನು ಹೇಳಿದ. ಪೈಲ್ವಾನ್ ಆಗಿ ತಾನೀಗ ಮೇಲಕ್ಕೆ ಬರಬೇಕಿದೆ. ತನ್ನ ಜೊತೆ ನಂಜಪ್ಪ ಕುಸ್ತಿ ಆಡಲೇಬೇಕೆಂದು ಒಪ್ಪಿಸಿದ ಮತ್ತು ಭಾಷೆ ತೆಗೆದುಕೊಂಡ.

ಕೊಟ್ಟ ಭಾಷೆಗೆ ತಪ್ಪಲಾರೆನು ಕೆಟ್ಟ ಯೋಚನೆ ಮಾಡಲಾರೆನು ಎಂಬಂತಹ ಮುಗ್ಧ ಮನಸ್ಸಿನ ನಂಜಪ್ಪ ಈಡು-ಜೋಡು ಅಲ್ಲದ ಇಂತಹ ಕುಸ್ತಿಯನ್ನು ಆಡಲು ಒಪ್ಪಿಕೊಂಡರು.

ಈಗಾಗಲೇ ತಿಳಿಸಿರುವಂತೆ ನಂಜಪ್ಪನ ಕುಸ್ತಿ ಎಂದರೆ ದಾವಣಗೆರೆಗೆ ಇಲ್ಲಿಂದ ಅಸಂಖ್ಯಾತ ಕುಸ್ತಿ ಪ್ರೇಮಿಗಳೂ ಪೈಲ್ವಾನರೂ ನೋಡಲು ಹಿಂಬಾಲಿಸಿಕೊಂಡು ಹೋಗುತ್ತಿದ್ದರು. ಇದು ಒಂದು ರೀತಿಯ ಗಮ್ಮತ್ತಿನ ಕುಸ್ತಿ ಅಲ್ಲವೆಂದು ಗೊತ್ತಿದ್ದ ನಂಜಪ್ಪ ತನ್ನೆಲ್ಲ ಗೆಳೆಯರಿಗು, ಪೈಲ್ವನರಿಗೂ ಕುಸ್ತಿ ನೋಡಲು ಬರಬೇಡಿ ಎಂದು ಹೇಳಿದ. ಆದರೂ ಅನೇಕರು ಆ ಕುಸ್ತಿ ನೋಡಲು ಹೋಗಿದ್ದರು. ನಂಜಪ್ಪನ ಅಣ್ಣ ಚಿನ್ನಪ್ಪನವರೂ ಆ ಕುಸ್ತಿಯನ್ನು ನೋಡಲು ಹೋಗಿದ್ದರು. ಕುಸ್ತಿ ಸರಿಯಾಗಿ ಆಡುತ್ತಿಲ್ಲವೆಂದು ಅಣ್ಣ ಚಿನ್ನಪ್ಪನವರಿಗೆ ಅನ್ನಿಸಿ ಅಖಾಡದಲ್ಲಿ ಹೆಜ್ಜೆಯಿಟ್ಟು ಹೋಗಿ ಅವರ ಮನೆಭಾಷೆಯಾದ ಮರಾಠಿಯಲ್ಲಿ, "ಅವನಿಗೇನು ನೋಡ್ತೀಯ ಕತ್ತೆಗೆ ಒದ್ದಂಗೆ ಒದಿಯೋ" ಎಂದು ಹೇಳಿದರು. ನಂಜಪ್ಪ ಕುಸ್ತಿಯಾಡುತ್ತಲೇ ಮರಾಠಿಯಲ್ಲಿ ಉತ್ತರಿಸುತ್ತ "ಹಂಗೆ ಹೊಡೆಯಲು ಅವನೇನು ಮಂಡಕ್ಕಿ ಚೀಲ ಅಲ್ಲ" ಎಂದರು. ಹಂಗೆ ಹಿಂಗೆ ಸತಾಯಿಸಿಕೊಂಡು ಆಡಿದ್ದರಿಂದ ಕುಸ್ತಿ ಸಮ ಆಯಿತು. ನಂಜಪ್ಪ ಇಂತಹ ಕುಸ್ತಿಯನ್ನು ಜೊತೆ ಮಾಡಿಕೊಂಡಿದ್ದು ಅನೇಕ ಪೈಲ್ವಾನರಿಗೆ ಇಂದಿಗೂ ಸಮಾಧಾನದ ವಿಷಯವಲ್ಲ. ಆದರೂ ಇಂತಹ ಸಂಗತಿಗಳು ಒಮ್ಮೊಮ್ಮೆ ನಡೆದುಬಿಡುತ್ತವೆ.

❑

೧೦ ನಡೆಯದ ಕುಸ್ತಿಗಳು

ಕುಸ್ತಿಪಟುವೊಬ್ಬ ತಾನು ಗಳಿಸಿದ ಶಕ್ತಿ, ಸಾಮರ್ಥ್ಯ, ಕಲಿತ ಕುಸ್ತಿ ವಿದ್ಯೆಯನ್ನು ಮೇಳೈಸಿಕೊಂಡು ಅವಕಾಶಕ್ಕಾಗಿ ಕಾಯ್ದು, ಅದರ ಪ್ರಕಾಶಕ್ಕಾಗಿ ಇನ್ನೊಬ್ಬ ಕುಸ್ತಿಪಟುವನ್ನು ಪಂಧ್ಯಕ್ಕಾಗಿ ಎದುರುನೋಡುತ್ತಾನೆ. ಅಷ್ಟಲ್ಲದೆ ಅವನ ಎದುರಾಳಿಯು ಇವನ ವಿರೋಧಿಯೂ ಅಲ್ಲ; ಶತ್ರುವೂ ಅಲ್ಲ. ಆದರೂ ಗರುಡಿಗಳು ಮತ್ತು ಪೈಲ್ವಾನರು ಉಳಿಸಿಕೊಂಡು ಬೆಳೆಸಿಕೊಂಡು ಬಂದ ಸಂಪ್ರದಾಯ, ನಂಬಿಕೆಗಳಿಗನುಗುಣವಾಗಿ ಕುಸ್ತಿಪಟುಗಳು ಕೆಲವರನ್ನು ತಮ್ಮ ಎದುರಾಳಿಗಳನ್ನಾಗಿ ಮಾಡಿಕೊಳ್ಳುವುದಿಲ್ಲ. ತಮ್ಮ ಗರುಡಿಯ ಕುಸ್ತಿ ಪಟುಗಳ ಮೇಲೆ ಪಂಧ್ಯದ ನೆಪದಲ್ಲಿಯೂ ಎದುರಾಳಿಯನ್ನಾಗಿ ಮಾಡಿಕೊಳ್ಳುವುದಿಲ್ಲ. ಜೊತೆಗೆ ಬೇರೆ ಊರಿನ ಗರುಡಿಯ ಪೈಲ್ವಾನರು ಕೆಲವೊಮ್ಮೆ ಕುಸ್ತಿಯ ಸಲುವಾಗಿ ಇನ್ನೊಂದು ಊರಿಗೆ ಹೋಗಬೇಕಾಗುತ್ತದೆ. ಆಗ ಆ ಊರಿನ ಕೆಲವು ಗರುಡಿಗಳು ಇಂಥ ಕುಸ್ತಿಪಟುಗಳಿಗೆ ತಿಂಗಳುಗಟ್ಟಲೆ ಆಶ್ರಯಕೊಟ್ಟು ನೆರವಾಗುತ್ತವೆ. ಇಂಥ ಕುಸ್ತಿಪಟುಗಳ ಮೇಲೆ ಆಶ್ರಯಕೊಟ್ಟ ಗರುಡಿಯ ಪೈಲ್ವಾನರು ಪಂಧ್ಯ ಮಾಡುವುದಿಲ್ಲ. ಸಗೋತ್ರಗಳಲ್ಲಿ, ಒಂದೇ ಬೆಡಗಿನಲ್ಲಿ ಮದುವೆ ಜೊತೆಯಾಗುವುದಿಲ್ಲವಲ್ಲ ಹಾಗೆ ಕುಸ್ತಿಗಳು ಜೊತೆಯಾಗುವುದಿಲ್ಲ ಎಂದು ಕಾಣುತ್ತದೆ ! ಇನ್ನು ಉಳಿದಂತೆ ಕುಸ್ತಿ ಪಂಧ್ಯಗಳು ನಡೆಯುತ್ತವೆ.

ಪೈಲ್ವಾನ್ ನಂಜಪ್ಪನವರ ಕುಸ್ತಿ ಜಗತ್ತಿನಲ್ಲಿ ಅವರು ನೂರಾರು ಜನರ ಜೊತೆ ಕುಸ್ತಿ ಆಡಿದ್ದಾರೆ. ಅನೇಕ ಊರುಗಳಲ್ಲಿ ಅಸಂಖ್ಯಾತ ಪೈಲ್ವಾನರನ್ನು ಗೆದ್ದಿದ್ದಾರೆ. ಆದರೆ ಅವರ ಸಮಕಾಲೀನರಾಗಿ ಅವರಷ್ಟೆ ಹೆಸರು ಗಳಿಸಿದ್ದ ನಾಡಿನ ಇಬ್ಬರು ಪೈಲ್ವಾನರುಗಳ ಮೇಲೆ ಕೊನೆಯ ತನಕ ಕುಸ್ತಿ ಆಡಿದಂತೆ ಕಾಣುವುದಿಲ್ಲ.

ಅವರಲ್ಲಿ ಒಬ್ಬರು ರಾಣೇಬೆನ್ನೂರು ನಂಜಪ್ಪ. ಇವರು ಚಿತ್ರದುರ್ಗದ ದೊಡ್ಡಗರುಡಿಯ ಜೊತೆ ಯಾವ ರೀತಿ ಸಂಬಂಧ ಇಟ್ಟುಕೊಂಡಿದ್ದರೋ ತಿಳಿಯುವುದಿಲ್ಲ. ದೊಡ್ಡಗರುಡಿಯ ನಂಜಪ್ಪ ಪೈಲ್ವಾನ್ ಅರಮನೆಯ ಚಳುವಳಿಯ ಸಂದರ್ಭದಲ್ಲಿ, ಪೋಲೀಸರ ಕಣ್ಣು ತಪ್ಪಿಸಿ ದುರ್ಗದಿಂದ ದಾವಣಗೆರೆ ಹೋಗಿ, ಅಲ್ಲಿಂದ ರಾಣೇಬೆನ್ನೂರಿಗೆ ಹೋದರು. ಆಗ ರಾಣೇಬೆನ್ನೂರಿನಲ್ಲಿ ಕೆಲವು ಕಾಲ ನಿಂತಾಗ ರಾಣೇಬೆನ್ನೂರಿನ ನಂಜಪ್ಪ ಇವರಿಗೆ ಆಶ್ರಯ ಕೊಟ್ಟಿರಬಹುದೆಂದು ಊಹಿಸಲು ಸಾಧ್ಯತೆಯಿದೆ. ಆ ಕಾರಣದಿಂದ ಇವರಿಬ್ಬರ ಮಧ್ಯೆ

ಕುಸ್ತಿಪಂದ್ಯ ನಡೆಯದಿರುವ ಸಾಧ್ಯತೆಯಿದೆ. ಅದನ್ನು ಬಿಟ್ಟರೆ ಮತ್ತೆ ಕೆಲವು ಪೈಲ್ವಾನರು ತಿಳಿಸುವಂತೆ ದುರ್ಗದ ನಂಜಪ್ಪ ಕುಸ್ತಿ ಪಂದ್ಯಗಳಲ್ಲಿ ಏರುಮುಖವಾಗಿ ಜಯಗಳಿಸುತ್ತಿದ್ದ ಕಾಲ. ರಾಣೆಬೆನ್ನೂರು ನಂಜಪ್ಪ ಹಲವಾರು ಕುಸ್ತಿಗಳಲ್ಲಿ ವಿಜೇತನಾಗಿ ಹೆಸರು ಮಾಡಿದ್ದರೂ, ಬಹುಶಃ ವಯಸ್ಸಿನ ದೃಷ್ಟಿಯಿಂದ ಕುಸ್ತಿಗಳಲ್ಲಿ ಪಾಲುಗೊಳ್ಳುವುದನ್ನು ಕಡಿಮೆ ಮಾಡಿರಬೇಕು. ಹೀಗಾಗಿ ಇಂಥ ಪ್ರಖ್ಯಾತ ಪೈಲ್ವಾನನ ಮೇಲೆ ದುರ್ಗದ ನಂಜಪ್ಪ ಕುಸ್ತಿ ಆಡದಿರುವ ಸಂಭವ ಉಂಟಾಗಿರಬೇಕು.

ನಂಜಪ್ಪ ತಮ್ಮ ಕಾಲದ ಇನ್ನೊಬ್ಬ ಸುಪ್ರಸಿದ್ಧ ಕುಸ್ತಿಪಟು ದಾವಣಗೆರೆಯ ಚಾರ್ಲಿ ಪೈಲ್ವಾನ್ ಜೊತೆಗೂ ಕುಸ್ತಿ ಆಡಲಿಲ್ಲ. ದೊಡ್ಡಗರುಡಿಯ ಪ್ರೋಷಕರಲ್ಲೊಬ್ಬರಾದ ಕಂಟ್ರ್ಯಾಕ್ಟರ್ ತಿಮ್ಮಣ್ಣನವರು ನಂಜಪ್ಪನನ್ನು ಚಾರ್ಲಿಯ ಜೊತೆ ಕುಸ್ತಿ ಆಡು ಎಂದು ಹಲವು ಸಾರಿ ಪ್ರಚೋದಿಸಿದ್ದರು. ಸಿಟ್ಟಾಗಿ ಹುರಿದುಂಬಿಸಿದರು. ನಂಜಪ್ಪ ಸಾಮಾನ್ಯವಾಗಿ ತನಗಿಂತ ಬಲಶಾಲಿಗಳಾದ ಪೈಲ್ವಾನರ ಮೇಲೆಯೇ ಕುಸ್ತಿ ಆಡಿ ವಿಜಯಗಳಿಸಿದವನು. ಅಂಜಿಕೆ ಎಂಬುದು ಆತನ ಹತ್ತಿರ ಸುಳಿಯದ ಶಬ್ದ. ಆದ್ದರಿಂದ ಚಾರ್ಲಿಯಂಥ ಪೈಲ್ವಾನನ ಮೇಲೆ ಕುಸ್ತಿ ಆಡದಿರಲು ಬಹಳ ಬಲವತ್ತರವಾದ ಕಾರಣಗಳಿರಬೇಕು! ಆತ ಇದನ್ನು ಹೇಳದೆ ಈ ಪ್ರಶ್ನೆ ಎತ್ತಿದಾಗಲೆಲ್ಲಾ ಮೌನವಾಗಿರುತ್ತಿದ್ದರು.

ಆದರೆ ಪೈಲ್ವಾನ್ ವಸಂತರಾವ್ ತಮ್ಮ ನೆನಪುಗಳಲ್ಲಿ ದಾಖಲಿಸಿರುವಂತೆ ಚಾರ್ಲಿಯ ಜೊತೆಗೆ ಕುಸ್ತಿ ಆಡದಿರಲು ಬೇರೆಯೇ ಕಾರಣಗಳು ಇದರ ಹಿನ್ನೆಲೆಯಲ್ಲಿರುವಂತೆ ಕಾಣುತ್ತದೆ. ಅದು ನೈಜವಾಗಿರುವಂತೆ, ಸ್ವಾರಸ್ಯಕರವೂ ಆಗಿದೆ. ಅದರ ಕಡೆಗೆ ಈಗ ನಮ್ಮ ಗಮನವನ್ನು ಕೊಂಚ ಹರಿಸೋಣ.

ಪೈಲ್ವಾನ್ ವಸಂತರಾವ್ ಅವರು ಪೈಲ್ವಾನ್ ನಂಜಪ್ಪನವರ ಶಿಷ್ಯರಲ್ಲಿ ಒಬ್ಬರು. ಪ್ರತಿಯೊಬ್ಬ ಪೈಲ್ವಾನನೂ ಗರುಡಿಯಲ್ಲಿ ತನ್ನ ಉಸ್ತಾದ್‌ನಿಂದ ಕುಸ್ತಿ ವಿದ್ಯೆ ಕಲಿಯುತ್ತಾನೆ. ತಾನು ಆಡುವ ಕುಸ್ತಿಗಳಿಂದ ಇನ್ನಷ್ಟು ಕಲಿಯುತ್ತಾನೆ. ಹಾಗೆಯೇ ಪ್ರಖ್ಯಾತ ಪೈಲ್ವಾನರ ಕುಸ್ತಿಗಳನ್ನು ನೋಡಿಯೂ ಕೂಡಾ ಈ ವಿದ್ಯೆಯನ್ನು ಉತ್ತಮಪಡಿಸಿಕೊಳ್ಳುತ್ತಾರೆ. ಇಂಥ ಪೈಲ್ವಾನರ ಕುಸ್ತಿಗಳು ಎಷ್ಟು ದೂರದ ಊರುಗಳಲ್ಲಿ ನಡೆದರೂ ಅವನ್ನು ನೋಡಲು ಇತರೆ ಪೈಲ್ವಾನರು ಅಲ್ಲಿಗೆ ಹೋಗುತ್ತಾರೆ. ಇದೊಂದು ರೀತಿ 'ದೇಶ ತಿರುಗಿ' ನೋಡಿ ಕಲಿಯುವ ರೀತಿ. ಪೈಲ್ವಾನ್ ವಸಂತರಾವ್ ಅವರು ಹೀಗೆ ಒಮ್ಮೆ 'ದೇಶ ತಿರುಗಿ' ಕಲಿಯುವ ದೃಷ್ಟಿಯಿಂದ ಬಳ್ಳಾರಿಗೆ ಹೋಗಿದ್ದರು – ಪೈಲ್ವಾನ್ ಚಾರ್ಲಿಯ ಕುಸ್ತಿ ನೋಡಲು. ಪೈಲ್ವಾನ್ ಚಾರ್ಲಿ ಹೊಸಪೇಟೆಯ ಕರಿಭೀಮನ ಮೇಲೆ ಕುಸ್ತಿ ಆಡಬೇಕಾಗಿತ್ತು.

ದಾವಣಗೆರೆಯಿಂದ ಚಾರ್ಲಿಯ ಜೊತೆ ಬಂದಿದ್ದವರು ವಸಂತರಾವ್ ಅವರನ್ನು ತಮ್ಮ ಜೊತೆಗಿರಲು ಆಹ್ವಾನಿಸಿದರು. ಕರಿಭೀಮ ಆ ಭಾಗದ ಸುಪ್ರಸಿದ್ಧ ಪೈಲ್ವಾನ್. ಅವನನ್ನು ಗೆಲ್ಲುವುದು ಅಷ್ಟು ಹುಡುಗಾಟದ ಮಾತಲ್ಲ. ಆದ್ದರಿಂದ ಅಲ್ಲಿ ಚಾರ್ಲಿಯ ಜೊತೆಗೆ

ಬಂದಿದ್ದ ಇತರರು ಅವನನ್ನು ಗೆಲ್ಲಲು ಹಲವು ಸಲಹೆ, ಸೂಚನೆಗಳನ್ನು ಕೊಟ್ಟರು. ಮಾರನೇ ದಿನ ಕುಸ್ತಿ ನಡೆದಾಗ ಈ ಪರಿವಾರದವರು ಕೊಟ್ಟ ಸಲಹೆಗಳನ್ನು ಮನದಲ್ಲಿಟ್ಟುಕೊಂಡು ಚಾರ್ಲಿ ಗೆದ್ದುಬಿಟ್ಟ. ದಾವಣಗೆರೆಯಿಂದ ಬಂದಿದ್ದ ಚಾರ್ಲಿಯ ಅಭಿಮಾನಿಗಳಿಗೆ ಭಾರೀ ಖುಷಿಯಾಯಿತು.

ರಾತ್ರಿ ಮತ್ತೆ ಈ ಅಭಿಮಾನಿಗಳೆಲ್ಲಾ ತಾವು ಇಳಿದುಕೊಂಡಿದ್ದ ಮನೆಯಲ್ಲಿ ಸಭೆ ಸೇರಿದರು. ಅಲ್ಲಿದ್ದ ಬಹಳ ಜನ ಚಾರ್ಲಿಯು ದುರ್ಗದ ನಂಜಪ್ಪನ ಮೇಲೆ ಕುಸ್ತಿ ಆಡಿ ಗೆಲ್ಲಬೇಕು; ಆಗ ದುರ್ಗ–ದಾವಣಗೆರೆಯಲ್ಲಿ ಚಾರ್ಲಿ ಏಕೈಕ ಪ್ರಸಿದ್ಧ ಪೈಲ್ವಾನ್ ಆಗುತ್ತಾನೆ ಎಂದು ಹೇಳಿ, ಅತನನ್ನು ನಂಜಪ್ಪನ ಮೇಲೆ ಆಡಲು ಹುರಿದುಂಬಿಸಿದರು. ಆ ಸಭೆಯಲ್ಲಿ ಇದ್ದಕ್ಕಿದ್ದಂತೆ ಚಾರ್ಲಿಯ ತಂದೆ ಬಿಲ್ಲಿ ಬುಡೇನ್ ಸಾಹೇಬರು ಎದ್ದು – 'ನನ್ನ ಮಗ ಚಾರ್ಲಿ ದುರ್ಗದ ನಂಜಪ್ಪನ ಜೊತೆ ಕುಸ್ತಿ ಆಡುವುದಿಲ್ಲ. ನಂಜಪ್ಪ ಚಾರ್ಲಿಗೆ ಅಣ್ಣ ಇದ್ದಂಗೆ... ಆತನ ಮೇಲೆ ನನ್ನ ಮಗ ಚಾರ್ಲಿ ಎಂದಿಗೂ ಕುಸ್ತಿ ಆಡುವುದಿಲ್ಲ. ಆತನನ್ನು ಬಿಟ್ಟು ನೀವು ಯಾವ ಪೈಲ್ವಾನನ್ನು ತೋರಿಸಿದರೂ ಆತನ ಮೇಲೆ ಆಡಿಸುತ್ತೇನೆ' ಎಂದರು. ಅಲ್ಲಿಗೆ ಚಾರ್ಲಿಯು ನಂಜಪ್ಪನ ಮೇಲೆ ಎಂದೆಂದಿಗೂ ಕುಸ್ತಿ ಆಡದಂತಾಯಿತು.

ಪೈಲ್ವಾನ್ ವಸಂತರಾವ್ ಅವರು ಬಿಲ್ಲಿ ಬುಡೇನ್ ಸಾಹೇಬರ ಈ ತರದ ಹೇಳಿಕೆಯನ್ನು ಕುರಿತು ತಾರ್ಕಿಕವಾಗಿ ಅರ್ಥೈಸುವುದು ಹೀಗೆ.

ಪೈಲ್ವಾನ್ ನಂಜಪ್ಪನವರು ಪೈಲ್ವಾನರ ಸಾಲಿನಲ್ಲಿ ದೊಡ್ಡ ಹೆಸರು. ಅವರು ಚಾರ್ಲಿಯ ಮೇಲೆ ಆಡಿ ಸೋತರೆ ಅವರು ಗಳಿಸಿದ ಕೀರ್ತಿಗೆ ಮಸಿ ಬಳಿದಂತಾಗುತ್ತದೆ. ಅಕಸ್ಮಾತ್ ನಂಜಪ್ಪ ಗೆದ್ದರೆ ಚಾರ್ಲಿಯ ಹೆಸರು ಕೆಡುತ್ತದೆ. ಈ ರೀತಿ ಎರಡೂ ಕಡೆ ಯೋಚಿಸಿ ಯಾವ ತಂಟೇನೂ ಬೇಡ ಎಂದು ತಮ್ಮ ನಿರ್ಧಾರ ಪ್ರಕಟಿಸಿದರು.

ಬಿಲ್ಲಿಬುಡೇನ್ ಸಾಹೇಬರು ನಂಜಪ್ಪರ ಜೊತೆಗೆ ಕುಸ್ತಿ ಬೇಡ ಎಂದು ಹೇಳಲು ಇನ್ನೊಂದು ಮುಖ್ಯ ಕಾರಣವಿತ್ತು. ಸ್ವತಃ ಪೈಲ್ವಾನ್ ಆದ ಬಿಲ್ಲಿ ಬುಡೇನ್ ಸಾಹೇಬರು ನಂಜಪ್ಪರ ಕುಸ್ತಿ ವಿದ್ಯೆ ಮತ್ತು ಸಾಮರ್ಥ್ಯದ ಬಗ್ಗೆ ಚೆನ್ನಾಗಿ ಅರಿತಿದ್ದರು.

ಪೈಲ್ವಾನ್ ನಂಜಪ್ಪನ ಕುಸ್ತಿಯೊಂದು ದಾವಣಗೆರೆಯಲ್ಲಿ ತುಮ್ಮಿನಕಟ್ಟೆ ರಾಮ ಎನ್ನುವವನ ಜೊತೆ ನಡೆಯಿತು. ತುಮ್ಮಿನ ಕಟ್ಟೆ ರಾಮ ದಾವಣಗೆರೆಯ ಅನೇಕ ಬಲಶಾಲಿ ಪೈಲ್ವಾನರ ಮೇಲೆ ಗೆದ್ದು ವಿಕ್ರಮ ಸಾಧಿಸಿದ್ದನು. ಚಿತ್ರದುರ್ಗದ ದೊಡ್ಡಗರುಡಿಯ ಇನ್ನೊಬ್ಬ ಪ್ರಸಿದ್ಧ ಪೈಲ್ವಾನ್ ರಾಮಪ್ಪನನ್ನು ಕೂಡಾ ಆತ ಸೋಲಿಸಿದ್ದನು. ಅಂಥ ಪೈಲ್ವಾನರನ್ನೆಲ್ಲಾ ಸೋಲಿಸಿರುವ ತುಮ್ಮಿನಕಟ್ಟೆ ರಾಮನ ಜೊತೆ ನಂಜಪ್ಪನ ಕುಸ್ತಿ ಏನೋ ಏನಾಗುತ್ತೋ ಎಂಬ ಆತಂಕದಲ್ಲಿ ಪ್ರೇಕ್ಷಕರಿದ್ದರು. ಎಲ್ಲರೂ ಊಹಿಸಿದಂತೆ ನಂಜಪ್ಪನು ದೋಬಿಚಾಟನ್ನು ಈ ಸಾರಿ ಬಳಸಲಿಲ್ಲ. ಬದಲಾಗಿ ಕತ್ತರಿ ಪಟ್ಟು ಬಳಸಿದರು. ತುಮ್ಮಿನಕಟ್ಟೆ ರಾಮ ಸೋತ ಎಂದು ಅಂದು ರೆಫರಿಯಾಗಿದ್ದ ಬಿಲ್ಲಿ ಬುಡೇನ್ ಸಾಹೇಬರು ತೀರ್ಪುಕೊಟ್ಟರು. ಆಗ

ಕೆಲವರು ಬೆನ್ನು ಸರಿಯಾಗಿ ಮಣ್ಣಾಗಲಿಲ್ಲ; ಇನ್ನೂ ಕುಸ್ತಿ ಸ್ವಲ್ಪಕಾಲ ಮುಂದುವರಿಯಬೇಕು ಎಂದು ಗದ್ದಲವೆಬ್ಬಿಸಿದರು. ಆಗ ಬಿಲ್ಲಿ ಬುಡೇನ್ ಸಾಹೇಬರು "ಇಂಥ ಹೈಕ್ಲಾಸ್ ಕುಸ್ತೀನಾ ಎಲ್ಲಾದರೂ ನೋಡಿದ್ದೀರೇನಪ್ಪ..." ಎಂದು ಹೇಳಿ ನಂಜಪ್ಪ ಗೆದ್ದಿದ್ದನ್ನೂ, ತುಮ್ಮಿನಕಟ್ಟೆ ರಾಮ ಬಿದ್ದಿದ್ದನ್ನೂ ಪ್ರೇಕ್ಷಕರಿಗೆ ಮನವರಿಕೆಯಾಗುವಂತೆ ಹೇಳಿ ಬಾಯಿ ಮುಚ್ಚಿಸಿದರು. ಬಿಲ್ಲಿ ಬುಡೇನ್ ಸಾಹೇಬರು ಕುಸ್ತಿಯ ಮರ್ಮವನ್ನೆಲ್ಲಾ ಅರಿತವರಾದ್ದರಿಂದ ನಂಜಪ್ಪನ ಸಾಮರ್ಥ್ಯವನ್ನು ಸರಿಯಾಗಿ ಗ್ರಹಿಸಿದ್ದರಿಂದ ತಮ್ಮ ಮಗನು ಆತನೊಡನೆ ಕುಸ್ತಿ ಆಡುವುದಕ್ಕೆ ಒಪ್ಪಲಿಲ್ಲ ಎಂದು ಹೇಳುವವರಿದ್ದಾರೆ.

ಚಾರ್ಲಿ ಮತ್ತು ನಂಜಪ್ಪ ಕುಸ್ತಿ ಯಾಕೆ ನಡೆಯಲಿಲ್ಲ ಎಂಬುದನ್ನು ತಿಳಿಯಬೇಕೆಂಬ ಕುತೂಹಲ ಸ್ವತಃ ಈ ಲೇಖಕನಿಗೂ ಇತ್ತು. ಚಾರ್ಲಿಯನ್ನು ನೋಡುವ ಉದ್ದೇಶದಿಂದ ನಾನು ದಾವಣಗೆರೆಗೆ ಹೊರಡುವವನಿದ್ದೆ. ಆದರೆ ದುರಾದೃಷ್ಟವಶಾತ್ ಅದೇ ದಿನ ಚಾರ್ಲಿ ಮರಣ ಹೊಂದಿದ್ದರು. ಆದರೆ ನನ್ನ ಸೋದರ ಹಾಗೂ ಗೆಳೆಯ ಜಯರಾಮಸ್ವಾಮಿ ಚಾರ್ಲಿಯನ್ನು ಭೇಟಿ ಮಾಡಿದಾಗ ನಂಜಪ್ಪನ ಜೊತೆಯಲ್ಲಿ ಕುಸ್ತಿ ಏಕೆ ಆಡಲಿಲ್ಲ ಎಂಬ ಪ್ರಶ್ನೆಯನ್ನು ಚಾರ್ಲಿಯ ಮುಂದಿಟ್ಟನಂತೆ. ಡಯಾಬಿಟೀಸ್‌ನಿಂದ ಕಂದಿ ಕಂದಿ ಹೋಗಿದ್ದ ಚಾರ್ಲಿ ತುಂಬಾ ಉತ್ಸಾಹದಲ್ಲಿಯೇ ಮಾತನಾಡಿ, "ದುರ್ಗದ ನಂಜಪ್ಪ ನನಗೆ ಅಣ್ಣ ಇದ್ದಂತೆ. ಆದ್ದರಿಂದ ಆಡಲಿಲ್ಲ" ಎಂದು ತಿಳಿಸಿದನಂತೆ. ಈ ಸಂಬಂಧ ಯಾವ ರೀತಿಯದೋ ನಮಗೆ ತಿಳಿಯುವುದಿಲ್ಲ. ನಂಜಪ್ಪನವರ ಅಣ್ಣ ಗಂಗಾಧರಪ್ಪನವರ ಮಗ ವಿಶ್ವನಾಥ್ ಹೇಳುವಂತೆ ಎಷ್ಟೋ ಸಾರಿ ನಂಜಪ್ಪ ಚಾರ್ಲಿಯ ಜೊತೆ ಕುಸ್ತಿ ಆಡಲು ಕೈಮಿಲಾಯಿಸಲು ಸಿದ್ಧವಿದ್ದರು. ಆದರೆ ಪ್ರತಿಸಾರಿಯೂ ಚಾರ್ಲಿಯ ತಂದೆ ಬಿಲ್ಲಿಬುಡೇನ್ ಸಾಹೇಬರು ಅಡ್ಡ ಬಂದು, "ಚಾರ್ಲಿ ನಂಜಪ್ಪ ಅಣ್ಣ ತಮ್ಮ ಇದ್ದಂಗೆ. ನಾನು ಅವರಿಬ್ಬರ ಕುಸ್ತಿ ಆಡಿಸುವುದಿಲ್ಲ" ಎಂದು ಘೋಷಿಸಿಬಿಡುತ್ತಿದ್ದರಂತೆ. ಒಟ್ಟಿನಲ್ಲಿ ಪೈಲ್ವಾನ್ ನಂಜಪ್ಪನವರ ಕುಸ್ತಿಗಳಲ್ಲಿ ರಾಣೇಬೆನ್ನೂರಿನ ನಂಜಪ್ಪ ಮತ್ತು ಚಾರ್ಲಿಯ ಮೇಲೆ ಏಕೆ ಕುಸ್ತಿ ನಡೆಯಲಿಲ್ಲ ಎಂಬುದು ಇನ್ನೂ ಕೊಂಚ ಒಗಟಾಗಿಯೇ ಉಳಿದಿದೆ. ಬಹುಶಃ ಒಳ್ಳೆಯ ಕಾರಣಗಳಿಗು ಅವು ನಡೆಯದೆ ಇದ್ದಿರಬಹುದು. ❑

೧೧ ಎತ್ತರದ ಉಸ್ತಾದ್

ಪೈಲ್ವಾನ್ ನಂಜಪ್ಪನವರು ಗರಡಿ ಪ್ರವೇಶ ಮಾಡಿದ ಕಾಲ ಅವರಿಗೆ ತುಂಬಾ ಅನುಕೂಲಕರವಾಗಿತ್ತು. ಕಾಲುಂಗುರದ ಬುಡ್ಡಣ್ಣ, ನಾರಣನಪ್ಪ, ಪರಿಪೈಗರ್‌ರಂತಹ ಉಸ್ತಾದ್‌ಗಳು ಒಬ್ಬರಾದ ಮೇಲೆ ಒಬ್ಬರು ಸಿಕ್ಕರು. ಅವರು ಈ ಗುರುಗಳಿಂದ ಕಲಿತ ಕುಸ್ತಿ ವಿದ್ಯೆಯ ಜೊತೆಗೆ ತಾವು ಮಾಡಿದ ಕುಸ್ತಿಗಳಿಂದಲು ಈ ವಿದ್ಯೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡರು. ಬಳಿಕ ಸ್ವತಃ ಪೈಲ್ವಾನ್ ನಂಜಪ್ಪ ಉಸ್ತಾದ್ ಆಗಿ ಹಲವು ಜನ ಪೈಲ್ವಾನರಿಗೆ ಈ ವಿದ್ಯೆಯನ್ನು ಹೇಳಿಕೊಟ್ಟರು. ಅದನ್ನು ನಾವು ಕೊಂಚ ಸಂಕ್ಷೇಪವಾಗಿ ತಿಳಿದುಕೊಳ್ಳೋಣ.

ನಂಜಪ್ಪನವರ ಶಿಷ್ಯರಲ್ಲಿ ಪೈಲ್ವಾನ್ ವಸಂತರಾವ್, ಪೈಲ್ವಾನ್ ಗೋಪಾಲಪ್ಪ ಪೈಲ್ವಾನ್ ಬಸವರಾಜಪ್ಪ, ಪೈಲ್ವಾನ್ ಹನುಮಂತಿ, ಪೈಲ್ವಾನ್ ಗೌಳಿಗರ ಲಿಂಗಪ್ಪ ಉರುಫ್ ಮೂಗ, ಮರಾಠಿಯವರ ತಿಪ್ಪೇಸ್ವಾಮಿ ಮೊದಲಾದವರು ಮುಖ್ಯರು. ಇವರಲ್ಲಿ ಹಲವರು ಹಲವಾರು ಕಡೆ ಕುಸ್ತಿಯಾಡಿ ದೊಡ್ಡಗರುಡಿಗೆ ಕೀರ್ತಿ ತಂದರು. ಪೈಲ್ವಾನ್ ಗೋಪಾಲಪ್ಪ ದಾವಣಗೆರೆ, ಚಳ್ಳಕೆರೆ, ಹಿರಿಯೂರು, ಮಲ್ಲಾಡಿಹಳ್ಳಿ ಮೊದಲಾದ ಸ್ಥಳಗಳಲ್ಲಿ ಹಲವಾರು ಕುಸ್ತಿಗಳನ್ನು ಆಡಿದ್ದಾರೆ. ಸುಮಾರು ನಲ್ವತ್ತು ವರ್ಷಗಳ ಹಿಂದೆ ನಡೆದ ಈ ಕುಸ್ತಿಗಳಲ್ಲಿ ತಾವು ಯಾರ ಯಾರ ಮೇಲೆ ಆಡಿದ್ದು ಎಂಬುದನ್ನು ಖಚಿತವಾಗಿ ನೆನಪಿಸಿಕೊಳ್ಳಲಾರರು. ಭಾನುವಳ್ಳಿಯ ಗಿರಿಯ, ಹರಿಹರದ ಬಸಪ್ಪ ಇವರ ಮೇಲೆ ಆಡಿ ಗೆದ್ದದ್ದನ್ನು ಅವರು ನಿಖರವಾಗಿ ಹೇಳುತ್ತಾರೆ. ಹಾಗೆಯೇ ನಂಜಪ್ಪರಿಂದ ಕಲಿತ ದೊಭೀಚಾಟ್, ಕತ್ತರಿ, ಟಾಂಗ್, ಏಕ್‌ಲಾಂಗ್ ಮೊದಲಾದ ಪಟ್ಟುಗಳನ್ನು ಪ್ರಯೋಗಿಸಿದ್ದನ್ನೂ ಅವರು ಮರೆಯುವುದಿಲ್ಲ.

ಪೈಲ್ವಾನ್ ಹನುಮಂತಿ ಮೂರ್‍ನಾಲ್ಕು ಕುಸ್ತಿ ಬಿಟ್ಟರೆ ಹೆಚ್ಚು ಅಡಲು ಅವಕಾಶವಾಗಲಿಲ್ಲ. ಇನ್ನು ಮಿಕ್ಕವರು ದಾವಣಗೆರೆ, ಹಿರಿಯೂರು, ಹೊಳಲ್ಕೆರೆ ಮೊದಲಾದ ಕಡೆ ಕುಸ್ತಿ ಆಡಿ ನಂಜಪ್ಪರು ಕಲಿಸಿದ ಪಟ್ಟುಗಳನ್ನು ಬಳಸಿ ಯಶಸ್ವಿ ಕುಸ್ತಿಗಳನ್ನು ಮಾಡಿದ್ದಾರೆ.

ಇವರಲ್ಲಿ ಪೈಲ್ವಾನ್ ಲಿಂಗಪ್ಪ ಉರುಫ್ ಮೂಗ ಬೆಂಗಳೂರು, ಮೈಸೂರು, ದಾವಣಗೆರೆ, ಹೊಸಪೇಟೆ ಮೊದಲಾದ ಕಡೆ ಕುಸ್ತಿ ಮಾಡಿ ಕೀರ್ತಿ ಸಂಪಾದಿಸಿದ. ಅದರಲ್ಲಿಯೂ ಆತ ಬೆಂಗಳೂರಿನಲ್ಲಿ ಮಾಡಿದ ಕುಸ್ತಿಗಳು ಬಹಳ ಹೆಸರಾದವು. ಆಗಿನ

ಕಾಲದಲ್ಲಿ ಪ್ರಸಿದ್ಧಿ ಪಡೆದಿದ್ದ ಪೈಲ್ವಾನ್ ಘಜಲು ಚುಡಿ ಎಂಬ ತನ್ನ ಮಗನನ್ನು ಕುಸ್ತಿ ಆಡಲು ಕರೆತಂದಿದ್ದ ಚುಡಿ ಇನ್ನೂ ಚಿಕ್ಕ ಹುಡುಗ. ಆದರೆ ಅಖಾಡದಲ್ಲಿ ಅವನು ಪಾದರಸದಂತೆ ಓಡಾಡುತ್ತಿದ್ದ. ಅವನು ಓಡಾಡುತ್ತಿದ್ದರೆ ಪ್ರೇಕ್ಷಕರು ಒಂದೇ ಸಮನೆ ಕೇಕೆ ಹಾಕಿ ಚಪ್ಪಾಳೆ ತಟ್ಟುತ್ತಿದ್ದರು. ಅವನ ಮೇಲೆ ಜೊತೆ ಹಾಕಿಕೊಳ್ಳಲು ಬಂದ ಮೂಗಪ್ಪನೂ ಕುಣಕುಣಕೊಂಡು ಬಂದ. ಈತನಿಗೂ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು. ಚುಡಿ ಮತ್ತು ಮೂಗ ಬಟ್ಟೆ ಹಾಕಿಕೊಂಡೇ ಜಿದ್ದಾಜಿದ್ದಿ ಕುಸ್ತಿಗೆ ತಯಾರಾದಂತೆ ಎಳೆದಾಡತೊಡಗಿದರು! ಇದು ಕರ್ಣಾರ್ಜುನರು ಬಾಲ್ಯದಲ್ಲಿ ಅಸ್ತ್ರ ಶಸ್ತ್ರ ವಿದ್ಯೆಯ ಪ್ರದರ್ಶನ ಸಂದರ್ಭದಲ್ಲಿ ಮಾಡಿದ ಸೆಣಸಾಟದಂತೆ ಭಾಸವಾಗುತ್ತಿತ್ತು. "ದುರ್ಗದ ಹುಲಿ" ಎಂದು ಮೂಗಪ್ಪನನ್ನು ಪರಿಚಯಿಸಿದ್ದ ವ್ಯವಸ್ಥಾಪಕ ಅಣ್ಣಯ್ಯಪ್ಪ ಮೂಗಪ್ಪನನ್ನು ಹಿಂದಕ್ಕೆ ಎಳೆದುಕೊಂಡನು. ಮುಂದೆ ಹದಿನೈದು ದಿನವಾದ ಬಳಿಕ ಆ ಕುಸ್ತಿ ನಡೆದು ಡ್ರಾ ಆಯಿತು. ಆದರೂ ಬೆಂಗಳೂರಿನ ಪ್ರೇಕ್ಷಕರ ಮನಸ್ಸನ್ನು ಗೆದ್ದ ಪೈಲ್ವಾನ್ ಮೂಗಪ್ಪ ಅಲ್ಲಿನ ಪ್ರೇಕ್ಷಕರೊಬ್ಬರ ಅಭಿಮಾನದಿಂದ ಅಲ್ಲಿಯೇ ಒಂದು ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿದ. ಮುಂದೆ ಮೂಗಪ್ಪ ಬೆಂಗಳೂರಿನಲ್ಲಿ ಪೈಲ್ವಾನ್ ಘಜ್ಜಲನನ್ನು ಗೆದ್ದನು.

ಪೈಲ್ವಾನ್ ನಂಜಪ್ಪನವರ ಶಿಷ್ಯರಲ್ಲಿ ಪೈಲ್ವಾನ್ ವಸಂತರಾವ್ ಹಲವಾರು ಕಡೆ ಕುಸ್ತಿ ಮಾಡಿದರು. ಇವರು ಬೆಂಗಳೂರಿನ ಮಿರ್ಚಿವಾಲ ಸುಭಾನ್, ದಾವಣಗೆರೆಯ ಮಾಕನೂರು ಗ್ರಾಮದ ದಂಡ್ಯಪ್ಪ, ಮಾಲ್, ದಾವಣಗೆರೆ ಅಮೀರಸಾಬ್ ಮೊದಲಾದವರ ಮೇಲೆ ಸ್ಮರಣೆಯಲ್ಲಿ ಉಳಿಯುವಂತಹ ಕೆಲವು ಕುಸ್ತಿ ಮಾಡಿದರು. ಈ ಎಲ್ಲ ಪೈಲ್ವಾನರು ನಂಜಪ್ಪನವರಿಗೆ ವಿಶೇಷ ಗೌರವ ತೋರಿಸುತ್ತಾರೆ. ದುರ್ಗದಲ್ಲಿಯೇ ಕುಸ್ತಿಗಳು ನಡೆದಾಗ ಶಿಷ್ಯರೆಲ್ಲ ಗರಡಿಯಿಂದ ಹೊರಡುವ ಮುನ್ನ ನಂಜಪ್ಪನವರಿಗೆ ನಮಸ್ಕರಿಸುತ್ತಿದ್ದರು. ನಂಜಪ್ಪ ಅವರ ಮೈದಡವಿ, ಶುಭ ಹಾರೈಸಿ ಕುಸ್ತಿಗೆ ಕಳುಹಿಸುತ್ತಿದ್ದರು. ಕುಸ್ತಿ ಮುಗಿದು ಬಂದಾಗಲೂ ಇದೇ ರೀತಿಯ ಗೌರವವನ್ನು ಅವರಿಗೆ ತೋರಿಸುತ್ತಿದ್ದರು.

ಪೈಲ್ವಾನ್ ನಂಜಪ್ಪನಿಗೆ ದೋಭೀಚಾಟ್ ಪಟ್ಟು ತುಂಬಾ ಪ್ರಿಯವಾದುದು. ಆದರೆ ನಂಜಪ್ಪ ಅದನ್ನು ಬಿಟ್ಟು 'ನಿಕಾಲ್' ಕತ್ತರಿ ಪಟ್ಟುಗಳಲ್ಲಿಯೂ ಅಸಾಧಾರಣ ಪರಿಣತಿ ಹೊಂದಿದ್ದರು. ಅವರು ಮೂರು ಜನ ಗುರುಗಳಿಂದ ಹತ್ತಾರು ಪಟ್ಟುಗಳನ್ನು ಕಲಿತಿದ್ದರೆ, ತಮ್ಮ ಅನುಭವಗಳಿಂದ ಕಲಿತ ಪಟ್ಟುಗಳು ನೂರಾರು. ಈ ಎಲ್ಲವನ್ನು ತಮ್ಮ ಶಿಷ್ಯರಿಗೆ ಸಮಯ ಸಂದರ್ಭವರಿತು ಚೆನ್ನಾಗಿ ಕಲಿಸಿದರು.

ಬೇರೆ ಉಸ್ತಾದ್‌ಗಳಂತೆ ನಂಜಪ್ಪ ಒಂದು ರೀತಿ ಧಿಮಾಕು ತೋರಿಸುವ ಗುರುವಲ್ಲ. ತನ್ನ ಶಿಷ್ಯರು ಗರಡಿಯ ಮಟ್ಟಿಯಲ್ಲಿ ಲಡತ್ ಮಾಡುವಾಗ ಕುಸ್ತಿಯ ಪಟ್ಟುಗಳಲ್ಲಿ ತಪ್ಪು ಮಾಡಿದರೆನ್ನಿ. ಮಟ್ಟಿಯ ಹೊರಗೆ ನಂಜಪ್ಪ ಬಟ್ಟೆ ಹಾಕಿಕೊಂಡು ಕುಳಿತಿದ್ದರೂ, ಮಟ್ಟಿಗೆ

ಇಳಿದು ಆ ಪಟ್ಟಿನ 'ಯುಕ್ತಿ' ಅಥವಾ 'ಬ್ಯಾಲೆನ್ಸ್' ಅನ್ನು ಪ್ರಯೋಗಾತ್ಮಕವಾಗಿ ತೋರಿಸಿ ಆತ ಮನದಟ್ಟು ಮಾಡುತ್ತಿದ್ದ. ಅಷ್ಟು ಸಮರ್ಪಣಭಾವದ ಗುರು ನಂಜಪ್ಪ ! ಅಷ್ಟು ಶಿಷ್ಯವಾತ್ಸಲ್ಯದ ಗುರು ಆತ !

ನಂಜಪ್ಪ ಅವರ ಶಿಷ್ಯವಾತ್ಸಲ್ಯಕ್ಕೆ ಇನ್ನೊಂದು ಉದಾಹರಣೆಯೆಂದರೆ ಪೈಲ್ವಾನ್ ವಸಂತ ರಾವ್ ಹೇಳುವ ಒಂದು ಸಂಗತಿ : ಅವರು ಬೆಂಗಳೂರಿನಲ್ಲಿ ಮಾಲ್ ಎಂಬ ಪೈಲ್ವಾನನ ಮೇಲೆ ಕುಸ್ತಿ ಆಡಬೇಕಾಗಿತ್ತು. ಆತನು ಹಲವು ಪಟ್ಟುಗಳಲ್ಲಿ ಪರಿಣಿತ. ಅವನನ್ನು ಗೆಲ್ಲುವುದು ಹೇಗೆಂದು ವಸಂತರಾವ್ ಒಂದೇ ಸಮನೆ ಯೋಚಿಸುತ್ತಿದ್ದರು. ಇವರು ತಮ್ಮ ದೊಡ್ಡಪೇಟೆಯಲ್ಲಿರುವ ಟೈಲರಿಂಗ್ ಅಂಗಡಿಯಲ್ಲಿ ಕುಳಿತಿದ್ದಾಗ ನಂಜಪ್ಪ ಅಲ್ಲಿಗೆ ಬಂದರು. ತಮ್ಮ ಚಿಂತೆಯನ್ನು ಅವರ ಮುಂದೆ ಹೇಳಿದ ಕೂಡಲೇ ಅಂಗಡಿಯ ಬಾಗಿಲನ್ನು ಮುಂದೆ ಮಾಡಿ ಹತ್ತಿಪ್ಪತ್ತು ಪಟ್ಟುಗಳನ್ನು ಅಲ್ಲಿಯೇ ತೋರಿಸಿದರಂತೆ. ವಸಂತರಾವ್ ಹೇಳುವ ಪ್ರಕಾರ ಆತ ಹೇಳಿಕೊಟ್ಟ ಪಟ್ಟುಗಳನ್ನು ಕಲಿಯುವ, ಗ್ರಹಿಸುವ ಕೆಪಾಸಿಟಿ ನಮಗೆ ಇರಲಿಲ್ಲ ಎನ್ನುತ್ತಾರೆ. ಅಷ್ಟು ಪಟ್ಟುಗಳನ್ನು ತಿಳಿದ ಜಾಣ ಆತ. ಇದೇ ಪೈಲ್ವಾನ್ ವಸಂತರಾವ್ ಅವರಿಗೆ ಹುಣಿಸೇಕಟ್ಟೆ ಸಿದ್ದಪ್ಪನ ಜೊತೆಯಲ್ಲಿ ಲಡತ್ ಕೊಡುವಾಗ ಉಂಟಾದ ಸಂದೇಹವನ್ನು ನಂಜಪ್ಪ ಅತ್ಯಂತ ಸ್ಪಷ್ಟವಾಗಿ ತಿಳಿಯ ಹೇಳಿದರು.

ನಂಜಪ್ಪನವರು ತಮ್ಮ ಕುಸ್ತಿಯ ಅನುಭವಗಳನ್ನು ತಮ್ಮ ಶಿಷ್ಯರೊಂದಿಗೆ ಹಂಚಿ ಕೊಳ್ಳುತ್ತಿದ್ದರು. ಕುಸ್ತಿ ಪಂದ್ಯಗಳಲ್ಲಿ ಸೋಲು ಗೆಲುವು ಸಮ. ಇವು ಹೇಗೆ ಆಗುತ್ತವೆ ಎಂಬುದನ್ನು ತಮ್ಮ ಸ್ವಂತ ಅನುಭವಗಳಿಂದಲೇ ಶಿಷ್ಯರಿಗೆ ತಿಳಿಸುತ್ತಿದ್ದರು. ಅವರು ಗೆದ್ದ ಕುಸ್ತಿಗಳಿರುವಂತೆಯೇ ಬಿದ್ದ ಕುಸ್ತಿಗಳು ಒಂದೆರಡಾದರೂ ಇವೆ. ಉದಾಹರಣೆಗೆ ಹೊಸಪೇಟೆಯ ಕರಿಭೀಮನ ಮೇಲೆ ಸೋತಿದ್ದು. ಕೊಂಚ ಎಚ್ಚರ ತಪ್ಪಿದ್ದರಿಂದ ಅವನು ತಮ್ಮನ್ನು ಹೇಗೆ ಸೋಲಿಸಿದ ಎಂಬುದನ್ನು ಹೇಳಲು ಅವರು ಹಿಂಜರಿಯುತ್ತಿರಲಿಲ್ಲ. ಅಂತೆಯೇ ಸಮ ಮಾಡಿಕೊಂಡ ಕುಸ್ತಿಗಳ ಬಗ್ಗೆಯೂ ಅಷ್ಟೇ.

ನಂಜಪ್ಪ ಪೈಲ್ವಾನ್ ಅಪ್ಪಾಜಿಯ ಮೇಲೆ, ಪೈಲ್ವಾನ್ ವಸಂತ್ ಮೇಲೆ ಮೂರು ಮೂರು ಸಾರಿ ಕುಸ್ತಿ ಆಡಿದರು. ಆದರೆ ಈ ಎಲ್ಲಾ ಕುಸ್ತಿಗಳೂ ಸಮ ಆದವು. ಇಷ್ಟೊಂದು ಪ್ರವೀಣ, ಚತುರರಾದ ನಂಜಪ್ಪನವರು ಇಂತಹ ಪೈಲ್ವಾನರ ಮೇಲೆ ಒಮ್ಮೆ ಕೂಡ ಏಕೆ ಗೆಲ್ಲಲಿಲ್ಲವೆಂಬ ಸಂದೇಹ ಹಲವು ಶಿಷ್ಯರಲ್ಲಿ ಉಳಿದೇ ಇತ್ತು. ಇಂತಹ ಸಂದೇಹವನ್ನು ನಂಜಪ್ಪರ ಶಿಷ್ಯ ಪೈಲ್ವಾನ್ ಗೋಪಾಲಪ್ಪ ಕೂಡ ಹೊಂದಿದ್ದರು. ಈ ಬಗ್ಗೆ ಪ್ರಶ್ನಿಸಿದಾಗ ನಂಜಪ್ಪನವರು ಉತ್ತರಿಸಿದ್ದು ಹೀಗೆ: "ನೋಡಪ್ಪ ಪೈಲ್ವಾನ್ ವಸಂತ್, ಪೈಲ್ವಾನ್ ಅಪ್ಪಾಜಿ ಇಬ್ಬರೂ ಒಳ್ಳೆಯ ಪೈಲ್ವಾನರು. ಆದರೆ ಅವರು ಕುಸ್ತಿ ಪಂದ್ಯಕ್ಕೆ ನನ್ನ ಮೇಲೆ ಅಖಾಡಕ್ಕೆ ಇಳಿಯುವುದು 'ಗೆಲ್ಲಬೇಕು' ಎಂದಲ್ಲ. ನಂಜಪ್ಪ ಯಾವ ಪಟ್ಟಿನಲ್ಲಿ ನಮ್ಮನ್ನು ಚಿತ್ತು

ಮಾಡಬೇಕೆಂದಿದ್ದಾನೆ? ಅದನ್ನು ನಾವು ತಪ್ಪಿಸಿಕೊಳ್ಳುವುದು ಹೇಗೆಂಬ ಎಚ್ಚರದಿಂದಲೇ ಬಂದಿರುತ್ತಾರೆ. ಇಂಥವರನ್ನು ಗೆಲ್ಲಲು ಸಾಧ್ಯವೇ ಇಲ್ಲ. ಇವರು ಮೂರು ಸಾರಿ ಆಡಿದರು ಅಷ್ಟೆ ನೂರು ಸಾರಿ ಆಡಿದರೂ ಅಷ್ಟೆ. ನನ್ನಂತೆಯೆ ಏಕ್‌ಲಾಂಗ್, ಟಾಂಗ್, ನಿಕಾಲ್, ದೋಭೀಚಾಟ್ ಅವರಿಗೂ ಎಲ್ಲ ಗೊತ್ತು. ಇನ್ನು ನಾನು ಅವರನ್ನು ಗೆಲ್ಲುವುದು ಹೇಗೆ? ಅವರು ನನ್ನನ್ನು ಗೆಲ್ಲುವುದು ಹೇಗೆ?" ಎಂದು ಸಮ ಮಾಡಿಕೊಂಡಿದ್ದಕ್ಕೆ ಸಮಜಾಯಿಷಿ ಹೇಳಿದರು. ಈ ಮಾತುಗಳಲ್ಲಿ ಅವರ ವಿನಯ, ಬೇರೆ ಪೈಲ್ವಾನರ ವಿದ್ಯೆಯ ಬಗ್ಗೆ ಒಪ್ಪಿಕೊಳ್ಳುವ ಸರಳತೆ ಯಾರಿಗಾದರೂ ಮೆಚ್ಚಿಕೆಯಾಗುವಂತದ್ದೆ. ನಿಕಾಲ್ ಮತ್ತು ದೋಭೀಚಾಟ್ ನಂಜಪ್ಪನವರ ಪಾಲಿಗೆ ಮನೆದೇವರಿದ್ದಂತೆ. ಅದಕ್ಕೆ ಸಿಕ್ಕವರು ಉಳಿಯುವಂತಿರಲಿಲ್ಲ. ಇಷ್ಟಾದರೂ ಆತ ಕೊಟ್ಟ ವಿವರಣೆಯನ್ನು ಕೇಳಿ ಪೈಲ್ವಾನ್ ಗೋಪಾಲಪ್ಪ ಬೆರಗು ವ್ಯಕ್ತಪಡಿಸಿದ್ದಲ್ಲದೆ ತಮ್ಮ ಗುರುವಿನ ಬಗ್ಗೆ ಮೆಚ್ಚುಗೆಯನ್ನೂ ಸೂಸುತ್ತಾರೆ.

ಪೈಲ್ವಾನ್ ನಂಜಪ್ಪ ತಾನು ಉಸ್ತಾದ್ ಆಗಿದ್ದ ಕುಸ್ತಿ ಪಂದ್ಯಗಳಲ್ಲಿ ಸೋಲು ಗೆಲುವು ಉಂಟಾದರೆ ಅದು ಒಬ್ಬ ಪೈಲ್ವಾನನ ಮೇಲೆ ಅರ್ಥಾತ್ ಒಬ್ಬ ಮನುಷ್ಯನ ಮೇಲೆ ಏನು ಪರಿಣಾಮ ಮಾಡುತ್ತದೆ ಎಂಬ ಮನೋವೈಜ್ಞಾನಿಕ ಸತ್ಯವನ್ನು ತಮ್ಮ ಅನುಭವದಿಂದಲೇ ಗ್ರಹಿಸಿದ್ದರು ಎಂದು ಕಾಣುತ್ತದೆ. ಒಮ್ಮೆ ದೊಡ್ಡಗರಡಿಯಲ್ಲಿ ದಸ್ತಗೀರ್ ಎಂಬ ಹುಡುಗ ಸಾಧನೆ ಮಾಡುತ್ತಿದ್ದ. ಅವನು ಕುಸ್ತಿಯೊಳಗೆ ಮೇಲಕ್ಕೆ ಬರುವ ಲಕ್ಷಣಗಳಿದ್ದವು. ಅವನನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ಪೈಲ್ವಾನರ ಜೊತೆ ಹೇಳುತ್ತಿದ್ದರಂತೆ – "ಒಂದು ಕುಸ್ತೀಲಿ ಒಬ್ಬ ಪೈಲ್ವಾನ್ ಗೆಲ್ಲೋತನಕ ನಾವು ಅವನಿಗೆ ಎಲ್ಲಾ ರೀತಿಯ ಪ್ರೋತ್ಸಾಹ ಉತ್ತೇಜನ ಕೊಡಬೇಕು. ಒಂದ್ಸಾರಿ ಅವನು ಕುಸ್ತಿ ಗೆದ್ದ ಅಂದರೆ ಅವನು ಕುಸ್ತಿ ಸಾಲುಗಟ್ಟಿ ಗೆಲ್ತಾ ಹೋಗುತ್ತಾನೆ. ಅಲ್ಲೀತನಕ ನಾವು ಅವನಿಗೆ ದಾರಿ ತೋರಿಸಬೇಕು, ಪುಶ್ ಮಾಡಬೇಕು" ಈ ಮಾತು ಎಷ್ಟು ಸತ್ಯವಲ್ಲವೆ? ಒಮ್ಮೆ ಒಂದು ವಿದ್ಯೆಯ ಒಳಹೊರಗನ್ನು ಹೊಕ್ಕು ವ್ಯಕ್ತಿ ಆತ್ಮಾಭಿಮಾನದಿಂದ ತನ್ನಷ್ಟಕ್ಕೆ ತಾನೇ ಮುಂದುವರೆಯುತ್ತಾನೆ ಎಂಬ ಈ ಮಾನಸಿಕ ಸತ್ಯ ನಂಜಪ್ಪ ಅರಿತಿದ್ದರು. ಈ ಗೆಲುವು ವಿಜಯಗಳು ಒಬ್ಬನ ಬದುಕಿನಲ್ಲಿ ಕಾಣದೆ ಅದು ಆಘಾತಕಾರಿಯಾಗುತ್ತದೆ ಎಂಬುದನ್ನು ಅವರು ಸರಿಯಗಿ ಗ್ರಹಿಸಿದ್ದರು.

ನಂಜಪ್ಪನವರಿಗೆ ಕೊಂಚ ಪ್ರಿಯನಾದ ಹುಡುಗ ಶಿಷ್ಯನೆಂದರೆ ಗರಡಿಯ ಪೋಷಕರೊಬ್ಬರಾದ ಕೃಷ್ಣಪ್ಪನವರ ಮಗ ನಾಗರಾಜ್. ಬಹುಶಃ ನಾಗರಾಜ್ ತಮ್ಮ ಎಳೆಯ ವಯಸ್ಸಿನಿಂದಲೇ ಗರಡಿಗೆ ಮಣ್ಣು ಹೊತ್ತವರು. ಅದೆಷ್ಟೋ ಬಾರಿ ನಂಜಪ್ಪನಿಗೆ ಮಟ್ಟೆಯಲ್ಲಿ ಲಡತ್ ಕೊಟ್ಟವರು. ಆದರೂ ನಂಜಪ್ಪ ಈ ಹುಡುಗನನ್ನು ಒಮ್ಮೆಯೂ ಕುಸ್ತಿ ಜೊತೆ ಮಾಡಿ ಅಖಾಡಕ್ಕೆ ಇಳಿಸಲಿಲ್ಲ. ಅದಕ್ಕೆ ಕಾರಣ ಒಮ್ಮೆ ನಾಕು ಜನರ ಮಧ್ಯೆ ಅಖಾಡದಲ್ಲಿ ಸೋಲುಂಡರೆ ಅದು ದಿನನಿತ್ಯ ಜೀವನದಲ್ಲಿಯೂ ಕೆಟ್ಟ ಪರಿಣಾಮ ಬೀರುತ್ತದೆ ಎಂದು

ಅವರು ನಂಬಿದ್ದರು. ಆದ್ದರಿಂದ ನಾಗರಾಜ್ ಸಾಧನೆಯಷ್ಟಕ್ಕೆ ತೃಪ್ತರಾಗಬೇಕಾಯಿತೆಂದು ತಿಳಿಸುತ್ತಾರೆ.

ಮೇಲಿನ ಎರಡು ಘಟನೆಗಳನ್ನು ಕೊಂಚ ಯೋಚಿಸಿದರೆ ಕೆಲವು ಶ್ರೇಷ್ಠಮಟ್ಟದ ಅಧ್ಯಾತ್ಮದ ಗುರುಗಳು ನೆನಪಾಗುತ್ತಾರೆ. ಕೆಲವರು ಮಠದಲ್ಲಿಯೇ ಓಡಾಡಿಕೊಂಡು ಜಪ, ಧ್ಯಾನ ಎಲ್ಲ ಮಾಡಿಕೊಂಡಿರಬಹುದು. ಅಂತಹವರ ದೈಹಿಕ ಲಕ್ಷಣಗಳನ್ನು ಮಾನಸಿಕ ಸ್ಥೈರ್ಯವನ್ನು ಸರಿಯಾದ ಗುರು ಸದಾ ಗಮನಿಸುತ್ತಿರುತ್ತಾನೆ. ಗುರುವಿಗೆ ಒಪ್ಪಿಗೆಯಾಗ ದಿದ್ದರೆ ಬ್ರಹ್ಮಚರ್ಯ ದೀಕ್ಷೆ, ಸಂನ್ಯಾಸ ದೀಕ್ಷೆ ಕೊಡುವುದಿಲ್ಲವಂತೆ. ಏಕೆಂದರೆ ಅವರು ಆ ಹಾದಿಯಲ್ಲಿ ಯಶಸ್ಸು ಸಾಧಿಸಲಾರರು. ಅಂತವರು ಬದುಕಿನಲ್ಲಿ ಬೇರೆ ರೀತಿ ಯಶಸ್ಸು ಸಾಧಿಸಲಿ ಎಂದು ಹಾರೈಸುತ್ತಾರಂತೆ. ಕುಸ್ತಿಯ ಜಗತ್ತಿನಲ್ಲಿ ಉಸ್ತಾದ್ ಸ್ಥಾನದಲ್ಲಿ ನಂಜಪ್ಪನವರನ್ನು ನಿಲ್ಲಿಸಿ ನೋಡಿದಾಗ ಇದು ಅವರಿಗೂ ಅನ್ವಯಿಸುತ್ತದೆ ಎಂದು ಧಾರಾಳವಾಗಿ ಹೇಳಬಹುದು.

❑

೧೨ ತಬಲಾ ವಾದನ ಪಟು

ನಂಜಪ್ಪನವರನ್ನು ಇದುವರೆಗೂ ಕುಸ್ತಿಪಟುವೆಂದು ಸ್ಪಷ್ಟವಾಗಿ ಗುರುತಿಸಲಾಗಿದೆ. ಇಂಥ ಕುಸ್ತಿಪಟುವು ತಬಲಾ ವಾದನಪಟುವಾಗಿಯೂ ತನ್ನ ಸಾಮರ್ಥ್ಯ ತೋರಿಸಿದ್ದಾರೆ ಎಂದರೆ ಅದು ಕೊಂಚ ವಿಸ್ಮಯವಾಗಿರುವಂತೆ, ಸಂತೋಷದ ವಿಷಯವೂ ಆಗಿದೆ. ಕೆಲವು ವಿಶಿಷ್ಟ ಸಂದರ್ಭಗಳು ಒದಗಿಬಂದಾಗ ವ್ಯಕ್ತಿ ತನ್ನಲ್ಲಿ ಅಡಗಿರುವ ಇತರೆ ಶಕ್ತಿ, ಸಾಮರ್ಥ್ಯಗಳನ್ನು ಹೊರಗೆಡಹಲು ಅವಕಾಶವಾಗುತ್ತದೆ. ನಂಜಪ್ಪನವರು ಹುಟ್ಟಿ ಬೆಳೆದ ಕಾಲ ಗರುಡಿಗಳಿಗೆ, ಪೈಲ್ವಾನರಿಗೆ ಪ್ರಾಶಸ್ತ್ಯವಿದ್ದ ಕಾಲ. ಆದ್ದರಿಂದ ಅವರು ಕುಸ್ತಿಪಟುವಾಗಿ ತಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಲು ಅನುಕೂಲವಾಯಿತು.

ನಂಜಪ್ಪ ತಬಲಾ ವಾದನ ಕಲಿಯಲು ಅಂದಿನ ಸಾಮಾಜಿಕ, ಸಾಂಸ್ಕೃತಿಕ ವಾತಾವರಣವೇ ಕಾರಣವೆನ್ನಬಹುದು. ಸುಮಾರು ಐವತ್ತು-ಅರವತ್ತು ವರ್ಷಗಳ ಹಿಂದೆ ಕಂಪೆನಿ ನಾಟಕಗಳು ಹೆಸರು ಮಾಡಿದ್ದ ಕಾಲ. ಅಂದು ನಾಟಕಗಳಲ್ಲಿ ಪ್ರಸಿದ್ಧ ಕಲಾವಿದರಿದ್ದಂತೆ, ಅವರನ್ನು ಮೆಚ್ಚುವ ಅಪಾರ ಸಂಖ್ಯೆಯ ಪ್ರೇಕ್ಷಕರೂ ಇದ್ದರು. ಗುಬ್ಬಿ ವೀರಣ್ಣನವರ ನಾಟಕ ಕಂಪೆನಿ, ಸುಬ್ಬಯ್ಯನಾಯ್ಡು ಕಂಪೆನಿ ಮೊದಲಾದ ಹೆಸರಾಂತ ನಾಟಕ ಕಂಪೆನಿಗಳಿಂದ ಹಿಡಿದು ಇತರೆ ನಾಟಕ ಕಂಪೆನಿಗಳು ಚಿತ್ರದುರ್ಗದಲ್ಲಿ ತಿಂಗಳುಗಟ್ಟಳೆ ಮೊಕ್ಕಾಂ ಹಾಕುತ್ತಿದ್ದವು. ಈಗ್ಗೆ ಆರೇಳು ದಶಕಗಳ ಹಿಂದೆ ನಾಟಕ ಪ್ರೇಮಿಗಳು ಆಡಿಕೊಳ್ಳುತ್ತಿದ್ದ ಮಾತುಗಳಿಂದ ತಿಳಿದು ಬರುವ ಅಂಶವೇನೆಂದರೆ, ಯಾವುದೇ ಕಂಪೆನಿ ಯಾವ ಊರಲ್ಲಿ ಲುಕ್ಸಾನು ಅನುಭವಿಸಿದರೂ, ಚಿತ್ರದುರ್ಗಕ್ಕೆ ಬಂದರೆ ತಮ್ಮ ಅನ್ನ ಹುಟ್ಟಿಸಿಕೊಡುವ ಜಾಗ ಎಂಬ ಒಳ್ಳೆಯ ಹೆಸರನ್ನು ಈ ಊರು ಪಡೆದಿದ್ದ ಕಾಲವದು. ಹೀಗಿರುವಾಗ ಗೋಕಾಕ್ ನಾಟಕ ಕಂಪೆನಿಯು ಚಿತ್ರದುರ್ಗಕ್ಕೆ ಬಂದಿತು. ನನಗೆ ನೆನಪಿರುವಂತೆ ಆ ಕಂಪೆನಿಯು ಆಡಿದ 'ಬೆಳ್ಳಿಚುಕ್ಕಿ' ನಾಟಕವು ನೂರಾರು ಪ್ರದರ್ಶನ ಕಂಡಿತು. ಆ ಕಂಪೆನಿಯು ಸುಮಾರು ೧೯೫೧-೫೨ರಲ್ಲಿ ಚಿತ್ರದುರ್ಗಕ್ಕೆ ಬಂದಿತ್ತೆಂದು ಕಾಣುತ್ತದೆ.

ಆಗ ಗೋಕಾಕ್ ಕಂಪೆನಿಯ ನಾಟಕಗಳಿಗೆ ತಬಲಾ ವಾದನ ಮಾಡುತ್ತಿದ್ದವರು – ಗುರಪ್ಪ ಎನ್ನುವವರು. ಉತ್ತರಸೀಮೆಯ ಈ ತಬಲಾ ವಾದನಪಟು ಗುರಪ್ಪ ಥಕ್ಕನೆ ನೋಡಿದರೆ ಪೈಲ್ವಾನ್ ತರಹ ಕಾಣುತ್ತಿದ್ದರು. ಅದು ನಿಜವೆಂಬಂತೆ ಅವರು ಪೈಲ್ವಾನರೇ ಆಗಿದ್ದರು. ಆತ

ಗರುಡಿಗಳ ಸಖ್ಯ ಬೆಳೆಸಿಕೊಳ್ಳಬೇಕೆಂದು ಆಶಿಸಿ, ಆತ ಒಂದು ದಿನ ಸಂಜೆ ೪–೦೦ ಗಂಟೆಗೆ ದೊಡ್ಡಗರುಡಿಗೆ ಬಂದರು. ಕುಸ್ತಿಪಟುಗಳೆಲ್ಲಾ ಅಂಗಸಾಧನೆಗಾಗಿ ಗರುಡಿಗೆ ಬರುವ ಸಮಯವದು. ಹೀಗಾಗಿ ಗುರಪ್ಪನವರಿಗೆ ಮುಖ್ಯರಾದ ಎಲ್ಲಾ ಪೈಲ್ವಾನರನ್ನು ನೋಡುವ, ಪರಿಚಯ ಮಾಡಿಕೊಳ್ಳುವ ಸಂದರ್ಭ ಒದಗಿ ಬಂತು. ಈ ಪೈಲ್ವಾನರುಗಳಲ್ಲಿ ಇನ್ನಷ್ಟು ನಿಕಟ ಪರಿಚಯವಾದವರೆಂದರೆ ಪೈಲ್ವಾನ್ ನಂಜಪ್ಪ ಹಾಗೂ ಸಿ.ಟಿ. ತಿಪ್ಪೇಸ್ವಾಮಿಯವರು. ಪರಿಚಯವಾದ ಕೆಲವೇ ದಿನಗಳಲ್ಲಿ ಗುರಪ್ಪನವರು – "ತಬಲಾ ಕಲಿತುಬಿಡಪ್ಪ... ನಂಜಪ್ಪಣ್ಣ" ಎಂದು ಪ್ರೀತಿಯಿಂದ ಹುರಿದುಂಬಿಸತೊಡಗಿದರು. ಕಾರಣವರಿಯದೆ ನಂಜಪ್ಪ ತಬಲಾ ಕಲಿಯಲು ಮನಸ್ಸು ಮಾಡಿದರು. ನಂಜಪ್ಪನವರ ಖಾಸಗಿ ವಿಶ್ವಾಸಕ್ಕೆ ಪಾತ್ರರಾಗಿದ್ದ ಸಿ.ಟಿ. ತಿಪ್ಪೇಸ್ವಾಮಿಯವರೂ ಕಲಿಯಲು ಮನಸ್ಸು ಮಾಡಿದರು. ತಬಲಾ ಕಲಿಕೆ ಆರಂಭವಾಗಿಯೇ ಬಿಟ್ಟಿತು.

ನಾದಿನ್ ದಿನ್ನ ತಕದಿನ
ತಕತೋಂ ತಕತೋಂ
ತಕ ತಕ ತರಂಗ
ಧಾದೋ ತರಂಗ
ತಕದಿಂ ತಕದಿಂ

– ಎಂದು ಗುರಪ್ಪ ತಬಲಾ ತಟ್ಟಿ, ಈ ಪೈಲ್ವಾನ್ ಶಿಷ್ಯರ ಬೆನ್ನುತಟ್ಟಿ ತಬಲಾ ಪಾಠ ಶುರುಮಾಡಿ ಆಸಕ್ತಿ ಕುದುರಿಸಿಯೇ ಬಿಟ್ಟರು. ಹೀಗಾಗಿ ಅವರು ಪಾಠ ಶುರು ಮಾಡಿದ ಕೆಲವೇ ದಿನಗಳಲ್ಲಿ ಸಿ.ಟಿ. ತಿಪ್ಪೇಸ್ವಾಮಿ ಒಂದು ಸೆಟ್ ತಬಲಾವನ್ನು ಮನೆಗೆ ತಂದು ಬಿಟ್ಟರು. ಗುರಪ್ಪ ಮಾಸ್ಟರ್ ತಬಲಾ ಹೇಳಿಕೊಟ್ಟದ್ದು ಒಂದೇ ತಿಂಗಳು. ಅಷ್ಟರಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಹಾಡುಗಳ ಮಟ್ಟು, ಅವಕ್ಕೆ ತಬಲಾ ಪೆಟ್ಟು ಹೇಗೆ ಬೀಳಬೇಕೆಂಬ ತಿಳುವಳಿಕೆ ಎಲ್ಲವನ್ನು ಇವರಿಗೆ ಮಧ್ಯೆ ಮಧ್ಯೆ ಹೇಳಿಕೊಟ್ಟರು. ಪೈಲ್ವಾನ್ ನಂಜಪ್ಪ ಮತ್ತು ತಿಪ್ಪೇಸ್ವಾಮಿ ಇಬ್ಬರೂ ಬಿಡುವಿನ ವೇಳೆಯಲ್ಲಿ ಸತತವಾಗಿ ಅಭ್ಯಾಸ ಮಾಡಿ ಚೆನ್ನಾಗಿ ಕೈ ಪಳಗಿಸಿಕೊಂಡರು.

ನಂಜಪ್ಪನವರು ಹೀಗೆ ತಬಲಾ ಕಲಿತಿದ್ದು ಒಳ್ಳೆಯದೇ ಆಯಿತು. ಅದರ ಲಾಭ ದೊಡ್ಡಗರುಡಿಗೂ ಆಯಿತೆನ್ನಬೇಕು. ಏಕೆಂದರೆ ಇಷ್ಟು ಹೊತ್ತಿಗೆ ದೊಡ್ಡಗರುಡಿಯು ಕುಸ್ತಿಪಟುಗಳನ್ನು ನಿರ್ಮಿಸಿ ಸಮಾಜಕ್ಕೆ ಕೊಡುವ ಒಂದು ಜವಾಬ್ದಾರಿಯ ಜೊತೆಗೆ, ಅದು ತನ್ನ 'ಸಾಂಸ್ಕೃತಿಕ ಮುಖ'ವೊಂದನ್ನು ತೋರಿಸಲು ತವಕಿಸುತ್ತಿತ್ತು. ಚನ್ನಗಿರಿಯಿಂದ ಬಂದಿದ್ದ ಸ್ಯಾನಿಟರಿ ಇನ್ಸ್‌ಪೆಕ್ಟರ್ ಬಸವರಾಜು ಐವರು ದೊಡ್ಡಗರುಡಿಯ ತರುಣರಿಗೆ ನಾಟಕದ ಹುಚ್ಚು ಹಿಡಿಸಿ, ಅವರ ಅಭಿನಯ ಸಾಮರ್ಥ್ಯವನ್ನು ಹೊರತೆಗೆಯುವ ಪ್ರಯತ್ನ ಮಾಡುತ್ತಿದ್ದರು.

ಹೀಗಾಗಿ ದೊಡ್ಡಗರುಡಿಯಲ್ಲಿ 'ನವಭಾರತ ತರುಣ ಕಲಾವಿದರ ಸಂಘ' ಸ್ಥಾಪಿತ ವಾಯಿತು. ಚಿತ್ರದುರ್ಗವು ಮರೆಯಲಾರದ ಪ್ರಖ್ಯಾತ ಇತಿಹಾಸ ಸಂಶೋಧಕರೂ, ವಿದ್ವಾಂಸರೂ ಆದ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಈ ಸಂಘವನ್ನು ಉದ್ಘಾಟಿಸಿದರು. ಉತ್ಸಾಹಿಗಳಾದ ಈ ಗರುಡಿಯ ತರುಣ ಕಲಾವಿದರು ಅಭಿನಯಕ್ಕೆ ಮಾತ್ರ ತಮ್ಮ ಶಕ್ತಿ-ಸಾಮರ್ಥ್ಯ ಮೀಸಲಿರಿಸಲಿಲ್ಲ. ನಾಟಕ ರಂಗಭೂಮಿಯಿಂದ ಹಿಡಿದು, ಆಸನ ವ್ಯವಸ್ಥೆಯ ತನಕ ಮೈ ಮುರಿದು ದುಡಿದು ನಾಟಕವಾಡಬೇಕಾಗಿತ್ತು. ಇವರು ಮೊದಲು ಅಭಿನಯಿಸಿದ 'ರಕ್ತರಾತ್ರಿ' ನಾಟಕದ ಹಿಂದೆ ಇಂಥ ಶ್ರಮ, ಕಲಾಪ್ರೇಮ ಇತ್ತೆಂಬುದು ವಾಸ್ತವದ ಸಂಗತಿ.

ಮುಂದೆ ದೊಡ್ಡಗರುಡಿಯ ನವಭಾರತ ತರುಣ ಕಲಾವಿದರು ಅಭಿನಯಿಸಿದ ನಾಟಕ 'ರಾಜಾ ವೀರ ಮದಕರಿನಾಯಕ' ಚಿತ್ರದುರ್ಗದ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು ಎಂಬುದಕ್ಕಿಂತ ಹುಚ್ಚೆದ್ದು ಕುಣಿಯುವಂತೆ ಮಾಡಿತು. ಅಂದಿಗೆ ಕೇವಲ ನೂರು-ನೂರಾಐವತ್ತು ವರ್ಷಗಳ ಹಿಂದೆ ನಡೆದ ಇಲ್ಲಿನ ಪಾಳೆಯಗಾರರ ರೋಚಕ ಇತಿಹಾಸವನ್ನು – ಇತಿಹಾಸಕ್ಕೆ ಅಪಚಾರವೆಸಗದಂತೆ – ವಸ್ತುವನ್ನಾಗಿ ಮಾಡಿಕೊಂಡು ಪಿ. ಸೀತಾರಾಮ ರೆಡ್ಡಿಯವರು ರಚಿಸಿದ 'ರಾಜಾವೀರ ಮದಕರಿನಾಯಕ' ನಾಟಕವು ಅದ್ಭುತ ಯಶಸ್ಸು ಕಂಡ ನಾಟಕ. ಸುಮಾರು ನಾಲ್ಕು ನೂರಾ ಐವತ್ತು ಪ್ರದರ್ಶನಗಳನ್ನು ಕಂಡ ಈ ನಾಟಕವನ್ನು ನಿರ್ದೇಶಿಸಿದವರು ಸಿ.ಟಿ.ಎಸ್. ನಾಯಕ್. ಇವರು ಇದರಲ್ಲಿ ಪ್ರಧಾನಿ ಪರಶುರಾಮನಾಯಕನ ಪಾತ್ರವನ್ನು ಮಾಡುತ್ತಿದ್ದರು. ಈ ನಾಟಕದ ಪಾತ್ರಧಾರಿಗಳು ಇಲ್ಲಿನ ಸಂಭಾಷಣೆಗೆ ಮನಸೋತು ಬೇರೆ ಎಲ್ಲಾ ಪಾತ್ರಗಳ ಸಂಭಾಷಣೆಯನ್ನು ಕಂಠಪಾಠ ಮಾಡಿಬಿಟ್ಟಿದ್ದರು! ಹೀಗಾಗಿ ಯಾವ ಪಾತ್ರ ಅಕಸ್ಮಾತ್ ಕೈಕೊಟ್ಟರೂ ಅಂದು ಇನ್ನೊಬ್ಬರು ಆ ಪಾತ್ರವನ್ನು ಅಷ್ಟೆ ಸಮರ್ಥವಾಗಿ ಮಾಡುತ್ತಿದ್ದರು. ಈ ನಾಟಕದಲ್ಲಿ ದಿವಾನ್ ಪೂರ್ಣಯ್ಯನವರ ಪಾತ್ರ ಮಾಡುತ್ತಿದ್ದ ಎಚ್.ಜಿ. ಸೋಮಶೇಖರರಾವ್ ಅವರು ಒಮ್ಮೆ ಮದಕರಿನಾಯಕನ ಪಾತ್ರಧಾರಿ ತಿಪ್ಪಾನಾಯಕ್ ಆಕಸ್ಮಿಕವಾಗಿ ಬರದಿದ್ದುದರಿಂದ ತಾವು ಮಾಡಿ ಎಲ್ಲರ ಪ್ರಶಂಸೆಗೆ ಪಾತ್ರರಾದುದನ್ನು ನೆನಪಿಸಿಕೊಳ್ಳುತ್ತಾರೆ. ಈ ನಾಟಕದ ಯಶಸ್ಸಿಗೆ ಒಂದು ಮುಖ್ಯ ಕಾರಣವೆಂದರೆ ಆಗಷ್ಟೇ ಬ್ರಿಟಿಷರು ಭಾರತದಿಂದ ಕಾಲ್ತೆಗೆದಿದ್ದರು. ನಾಡು-ನುಡಿಯ ಬಗ್ಗೆ ಪ್ರೇಮ ಉಕ್ಕಿಸುವ, ಪರೋಕ್ಷವಾಗಿ ದೇಶಪ್ರೇಮವನ್ನು ಪ್ರಚೋದಿಸುವಂತಿದ್ದ ಈ ನಾಟಕ ಅಪಾರ ಮನ್ನಣೆ ಗಳಿಸಿದ್ದು ಸಹಜವಾಗಿಯೇ ಇದೆ. ನವಭಾರತ ತರುಣ ಕಲಾವಿದರ ಸಂಘದ ಎಲ್ಲಾ ನಾಟಕಗಳಿಗೆ ಅಂದು ತಬಲಾ ನುಡಿಸುತ್ತಿದ್ದವರು ನೀಲಪ್ಪ ಎನ್ನುವವರು. ನಂಜಪ್ಪ ಮತ್ತು ತಿಪ್ಪೇಸ್ವಾಮಿ ತಬಲಾ ಕಲಿತ ಮೇಲೆ ನೀಲಪ್ಪ ಇವರಿಗೂ ತಬಲಾ ನುಡಿಸಲು ಅವಕಾಶ ಕಲ್ಪಿಸಿಕೊಟ್ಟರು. ಈ ನವಭಾರತ ತರುಣ ಕಲಾವಿದರ ಸಂಘದಲ್ಲಿ ಸಂಘಟನೆಯೇ ಮುಖ್ಯ ಗುಣ. ವೃತ್ತಿ ಮಾತ್ಸರ್ಯವಿರಲಿಲ್ಲ. ಪರಸ್ಪರ ಪ್ರೀತಿ, ಸಹಕಾರಗಳಿದ್ದವು. ಹೀಗಾಗಿ ಈ ನಾಟಕಗಳಿಗೆ ಪೈಲ್ವಾನ್ ನಂಜಪ್ಪ ಬಹಳ ಸಾರಿ ತಬಲಾ ನುಡಿಸುತ್ತಿದ್ದರು. ಹಾಡುಗಳಿಗೆ

ತಬಲಾ ನುಡಿಸುತ್ತಿದ್ದುದಲ್ಲದೆ, ನಾಟಕದ ಪರಿಣಾಮಕಾರಿ ದೃಶ್ಯಗಳಿಗೂ ಪರಿಣಾಮಕಾರಿಯಾಗಿ ತಬಲಾ ನುಡಿಸಿ ಕಲಾವಿದರ ಮೆಚ್ಚಿಗೆ ಪಡೆದರು.

ನಂಜಪ್ಪನವರ ತಬಲಾ ಪರಿಣಿತಿಯ ಬಗ್ಗೆ ನಮ್ಮ ಮನೆಯಲ್ಲಿ ನಡೆದ ಒಂದು ಸಂಗತಿಯನ್ನು ಹೇಳಿದರೆ ಇಲ್ಲಿ ಅಪ್ರಸ್ತುತವಾಗಲಾರದು. ಐದಾರು ದಶಕಗಳ ಹಿಂದೆ ನಮ್ಮ ಮನೆಯಲ್ಲಿ ಒಂದು ಹೊಸ ಸಂಪ್ರದಾಯವೊಂದು ಸೃಷ್ಟಿಯಾಯಿತು. ಶ್ರಾವಣದ ಪ್ರತಿ ಶನಿವಾರವೂ ಸಂಜೆ ಶ್ರೀರಾಮನ ಪೂಜೆ ಮತ್ತು ಸ್ಥಳದ ಸಂಗೀತ ವಿದ್ವಾಂಸರಿಂದ ಸಂಗೀತ ಕಚೇರಿ, ಬಳಿಕ ಪ್ರಸಾದ ವಿನಿಯೋಗ. ನಮ್ಮ ತಂದೆ ಪೋಲೀಸ್ ಕಾನ್ಸ್‌ಟೇಬಲ್ ಆಗಿ ಕೆಲಸ ನಿರ್ವಹಿಸುತ್ತಿದ್ದರೂ, ಅವರ ವಿಚಿತ್ರ ಅಭಿರುಚಿಗನುಗುಣವಾಗಿ ಈ ಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿತ್ತು. ಅವರು ಅಂಥ ಸಣ್ಣ ವೃತ್ತಿಯಲ್ಲಿದ್ದರೂ ನಮ್ಮ ಏರಿಯಾದಲ್ಲಿ ಒಂದು ರೀತಿಯಲ್ಲಿ ಗೌರವ ಸಂಪಾದಿಸಿದ್ದ ದೊಡ್ಡ ಮನುಷ್ಯರಾಗಿದ್ದರು. ಅವರಿಗೆ ನಂಜಪ್ಪ ತಮ್ಮ ಮುಂದೆ ಬೆಳೆದ ಪ್ರೀತಿಯ ಹುಡುಗ. ಅವರು ನಂಜಪ್ಪರನ್ನು ಪ್ರೀತಿಯಿಂದ 'ನಂಜು.... ಇವೊತ್ತು ಸಂಗೀತ ಕಚೇರಿಗೆ ಮೃದಂಗ ನುಡಿಸುವವರು ಬಂದಿಲ್ಲ ಕಣೋ... ನೀನು ಬಂದು ತಬಲಾ ನುಡಿಸೋ... ಹಾಡುಗಾರಿಕೆ ಕೆಟ್ಟುಹೋಗಿಬಿಡುತ್ತೆ' ಎಂದರೆ ಸಾಕು, ನಂಜು ವಿನಯಶಾಲಿ ಮಗುವಿನಂತೆ ತಲೆ ತಗ್ಗಿಸಿಕೊಂಡು ಬಂದು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟು ಹೋಗುತ್ತಿದ್ದರು. ಹಾಡಲು ಬರುತ್ತಿದ್ದವರೆಲ್ಲಾ ಕರ್ನಾಟಕ ಸಂಗೀತದಲ್ಲಿ ವಿದ್ವತ್ ಆದವರು. ಅವರಿಗೆ ಲಯತಪ್ಪದೆ ಸಂಗೀತ ನುಡಿಸಿ ಮೆಚ್ಚಿಕೆ ಪಡೆದ ನಂಜಪ್ಪರನ್ನು ಕುರಿತು ಈಗ ಯೋಚಿಸಿದರೆ ನನಗೆ ಆಶ್ಚರ್ಯವಾಗುತ್ತದೆ. ನಂಜಪ್ಪ ಸಾಮಾನ್ಯವಾಗಿ ನಾಟಕಗಳಿಗೆ ಮಾತ್ರ ತಬಲ ನುಡಿಸುತ್ತಿದ್ದರು. ಆದರೆ ಶಿವರಾತ್ರಿಯ ಭಜನೆಗಳಲ್ಲಿಯೂ ತಬಲಾ ನುಡಿಸಿದ್ದನ್ನು ಅವರ ಕೆಲವು ನಿಕಟವರ್ತಿಗಳೂ ಜ್ಞಾಪಿಸಿಕೊಳ್ಳುತ್ತಾರೆ.

ಆಗಿನ ಕಾಲದ ಕಂಪೆನಿ ನಾಟಕಗಳ, ಮಾಲೀಕರ, ನಟರ, ಪ್ರೇಕ್ಷಕರ ಸಂಬಂಧಗಳು ಒಂದು ರೀತಿಯ ಭಾವೋನ್ಮಾದದಿಂದ ಕೂಡಿದಂತೆ ಕಾಣುತ್ತದೆ. ಯಾವುದಾದರೂ ಕಂಪೆನಿ ನಾಟಕ ಬಂದು ಊರಲ್ಲಿ ನಾಟಕ ಪ್ರದರ್ಶನ ಮಾಡಿ ಅದು ಯಶಸ್ವಿಯಾಗಿ ಮುಂದು ವರಿಯುತ್ತಿದ್ದರೆ ಅದರ ಅರ್ಥ ಹೊಸ ಪ್ರೇಕ್ಷಕರ ನೂಕು ನುಗ್ಗಲು ಎಂದಲ್ಲ. ಕೆಲವು ಪರ್ಮನೆಂಟು ಪ್ರೇಕ್ಷಕರು ಪ್ರತಿದಿನ ಬಂದು ಮನ ದಣಿಯುವಂತೆ ಈ ನಾಟಕ ನೋಡುತ್ತಿದ್ದಾರೆ ಎಂದು ಅರ್ಥ. ಇಂಥವರಲ್ಲಿ ಶ್ರೀಮಂತ ಹೃದಯದ ಶ್ರೀಮಂತ ಪ್ರೇಕ್ಷಕರಿದ್ದರೆ ಅವರು ತಮ್ಮ ಕೈಯಲ್ಲಿದ್ದ ಬಂಗಾರದುಂಗುರವನ್ನು ನಟರ ಬೆರಳಿಗೆ ತೊಡಿಸುವ ಪೈಕಿ ! ಹಾಗೆಯೇ ಚಿನ್ನದ ಪದಕವನ್ನು ಕೊರಳಿಗೆ ಹಾಕುವ ಪೈಕಿ ! ಇಂಥ ಸ್ವಭಾವ ಕಂಪನಿಯ ಮಾಲೀಕರಿಗೂ ಇತ್ತೆಂದು ಕಾಣುತ್ತದೆ. ಮಾಸ್ಟರ್ ಹಿರಣ್ಣಯ್ಯ ಒಮ್ಮೆ ಚಿತ್ರದುರ್ಗಕ್ಕೆ ಬಂದು ನಾಟಕಗಳನ್ನಾಡಿದಾಗ ಅವರು ಖುಷಿಯಾಗಿ ಕೊನೆಯಲ್ಲಿ ಸಿ.ಟಿ. ತಿಪ್ಪೇಸ್ವಾಮಿಗೆ ತಬಲಾ ನುಡಿಸಿದ್ದಕ್ಕೆ ಒಂದು ಬೆಳ್ಳಿ ಪಾತ್ರೆಯನ್ನು

ಉಡುಗೊರೆಯಾಗಿ ಕೊಟ್ಟರಂತೆ. ಪೈಲ್ವಾನ್ ನಂಜಪ್ಪನವರು ತಬಲಾ ನುಡಿಸಿದ್ದಕ್ಕೆ ಎರಡು ತೊಲದ ಒಂದು ಬಂಗಾರದ ಉಂಗುರವನ್ನು ಅವರಿಗೆ ಕಾಣಿಕೆಯಾಗಿ ಕೊಟ್ಟರಂತೆ.

ನಂಜಪ್ಪ ಈ ಉಂಗುರವನ್ನು ಮಹಾ ಕಾಣಿಕೆಯೆಂದು ಭಾವಿಸಿ ಪ್ರದರ್ಶನ ಮಾಡುವ ಪೈಕಿಯಲ್ಲ. ಆ ಉಂಗುರವನ್ನು ತಮ್ಮ ಬಾಲಕ ಶಿಷ್ಯ ನಾಗರಾಜನಿಗೆ ಕೊಟ್ಟು 'ಹಾಕಿಕೊಂಡಿರೋ' ಎಂದರು. ಆಗ ನಾಗರಜ್ ೯ನೇ ಕ್ಲಾಸ್ ಓದುತ್ತಿದ್ದ ಹುಡುಗ. ಇದ್ದಕ್ಕಿದ್ದಂತೆ ಒಮ್ಮೆ ನಂಜಪ್ಪ ಸ್ಕೂಲ್ ಹತ್ತಿರ ಬಂದು, ಕಿಟಕಿಯ ಮೂಲಕವೇ ನಾಗರಾಜ್‌ಗೆ ಮಾತಾಡಿಸಿ, ಉಂಗುರ ಪಡೆದು ಹೊರಟುಹೋದರು. ಫಕೀರನಂತೆ ಜೀವನ ಸಾಗಿಸುತ್ತಿದ್ದ ನಂಜಪ್ಪ ತತ್ಕಾಲದ ಯಾವ ಖರ್ಚಿಗೆ ಆ ಉಂಗುರ ಬಳಸಿದರೋ ಗೊತ್ತಿಲ್ಲ. ಇವರ ತಬಲಾ ವಾದನವನ್ನು ಮೆಚ್ಚಿದವರಲ್ಲಿ ಹೊನ್ನಪ್ಪ ಭಾಗವತರೂ ಒಬ್ಬರು. ಈತ ನಿಜವಾಗಿಯೂ ತಬಲಾಪಟು. ಆದರೆ ಅದಕ್ಕಿಂತ ಮಿಗಿಲಾಗಿ ಕುಸ್ತಿಪಟು.

ನಂಜಪ್ಪ ತಬಲಾಪಟುವಾದ ಮೇಲೆ ನಡೆದ ಹಾಸ್ಯ ಪ್ರಸಂಗವೊಂದನ್ನು ಸಿ.ಟಿ.ಎಸ್. ನಾಯಕರು ಜ್ಞಾಪಿಸಿಕೊಳ್ಳುತ್ತಾರೆ. ಮೈಸೂರಿನ ಮಹಾರಾಜರು ನವಭಾರತ ತರುಣಕಲಾವಿದರ ಸಂಘವು ಅಭಿನಯಿಸುತ್ತಿದ್ದ 'ರಾಜಾ ವೀರಮದಕರಿನಾಯಕ' ನಾಟಕವನ್ನು ನೋಡಬೇಕೆಂದು ಅಪೇಕ್ಷಿಸಿ, ಜಗನ್ಮೋಹನ ಪ್ಯಾಲೇಸಿನಲ್ಲಿ ರಾಜಪರಿವಾರದವರಿಗೋಸ್ಕರ ಈ ನಾಟಕ ಏರ್ಪಡಿಸಿದರು. ಅರಮನೆಯ ಸಂಪ್ರದಾಯದಂತೆ ನಾಟಕದ ವಾದ್ಯವೃಂದದವರು ಸಾಂಪ್ರದಾಯಕ ಅರಮನೆಯ ವೇಷಭೂಷಣಗಳನ್ನು ಹಾಕಿಕೊಳ್ಳಬೇಕು. ನಂಜಪ್ಪ ಕೂಡಾ ಹಾಕಿಕೊಂಡು ತಬಲಾ ನುಡಿಸುತ್ತಿದ್ದರು. ಆದರೆ ನಾಟಕದಲ್ಲಿ ಅಭಿನಯಿಸುತ್ತಿದ್ದವರಿಗೆ ಆ ವೇಷದಲ್ಲಿದ್ದ ನಂಜಪ್ಪನವರನ್ನು ನೋಡಿ ನಗು ಬರತೊಡಗಿತು ! ಇದು ಅತಿರೇಕಕ್ಕೆ ಹೋದೀತು ಎಂದು ಹೆದರಿ ಅಲ್ಲಿನ ಅಧಿಕಾರಿಯೊಬ್ಬರ ಅಪ್ಪಣೆ ಪಡೆದು, ನಂಜಪ್ಪ ಧರಿಸಿದ್ದ ಪೇಟ ತೆಗೆಸಿ ಕೆಳಗಿಡಿಸಿದರಂತೆ ! ಯಾರಿದ್ದರೇನು ನಗೆ ಅದುಮಿಡಲು ಆದೀತೆ? ಯಾರನ್ನು ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಗೆದ್ದು ತನ್ನ ವಶಕ್ಕೆ ತೆಗೆದುಕೊಳ್ಳುವ ಹಾಸ್ಯ ನಿಜವಾದ ಚಕ್ರವರ್ತಿ !

೧೩ ಖಾಸಗಿ ಬದುಕು

ಒಬ್ಬ ವ್ಯಕ್ತಿ ಸಮಾಜದಲ್ಲಿ ಒಂದು ಸಾರಿ ವಿಶಿಷ್ಟ ಬಗೆಯಲ್ಲಿ ತನ್ನ ವ್ಯಕ್ತಿತ್ವವನ್ನು ಬಿಂಬಿಸಿದನೆಂದರೆ ಆ ವಿಶಿಷ್ಟ ವ್ಯಕ್ತಿತ್ವವನ್ನು ಮಾತ್ರ ಆ ಸಮಾಜವು ಗುರುತಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಅಂತಹ ವಿಶಿಷ್ಟ ವ್ಯಕ್ತಿತ್ವದ ಹಿಂದೆ ಅಡಗಿರುವ ಸಾಮಾನ್ಯ ಮನುಷ್ಯ ಕಳೆದು ಹೋಗುತ್ತಾನೆ. ಕುಸ್ತಿ ಲೋಕದಲ್ಲಿ ಸಾಧನೆ ಮಾಡಿ ವಿಶಿಷ್ಟ ಕುಸ್ತಿ ಪಟುವಾಗಿ ರೂಪುಗೊಂಡ ನಂಜಪ್ಪನವರ ಬದುಕಿನಲ್ಲಿಯೂ ಇಂತಹ ಸಾಮಾನ್ಯ ಮನುಷ್ಯನ ಜೀವನವೊಂದು ಕಳೆದು ಹೋಗಿರುವ ಸಾಧ್ಯತೆ ಇದೆ. ಅವರ ಇಂತಹ ಕಳೆದುಹೋದ ಅಲ್ಪಸ್ವಲ್ಪ ಸಾಮಾನ್ಯ ಜೀವನದ ಸಂಗತಿಗಳನ್ನು ಒಮ್ಮೆ ಹುಡುಕಿ ನೋಡುವ ಪ್ರಯತ್ನ ಮಾಡೋಣ.

ನಂಜಪ್ಪನವರ ಕೌಟುಂಬಿಕ ಜೀವನದ ಹಿನ್ನೆಲೆಯನ್ನು ನೋಡಿದರೆ ಅವರು ಒಂದು ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬಂದವರು. ಅವರ ತಂದೆ ಈಶ್ವರಪ್ಪನವರು ಅಂದಿನ ದಿನಗಳಲ್ಲಿ ದೊಡ್ಡ ವ್ಯಾಪಾರಿಗಳಾಗಿದ್ದವರು. ನಂಜಪ್ಪ ಕೂಡ ಇಂತಹ ವ್ಯಾಪಾರ ವಹಿವಾಟಿನಲ್ಲಿ ಮುಳುಗಿದ್ದರೆ ಅವರ ಜೀವನ ಹೇಗೆ ಸಾಗುತ್ತಿತ್ತು ಎಂಬುದು ಕೇವಲ ಊಹೆಯ ವಿಚಾರ. ಇಂತಹ ಮನೆಯಿಂದ ಅವರು ಗರಡಿಗೆ ಸೇರಿದ ಬಳಿಕ ಕುಸ್ತಿ ಪಟುವಾಗಿ ಮೇಲೆ ಬರುವ ಹುನ್ನಾರಿನಲ್ಲಿ ಆ ಶ್ರೀಮಂತಿಕೆಯನ್ನೆಲ್ಲ ಮರೆತು ಹೆಚ್ಚುಕಡಿಮೆ ತಮ್ಮ ಬದುಕನ್ನು ಗರಡಿಯಲ್ಲಿ ಕಳೆದವರು. ಗರಡಿಯಲ್ಲಿಯೇ ವಾಸ್ತವ್ಯ, ಓಡಾಟ, ಊಟ ಇತ್ಯಾದಿಗಳು ಎಂದು ಅವರನ್ನು ಬಲ್ಲವರು ಹೇಳುತ್ತಾರೆ.

ಪೈಲ್ವಾನ್ ಆಗಿ ನಂಜಪ್ಪ ಕಾಣಿಸಿಕೊಳ್ಳುವ ಗಂಭೀರ ವ್ಯಕ್ತಿತ್ವವೇ ಬೇರೆ. ಸಾಮಾನ್ಯವಾಗಿ ಆತನ ಸುಖ–ದುಃಖಗಳು, ಸಂತೋಷದ ಕ್ಷಣಗಳು, ಆತನ ಒಂಟಿತನ, ಗೆಳೆತನ ಇತ್ಯಾದಿಗಳೇ ಬೇರೆ. ನಂಜಪ್ಪನವರು ಸರಳತೆಗೆ ಹೆಚ್ಚು ಗಮನ ಕೊಟ್ಟಿದ್ದರು. ಅವರು ಎಂದೂ ಶ್ರೀಮಂತರಂತೆ ಮೆರೆಯಲಿಲ್ಲ. ಸಾಮಾನ್ಯವಾಗಿ ಅವರು ಧರಿಸುತ್ತಿದ್ದುದು ಸಿಲ್ಕ್ ಜುಬ್ಬ, ಪೈಜಾಮ ತಪ್ಪಿದರೆ ಪಂಚೆ. ಆ ಸಿಲ್ಕಿನ ಜುಬ್ಬ ಇಸ್ತ್ರಿ ಮಾಡಿ ಅಂಗಡಿಯಿಂದ ತರಿಸಿದರೆ ಅದನ್ನು ಹಾಗೆಯೇ ಧರಿಸುತ್ತಿರಲಿಲ್ಲ. ಇಸ್ತ್ರಿ ಮಾಡಿದ್ದ ಜುಬ್ಬವನ್ನು ಕೈಯಲ್ಲಿ ಹಿಸುಕಿ ಹಿಸುಕಿ ಬಳಿಕ ಕೊಡವಿ ಧರಿಸುತ್ತಿದ್ದರಂತೆ. ಇದು ಅವರ ಸರಳತೆಯನ್ನು ಬಿಂಬಿಸುವಂತೆ ಪೈಲ್ವಾನ್ ಲಕ್ಷಣವನ್ನೂ

ಬಿಂಬಿಸುತ್ತದೆ. ಎಂತಹ ಸ್ಟೈಲ್‌ವಾಲೀ ಪೈಲ್ವಾನನನ್ನೂ ಹಿಸುಕಿ ಬಿಸಾಕುತ್ತೇನೆ ಎಂಬಂತಿತ್ತು ಅವರು ಜುಬ್ಬಾ ಧರಿಸುವ ರೀತಿ.

ಅಂದಿನ ಕಾಲದಲ್ಲಿ ಪೈಲ್ವಾನನೆಂದರೆ ವೀರಾಧಿವೀರ, ಮಹಾಗಂಡು ಎಂಬ ಭಾವನೆ ಇತ್ತು. ಅವನು ಬ್ರಹ್ಮಚರ್ಯಕ್ಕೆ ಒತ್ತು ಕೊಟ್ಟಿರುತ್ತಾನೆ ಎಂಬುದು ಅಂತಹ ನಂಬಿಕೆಗಳಲ್ಲಿ ಒಂದು. ಆದ್ದರಿಂದ ಕುಸ್ತಿ ನಡೆಯುವ ಅಖಾಡಕ್ಕೆ ಪೈಲ್ವಾನನನ್ನು ಗರಡಿಯಿಂದ ಕರೆದೊಯ್ಯಬೇಕಾದರೆ ವೈಭವದಿಂದ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿತ್ತು. ರಸ್ತೆಗಳಲ್ಲಿ ಬೀದಿಗಳಲ್ಲಿ ಸ್ತ್ರೀಯರು, ವಿಧವೆಯರು ಆ ಪೈಲ್ವಾನನಿಗೆ ಎದುರಾಗದಂತೆ ಎಚ್ಚರ ವಹಿಸಲಾಗುತ್ತಿತ್ತು. ಇಂತಹ ಯಾವ ಅದ್ಧೂರಿಯ ಸಂಪ್ರದಾಯವನ್ನೂ ನಂಜಪ್ಪ ಬಯಸುತ್ತಿರಲಿಲ್ಲ. ಒಡನಾಡಿಗಳನ್ನು, ಕುಸ್ತಿಪ್ರೇಮಿಗಳನ್ನು ಮೊದಲೇ ಹೋಗಲು ಹೇಳಿಬಿಡುತ್ತಿದ್ದರು. ನಾಲ್ಕೈದು ಜನ ಆಪ್ತರ ಜೊತೆ ಗರಡಿಯಿಂದ ಸರಳವಾಗಿ ಹೊರಡುತ್ತಿದ್ದರು.

ಸಾಮಾನ್ಯವಾಗಿ ಪೈಲ್ವಾನರು ಅಖಾಡಕ್ಕೆ ಬಂದಾಗ ತಾವು ಭಾರೀ ಪೈಲ್ವಾನರು ಎಂಬ ಪ್ರತಾಪದ ಪ್ರದರ್ಶನ ಮಾಡುತ್ತಾರೋ ಎಂಬಂತೆ, "ಆಲಿ ಮದತ್... ಆಹ್... ಓಹ್..." ಎಂದು ಕೂಗುತ್ತ ಅಖಾಡದ ತುಂಬ ಕುಣಿದಾಡಿ ಓಡಾಡಿ ಸೆಡ್ಡು ಹೊಡೆಯುತ್ತಾರೆ, ಪ್ರೇಕ್ಷಕರ ಗಮನ ಸೆಳೆಯುತ್ತಾರೆ. ಕುಸ್ತಿಕಲೆಯ ರಂಜನೆಗೆ ಇದು ಅಗತ್ಯ. ಆದರೆ ಕುಸ್ತಿ ಕಲೆಯಲ್ಲಿ ತುಂಬಿದ ಕೊಡದಂತೆ ಇದ್ದ ನಂಜಪ್ಪ ಇಂತಹ ಕೂಗಾಟ, ಕೇಕೆ ಏನೂ ಮಾಡುತ್ತಿರಲಿಲ್ಲ. ತೊಡೆತಟ್ಟಿ, ತೋಳು ತಟ್ಟಿ ನಿಂತರೆ ಮುಗಿಯಿತು. ಈಗ ನಂಜಪ್ಪನ ಮೇಲೆ ಎಲ್ಲರ ಕಣ್ಣು ! ವಿಜಯದ ಮಿಂಚು ಎಲ್ಲಿ ಮಿಂಚಿಸುತ್ತಾನೆ ಎಂಬ ಬಗ್ಗೆ ಕುತೂಹಲ.

ಕುಸ್ತಿ ಲೋಕದಲ್ಲಿ ಹೀಗೆ ಸರಳತೆಯನ್ನು ತೋರಿ ಕುಸ್ತಿ ಕಲೆಯಲ್ಲಿ ಸಾರ್ವಭೌಮನಾಗಿದ್ದ ನಂಜಪ್ಪರ ಈ ಗುಣ ಅವರು ಕುಸ್ತಿ ಮಾಡಿದ ಬೆಂಗಳೂರು, ಮೈಸೂರು, ಬಳ್ಳಾರಿ, ಹೊಸಪೇಟೆ, ದಾವಣಗೆರೆ ಮೊದಲಾದ ಕಡೆ ಜನರ ಅಪಾರ ಗೌರವ ಸಂಪಾದಿಸಿಕೊಟ್ಟಿತ್ತು. ಅವರು ಕುಸ್ತಿ ಆಡುತ್ತಿದ್ದ ಊರುಗಳಲ್ಲಿ ಅವರಿಗೆ ಊಟ–ತಿಂಡಿ–ತಯಾರಿ ಎಲ್ಲವನ್ನು ನೋಡಿಕೊಳ್ಳುತ್ತಿದ್ದರು. ವಸಂತರಾವ್, ಗೋಪಾಲಪ್ಪ ಮೊದಲಾದವರು ನಂಜಪ್ಪ ಸಂಪಾದಿಸಿದ್ದ ಈ ಗೌರವವನ್ನು ಕಂಡು ಈಗಲೂ ಅವರ ಬಗ್ಗೆ ತಾವೂ ಕೂಡ ಗೌರವ ತೋರಿಸುತ್ತಾರೆ. ಪೈಲ್ವಾನ್ ಗೋಪಾಲಪ್ಪ ತಿಳಿಸುವಂತೆ ಶಿವಮೊಗ್ಗೆಯ ಕೆಂಚಪ್ಪನ ಗರಡಿ, ಬೆಂಗಳೂರಿನ ಕೆಂಪಣ್ಣನ ಗರಡಿ, ಮೈಸೂರಿನ ದೋಬೀರಾಮನ ಗರಡಿಗಳಲ್ಲಿ ನಂಜಪ್ಪ ಮತ್ತು ಅವರ ಶಿಷ್ಯರಿಗೆ ಎಲ್ಲಿಲ್ಲದ ಗೌರವದ ಆತಿಥ್ಯ ದೊರೆಯುತ್ತಿತ್ತು.

ದಾವಣಗೆರೆಯಲ್ಲಿ ನಂಜಪ್ಪ ಇಂತಹದ್ದೇ ಗೌರವವನ್ನು ಸಂಪಾದಿಸಿದ್ದರು. ಆದರೆ ಅವರು ಅಲ್ಲಿ ಗರಡಿಗಳಲ್ಲಿ ಉಳಿದುಕೊಳ್ಳುತ್ತಿರಲಿಲ್ಲ. ಅಲ್ಲಿ ವಿಶೇಷವಾಗಿ ನಾರಣಪ್ಪನವರ ಹೋಟೆಲಿನವರು ನಂಜಪ್ಪನವರನ್ನೂ ಅವರ ಒಡನಾಡಿಗಳನ್ನೂ ಮತ್ತು ಶಿಷ್ಯರನ್ನೂ ತುಂಬಾ

ಪ್ರೀತಿಯಿಂದ ವಸತಿ ಸೌಕರ್ಯ ಕಲ್ಪಿಸಿ, ಊಟದ ವ್ಯವಸ್ಥೆ ಮಾಡಿ ಬಹಳ ಪ್ರೀತಿ ಗೌರವಗಳಿಂದ ಇವರನ್ನು ನೋಡಿಕೊಳ್ಳುತ್ತಿದ್ದರು. ದಾವಣಗೆರೆಯಲ್ಲಿ ಬಾದಾಮಿಯವರ ಮನೆಯವರೂ ನಂಜಪ್ಪ ಅವರನ್ನು ಇಷ್ಟೇ ಪ್ರೀತಿಯಿಂದ ಕಾಣುತ್ತಿದ್ದರು. ಅವರು ನಂಜಪ್ಪನವರಿಗೆ ಕೊಂಚ ಹಣವನ್ನೂ ಕೊಟ್ಟು ಖುಷಿಪಡಿಸುತ್ತಿದ್ದರು. ದಾವಣಗೆರೆಯಲ್ಲಿ ಆಗ ಕಂಪೆನಿ ನಾಟಕಗಳು ಒಂದಲ್ಲ ಒಂದು ಇರುತ್ತಿದ್ದವು. ಆ ಎಲ್ಲ ನಾಟಕ ಕಂಪೆನಿಗಳವರು ನಂಜಪ್ಪ ಮತ್ತು ಪರಿವಾರದವರಿಗೆ ಫ್ರೀಪಾಸ್ ಕೊಟ್ಟು ನೋಡಿಕೊಳ್ಳುತ್ತಿದ್ದರು.

ನಂಜಪ್ಪನವರು ಚಿಕ್ಕವಯಸ್ಸಿನಲ್ಲಿಯೇ ಮನೆಯನ್ನು ತೊರೆದು ಗರಡಿಯನ್ನೇ ಮನೆಯನ್ನಾಗಿ ಮಾಡಿಕೊಂಡಿದ್ದರಿಂದ ಅವರ ಕೌಟುಂಬಿಕ ಜೀವನ ಬಹಳಮಟ್ಟಿಗೆ ಹಾಳಾದಂತೆ ಕಾಣುತ್ತದೆ. ಅವರ ಸಮಕಾಲೀನ ಸಮವಯಸ್ಕ ಪೈಲ್ವಾನರುಗಳೆಲ್ಲ ವಿವಾಹಿತರಾಗಿದ್ದರು. ಆದರೆ ನಂಜಪ್ಪ ವಿವಾಹವಾಗಲಿಲ್ಲ. ಅವರ ಸಂಬಂಧದಲ್ಲಿಯೇ ಕೆಲವು ಹೆಣ್ಣುಗಳನ್ನು ನೋಡಿದ್ದರು. ಮುಖ್ಯವಾಗಿ ಮೈಸೂರಿನಲ್ಲಿ ಪ್ರಸಿದ್ಧ ಪೈಲ್ವಾನರೂ, ಶ್ರೀಮಂತರೂ, ಅಕ್ಕಿ ವ್ಯಾಪಾರಿಗಳೂ ಆಗಿದ್ದ ಶೀನಪ್ಪನವರ ಅಣ್ಣ ಲಕ್ಷ್ಮಣ ಎಂಬುವವರ ಮಗಳೊಂದಿಗೆ ಇವರ ವಿವಾಹ ಮಾಡಬೇಕೆಂಬ ಅಭಿಲಾಷೆ ಮನೆಯವರಿಗೆ ಇದ್ದಂತೆ ಕಾಣುತ್ತದೆ. ಸ್ವತಃ ನಂಜಪ್ಪನವರೇ ಗೃಹಸ್ಥಾಶ್ರಮಕ್ಕೆ ಬರಲು ಒಪ್ಪಲಿಲ್ಲವೋ ಅಥವಾ ಗೃಹಸ್ಥಾಶ್ರಮಕ್ಕೆ ಅವರು ಬರುವಂತೆ ಅನುನಯದಿಂದ ಮನೆಯವರು ಒತ್ತಡ ತರಲಿಲ್ಲವೋ ತಿಳಿಯುವುದಿಲ್ಲ. ಒಂದು ಕ್ಲುಪ್ತಕಾಲದಲ್ಲಿ ವೈವಾಹಿಕ ಜೀವನಕ್ಕೆ ಮನಸ್ಸು ಮಾಡದಿದ್ದರೆ ಅದು ಬದುಕಿನಲ್ಲಿ ಕಾಡುತ್ತಲೇ ಇರುತ್ತದೆ. ಈ ಅವಿವಾಹಿತ ಜೀವನದ ಕೊರತೆಯನ್ನು ತುಂಬಿಕೊಳ್ಳಲು ಅವರು ಗರಡಿ, ಕುಸ್ತಿ, ಸ್ನೇಹಿತರು, ಕುಡಿತ ಇವುಗಳಿಗೆ ಬಲವಾಗಿ ಅವಲಂಬಿಸಬೇಕಾಯಿತು ಎಂದು ಕಾಣುತ್ತದೆ. ನಂಜಪ್ಪನವರ ಗೆಳೆಯರಲ್ಲಿ ಬಸಪ್ಪ, ಮೀಸೆ ನಿಂಗಪ್ಪ, ಶರಣಪ್ಪ ಮೊದಲಾದವರು ಅವರೊಡನೆ ಹೇಗೆ ವರ್ತಿಸುತ್ತಿದ್ದರೆಂದು ನಮಗೆ ಈಗ ತಿಳಿಯುವುದಿಲ್ಲ. ಸರಳ ಮನಸ್ಸಿನ ನಂಜಪ್ಪ ತನ್ನ ಶಕ್ತಿಯಲ್ಲಿ ಅಪಾರ ನಂಬಿಕೆಯಿಟ್ಟಿದ್ದ ಆತನನ್ನು ಬಸಪ್ಪ ಒಮ್ಮೆ ಪ್ರಚೋದಿಸಿ ಜವಾಬ್ದಾರಿ ಸರ್ಕಾರ ತರುವ ಸಂದರ್ಭದಲ್ಲಿ ಡಿ.ಸಿ. ಕಾಂಪೌಂಡ್ ನುಗ್ಗಿಸಿದ್ದನ್ನು ಜನ ಈಗಲೂ ಜ್ಞಾಪಿಸಿಕೊಳ್ಳುತ್ತಾರೆ. ವೀರಯುಗದಲ್ಲಿ ಎಲ್ಲವೂ ಸುಂದರ, ಎಲ್ಲವೂ ಚೆನ್ನಾಗಿರುತ್ತದೆ ! ಆದ್ದರಿಂದ ಬಸಪ್ಪನ ಪ್ರಚೋದನೆ ನಂಜಪ್ಪನವರ ಕೆಲಸ ಎರಡೂ ಈಗ ಸ್ವೀಕರಿಸಲು ಉಳಿದಿರುವ ಕಥೆಯಷ್ಟೆ ! ಇವರನ್ನು ಬಿಟ್ಟರೆ, ಪುಟ್ಟಪ್ಪ, ಡ್ರೈವರ್ ಬಸಣ್ಣ, ನಿಂಗಣ್ಣ ಮೊದಲಾದವರು ನಂಜಪ್ಪನ ಜೊತೆಯಲ್ಲಿ ಇರುತ್ತಿದ್ದರು. ತಮ್ಮ ತಾರುಣ್ಯದ ದಿನಗಳಲ್ಲಿ ಕುಡಿತದ ಅಭ್ಯಾಸ ಮಾಡಿಕೊಂಡ ನಂಜಪ್ಪ, ಮುಂದೆ ಅದನ್ನು ಗೀಳಾಗಿ ಮಾಡಿಕೊಂಡು ತಮ್ಮ ಬಾಳನ್ನು ತಾವೇ ಹಾಳು ಮಾಡಿಕೊಂಡರೇನೋ ಎನ್ನಿಸುತ್ತದೆ.

ಕುಡಿತದ ದೌರ್ಬಲ್ಯವನ್ನು ಬಿಟ್ಟರೆ, ನಂಜಪ್ಪನವರ ಬಗ್ಗೆ ಕೆಟ್ಟ ಮಾತಾಡುವವರನ್ನು ಕಾಣುವುದು ದುರ್ಲಭ. ಆತ ಬೀದಿಗಳಲ್ಲಿ ಓಡಾಡುತ್ತಿದ್ದರೆ ಯಾವ ಸ್ತ್ರೀಯನ್ನೂ ಕಣ್ಣೆತ್ತಿ

ನೋಡುತ್ತಿರಲಿಲ್ಲ. ತಲೆ ತಗ್ಗಿಸಿಕೊಂಡು ಆಚೀಚೆ ನೋಡದೆ ತುಂಬಾ ಮರ್ಯಾದೆಯಿಂದ ಆತ ಓಡಾಡುತ್ತಿದ್ದ ಎಂದು ಎಲ್ಲರೂ ಜ್ಞಾಪಿಸಿಕೊಳ್ಳುತ್ತಾರೆ. ತನ್ನ ಹಾಗೆಯೇ ಇತರರೂ ಗೌರವದಿಂದ ವರ್ತಿಸಬೇಕೆಂದು ಆತ ಅಪೇಕ್ಷಿಸುತ್ತಿದ್ದ. ಗರಡಿಯಲ್ಲಿ ಶ್ರಾವಣದಲ್ಲಿ ಆಚರಿಸುವ ಮಟ್ಟಿ ಪೂಜೆಯಲ್ಲಿ ಊರಿನ ಪ್ರಮುಖರು, ಜೊತೆಗೆ ಒಂದು ದಿನ ಹೆಣ್ಣುಮಕ್ಕಳು ಗರಡಿಗೆ ಬರುತ್ತಾರೆ. ಆ ಸಂದರ್ಭದಲ್ಲಿ ಗರಡಿಯ ಯಾವ ಪೈಲ್ವಾನನೂ ಕುಡಿಯಕೂಡದೆಂದೂ, ಅವಾಚ್ಯ ಶಬ್ದ ಆಡಬಾರದೆಂದೂ ನಂಜಪ್ಪ ಎಲ್ಲರಿಗೂ ತಾಕೀತು ಮಾಡುತ್ತಿದ್ದರು. ಈ ಸಭ್ಯ ನಡವಳಿಕೆಗೆ ದೊಡ್ಡಗರಡಿಯಲ್ಲಿ ಅವರು ಒಂದು ಮಾದರಿಯಾಗಿದ್ದರು.

ನಂಜಪ್ಪನವರ ಸಭ್ಯ ನಡವಳಿಕೆಯ ಇನ್ನೊಂದು ರೂಪವಾಗಿ ಈತನಿಗೆ ವಿನಯ, ಭಕ್ತಿ ಇತ್ತು. ತನ್ನ ಉಸ್ತಾದ್‌ಗಳ ಬಗ್ಗೆ, ಮತ್ತು ಬೇರೆ ಗುರುಗಳ ಬಗ್ಗೆ ಹಿರಿಯರ ಬಗ್ಗೆ ತುಂಬಾ ವಿನಮ್ರವಾಗಿ ನಡೆದುಕೊಳ್ಳುತ್ತಿದ್ದರು.

ಆಗಿನ ಕಾಲದಲ್ಲಿ ಸಾಮಾಜಿಕ ನಡವಳಿಕೆಗಳು, ನಿಯಮಗಳು ಯಾರು ಯಾರಿಂದಲೋ ರೂಪಿಸಲ್ಪಡುತ್ತಿದ್ದವು. ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಿದ ಪುಂಡರು, ಪೋಕರಿಗಳು, ರೌಡಿಗಳು ಹೆದರುತ್ತಿದ್ದುದು ಪೋಲೀಸರಿಗಲ್ಲ ! ಅವರನ್ನು ನಿಯಂತ್ರಿಸಲು ಈ ಪೈಲ್ವಾನರುಗಳೇ ಮಧ್ಯೆ ಪ್ರವೇಶಿಸಬೇಕಾಗುತ್ತಿತ್ತು ! ಆದ್ದರಿಂದ ಪುಂಡರಿಗೆ, ರೌಡಿಗಳಿಗೆ ಪೈಲ್ವಾನರೆಂದರೆ ಹೆದರಿಕೆ. ಅದರಲ್ಲೂ ನಂಜಪ್ಪ ಎಂದರೆ ಸಿಂಹಸ್ವಪ್ನ. ನಂಜಪ್ಪ ಅಂತಹವರನ್ನು ಕಂಡರೆ ಆ ಕ್ಷಣದಲ್ಲಿಯೇ ರೋಷಭೀಷಣರಾಗುತ್ತಿದ್ದರು. ಮಿಕ್ಕಂತೆ ನಂಜಪ್ಪ ಸೌಮ್ಯಮೂರ್ತಿ.

ನಾವೆಲ್ಲ ನೋಡಿರುವಂತೆ ಪೈಲ್ವಾನರು ತಮ್ಮ ವೇಷಭೂಷಣಗಳಿಂದ, ಗತ್ತುಗಾರಿಕೆ ಗಳಿಂದ ಬಹಳ ಗಂಭೀರವಾಗಿ ಕಾಣುತ್ತಾರೆ. ಆದರೆ ನಂಜಪ್ಪ ಅಂತಹ ಗಾಂಭೀರ್ಯದ ಮುಖವಾಡ ಯಾವಾಗಲೂ ಧರಿಸಬೇಕೆಂಬ ಎಚ್ಚರವಿರಲಿಲ್ಲ. ಸರಳತೆ, ಹಾಸ್ಯ, ಅವರಿಗೆ ಬಹಳ ಇಷ್ಟ. ಹಾಸ್ಯವನ್ನಂತೂ ಅವರ ಮಾತುಕತೆಗಳಲ್ಲಿ ರೂಢಿಸಿಕೊಂಡುಬಿಟ್ಟಿದ್ದರು. ಚಿಕ್ಕವರಿಂದ ಹಿಡಿದು ದೊಡ್ಡವರ ತನಕ ಹಾಸ್ಯವನ್ನು ಮಾಡಿ ನಕ್ಕು, ಇತರರನ್ನೂ ನಗಿಸುತ್ತಿದ್ದರು.

ಗರಡಿಯಲ್ಲಿ ಸಾಮಾನ್ಯವಾಗಿ ಕೆಲವೇ ಕೆಲವು ಗೆಳೆಯರೂ, ಒಡನಾಡಿಗಳೂ ಇದ್ದಾಗ ನಂಜಪ್ಪನವರ ಹಾಸ್ಯಪ್ರಜ್ಞೆ ಗರಿಗೆದರುತ್ತಿದ್ದಿತು. ಒಂದು ತುಂಡು ಕೋಲಿಗೆ ಕರ್ಚೀಫು ಅಥವಾ ಟವೆಲ್‌ಅನ್ನು ತುದಿಗೆ ಕಟ್ಟುತ್ತಿದ್ದರು. ಅದು ನಂಜಪ್ಪರ ಕೈಲಿ ಮೈಕಾಗಿ ಪರಿವರ್ತನೆಯಾಗುತ್ತಿತ್ತು! ಅನಂತರ ಆ ಕೋಲಿನ ತುದಿಯಲ್ಲಿ ಕಟ್ಟಿದ್ದ ಭಾಗವನ್ನು 'ಟಕ್ ಟಕ್' ಅಂತ ಕುಟ್ಟಿ 'ಕೇಳಿಸ್ತಾ ಇದೆಯೇನೋ?' ಎಂದು ಮೈಕ್ ಸರಿಮಾಡುತ್ತಿದ್ದರು. ಅನಂತರ ಆ ಮೈಕ್ ಮುಂದೆ ಭಾಷಣಕಾರರ ಭಾಷಣಗಳು ! ಅಂದಿನ ಒಬ್ಬ ರಾಜಕಾರಣಿಯೊಬ್ಬನನ್ನು ಅನುಕರಣೆ ಮಾಡಿ ಒಬ್ಬ ಭಾಷಣ ಕುಟ್ಟಿದರೆ, ಇನ್ನೊಬ್ಬರು ಸ್ವಾಮೀಜಿಯೊಬ್ಬನ ಆಶೀರ್ವಚನ ದಯಪಾಲಿಸುತ್ತಿದ್ದನು! ಮಾತುಗಳ ತುಂಬ ಹಾಸ್ಯ, ಗೇಲಿ, ವಿಡಂಬನೆ ತುಂಬಿ ಒಡನಾಡಿಗಳ ಗುಂಪು ನಕ್ಕು ನಲಿಯುತ್ತಿತ್ತು. ತೆರೆ ಮರೆಯಲ್ಲಿ ನಡೆಯುತ್ತಿದ್ದ ಈ ಹಾಸ್ಯದ ಸೂತ್ರಧಾರಿ ನಂಜಪ್ಪ.

ಆರಂಭದಲ್ಲಿ ನಂಜಪ್ಪನವರಿಗೆ ಕುಡಿತ ಅಮಲು ಆಗುವುದರ ಬದಲು ಗೆಳೆಯರ ಜೊತೆಗೂಡಿ ನಲಿಯುವ ಮನರಂಜನೆಯಾಗಿತ್ತು. ಆದ್ದರಿಂದ ಅವರು ಭಿಕ್ಷುಕನಂತೆ ಅಭಿನಯಿಸುತ್ತ,

'ಧರುಮಾರೆ ತಾಯಿ ತಂದ್ಯೆಮ್ಮ'
'ಕಣ್ಣು ಕಾಣದ ಕುರುಡ ನಾನಮ್ಮ'

–ಎಂದು ಹಾಡುತ್ತ, ಎಲ್ಲರ ಬಳಿ ಓಡಾಡುತ್ತ, ನಗೆಗಡಲಿನಲ್ಲಿ ಮುಳುಗಿಸಿಬಿಡುತ್ತಿದ್ದರು.

ಹಾಸ್ಯವನ್ನು ಪ್ರೀತಿಸಿ, ಉಲ್ಲಾಸವಾಗಿರಲು ಬಯಸುತ್ತಿದ್ದ ನಂಜಪ್ಪ ಗೆಳೆಯರನ್ನು ತಮಗಿಂತ ಚಿಕ್ಕವರನ್ನು ಸಮಾನವಾಗಿ ಪ್ರೀತಿಸುತ್ತಿದ್ದರು. ಗರಡಿಯಲ್ಲಿ ಮಲಗುವುದನ್ನು ನಿಲ್ಲಿಸಿದಾಗ ಪೈಲ್ವಾನ್ ಗೋಪಾಲಪ್ಪನ ಒಂದು ಕೋಣೆಯಲ್ಲಿ ಮಲಗುತ್ತಿದ್ದರು. ಆ ಕೋಣೆಯಲ್ಲಿ ರಾತ್ರಿಯ ಹೊತ್ತು ನಂಜಪ್ಪ, ಗೋಪಾಲಪ್ಪ ಮತ್ತು ನಾಗರಾಜ್ ಮಲಗುತ್ತಿದ್ದರು. ನಂಜಪ್ಪಗೆ ಸಿನಿಮಾ ನೋಡುವ ಖಯಾಲಿ ಇಲ್ಲದಿದ್ದರೂ, ಆತ ಒಮ್ಮೆ 'ದಿಲ್ ಕಿಸ್‌ಕೊ ದೋ" ಎಂಬ ಹಿಂದಿ ಸಿನಿಮಾ ನೋಡಿ ಬಂದರು. ನಂಜಪ್ಪಗೆ ಆ ಹೆಸರು ಬಹಳ ಖುಷಿ ಕೊಟ್ಟಿರಬೇಕು. ರಾತ್ರಿ ಗೋಪಾಲಪ್ಪನ ಕೋಣೆಯಲ್ಲಿ ಮಲಗಲೆಂದು ಬಂದಾಗ, ನಾಗರಾಜ್ ಮತ್ತು ಗೋಪಾಲಪ್ಪನನ್ನು ಕುರಿತು, 'ದಿಲ್ ಕಿಸ್‌ಕೋ ದೋ" ಎಂದು ನಗಿಸಲು ಕಾಡತೊಡಗಿದ. ಆಗ ನಾಗರಾಜ್ ತುಂಬಾ ಹೊತ್ತಾಗಿದ್ದರಿಂದ ಮಲಗಬೇಕೆಂದು ಬಯಸಿ, "ಈಗ ದಿಲ್ ಕಿಸ್‌ಕೋ ದೋ ಎಂಬುದು ಬೇಡ, ನಿನ್ನ ತಲೇನ ಈಗ ಚಾಪೇ ಕೊ ದೋ" ಎಂದು ಒಂದು ಹಾಸ್ಯ ಚಟಾಕಿ ಹಾರಿಸಿದ. ನಂಜಪ್ಪರಿಗೆ ಖುಷಿಯಾಗಿ ನಾಗರಾಜ್‌ಗೆ, "ನೀವಿದೀರಲ್ಲ... ಕೃಷ್ಣಪ್ಪನ ಮಕ್ಕಳು.... ಭಾರೀ ನೀವು...." ಎಂದು ಹೇಳುತ್ತಾ ನಿಧಾನವಾಗಿ ಗೊರಕೆ ಹೊಡೆಯತೊಡಗಿದರು.

ನಂಜಪ್ಪನವರ ಇನ್ನೊಬ್ಬ ಶಿಷ್ಯ ಪೈಲ್ವಾನ್ ಬಸವರಾಜ್ ಹೊಟ್ಟೆಪಾಡಿಗಾಗಿ ಒಂದು ಪುಟ್ಟ ಹೋಟೆಲನ್ನು ಗರುಡಿಯ ಸಮೀಪದ ಒಂದು ಸಣ್ಣ ಮನೆಯಲ್ಲಿ ಆರಂಭಿಸಿದ್ದರು. ಆ ಹೋಟೆಲಿನ ಹೆಸರು 'ಜಯದೇವ ಭವನ.' ಆದರೆ ನಂಜಪ್ಪ ಅದಕ್ಕೆ ಕರೆಯುತ್ತಿದ್ದುದು 'ದರಿದ್ರ ಭವನ'. ಏಕೆಂದರೆ ಅಲ್ಲಿನ ಗಿರಕಿಗಳೆಲ್ಲಾ ಪೈಲ್ವಾನರೆ. ತಯಾರಾಗುತ್ತಿದ್ದ ಮಂಡಕ್ಕಿ ಉಸುಲಿ ಮತ್ತು ಟೀ ಎಲ್ಲಾ ಉದ್ದರಿ ಹೇಳಿಯೇ ಖರ್ಚಾಗಬೇಕು ! ಹೀಗಾಗಿ ಅದು ದರಿದ್ರ ಭವನವಾಗದೆ ಇನ್ನೇನು ! ಅದು ಕೆಲವೇ ದಿನಗಳಲ್ಲಿ ಮುಚ್ಚಿ ಹೋಯಿತು! ಹೀಗೆ ಸಂದರ್ಭಕ್ಕನುಗುಣವಾಗಿ ಹಾಸ್ಯ ಚಟಾಕಿ ಹಾರಿಸುತ್ತಲೋ, ಹಾಸ್ಯಚಟಾಕಿ ಕೇಳುತ್ತಲೋ ನಂಜಪ್ಪ ಜೀವನ ಹಗುರ ಮಾಡಿಕೊಳ್ಳುತ್ತಿದ್ದರು.

ಆತನಿಗೆ ಸ್ನೇಹಿತರ ಒಡನಾಟ ಬೇಕಾಗಿತ್ತೇ ಹೊರತು ಊಟ, ತಿಂಡಿ ಬೇಕಾಗಿರಲಿಲ್ಲ. ಎಂಥ ಊಟವಾದರೂ ಸರಿ, ಅಂಥ ರಾಕ್ಷಸ ಹಸುವಿನ ಮನುಷ್ಯನೂ ಆತನಾಗಿರಲಿಲ್ಲ.

ಎಲೆಕ್ಟ್ರಿಕ್ ಕಂಟ್ರ್ಯಾಕ್ಟರ್ ನಿಂಗಣ್ಣ ಆಗಾಗ್ಗೆ ನಂಜಪ್ಪ ಮತ್ತು ಕೆಲವು ಪೈಲ್ವಾನರಿಗಾಗಿಯೆ ಔತಣಕೂಟ ಏರ್ಪಡಿಸುತ್ತಿದ್ದ. ಆದರೆ ನಂಜಪ್ಪ ಅಲ್ಲಿ ಬರೀ ನಗೆಚಾಟಿಕೆ, ಹಾಸ್ಯಗಳಲ್ಲೆ ಮುಳುಗಿ ಊಟ ಮರೆತಿದ್ದೂ ಇದೆ ! ಆತನಿಗೆ ಸರಸದ ಪರಿಸರ ಸದಾ ಇರಬೇಕು.

ನಂಜಪ್ಪ ಕುಡಿತಕ್ಕೆ ಕೊನೆ ಕೊನೆಯಲ್ಲಿ ಇನ್ನಷ್ಟು ಬಲಿಯಾದರೂ, ಆತ ಎಂದೂ ಗಾಂಭೀರ್ಯದ ಎಲ್ಲೆ ಮೀರಿ ವರ್ತಿಸಲಿಲ್ಲ ಎಂಬುದು ಆಶ್ಚರ್ಯದ ಸಂಗತಿ. ಗಂಡಸರ ದೃಷ್ಟಿಯಿಂದ 'ಕುಡಿತ ಅದೇನು ಮಹಾ!' ಎಂದುಬಿಡುತ್ತೇವೆ. ಆದರೆ ಈ ಬಗ್ಗೆ ಹೆಣ್ಣುಮಕ್ಕಳು ನಂಜಪ್ಪನವರ ಬಗ್ಗೆ ಯಾವ ಅಭಿಪ್ರಾಯ ತಾಳಿದ್ದಾರೆ ಎಂಬ ಕುತೂಹಲದಿಂದ ತೊಂಭತ್ತಾರು ವರ್ಷದ ಪುಟ್ಟಮ್ಮ ಮತ್ತು ಎಂಭತ್ತು ದಾಟಿದ ಬನ್ನಮ್ಮ ಅವರನ್ನು ನಾನು ಸಂದರ್ಶಿಸಿದೆ. ಆಗ ಅವರಿಬ್ಬರು "ಆತ ಮನೆ ಮಗ ಇದ್ದಂತೆ... ಆತ ದೊಡ್ಡಗರುಡಿಯ ಸಂಪತ್ತು. ನಮ್ಮ ರಾಮಪ್ಪ ಮತ್ತು ನಂಜಪ್ಪ ಇಬ್ಬರೂ ಒಳ್ಳೆಯ ಪೈಲ್ವಾನರೆ... ಆದರೆ ರಾಮಪ್ಪನಿಗಿಂತ ನಂಜಪ್ಪ ದೊಡ್ಡ ಪೈಲ್ವಾನ್... ದೊಡ್ಡ ಮನುಷ್ಯ. ಆತ ಎಂದೂ ಹೆಂಗಸರನ್ನು ಕಣ್ಣೆತ್ತಿ ನೋಡಲಿಲ್ಲ..." ಎಂಬ ಅಭಿಪ್ರಾಯಪಟ್ಟರು. ಕುಡಿತದ ಬಗ್ಗೆ ಅನುಕಂಪ ಸುರಿಸಿದರೇ ವಿನಃ ಕೆಟ್ಟ ಹೆಸರು ತರಲಿಲ್ಲ ಎಂದರು.

ಅದಷ್ಟೇ ಅಲ್ಲ. ಚಟಗಳಿಗೆ ಬಲಿಯಾದವರು ತಮ್ಮ ಒಡನಾಡಿಗಳನ್ನು, ನಿಕಟವರ್ತಿಗಳನ್ನು ತಮ್ಮಂತೆಯೇ ದಾರಿ ತಪ್ಪಿಸಲು ಪ್ರೇರಣೆ ಮಾಡುತ್ತಾರೆ, ಬಲವಂತಪಡಿಸುತ್ತಾರೆ. ನಂಜಪ್ಪನವರ ಬಹುಪಾಲು ಒಡನಾಡಿಗಳು ಈ ಚಟಕ್ಕೆ ಬಲಿಯಾದವರೆ. ಆದರೆ ನಂಜಪ್ಪನ ಬಹುಕಾಲದ ಒಡನಾಡಿಗಳಾದ, ಅತ್ಯಂತ ನಿಕಟವರ್ತಿಗಳಾದ ಸಿ.ಟಿ. ತಿಪ್ಪೇಸ್ವಾಮಿ, ಪೈಲ್ವಾನ್ ಗೋಪಾಲಪ್ಪ, ಪೈಲ್ವಾನ್ ವಸಂತರಾವ್ ಇವರಿಗೆಲ್ಲಾ ಅವರು ಒಮ್ಮೆಯೂ ಮದ್ಯ ಸೇವನೆಗೆ ಒತ್ತಾಯಿಸಲಿಲ್ಲ. ಪೈಲ್ವಾನ್ ಗೋಪಾಲಪ್ಪ ಸಿಟಿ. ತಿಪ್ಪೇಸ್ವಾಮಿ ಇದುವರೆವಿಗೂ ಶಾಸ್ತ್ರಕ್ಕಾದರೂ ಒಂದು ಹನಿ ಮದ್ಯ ಸೇವಿಸಿಲ್ಲ ಎಂದರೆ, ಅದು ಅವರ ಪರಿಶುದ್ಧತೆ ಬಗ್ಗೆ ತಾಳಿದ ನಿಲುವು ಆಗಿರುವಂತೆಯೇ ಪೈಲ್ವಾನ್ ನಂಜಪ್ಪನವರ ಪರಿಶುದ್ಧ ಮನಸ್ಸಿನ ದ್ಯೋತಕವೂ ಆಗಿದೆ.

ಕುಡಿತಕ್ಕೆ ಶರಣಾದ ಮನುಷ್ಯನೊಡನೆ ವ್ಯವಹರಿಸಲು ಅನ್ಯರಿಗೆ ಅಳುಕು ಇದ್ದೇ ಇರುತ್ತದೆ. ಪೈಲ್ವಾನ್ ನಂಜಪ್ಪ ಕುಸ್ತಿ ಆಡಿದಾಗ ಬಂದ ಹಣವನ್ನಾಗಲಿ, ತನ್ನ ಪಾಲಿಗೆ ಬಂದಿದ್ದ ಮನೆಗಳ ಬಾಡಿಗೆಯ ಹಣವನ್ನಾಗಲಿ ತಾವು ಇಟ್ಟುಕೊಳ್ಳದೆ ಅದನ್ನು ವಸಂತರಾವ್ ಕೈಯಲ್ಲಿ ತಪ್ಪಿದರೆ ಸಿ.ಟಿ. ತಿಪ್ಪೇಸ್ವಾಮಿಯವರ ಕೈಯಲ್ಲಾಗಲಿ ಕೊಟ್ಟಿರುತ್ತಿದ್ದರು. ಈತ ಲೆಕ್ಕ ತಪ್ಪಿ ಎರಡನೇ ಸಾರಿ ಕೇಳಿದರೆ ಎಂದು ಇವರು ಹೆದರುತ್ತಿದ್ದರು. ಆದರೆ ಆತ ಜೀವಮಾನದಲ್ಲಿ ಒಮ್ಮೆಯೂ ಒಂದು ಪೈಸೆ ಹೆಚ್ಚು-ಕಡಿಮೆ ಹೇಳಲಿಲ್ಲ.

ತಾರುಣ್ಯದಲ್ಲಿ ಕುಸ್ತಿ ಜೀವನಕ್ಕೆ ತಮ್ಮ ಬದುಕನ್ನು ಸಮರ್ಪಿಸಿಕೊಂಡ ನಂಜಪ್ಪ ಅವಿವಾಹಿತರಾಗಿ ಉಳಿದರು. ಬಹುಶಃ ಅವರಿಗೆ ತಾನೊಬ್ಬ ಅತ್ಯುತ್ತಮ ಕುಸ್ತಿಪಟುವಾಗಿ ಬೆಳೆಯಬೇಕು ಎಂಬ ಧ್ಯೇಯ ಅವರಲ್ಲಿದ್ದಿರಬೇಕು. ಅದಕ್ಕೆ ಸರಿಯಾಗಿ ಅವರು ತಮ್ಮ ಕಡೆಯ

ದಿನಗಳ ತನಕ ಅತ್ಯುತ್ತಮ ಕುಸ್ತಿಗಳನ್ನು ಪ್ರದರ್ಶಿಸಿದರು, ಕೀರ್ತಿ ಪಡೆದರು. ಆದರೆ ಅವರು ಹೀಗೆ ಅವಿವಾಹಿತರಾಗಿ ಉಳಿದದ್ದು ಅವರು ಮಧ್ಯ ವಯಸ್ಸು ಮುಟ್ಟುವ ಹೊತ್ತಿಗೆ ಅವರನ್ನು ದುಃಖಿತರನ್ನಾಗಿ ಮಾಡಿದಂತೆ ಕಾಣುತ್ತದೆ. ಅವರ ತಂದೆಯ ಆಸ್ತಿಯಲ್ಲಿ ಪಾಲು ಸಿಕ್ಕಿ ಅವರ ಜೀವನಕ್ಕೆ ಮನೆ ಬಾಡಿಗೆ ಬರುತ್ತಿತ್ತು. ಬದಲಾದ ಕಾಲಕ್ಕನುಗುಣವಾಗಿ ಆ ಹಣ ಸಾಕಾಗದೆ ಹೋಗಿರಬಹುದು. ಅವರು ಎಂದೂ ಸ್ನೇಹಿತರ ಬಳಿ ಹಣಕ್ಕಾಗಿ ಬಾಯಿ ಬಿಟ್ಟವರಲ್ಲ. ದೊಡ್ಡ ಕುಟುಂಬದಲ್ಲಿ ಹುಟ್ಟಿ ಬಂದಿದ್ದ ಅವರು ತಮ್ಮ ಅಣ್ಣಂದಿರ ಬಳಿ ನೆರವು ಕೇಳಿರಬಹುದು. ಅಕಸ್ಮಾತ್ ಯಾವುದೋ ಕಾರಣಕ್ಕೆ ಬೇಸತ್ತ ಅಣ್ಣಂದಿರು ಇಂಥ ನೆರವನ್ನು ನೀಡಲು ನಿರಾಕರಿಸಲೂಬಹುದು. ನಂಜಪ್ಪ ಮೊದಲಿನಿಂದಲೂ ಗರುಡಿಯಲ್ಲಿ ವಾಸ. ತಪ್ಪಿದರೆ ಕಡೆಯ ತಮ್ಮ ತಿಪ್ಪೇಸ್ವಾಮಿಯ ಮನೆಯಲ್ಲಿ ಮಲಗುವುದು, ತಪ್ಪಿದರೆ ತಮ್ಮ ಶಿಷ್ಯ ಗೋಪಾಲಪ್ಪನ ಕೋಣೆಯಲ್ಲಿ ಮಲಗುತ್ತಿದ್ದರು. ಆಕಸ್ಮಿಕವಾಗಿ ಉಂಟಾದ ಮನೆಯವರ ಉದಾಸೀನ, ಎಲ್ಲೋ ವಸತಿ, ಏನೇ ಕಷ್ಟ ಬಂದರೂ ಮನೆಗೆ ಬಂದಾಗ 'ಏನೇ' ಎಂದು ಕರೆಯಲು ಇಲ್ಲದ ಹೆಂಡತಿ – ಇವೆಲ್ಲವುಗಳಿಂದ ಅವರನ್ನು ಒಂಟಿತನ, ಬೇಸರ ಆಕ್ರಮಣ ಮಾಡಿರಬೇಕು. ಆದರೇನು, ಕೆಲವರು ಹೇಳುವ ಪ್ರಕಾರ ನಂಜಪ್ಪನವರಿಗೆ ಕೆಲವು ಹೆಣ್ಣುಗಳೊಂದಿಗೆ ದೈಹಿಕ ಸಂಪರ್ಕ ಇದ್ದರೂ ಅವರಿಗೆ ಆ ಬದುಕು ಖುಷಿ ಕೊಟ್ಟಂತೆ ಕಾಣುತ್ತಿಲ್ಲ. ಹಾಗೆಂದು ನಂಜಪ್ಪ ಎಂದೂ ಸಿಕ್ಕ ಸಿಕ್ಕ ಹೆಣ್ಣುಗಳ ಮೇಲೆ ಕಣ್ಣು ಹಾಕಿದವರಲ್ಲ ಎಂದರೆ ಅವರ ಸಜ್ಜನಿಕೆ ಎಂಥದು ಎಂಬುದು ತಿಳಿಯುತ್ತದೆ.

ಒಂಟಿತನ ಗೆಲ್ಲಲು ಮದ್ಯ ಸೇವನೆಯ ಚಟದಿಂದ ಮದ್ಯ ಸೇವನೆಯ ವ್ಯಸನಕ್ಕೆ ಅವರು ಧುಮುಕಿರುವುದನ್ನು ಯಾರಾದರೂ ಊಹಿಸಬಹುದು. ಹೀಗೆ ಮದ್ಯ ವ್ಯಸನಕ್ಕೆ ಸಿಕ್ಕು ತಮ್ಮ ಆರೋಗ್ಯಕ್ಕೆ ಅಪಾಯ ತಂದುಕೊಳ್ಳುತ್ತಿದ್ದುದನ್ನು ಅವರ ನಿಕಟವರ್ತಿಗಳಾದ ಗೋಪಾಲಪ್ಪ ಮತ್ತು ನಾಗರಾಜ್ ಗಮನಿಸಿದ್ದಾರೆ. ಈ ಒಂಟಿತನ ನಂಜಪ್ಪರನ್ನು ಹಿಂಡಿ ಹಿಪ್ಪೆ ಮಾಡಿರಬೇಕು. ಅದರಿಂದ ಅವರು ಬಹಳ ದುಃಖಿತರೂ ಆಗಿರಬೇಕು. ಗೋಪಾಲಪ್ಪನ ಕೋಣೆಯಲ್ಲಿ ರಾತ್ರಿ ಮಲಗುತ್ತಿದ್ದ ನಂಜಪ್ಪ ಇದ್ದಕ್ಕಿದ್ದಂತೆ ದುಃಖ ಒತ್ತರಿಸಿ ಬಂದು – 'ಗೋಪಾಲ... ನಾನು ಮದುವೆ ಮಾಡಿಕೊಳ್ಳಬೇಕಾಗಿತ್ತು ಕಣೋ... ನಾನು ತಪ್ಪು ಮಾಡಿಬಿಟ್ಟೆ... ನಾನು ಒಬ್ಬಂಟಿಯಾಗಿಬಿಟ್ಟೆ' ಎಂದು ಬಿಕ್ಕಳಿಸಿ ಬಿಕ್ಕಳಿಸಿ ಅತ್ತರಂತೆ.

ತಮ್ಮನ್ನು ಕೀರ್ತಿಶಿಖರಕ್ಕೆ ಕರೆದೊಯ್ದ ಕುಸ್ತಿಕಲೆ ಅವರ ಖಾಸಗಿ ಜೀವನ ಕಲೆಯನ್ನು ಸುಂದರಗೊಳಿಸಲು ಸೋತಿತೆಂದು ಕಾಣುತ್ತದೆ. ಅದಕ್ಕೆ ಅವರು ನಲವತ್ತರ ಮಧ್ಯ ವಯಸ್ಸು ಮುಟ್ಟುತ್ತಿದ್ದುದೂ ಕಾರಣವಾಗಿರಬೇಕು.

ನಂಜಪ್ಪನವರನ್ನು ಬಹಳ ಕಾಲ ನೋಡಿದವರು, ಬಹಳ ಹತ್ತಿರದಿಂದ ನೋಡಿದವರು ಒಂದೆರಡು ಸಂಗತಿಗಳನ್ನು ಇನ್ನೂ ನೆನಪಿಟ್ಟುಕೊಂಡು ಹೇಳುತ್ತಾರೆ. ಕುಸ್ತಿಲೋಕದಲ್ಲಿ ಮೈಮರೆತ ನಂಜಪ್ಪ ಯಾವಾಗಲಾದರೂ ಬೇಸರವಾದಾಗ, ಒಂಟಿತನ ಕಾಡಿದಾಗ ತುಕಾರಾಮರ

ಮರಾಠಿ ಅಭಂಗಗಳನ್ನು ಹಾಡುತ್ತಿದ್ದರಂತೆ. ಇರುವುದೆಲ್ಲವ ಬಿಟ್ಟು ಇರುದುದರೆಡೆಗೆ ತುಡಿವ ಮನಸ್ಸಿಗೆ ಇಂಥ ಸಂತರ, ದಾಸರ ಹಾಡುಗಳು ಎಂಥವರ ಹೃದಯದಿಂದಲಾದರೂ ನಾಲಗೆಯ ಮೇಲೆ ನಲಿದಾಡತೊಡಗುತ್ತವೆ. ಸಂತ ತುಕಾರಾಮರ ಅಭಂಗಗಳನ್ನು ಆತ ಹಾಡುತ್ತಿದ್ದುದರ ಜೊತೆಗೆ ಕೆಲವರ ಬಳಿ ಸೊಗಸಾಗಿ ವ್ಯಾಖ್ಯಾನವನ್ನೂ ಮಾಡುತ್ತಿದ್ದರಂತೆ. ಇಂಥದ್ದೊಂದು ಅಮೂರ್ತ ತೊಡಕು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅಡಗಿರುತ್ತದೆ. ಅದಕ್ಕೆ ನಂಜಪ್ಪ ಅಪವಾದವಲ್ಲ.

ನಂಜಪ್ಪನವರನ್ನು ಕಂಡವರು ಗುರುತಿಸಿರುವ ಇನ್ನೊಂದು ಅಂಶವೆಂದರೆ ಅವರ ಜೊತೆಗೆ ಇದ್ದ ಒಂದು ನಾಯಿ. 'ನೀನು ಒಂಟಿಯಲ್ಲ; ನಾನಿದ್ದೇನೆ ನಿನ್ನ ಜೊತೆ' ಎಂಬಂತೆ ನಂಜಪ್ಪ ಸಾಕಿದ ಒಂದು ಬೀದಿ ನಾಯಿ ಆತ ಕುಂತಲ್ಲಿ, ನಿಂತಲ್ಲಿ, ಉಣ್ಣುವಲ್ಲಿ, ಮಲಗುವಲ್ಲಿ ಜೊತೆಗಿರುತ್ತಿತ್ತು. ತನ್ನಂತೆ ಪರರ ಬಗೆದರೆ ಕೈಲಾಸ ತನ್ನ ನೆರೆಮನೆ ಎಂದು ಬಗೆದಿದ್ದ ಪೈಲ್ವಾನ್ ನಂಜಪ್ಪ ಆ ಬೀದಿನಾಯಿಯನ್ನು ಪೈಲ್ವಾನ್‌ಗೆ ಒಪ್ಪುವಂತೆ ಸಾಕಿದ್ದ. ದಷ್ಟ ಪುಷ್ಟವಾಗಿದ್ದ ಎತ್ತರದ ನಾಯಿಯದು. ಬಾಯಲ್ಲಿ ಟಿಫಿನ್ ಕ್ಯಾರಿಯರ್ ಇಟ್ಟರೆ ಅದರಷ್ಟಕ್ಕೆ ಅದೇ ಮಿಲಿಟರಿ ಹೋಟೆಲಿಗೆ ಹೋಗಿ ತನ್ನ ಒಡೆಯನಿಗೆ ಊಟ ತಂದು ಕೊಡುತ್ತಿತ್ತಂತೆ ! ಜಗತ್ಪ್ರಸಿದ್ಧಿಯಾದ ನಾಯಿನಿಷ್ಠೆಗೆ ಈ ನಾಯಿ ಉದಾಹರಣೆಯಂತಿತ್ತು. ಅಷ್ಟೇ ಪ್ರೀತಿ ನಂಜಪ್ಪನಿಗೆ ಈ ನಾಯಿಯ ಮೇಲೂ ಇತ್ತು.

❑

೧೪ ಹಾಗೋ ಹೀಗೋ ಹೇಗೊ ಜನುಮದ ಕಥೆ ಮುಗಿಯುವುದು

ತುಂಬಾ ಚಿಕ್ಕ ವಯಸ್ಸಿನಲ್ಲಿ ಅಪಾರ ಕೀರ್ತಿಗಳಿಸಿ ಅತ್ಯುತ್ತಮ ಕುಸ್ತಿಪಟುವಾಗಿ ಬದುಕು ನಡೆಸಿದ ನಂಜಪ್ಪ ಕೊನೆಯ ದಿನಗಳಲ್ಲಿ ಅಷ್ಟು ನೆಮ್ಮದಿಯಾಗಿದ್ದಂತೆ ಕಾಣಿಸುವುದಿಲ್ಲ. ಅವರಾಗಿ ಅವರು ಆಯ್ಕೆ ಮಾಡಿಕೊಂಡ ಈ ಕುಸ್ತಿಲೋಕ ಅವರಿಗೆ ಕೊನೆಯಲ್ಲಿ ನೆಮ್ಮದಿ ತರಲಿಲ್ಲವ್ಪೋ ಅವರ ಕೌಟುಂಬಿಕ ಸಂಬಂಧಗಳು ಹದವಾಗಿ ಬೆಸೆಯಲಾರದೇ ಹೋದವ್ಪೋ ಒಟ್ಟಾರೆ ಅವರಿಗೆ ಒಂಟಿತನ ಬಹಳ ಚಿಕ್ಕ ವಯಸ್ಸಿನಲ್ಲಿಯೇ ವಿಪರೀತ ಕಾಡಿದಂತೆ ಕಾಣಿಸುತ್ತದೆ. ಬಹುಶಃ ಈ ಅಪ್ಪಳಿಸುತ್ತಿದ್ದ ಒಂಟಿತನಕ್ಕೆ ಅವರಿಗೆ ತೋಚಿದ ಪರಿಹಾರ ಈ ಮದ್ಯಸೇವನೆ ಇರಬೇಕು. ಹೀಗಾಗಿ ಅವರ ಅಂತ್ಯಕ್ಕೆ ಈ ಮದ್ಯ ವ್ಯಸನ ಕಾರಣವಾಯಿತು. ಅವರ ನಿಕಟವರ್ತಿಗಳು ಹೇಳುವಂತೆ ಕೊನೆ ಕೊನೆಯಲ್ಲಿ ನಂಜಪ್ಪರು ಕೆಳಗೋಟೆಯ ಒಂದು ಮನೆಯಲ್ಲಿ ಮದ್ಯದ ಖಾಯಂ ಗಿರಾಕಿಯಾಗಿದ್ದರು. ಅವರು ಸಾಯುವ ದಿವಸ ಕೂಡ ಕೆಳಗೋಟೆಯ ಆ ಮನೆಯಲ್ಲಿ ಮದ್ಯ ಸೇವಿಸಿ ಬಂದರು. ಬಳಿಕ ಕೆಲವರು ಹೇಳುವ ಪ್ರಕಾರ ಕೆಳಗೋಟೆಯಲ್ಲಿ ಮದ್ಯ ಸೇವಿಸಿ ಬಂದ ಆತ, ಬುರುಜನಹಟ್ಟಿಯ ಇನ್ನೊಂದು ಮದ್ಯ ಮಾರಾಟದ ಮನೆಯಲ್ಲಿ ಪುನಃ ಸೇವಿಸಿ ಮನೆಗೆ ಹಿಂದಿರುಗುತ್ತಿದ್ದರು. ಬಹುಶಃ ಎರಡು ಕಡೆ ಮದ್ಯ ಸೇವಿಸುತ್ತಿದ್ದುದರ ದೆಸೆಯಿಂದ ನಂಜಪ್ಪ ತೀವ್ರ ಅಸ್ವಸ್ಥರಾಗಿರಬೇಕು. ರೂಪವಾಣಿ ಥಿಯೇಟರ್‌ನ ಎದುರುಗಡೆ ಚಿಕ್ಕಪೇಟೆಯಲ್ಲಿರುವ ಸ್ವೀಟ್‌ಸ್ಟಾಲ್ ಮುಂದುಗಡೆ ನಡೆಯುತ್ತಲೇ ಕುಸಿದು ಬಿದ್ದಿದ್ದರಂತೆ. ಹಾಗೆ ಬಿದ್ದಿದ್ದ ಆತನನ್ನು ಉಚ್ಚಂಗಮ್ಮನ ಗುಡಿಯ ಮುಂದಿರುವ ಅವರ ಕಡೆಯ ತಮ್ಮ ತಿಪ್ಪೇಸ್ವಾಮಿಯ ಮನೆಯಲ್ಲಿ ತಂದು ಹಾಕಿದರಂತೆ. ಬಹುಶಃ ಆತ ರಸ್ತೆಯಲ್ಲಿ ಕುಸಿದು ಬಿದ್ದಾಗಲೇ ಸತ್ತಿರಬೇಕು. ಕುಡಿತ ಈತನ ದಾರಿ ತಪ್ಪಿಸುತ್ತಿದೆ ಎಂದು ಪಂಜಾಬಿನ ಪರಿಪ್ಯೆಗರ್ ಸಾಹೇಬರು ಬಹಳ ನೊಂದುಕೊಂಡಿದ್ದರು. ಅವರು ಆಗಾಗ್ಗೆ, "ಪೈಲ್ವಾನ್ ಕುಡಿತ ಬಿಟ್ಟುಬಿಡು, ಇಂಡಿಯಾದಲ್ಲೇ ನಿನ್ನನ್ನು ಚಾಂಪಿಯನ್ ಮಾಡುತ್ತೇನೆ" ಎಂದು ಹೇಳಿದ್ದರು. ನಂಜಪ್ಪ ದೋಭಿಚಾಟ್ ಪಟ್ಟಿನಲ್ಲಿ ಎಂತಹ ಕುಸ್ತಿಪಟುವನ್ನು ಅಖಾಡದಲ್ಲಿ ಕೆಡವಿ ಎದೆಯ ಮೇಲೆ ಕುಳಿತು ತನ್ನ ಕುಸ್ತಿ ಕಲೆಯ ಪ್ರೌಢಿಮೆಯನ್ನು ಮೆರೆಯುತ್ತಿದ್ದರು.

ಅಂತಹ ಜಟ್ಟಿಯನ್ನು ನಡೆಯುವಾಗಲೆ ನಡುರಸ್ತೆಯಲ್ಲಿ ಕೆಡವಿ ಈ ಮದ್ಯ ವ್ಯಸನ ಆತನ ಮೇಲೆ-ಸವಾರಿ ಮಾಡಿದ್ದು ಬದುಕಿನ ವ್ಯಂಗ್ಯವೇ ಸರಿ !

ನಂಜಪ್ಪನ ಒಂಟಿತನವನ್ನು ನೀಗಿಸಲು ಆತನ ಪ್ರೀತಿಯ ನಾಯಿ ಸದಾ ಸಂಗಾತಿಯಾಗಿತ್ತು. ಆತ ಕುಂತಲ್ಲಿ ನಿಂತಲ್ಲಿ ಜೊತೆಗಿರುತ್ತಿತ್ತು. ತನ್ನ ತಮ್ಮ ತಿಪ್ಪೇಸ್ವಾಮಿ ಮನೆಯಲ್ಲಿ ಮತ್ತೆ ಮಾತಾಡದೆ ಸತ್ತು ಮಲಗಿದ್ದ ನಂಜಪ್ಪನವರನ್ನು ಕಂಡ ಕೂಡಲೆ ಆ ನಾಯಿಗೆ ದಿಗ್ಭ್ರಮೆ ದುಃಖ ಒತ್ತರಿಸಿ ಬಂದಿರಬೇಕು. ಅದು ಬೆಳಗಿನ ಜಾವದಿಂದಲೇ ಒಂದೇ ಸಮನೆ ದಿಕ್ಕು ದಿಕ್ಕುಗಳಿಗೆ ತಿರುಗಿ ನಂಜಪ್ಪನವರ ಸಾವಿನ ಸುದ್ದಿಯನ್ನು ಇಡೀ ದುರ್ಗಕ್ಕೆ ಶೋಕರಾಗದ ಮೂಲಕ ಬಿತ್ತರಿಸಿತು. ಅದರ ಅರಚುವಿಕೆಯಿಂದಲೇ ಏನೋ ಅನಾಹುತ ಸಂಭವಿಸಿರಬೇಕೆಂದು ಜನ ಮನೆಯ ಮುಂದೆ ಜಮಾಯಿಸತೊಡಗಿದರು. ನಂಜಪ್ಪನವರ ಸಾವು ಊರಿಗೆಲ್ಲ ಹರಡಿತು.

ಆ ನಾಯಿ ನಂಜಪ್ಪ ಸತ್ತ ದಿನದಿಂದ ಅನ್ನ ಮುಟ್ಟಲೇ ಇಲ್ಲ. ಶ್ರೀಮತಿ ಬನ್ನಮ್ಮ ಹೇಳುವಂತೆ, ನಂಜಪ್ಪ ಸಮಾಧಿಯ ಮೇಲೆ ಮಲಗಿದ್ದ ಆ ಪ್ರೀತಿಯ ನಾಯಿ ಏಳಲೂ ಇಲ್ಲ, ಅನ್ನ ಮುಟ್ಟಲೂ ಇಲ್ಲ. ಮೊದಲಿನಿಂದಲೂ ನಂಜಪ್ಪನವರ ಜೊತೆಯಲ್ಲಿ ಆ ನಾಯಿಯನ್ನು ಕಂಡಿದ್ದ ಜನಕ್ಕೆ ಭೂತದಯೆಯುಂಟಾಗಿ ಅದರ ಜೀವ ಹೇಗಾದರೂ ಉಳಿಸಬೇಕೆಂದು ಪ್ರಯತ್ನಿಸಿದರು. ಮಿಲಿಟರಿ ಹೋಟೆಲಿನಿಂದ ಊಟ ತರಿಸಿ ಹಾಕಿದರು. ತನ್ನ ಒಡೆಯನನ್ನು, ತನ್ನ ಬದುಕಿನ ಸಂಗಾತಿಯನ್ನು ಕಳೆದುಕೊಂಡ ಆ ಮೂಕಜೀವಿ ಅನ್ನವನ್ನು ಕಣ್ಣೆತ್ತಿಯೂ ನೋಡಲಿಲ್ಲ; ಮೂಸಲಿಲ್ಲ. ತನ್ನ ಪ್ರಾಣದಷ್ಟೇ ಪ್ರೀತಿಯಿಂದ ಸಾಕಿದ್ದ ಈ ಪ್ರಾಣಿಯು ತನ್ನ ಸಂಗಾತಿಗಾಗಿ ಉಸಿರು ಬಿಟ್ಟು ಆತನ ಪಕ್ಕದಲ್ಲಿಯೇ ಸಮಾಧಿಯಾಯಿತು. ಹೀಗೆ ಒಬ್ಬ ಸಧೃಢಕಾಯದ ಸುಂದರ ಪುರುಷನಾಗಿದ್ದ ಕುಸ್ತಿಪಟುವಿನ ಜೀವನ ಅಂತ್ಯವಾಯಿತು. ಅಂತೆಯೇ ಒಂದು ಸುಂದರ ಮನಸ್ಸಿನ ನಿಷ್ಠಾವಂತ ನಾಯಿಯ ಅಂತ್ಯವೂ ಆಯಿತು. □

೧೫ ಜನ ಮಾನಸದಲ್ಲಿ ನಂಜಪ್ಪ

ಸಾಧನೆಯ ಹಾದಿಯಲ್ಲಿರುವ ವ್ಯಕ್ತಿ ಕೆಲವು ಮೈಲಿಗಲ್ಲುಗಳನ್ನು ಮುಟ್ಟುತ್ತಲೇ ತನ್ನ ಗುರಿಯ ಕಡೆ ಕಣ್ಣು ಇಟ್ಟಿರುತ್ತಾನೆ. ಸಾಧ್ಯವಾದರೆ ತನ್ನ ಜೀವಮಾನದಲ್ಲಿ ಆ ಎತ್ತರದ ಗುರಿಯನ್ನೂ ಮುಟ್ಟಿಬಿಡುತ್ತಾನೆ. ಯಾರು ಈ ಸಾಧನೆಯಲ್ಲಿ ಮುಳುಗುತ್ತಾರೋ ಅವರಿಗೆ ಅದರಲ್ಲಿ ಸೋಲು ಗೆಲುವುಗಳು ಇದ್ದರೂ ಒಂದು ರೀತಿಯ ಆನಂದವನ್ನು ಪಡೆಯುತ್ತಾರೆ. ಬಳಿಕ ಆ ಆನಂದ ವ್ಯಕ್ತಿಯಲ್ಲಿ ಸಮಚಿತ್ತತೆಯನ್ನು ತಂದುಕೊಡುತ್ತದೆ. ಇದು ತನ್ನ ಸಾಧನೆಯಲ್ಲಿ ತಾನೇ ಸುಖ ಅರಸುವ ಬಗೆ. ಬಹುಶಃ ಕುಸ್ತಿಯ ಕ್ಷೇತ್ರದಲ್ಲಿ ನಂಜಪ್ಪ ಇಂತಹ ಸಾಧನೆ ಮಾಡಿ ಅದರಿಂದ ಒದಗುವ ಆನಂದವನ್ನೂ, ಸಮಚಿತ್ತತೆಯನ್ನೂ ಗಳಿಸಿದ್ದರು ಎಂಬುದು ಅವರ ಜೀವನವನ್ನು ವೀಕ್ಷಿಸಿದರೆ ತಿಳಿಯುತ್ತದೆ.

ಇಂತಹ ವ್ಯಕ್ತಿಯ ಸಾಧನೆಯನ್ನು ಬೇರೆಯವರು ಗುರುತಿಸುತ್ತಾರೆ ಎಂದಾಗ ಅದಕ್ಕೆ ಒಂದು ಸಾಮಾಜಿಕ ಮುಖ ಉಂಟಾಗುತ್ತದೆ. ಒಬ್ಬ ವ್ಯಕ್ತಿಯ ಇಂತಹ ಬೆಳವಣಿಗೆಯು ಸಮಾಜದ ಆರೋಗ್ಯಕರ ಬೆಳವಣಿಗೆಯಾಗುವುದರಿಂದ ಇಂತಹ ಸಾಮಾಜಿಕ ಮನ್ನಣೆಗಳನ್ನು, ಒಮ್ಮೊಮ್ಮೆ ಸಾಧಕರನ್ನು ಮನಸ್ಸಿನಲ್ಲಿಟ್ಟುಕೊಂಡು ಗುರುತಿಸಬೇಕಾಗುತ್ತದೆ. ಎಷ್ಟೋ ಸಾರಿ ಇಂತಹ ಸಾಧಕರನ್ನು ಸಮಾಜ ಕಣ್ಣು ತೆರೆದು ನೋಡುವುದೇ ಇಲ್ಲ, ಆ ಪ್ರಶ್ನೆ ಬೇರೆ.

ಪೈ. ನಂಜಪ್ಪನವರು ಕುಸ್ತಿಯ ಜಗತ್ತಿನಲ್ಲಿ ಮಾಡಿದ ಸಾಧನೆಗಳಿಗೆ ಸಿಕ್ಕ ಸಾಮಾಜಿಕ ಮನ್ನಣೆಗಳನ್ನು ನಾವು ಕೊಂಚ ಗಮನಿಸೋಣ.

ಪೈ. ನಂಜಪ್ಪನವರು ಕುಸ್ತಿಪಟುವಾಗಿ ಎಂದೂ ಕೀರ್ತಿ, ಪ್ರಶಂಸೆ, ಬಿರುದು–ಬಾವಲಿಗಳಿಗೋಸ್ಕರ ಕುಸ್ತಿ ಆಡಿದರು ಎಂಬುದಕ್ಕೆ ಕಾರಣಗಳಾಗಲಿ, ಸುಳಿವಾಗಲಿ ಸಿಕ್ಕುವುದಿಲ್ಲ. ಅದರ ಬದಲು ಅವರು ಕುಸ್ತಿ ಲೋಕದಲ್ಲಿ ಲೀಲಾಜಾಲವಾಗಿ ವಿಹರಿಸುವ ಒಬ್ಬ ಅದ್ಭುತ ಕಲಾವಿದನಂತೆ ಕಾಣುತ್ತಾರೆ. ಆತನ ಬಹುಪಾಲು ಕುಸ್ತಿಗಳು ಮೆಚ್ಚಿಕೆಯಾದದ್ದು ಸಾಮಾನ್ಯರಾದ ಕುಸ್ತಿ ಪ್ರೇಮಿಗಳಿಗೆ ಮತ್ತು ಪೈಲ್ವಾನರುಗಳಿಗೆ. ಇದಕ್ಕಾಗಿ ಕರ್ನಾಟಕಾದ್ಯಂತ ಆತನಿಗೆ ಅಸಂಖ್ಯಾತ ಕುಸ್ತಿ ಪ್ರೇಮಿಗಳು ಲಭ್ಯವಾದರು. ಇದಕ್ಕಿಂತ ದೊಡ್ಡ ಸಾಧನೆ ಒಬ್ಬ ಕುಸ್ತಿಪಟುವಿಗೆ ಜೀವನದಲ್ಲಿ ಇನ್ನೇನು ಬೇಕು? ನಂಜಪ್ಪನವರ ಕುಸ್ತಿಯನ್ನು ನೋಡುವ

ಸದಾವಕಾಶ ತಪ್ಪಿಸಿಕೊಳ್ಳಬಾರದೆಂದು ಆತನನ್ನು ಹಿಂಬಾಲಿಸಿಕೊಂಡು ಹೋದ ಕುಸ್ತಿ ಪ್ರೇಮಿಗಳೆಷ್ಟು ? ಕುಸ್ತಿ ನೋಡಬೇಕೆಂದು ಬೇರೆ ಊರುಗಳಿಂದ ಬಂದವರೆಷ್ಟು ? ಊರೂರುಗಳಲ್ಲಿ ಈತನ ಕುಸ್ತಿ ನಡೆದಾಗ ಈತನನ್ನು ಗೌರವಿಸಿದ ಗರುಡಿಗಳು, ಹೋಟೆಲ್ಲುಗಳು, ನಾಟಕ ಕಂಪೆನಿಗಳು, ಶ್ರೀಮಂತರೆಷ್ಟು ? ಇವೆಲ್ಲವೂ ಅವರು ಜನಸಾಮಾನ್ಯರ ಮಾನಸಲೋಕದಲ್ಲಿ ತಮ್ಮ ಕುಸ್ತಿ ಕೌಶಲವನ್ನು ಹೇಗೆ ಅಚ್ಚೊತ್ತಿದರು ಎಂಬುದಕ್ಕೆ ಸಾಕ್ಷಿ ನುಡಿಯುತ್ತವೆ.

ಈಗಿನಂತೆ ವೀಡಿಯೋಗಳ ಸೌಲಭ್ಯವಿದ್ದಿದ್ದರೆ ಆತನ ಕೆಲವಾದರೂ ಕುಸ್ತಿಗಳನ್ನು ಚಿತ್ರೀಕರಿಸಿಕೊಂಡಿದ್ದರೆ, ಅವು ನಮ್ಮ ಪಾಲಿಗೆ ಅಮೂಲ್ಯ ದಾಖಲೆಗಳಾಗಿರುತ್ತಿದ್ದವು. ಆತ ತಮ್ಮ ಕುಸ್ತಿಗಳಿಂದ ಜನರನ್ನು ಹೇಗೆ ಆಕರ್ಷಿಸಿದ್ದ ಎಂಬುದನ್ನು ಅನೇಕ ಪ್ರತ್ಯಕ್ಷದರ್ಶಿಗಳು ಬಣ್ಣಿಸುತ್ತಾರೆ. ಪ್ರಸಿದ್ಧ ಕಿರುತೆರೆಯ ನಟ, ಸಿನಿಮಾ, ನಾಟಕರಂಗದ ಸೋಮಶೇಖರ ರಾವ್ ಅವರು ತಮ್ಮ 'ಸೋಮಣ್ಣನ ಸ್ಟಾಕ್' ನಿಂದ ಕೃತಿಯಲ್ಲಿ ಬಹಳ ಪ್ರೀತಿಯಿಂದ ಪೈ. ನಂಜಪ್ಪನವರ ಕೆಲವು ಸ್ಮೃತಿಗಳನ್ನು ದಾಖಲಿಸಿದ್ದಾರೆ. ಅದರಲ್ಲಿ ಒಂದು ಕಡೆ "ಎಂಥ ಮೈ ನಂಜಪ್ಪನದು ! ಮಟ್ಟಿಯಲ್ಲಿ ಬಿದ್ದು ಕುಸ್ತಿಯ ಪಟ್ಟುಗಳನ್ನು ಕಲಿಯುತ್ತ ಸಡ್ಡು ಹೊಡೆದು ನಿಲ್ಲುತ್ತಿದ್ದ ಈ ವ್ಯಕ್ತಿಯ ಮಾಂಸಖಂಡಗಳ ಕುಣಿತವೇ ನಮಗೆ ಆಗಿನ ಬ್ರೇಕ್ ಡ್ಯಾನ್ಸ್. ಮಾಂಸಖಂಡಗಳು ಎಷ್ಟು ಗಟ್ಟಿಯಾಗಿದ್ದವೆಂದರೆ ಚಿಕ್ಕ ಹುಡುಗರಾದ ನಮ್ಮನ್ನು 'ತೋಳಿನ ಮಾಂಸಖಂಡಗಳಿಗೆ ಮೊಳೆ ಹೊಡೆದರೆ ಬಗ್ಗಿ ಹೋಗುತ್ತದೆ' ಎಂದು ನಂಬಿಸಿದ್ದರು. ಅಂಥ ಮೈಯಿನ ಈ ನಂಜಪ್ಪನ ಕುಸ್ತಿಗಳನ್ನು ಎಷ್ಟೋ ನೋಡಿದ್ದೇನೆ. ಅಷ್ಟೇ ಅಲ್ಲ, ಅವನನ್ನು ಅನುಕರಿಸಿ ಅವನಂತೆ ನಾನೂ ಒಬ್ಬ ದೊಡ್ಡ ಜಟ್ಟಿಯಾಗಬೇಕೆಂಬ ಕನಸೂ ಕಂಡಿದ್ದೇನೆ" ಎಂದು ಆತ ತಮ್ಮ ಮೇಲೆ ಬೀರಿದ ಪ್ರಭಾವವನ್ನು ದಾಖಲಿಸುತ್ತಾರೆ. ಇದು ಲೇಖಕರೊಬ್ಬರ ಮಾತಲ್ಲ. ನಂಜಪ್ಪನ ಶಿಷ್ಯರ, ಕುಸ್ತಿ ನೋಡಿದವರ, ಅವರನ್ನು ಕೇಳಿದವರೆಲ್ಲರ ಮಾತೂ ಆಗಿದೆ. ಆರೋಗ್ಯಕರ ಸುಂದರಕಾಯದ ಬಗ್ಗೆ ಚಿಂತಿಸುವಂತಾಗುವುದು ನಂಜಪ್ಪನಂಥ ಪೈಲ್ವಾನರನ್ನು ನೋಡಿದಾಗಲೆ. ಹೀಗೆ ಜನಮಾನಸದಲ್ಲಿ ಮಾಸದಿರುವ ಹರ್ಷದ ನೆನಪಾಗಿ ಉಳಿದಿರುವುದೇ ನಂಜಪ್ಪನವರಿಗೆ ಸಂದ ಗೌರವ, ಸ್ಮಾರಕ ಎಲ್ಲವೂ ಆಗಿದೆ. ಆದರೆ ಇವರ ಕುಸ್ತಿಕಲೆಯನ್ನು ಮೆಚ್ಚಿ ಮಾತಾಡಿದ ಹಿರಿಯರನ್ನು ಅಧಿಕಾರಿಗಳನ್ನು ದೂರವಿಡಬೇಕೆಂದು ಇದರ ಉದ್ದೇಶವಲ್ಲ.

ಇವರ ಕುಸ್ತಿಯನ್ನು ಅಂದಿನ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಅಧಿಕಾರಿಗಳು ಗಣ್ಯರು ನೋಡಿ ಮೆಚ್ಚಿದ್ದಾರೆ. ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ಚಿತ್ರದುರ್ಗದಲ್ಲಿ ನಂಜಪ್ಪನ ಕುಸ್ತಿಯನ್ನು ನೋಡಿ ಪ್ರಶಂಸಿಸಿದ್ದರಂತೆ. ಚಿತ್ರದುರ್ಗದ ದೊಡ್ಡಗರುಡಿಯ ಸಂಪರ್ಕವಿರುವ ಹಳಬರೆಲ್ಲಾ ನಂಜಪ್ಪನಿಗೆ ಅಂಟಿಸುವ ಗುಣವಾಚಕಗಳಲ್ಲಿ 'ಮೈಸೂರು ಹುಲಿ' ಎಂದು ಅವರನ್ನು ಅಭಿಮಾನದಿಂದ ಕರೆಯುತ್ತಾರೆ. ಈ ಬಿರುದನ್ನು ಅಂದಿನ ಮೈಸೂರು ಮಹಾರಾಜರು ಒಮ್ಮೆ ಇವರ ಕುಸ್ತಿ ನೋಡಿ ಕೊಟ್ಟ ಬಿರುದು ಎಂದು

ಹೇಳುತ್ತಾರೆ. ಜೊತೆಗೆ ಮಹಾರಾಜರು ತಮ್ಮ ಆಸ್ಥಾನದ ಜಟ್ಟಿಯಾಗಿ ಉಳಿಯಬೇಕೆಂದು ಹೇಳಿದರೆಂದೂ, ಕಟ್ಟುಪಾಡುಗಳ ಜೀವನಕ್ಕೆ ಇಷ್ಟಪಡದ ನಂಜಪ್ಪ ಹಾಗೆ ಅಲ್ಲಿರಲು ಒಪ್ಪಲಿಲ್ಲವೆಂದೂ ಹೇಳುತ್ತಾರೆ.

ಕುಸ್ತಿ ಕಲೆಯಲ್ಲಿ ಪರಿಣತಿಗಳಿಸಿದ ಮತ್ತು ಗಳಿಸಿದ ಕೀರ್ತಿಯೂ ಒಂದು ಮುಖ್ಯ ಕಾರಣವಾಗಿ ನಂಜಪ್ಪನವರಿಗೆ ಕನ್ನಡದ ಒಂದು ಸಿನಿಮಾದಲ್ಲಿಯೂ ಮಾಡುವ ಅವಕಾಶವೊಂದು ಒದಗಿ ಬಂತು. ಆ ಸಿನಿಮ 'ರಣಧೀರ ಕಂಠೀರವ'. ಮೈಸೂರು ಇತಿಹಾಸದಲ್ಲಿ ರೋಚಕ ಅಧ್ಯಾಯವೊಂದನ್ನು ತೆರೆದ, ಸ್ವತಃ ಕುಸ್ತಿಪಟುವಾಗಿ ಪ್ರಖ್ಯಾತಿ ಗಳಿಸಿದ್ದ ರಣಧೀರ ಕಂಠೀರವ ನರಸರಾಜ ಒಡೆಯರೇ ಕಥಾವಸ್ತುವಾಗಿ ಉಳ್ಳ ಆ ಸಿನಿಮಾದಲ್ಲಿ ಅರಸರಿಗೆ ಒಪ್ಪುವ ಘಟಾನುಘಟಿಗಳಾದ ಪೈಲ್ವಾನರ ಪಡೆಯೇ ಆ ಸಿನಿಮಾಕ್ಕೆ ಬೇಕಾಗಿತ್ತು. ರಣಧೀರ ಕಂಠೀರವನ ಪಾತ್ರದಲ್ಲಿ ಅಮೋಘ ಅಭಿನಯ ನೀಡಿದ ಡಾ. ರಾಜಕುಮಾರರಿಗೆ ಈ ನಂಜಪ್ಪನ ವ್ಯಕ್ತಿತ್ವ ಕಣ್ಣಿಗೆ ಕಟ್ಟಿ ನೆನಪಾಗಿರಬೇಕು. ಏಕೆಂದರೆ ರಾಜಕುಮಾರ್ ಅವರು ಬೇಡರ ಕಣ್ಣಪ್ಪ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾಗ, ಆಗ ಚಿತ್ರದುರ್ಗದಲ್ಲಿ ಮೊಕ್ಕಾಂ ಮಾಡಿದ್ದ ಗುಬ್ಬಿ ನಾಟಕ ಕಂಪೆನಿಯಲ್ಲಿ ಅಭಿನಯಿಸುತ್ತಿದ್ದರಂತೆ. ಆಗ ಬಿಡುವಿನ ವೇಳೆಯಲ್ಲಿ ರಾಜಕುಮಾರ್ ಮತ್ತು ಬೇರೆ ಕೆಲವು ನಟರು ದೊಡ್ಡಗರುಡಿಗೆ ಬಂದು ನಂಜಪ್ಪ ಮತ್ತು ಇತರೆ ಕೆಲವು ಪೈಲ್ವಾನರ ಲಡತ್ ನೋಡಿಕೊಂಡು ಹೋಗುತ್ತಿದ್ದರಂತೆ. ಬಹುಶಃ ಆ ಕಾರಣದಿಂದ ನಂಜಪ್ಪನಿಗೆ ಆ ಸಿನಿಮಾದಲ್ಲಿ ಕುಸ್ತಿಪಟುವಾಗಿ ಅಭಿನಯಿಸಲು ಕರೆ ಬಂದಿರಬೇಕು. ಕೆಲವರು ಹೇಳುವ ಪ್ರಕಾರ ರಾಜ್‌ಕುಮಾರ್ ಅವರಿಗೆ ಆಪ್ತವಲಯದಲ್ಲಿದ್ದ ಚಿತ್ರ ವಿತರಕರಾಗಿ ಚಿತ್ರದುರ್ಗದಲ್ಲಿದ್ದ ಕೆ.ಎಚ್. ನಾಗರಾಜ್ ಅವರು ಈ ಭಾಗದ ಕೆಲವು ಪೈಲ್ವಾನರನ್ನು ಕಳುಹಿಸಿಕೊಟ್ಟರೆಂದು ಹೇಳುತ್ತಾರೆ. ಅವರಲ್ಲಿ ಚಿತ್ರದುರ್ಗದಿಂದ ಪೈ. ನಂಜಪ್ಪ, ಪೈ. ಮೂಗಪ್ಪ, ದಾವಣಗೆರೆಯಿಂದ ಪೈ. ಚಾರ್ಲಿಯ ಸಹೋದರರಾದ ಚಮನ್, ಇಸ್ಮೈಯಿಲ್ ಮತ್ತು ಸ್ಟಾರ್ ನಾಗ–ಇವರನ್ನು ಕಳುಹಿಸಿಕೊಟ್ಟರೆಂದು ತಿಳಿಸುತ್ತಾರೆ. ಬಹುಶಃ ಎರಡೂ ನಿಜವಿರಬೇಕು. ಒಟ್ಟಾರೆ ರಣಧೀರ ಕಂಠೀರವದಲ್ಲಿ ಪೈ. ನಂಜಪ್ಪನವರಿಗೆ ಸಿಕ್ಕ ಕುಸ್ತಿಪಟುವಿನ ಪಾತ್ರವನ್ನು ತುಂಬಾ ಸಹಜವಾಗಿ ಮಾಡಿ ಹೆಸರು ಗಳಿಸಿದರು. ನಂಜಪ್ಪನವರ ಆಪ್ತರು ತಿಳಿಸುವಂತೆ, ಅವರು ಆ ಸಿನಿಮಾದಲ್ಲಿ ಇನ್ನೂ ಹೆಚ್ಚಿನ ಭಾಗದಲ್ಲಿ ಅಭಿನಯಿಸಿದ್ದರಂತೆ. ಬಹುಶಃ ಸಂಕಲನದ ಸಂದರ್ಭದಲ್ಲಿ ಅದಕ್ಕೆಲ್ಲಾ ಕತ್ತರಿ ಪ್ರಯೋಗವಾಗಿರಬೇಕು. ನಂಜಪ್ಪನವರು ಬೆಳ್ಳಿತೆರೆಯ ಮೇಲೆ ಮೆರೆಯಬೇಕೆಂಬ ಹಂಬಲ ಉಳ್ಳವರಾಗಿರಲಿಲ್ಲ. ಒಬ್ಬನ ಸಾಧನೆಗೆ ಪುರಸ್ಕಾರ ಯಾವು ಯಾವುದೋ ಕ್ಷೇತ್ರದಲ್ಲಿ ದೊರೆಯುತ್ತದೆ ಎಂಬುದನ್ನು ತಿಳಿಸಲು ಇದೊಂದು ಉದಾಹರಣೆಯಾಗಿದೆ.

ನಂಜಪ್ಪನವರು ಕುಸ್ತಿಪಟುವಾಗಿಯೂ ಅನ್ಯ ಕ್ಷೇತ್ರಗಳಲ್ಲಿ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಉಳಿಸಿರುವ ವಿಶಿಷ್ಟ ವ್ಯಕ್ತಿ ಎಂಬುದನ್ನು ನಾವು ಇನ್ನೊಮ್ಮೆ ಸ್ಮರಿಸಬಹುದು. ಒಂದನೆಯದಾಗಿ ಜವಾಬ್ದಾರಿ ಸರ್ಕಾರಕ್ಕಾಗಿ ಅರಮನೆಯ ಚಳುವಳಿಯ ಸಂದರ್ಭದಲ್ಲಿ ಅವರು ತೋರಿಸಿದ

ದಿಟ್ಟತನ, ಸಿಕ್ಕಿ ಹಾಕಿಕೊಂಡ ತೊಡಕುಗಳು, ಮಾಡಿದ ಸಾಹಸ ಯಾರಿಗಾದರೂ ಮೈನವಿರೇಳಿಸುವ ಸಂಗತಿಗಳು. ಗರುಡಿಯನ್ನು ನೋಡಿದಾಗ, ಬೆಟ್ಟು ಸುತ್ತುವಾಗ ನಮಗೆ ಈ ಹುಲಿಯೇ ಸುಳಿದಾಡಿದಂತೆ ಭಾಸವಾಗುತ್ತದೆ ! ಇಂಥ ಕೀರ್ತಿಯ ಇತಿಹಾಸ ಯಾರ ಬೆನ್ನಿಗೆ ಅಂಟಿಕೊಳ್ಳಲು ಸಾಧ್ಯ ನಂಜಪ್ಪನಂಥ ಕುಸ್ತಿಪಟು ಬಿಟ್ಟರೆ ! ಕುಸ್ತಿ ಪಟುವಾಗಿದ್ದುಕೊಂಡೇ ಆತನ ಕಲಾತ್ಮಕ ಮನಸ್ಸು ಅರಳಿದ್ದು ತಬಲಾ ವಾದನದ ಮೂಲಕ. ಹೊನ್ನಪ್ಪಭಾಗವತರು, ಮಾಸ್ಟರ್ ಹಿರಣ್ಣಯ್ಯ, ಪುಟ್ಟಣ್ಣ ಕಣಗಾಲ್ – ಮೊದಲಾದ ಕಲಾವಿದರು ರಾಜಾವೀರ ಮದಕರಿನಾಯಕ ನೋಡಿ ಸಂತೋಷಿಸುತ್ತಲೆ, ಕುಸ್ತಿ ಪಟುವಾದ ನಂಜಪ್ಪನ ತಬಲಾವಾದನದ ಬಗ್ಗೆ ವಿಸ್ಮಯ, ಮೆಚ್ಚುಗೆ ವ್ಯಕ್ತಪಡಿಸಿದ್ದರು. ಹೀಗೆ ನಂಜಪ್ಪ ಆಕ್ರಮಣ ಮಾಡಿದ್ದರೆ ಇನ್ನೂ ಹಲವು ಕ್ಷೇತ್ರಗಳು ಆತನ ವಶವಾಗುತ್ತಿದ್ದವ್ರೋ ಏನೋ !

ಚಿತ್ರದುರ್ಗದ ದೊಡ್ಡಗರಡಿಯ ಇತಿಹಾಸ ಕೆದಕಿದರೆ ಹಲವಾರು ಕುಸ್ತಿಪಟುಗಳೂ ಕೀರ್ತಿ ಸಂಪಾದಿಸಿದ್ದು ಕಂಡು ಬರುತ್ತದೆ. ತನ್ನೊಳಗೆ ಇಟ್ಟುಕೊಂಡ ಬೆಲೆಬಾಳುವ ಕೆಲವೇ ಕೆಲವು ವಜ್ರ ವೈಢೂರ್ಯಗಳನ್ನು ಕಡಲು ಅಪರೂಪಕ್ಕೆ ದಂಡೆಗೆ ತಂದು ಹಾಕು ವಂತೆ, ಚಿತ್ರದುರ್ಗದ ದೊಡ್ಡಗರಡಿಯಲ್ಲಿ ಕೆಲವೇ ಕೆಲವು ಪೈಲ್ವಾನರು ಕೀರ್ತಿಗಳಿಸಿ ಕೀರ್ತಿಶೇಷರಾಗಿದ್ದಾರೆ. ಅವರಲ್ಲಿ ಪೈ. ನಂಜಪ್ಪ, ಪೈ. ರಾಮಪ್ಪ ಮತ್ತು ಉಸ್ತಾದ್ ಪರಿಪೈಗರ್‌ರವರು. ಈಗ ದೊಡ್ಡ ಗರಡಿ ತನ್ನ ಕಟ್ಟಡದ ಹಳೆಯ ನಾಡ ಹೆಂಚಿನ ಸ್ವರೂಪವನ್ನು ಕೊಡವಿಕೊಂಡು, ಆರ್‌ಸಿಸಿ ಕಟ್ಟಡವಾಗಿ ನಿಂತಿದೆ. ಒಳಗೆ ಮಟ್ಟಿಯ ಎದುರುಗಡೆ ಇರುವ ಗೋಡೆಯನ್ನು ಪೈ. ನಂಜಪ್ಪ ಮತ್ತು ಪೈ. ರಾಮಪ್ಪನವರ ಸುಂದರ ತೈಲ ಚಿತ್ರಗಳಿಂದ ಅಲಂಕರಿಸಲಾಗಿದೆ. ದೊಡ್ಡಗರಡಿಯು ಈ ಇಬ್ಬರು ಮಹಾನ್ ಪೈಲ್ವಾನರಿಗೆ ತೋರಿಸಿದ ಗೌರವ ಎಂಬುದರ ಜೊತೆಗೆ ಇವು ದೊಡ್ಡ ಗರಡಿಯ ಸಾಧನೆಗೆ ಸಾಕ್ಷಿಯೆಂಬಂತೆ ಕಾಣುತ್ತವೆ. ಜೊತೆಗೆ ಶ್ರಾವಣದಲ್ಲಿ ನೂಲುಹುಣ್ಣಿಮೆಯಲ್ಲಿ ಆಚರಿಸುವ ಮೆರವಣಿಗೆಯಲ್ಲಿ ಗರಡಿಯ ದೇವತೆಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯು ತ್ತಾರೆ. ಅದೇ ಸಂದರ್ಭದಲ್ಲಿ ಪೈ. ನಂಜಪ್ಪ ಮತ್ತು ಪೈ. ರಾಮಪ್ಪನವರ ಭಾವಚಿತ್ರಗಳನ್ನೂ ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಇದೂ ಕೂಡ ಈ ಮಹಾನ್ ಕುಸ್ತಿಪಟುಗಳಿಗೆ ತೋರಿಸಿದ ಗೌರವವೇ ಆಗಿದೆ.

ನಂಜಪ್ಪನವರು ತಮ್ಮ ನಲವತ್ತೊಂದನೇ ವಯಸ್ಸಿನಲ್ಲಿ ಮರಣ ಹೊಂದಿದರು. ಕಾಲಕ್ಕೆ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ. ಆದರೆ ನಮ್ಮಂತವರಿಗೆ ನಂಜಪ್ಪನವರ ಸಾವು ಅಕಾಲಿಕ ಮರಣ ಎನ್ನಿಸುತ್ತದೆ. ಅವರು ಇನ್ನೂ ಬದುಕಬಹುದಿತ್ತು ಎನ್ನಿಸುತ್ತದೆ. ಇಂತಹ ಪೈಲ್ವಾನ್ ನಂಜಪ್ಪನವರಿಗೆ ಅವರು ಸತ್ತ ಬಳಿಕ ಅವರ ಸಮಾಧಿಯ ಸುತ್ತ ಕಾಂಪೌಂಡ್ ನಿರ್ಮಿಸಿ, ಅವರ ಕಪ್ಪು ಶಿಲೆಯ ಒಂದು ಮೂರ್ತಿಯನ್ನು ಸ್ಮಾರಕವಾಗಿ ಆಗಿನ

ಮಹಾರಾಣಿ ಕಾಲೇಜಿನ ಪ್ರಾಚಾರ್ಯರಾಗಿದ್ದ ಡಿ. ಬೋರಪ್ಪನವರು ಪ್ರತಿಷ್ಠಾಪಿಸಿದ್ದಾರೆ. ಈಗ ಆ ಮೂರ್ತಿಗೆ ಬಣ್ಣ ಹಾಕಿ ಅಂದಗೊಳಿಸಲಾಗಿದೆ. ಇದೊಂದು ಸ್ತುತ್ಯ ಕೆಲಸ.

ನಂಜಪ್ಪನಂತಹ ಕುಸ್ತಿಪಟುಗಳು ನಮ್ಮ ಕಣ್ಣ ಮುಂದೆ ಇಲ್ಲದಿದ್ದರೂ ಅವರು ಈ ಸ್ಮಾರಕಗಳಿಗಿಂತ ಮಿಗಿಲಾಗಿ ಒಂದು ಜಂಗಮ ಶಕ್ತಿಯಾಗಿ ಉಳಿಯಲು ಅಪೇಕ್ಷಿಸುತ್ತಿರುತ್ತಾರೆ. ಅದನ್ನು ಅರಿಯುವ ಮೂಲಕ ನಮ್ಮ ಪರಂಪರೆಯನ್ನು ಶ್ರೀಮಂತಗೊಳಿಸಬಹುದು ಎಂದು ಕಾಣುತ್ತದೆ.

❑

೧೬ ಇದು ಎಂಥ ದುರಂತ ?

ಬದುಕಿನಲ್ಲಿ ಅಸಂಖ್ಯಾತ ಜನ ಸಾಯುತ್ತಾರೆ. ಸತ್ತ ಬಳಿಕ ಕೆಲವೇ ಕೆಲವರು ನಮ್ಮನ್ನು ಕಾಡುತ್ತಾರೆ. ನನ್ನ ಮಟ್ಟಿಗೆ ಪೈ. ನಂಜಪ್ಪನವರೂ ಕೂಡ ಸತ್ತು ಕಾಡುವ ವ್ಯಕ್ತಿಯಾಗಿದ್ದಾರೆ, ಶಕ್ತಿಯಾಗಿದ್ದಾರೆ ಎನ್ನಿಸುತ್ತದೆ. ಏಕೆಂದರೆ ನಂಜಪ್ಪನವರು ಸಾಯುವ ದಿನಗಳಲ್ಲಿ ವಿಪರೀತವಾಗಿ ಕುಡಿತದ ಗೀಳಿಗೆ ಬಲಿಯಾದರು ಎಂದು ಕಾಣುತ್ತದೆ. ಹೀಗೆ ವಿಪರೀತ ಕುಡಿತಕ್ಕೆ ಬಲಿಯಾಗಲು ಕಾರಣವೇನು ? ಅವರು ಸತ್ತಿದ್ದು ೧೯೬೫ ರಲ್ಲಿ. (೧೨-೧೨-೧೯೬೫). ಆಗ ಅವರಿಗೆ ೪೧ ವರ್ಷಗಳು. ಒಬ್ಬ ಮನುಷ್ಯನ ಆಯಸ್ಸಿನ ದೃಷ್ಟಿಯಿಂದ ಯೋಚಿಸಿದಾಗ ನಮಗೆ ಅನ್ನಿಸುವುದು ಪೈ. ನಂಜಪ್ಪ ಇನ್ನು ಕೆಲವು ವರ್ಷ ಧಾರಾಳವಾಗಿ ಬದುಕಬಹುದಿತ್ತಲ್ಲ ಎಂದು. ಹಾಗಾದರೆ ಅವರು ಸತ್ತರೇಕೆ ?

ತಮ್ಮ ಸಾವನ್ನು ತಾವೇ ಕುಡಿತದ ಮೂಲಕ ನಂಜಪ್ಪ ತಂದುಕೊಂಡರೇ ? ಕುಡಿತ ಚಟವಾಗಿದ್ದುದು ಗೀಳು ಆಯಿತೇಕೆ ? ಎಂದು ಪ್ರಶ್ನಿಸಿಕೊಂಡರೆ ಇದುವರೆಗೂ ಅವರ ಬದುಕನ್ನು ಅಲ್ಪ ಸ್ವಲ್ಪ ಗಮನಿಸಿರುವುದರ ಆಧಾರದ ಮೇಲೆ ಕೆಲವು ಊಹೆಗಳನ್ನು ಮಾಡಬಹುದಾಗಿದೆ.

ಇಪ್ಪತ್ತನೇ ಶತಮಾನದ ಐವತ್ತರ ದಶಕದ ತನಕ ಚಿತ್ರದುರ್ಗದಂಥ ಊರುಗಳಲ್ಲಿ ಅಂತಹ ಸಾಮಾಜಿಕ ಬದಲಾವಣೆಯ ಗಾಳಿ ಬೀಸಿರಲಿಲ್ಲ. ಅಲ್ಲಿಯ ತನಕ ಇಲ್ಲಿನ ಹಲವಾರು ಧಾರ್ಮಿಕ, ಸಾಮಾಜಿಕ ಪದ್ಧತಿಗಳು, ನಂಬಿಕೆಗಳು, ಆಚರಣೆಗಳು ಗಟ್ಟಿಯಾಗಿ ಉಳಿದು ಬಂದಿದ್ದವು. ಅವುಗಳಲ್ಲಿ ಗರುಡಿಯು ಸಾಮಾಜಿಕವಾಗಿ ವಿಶೇಷ ಮನ್ನಣೆ ಪಡೆದು ತನ್ನದೇ ಆದ ಸ್ಥಾನ-ಮಾನ ಪಡೆದಿತ್ತು. ಉತ್ತಮ ದೇಹದಾರ್ಢ್ಯ, ಆರೋಗ್ಯ ಹೊಂದುವುದು ಅತಿ ಮುಖ್ಯವೆಂದು ಎಲ್ಲಾ ಮನೆಗಳವರು ಬಗೆದಿದ್ದರು. ಆದ್ದರಿಂದ ಸಾಮಾನ್ಯವಾಗಿ ಜಾತಿಮತಗಳ ಭೇದವಿಲ್ಲದೆ, ಬೆಳೆದ ಮಕ್ಕಳನ್ನು ಆರೋಗ್ಯ ಸಂಪಾದಿಸಿಕೊಂಡು ಬರುವುದು ಮೊದಲ ಕರ್ತವ್ಯವೆಂದು ಬಗೆದು ಗರುಡಿಗಳಿಗೆ ಬಲವಂತವಾಗಿ ದಬ್ಬುತ್ತಿದ್ದರು ! ಹಾಗೆಂದು ಇಲ್ಲಿನ ಹಿರಿಯ ಪೈಲ್ವಾನರು ತಮ್ಮ ಬಾಲ್ಯ ನೆನೆಸಿಕೊಂಡು ಆ ಕಾಲದ ಸ್ಥಿತಿ-ಗತಿಗಳನ್ನು ಬಣ್ಣಿಸುತ್ತಾರೆ.

ಮೊದಲು ದೇಹದಾರ್ಢ್ಯ ಮತ್ತು ಆರೋಗ್ಯದ ಉದ್ದೇಶಕ್ಕಾಗಿ ಗರುಡಿಯ ಬಳಕೆಯಾದಂತೆ ಕಾಣುತ್ತದೆ. ಮುಂದಿನ ಹಂತದಲ್ಲಿ ಕುಸ್ತಿ ಪಟುವಾಗಲು ಮಟ್ಟಿಯಲ್ಲಿ

ಲಡತ್ ಮುಂದುವರಿಯುತ್ತಿತ್ತು. ಸಾಮಾಜಿಕವಾಗಿ ಮನರಂಜನೆಯನ್ನು ಕೊಡುವ ಕ್ರೀಡೆಯಾಗಿ ಕುಸ್ತಿಕಲೆ ವಿಶೇಷವಾಗಿ ಬೆಳವಣಿಗೆಗೊಂಡಿತೆಂದು ಕಾಣುತ್ತದೆ. ಕೊಂಚ ಸೂಕ್ಷ್ಮವಾಗಿ ಮತ್ತು ಗಂಭೀರವಾಗಿ ಕುಸ್ತಿಕಲೆಯನ್ನು ವೀಕ್ಷಿಸಿದರೆ ಅದು ಸ್ಫೂರ್ತಿ, ಚೈತನ್ಯ, ಧೈರ್ಯ, ಉತ್ಸಾಹಗಳನ್ನು ನೀಡುತ್ತದೆ. ಅಲ್ಲದೆ ಎಂಥ ತೊಡಕಿನ ಸಮಸ್ಯೆ ಎದುರಾದರೂ ಅದನ್ನು ನಿರ್ಭಯವಾಗಿ ಯುಕ್ತಿಯಿಂದ ಗೆದ್ದು ಜಯಶಾಲಿಯಾಗುವಂತೆ ಮಾಡುತ್ತದೆ. ಇದು ಕುಸ್ತಿ ಆಡುವ ಪೈಲ್ವಾನರಿಗೆ ಮಾತ್ರ ಅನ್ವಯಿಸದೆ, ಪ್ರೇಕ್ಷಕರಿಗೂ ಅನ್ವಯಿಸುತ್ತದೆ. ಆದ್ದರಿಂದಲೇ ಕುಸ್ತಿ ಪಟುಗಳ 'ಕುಸ್ತಿ ವಿದ್ಯೆ' ಜನಮನದಲ್ಲಿ ಗೌರವಾದರಗಳಿಗೆ ಪಾತ್ರವಾಗಿದೆ.

ಬರೀ ಜಾತ್ರೆ, ಉತ್ಸವಗಳಲ್ಲಿ ನಡೆಯುತ್ತಿದ್ದ ಅಂದಿನ ಕುಸ್ತಿ ಪಂದ್ಯಗಳಿಗೆ ಒಂದು ಪ್ರತಿಷ್ಠೆಯ ಸ್ಥಾನ ದೊರೆತದ್ದು, ಕುಸ್ತಿ ಕಂಟ್ರ್ಯಾಕ್ಟರ್‌ಗಳ ಮೂಲಕ ಆರಂಭವಾದ ಟಿಕೆಟ್ ಕುಸ್ತಿಗಳಿಂದ. ಇಂಥ ಕಾಲದಲ್ಲಿಯೇ ನಂಜಪ್ಪನವರು ಕುಸ್ತಿಪಟುವಾಗಿ ಮೇಲೆದ್ದರು. ತಮ್ಮ ಊರಲ್ಲಿ, ಬೇರೆ ಬೇರೆ ಊರುಗಳಲ್ಲಿ ತಮ್ಮ ಕುಸ್ತಿವಿದ್ಯೆಯ ಚಾಣಾಕ್ಷತೆ, ಕಲಾತ್ಮಕತೆ, ತಾಂತ್ರಿಕ ಸಾಧ್ಯತೆಗಳೆಲ್ಲವನ್ನು ಪ್ರದರ್ಶಿಸಿ ಅವರು ಜನರ ಮನಸ್ಸನ್ನು ಸೂರೆಗೊಂಡರು. ಅವರು ಗೆದ್ದರೆ ಖುಷಿ ಪಟ್ಟರು. ಸಮ ಮಾಡಿಕೊಂಡರೆ ವಿಸ್ಮಯ ಪಟ್ಟರು ; ಸೋತರೆ ಏಕೆ ಎಂದು ಪ್ರಶ್ನಿಸಿದರು. ಪ್ರತಿಯೊಂದು ಕುಸ್ತಿಯು ನಂಜಪ್ಪನವರಿಗೆ ಅಂದಿನ ಎಲ್ಲಾ ಪೈಲ್ವಾನರಿಗೆ – ಕೀರ್ತಿ, ಮನ್ನಣೆ ತರುವುದರ ಜೊತೆಗೆ ಕೊಂಚ ಹಣವನ್ನೂ ತಂದಿತು. ಸ್ವತಃ ಶ್ರೀಮಂತರ ಕುಟುಂಬದಿಂದ ಬಂದಿದ್ದ ಅವರಿಗೆ ಅಂತಹ ಆರ್ಥಿಕ ಸಂಕಷ್ಟಗಳೂ ಇರಲಿಲ್ಲ. ಬಹುಶಃ ಅವರು ಇದೇ ಜೀವನವೆಂದು ಬಗೆದರು. ಭವಿಷ್ಯ ಅವರ ಕಣ್ಣಮುಂದೆಯೇ ಬರಲಿಲ್ಲ. ಕಣ್ಣುಮುಂದಿದ್ದುದೆಲ್ಲಾ ಕುಸ್ತಿಪಟುವಾಗಿ ಬೆಳೆಯುವುದು, ಕೀರ್ತಿ ಸಂಪಾದಿಸುವುದು, ಒಳ್ಳೆಯ ಹೆಸರು ಸಂಪಾದಿಸುವುದು.

ಅದಕ್ಕೆ ಸರಿಯಾಗಿ ಅವರು ಒಳ್ಳೆಯ ಹೆಸರು ಸಂಪಾದಿಸಿದರು. ಕುಸ್ತಿಪಟುವಾಗಿ ಅವರು ಹೆಸರು ಮಾಡಿದಂತೆಯೇ, ನಾಲ್ಕು ಜನರ ಮಧ್ಯೆ ಕೂಡ ಒಬ್ಬ ಒಳ್ಳೆಯ ಮನುಷ್ಯನೆಂದು ಹೆಸರು ಮಾಡಿದರು. ಕುಸ್ತಿಪಟುವಾಗಿ ರೂಪುಗೊಳ್ಳುತ್ತಿದ್ದ ಈ ಕಾಲದಲ್ಲಿ ಅವರು ವಿವಾಹ ಜೀವನದ ಬಗ್ಗೆ ತುಂಬಾ ಗಾಢವಾಗಿ ಯೋಚಿಸಿದಂತೆ ಕಾಣುವುದಿಲ್ಲ. ಕುಟುಂಬವರ್ಗದವರು ಆಸಕ್ತಿ ವಹಿಸಿದಂತೆ ಕಾಣುತ್ತದೆ. ಆದರೆ ವೈವಾಹಿಕ ಜೀವನಕ್ಕೆ ಅವರನ್ನು ಎಳೆಯಲು ಕುಟುಂಬ ವರ್ಗದವರು ಪ್ರಯತ್ನಿಸಿ ಸೋತಂತೆ ಕಾಣುತ್ತದೆ. ನಂಜಪ್ಪನವರು ಕುಸ್ತಿಲೋಕದಲ್ಲಿ ಹಾಗು ಸಾಮಾಜಿಕ ಜೀವನದಲ್ಲಿ ಒಳ್ಳೆಯ ಹೆಸರು ಗಳಿಸಿದ್ದರಿಂದ ಆಗಿನ ಕಾಲದಲ್ಲಿ ಅವರು ವಿವಾಹ ಜೀವನದ ಬಗ್ಗೆ ಏನು ಯೋಚನೆ ಮಾಡಿದ್ದರು ಎಂಬ ಬಗ್ಗೆ ನಮಗೆ ಬಹಳಷ್ಟು ಮಾಹಿತಿ ಸಿಗದಿದ್ದರೂ, ಅವರು ಆಗಾಗ್ಗೆ ತಮ್ಮ ಶಿಷ್ಯ ಗೋಪಾಲಪ್ಪನ ಬಳಿ ಪ್ರಾಸಂಗಿಕವಾಗಿ ಮಾತಾಡುತ್ತಾ – "ಗೋಪಾಲ.... ನಾವು ಪೈಲ್ವಾನರು ಮದುವೆಯಾಗಬಾರದು ಕಣೋ ... ನಾವು ನಾಕು ಜನದ ಮಧ್ಯೆ ಒಳ್ಳೆ ಹೆಸರು ಗಳಿಸಿ ಮೆರೆತಿರ್ತೀವಿ.... ಆದರೆ ನಮಗೆ

ಹುಟ್ಟೋ ಮಕ್ಕಳು ಎಂಥವು ಹುಟ್ತಾವ್ರೋ ಏನೋ.... ಕೆಟ್ಟ ಹೆಸರು ತಂದರೆ ನಾವು ಗಳಿಸಿದ್ದ ಮರ್ಯಾದೆಯೆಲ್ಲಾ ಹೋಗುತ್ತದೆ....” ಎಂದು ಹೇಳುತ್ತಿದ್ದರಂತೆ. ನಾನು ಅವರ ಮಾತನ್ನು ಕೇಳಿ ೧೯೬೭ನೇ ಇಸವಿ ತನಕ ಮದುವೆ ಆಗಿರಲಿಲ್ಲ ಎಂದು ಗೋಪಾಲಪ್ಪ ಜ್ಞಾಪಿಸಿಕೊಳ್ಳುತ್ತಾರೆ. ಆದರೆ ಗುರುವಾದ ನಂಜಪ್ಪನವರು ಒಪ್ಪಿಕೊಂಡ ಅವಿವಾಹಿತ ಜೀವನವನ್ನು ಅವರ ಶಿಷ್ಯರು ಯಾರೂ ಅನುಸರಿಸಲಿಲ್ಲ. ಎಲ್ಲರೂ ಮದುವೆಯಾದರು, ಸಂಸಾರವಂದಿಗರೂ ಆದರು. ಇದೇ ನಂಜಪ್ಪ ಅದೇ ಗೋಪಾಲಪ್ಪನ ಬಳಿಯಲ್ಲಿ ಮುಂದೊಂದು ದಿನ – “ಗೋಪಾಲ..... ನಾನು ಮದುವೆಯಾಗಬೇಕಿತ್ತು ಕಣೊ.... ನಾನು ಒಬ್ಬಂಟಿಯಾಗಿ ಬಿಟ್ಟೆ” ಎಂದು ಅತ್ತರಂತೆ. ಈ ದುಃಖ ಅವರ ಮಧ್ಯವಯಸ್ಸಿನಲ್ಲಿ ಅತಿಯಾಗಿ ಬಾಧಿಸಿರಬಹುದು.

ಇಂಥ ಸಮಯದಲ್ಲೇ ದೊಡ್ಡಗರಡಿಯ ಚಹರೆ ಬದಲಾಯಿತು. ಪೈಲ್ವಾನರುಗಳು ಊರೂರಲ್ಲಿ ಕುಸ್ತಿ ಪ್ರದರ್ಶನದ ಮೂಲಕ ಹೀರೋಗಳಂತೆ ಮೆರೆಯುತ್ತಿದ್ದ ಕಾಲವೊಂದಿತ್ತು. ಆದರೆ ನಿಧಾನವಾಗಿ ಕುಸ್ತಿಯನ್ನು ನೋಡುವ, ಮೆಚ್ಚುವ ಪ್ರೇಕ್ಷಕರ ಸಂಖ್ಯೆ ಕ್ಷೀಣವಾಗತೊಡಗಿ, ಎಲ್ಲಾ ಊರುಗಳಲ್ಲಿಯೂ ಕಾಂಟ್ರ್ಯಾಕ್ಟ್ ಕುಸ್ತಿಗಳ ಅಬ್ಬರ ಇಳಿಮುಖವಾಯಿತು. ಇಂಥ ಸಂದರ್ಭದಲ್ಲಿ ದೊಡ್ಡ ಗರುಡಿ ಕುಸ್ತಿ ಪಟುಗಳನ್ನು ನಿರ್ಮಿಸುವುದನ್ನು ಅತಿಯಾಗಿ ಹಚ್ಚಿಕೊಳ್ಳದೆ, ನಾಟಕಗಳ ಕಡೆ ವಾಲಿತು. ಕುಸ್ತಿಪಟುವಾಗಿದ್ದ ನಂಜಪ್ಪನವರಿಗೆ ಇನ್ಯಾವುದೋ ಕಾಣದ ಕೈಗಳ ಪೆಟ್ಟು ತನಗೆ ಅಪ್ಪಳಿಸುತ್ತದೆ ಎಂಬ ಅರಿವು ಆಗಲಿಲ್ಲ. ಡೈಲಾಗ್‌ಗಳನ್ನು ಗಟ್ಟು ಹೊಡೆದು, ಭುಜಕೀರ್ತಿ, ಕಿರೀಟ, ವೇಷ, ಭೂಷಣಗಳಿಂದ ಸಜ್ಜಾದ ಭಾರಿ ನಟರಿಗೆ, ರಂಗವೂ ಇಲ್ಲ, ಪ್ರೇಕ್ಷಕರೂ ಇಲ್ಲ ಎಂಬಂತಾಯಿತು ಪೈಲ್ವಾನರ ಸ್ಥಿತಿ. ಇದು ನಂಜಪ್ಪನವರ ಪಾಡೂ ಆಯಿತು.

ಇಂಥ ಸಂದರ್ಭದಲ್ಲಿ ಕುಸ್ತಿಯ ಲೋಕದಿಂದ ನಾಟಕ ಲೋಕಕ್ಕೆ ತಬಲಾಪಟುವಾಗಿ ನಂಜಪ್ಪ ಪ್ರವೇಶ ಪಡೆದರು ಎಂಬುದು ನಿಜ. ಆದರೆ ಅದು ಅವರಿಗೆ ಆರ್ಥಿಕವಾಗಿ ಕೈ ಹಿಡಿದು ಎತ್ತಲಿಲ್ಲ. ತಬಲಾಪಟುವಿಗೆ ಹೊರತಾದ ಮತ್ತೊಂದು ಉದ್ಯೋಗ ಗೊತ್ತಿರದ ನಂಜಪ್ಪನವರು ತಮಗೆ ಆರ್ಥಿಕ ಕಷ್ಟ ಆಗಾಗ್ಗೆ ಮುತ್ತಿಕೊಳ್ಳುವುದನ್ನು ಗಮನಿಸಿದರು. ಅವರು ಸ್ನೇಹಿತರಿಗೆ, ಇಷ್ಟರಿಗೆ ಕೈಚಾಚಿದವರಲ್ಲ. ಆದರೆ ಅವರ ಅಣ್ಣಂದಿರ ಬಳಿ ತಮಗೆ ಹಣದ ಮುಗ್ಗಟ್ಟಾದಾಗ ನೆರವು ಕೋರಿರಬಹುದು. ಅದು ಅವರಿಗೆ ಬೇಸರ ತಂದಿರಬಹುದು. ನಂಜಪ್ಪನವರ ಒಂಟಿತನ ಹೆಚ್ಚಿಸಲು ಇಂಥವು ಇನ್ನಷ್ಟು ಕಾರಣವಾಗಿರಬಹುದು.

ಇಂಥ ಸಂದರ್ಭದಲ್ಲೇ ಇದುವರೆಗೂ ಇದ್ದ ಪೋಷಕರು ಕಣ್ಣುಮರೆ, ಮಣ್ಣು ಮರೆಯಾದದ್ದು ಗರಡಿಗಳ ದೃಷ್ಟಿಯಿಂದ ಮತ್ತಷ್ಟು ಕ್ಷೀಣದೆಸೆಗೆ ಕಾರಣವಾಯಿತೆನ್ನಬೇಕು. ಪೋಷಕರ ಅಭಿಮಾನ, ಪ್ರೀತಿ, ಉದಾರ ಹಸ್ತಗಳು ಗರಡಿಗಳಿಗೆ ಶ್ರೀರಕ್ಷೆಯಾಗಿತ್ತು. ಇದು ಗರಡಿಯನ್ನು ಉಳಿಸಲು, ಪೈಲ್ವಾನರನ್ನು ಬೆಳಗಿಸಲು ಇದ್ದ ಬಹು ದೊಡ್ಡ ಮಾರ್ಗವಾಗಿತ್ತು. ಯಾವಾಗ ಈ ಹಿರಿಯರು, ಪೋಷಕರು ತೆರೆಯ ಹಿಂದೆ ಸರಿದರೋ, ನಾವಿದ್ದೇವೆ ಎಂಬ

ಹೊಸ ಪ್ರೋಷಕರು ಹುಟ್ಟಿಕೊಳ್ಳಲಿಲ್ಲ. ಹೀಗಾಗಿ ಪೈಲ್ವಾನ್‌ಗಿರಿಗೆ ಬದುಕು ಮೀಸಲಿಟ್ಟ ನಂಜಪ್ಪನಂಥವರಿಗೆ ಆಸರೆ ತಪ್ಪಿ, ನಡು ನೀರಲ್ಲಿ ಕೈ ಬಿಟ್ಟಂತಾಯಿತು. ಆದರೆ ಪೈಲ್ವಾನ್‌ಗಿರಿಯನ್ನು ಮಾಡುತ್ತಲೇ ಹೊಟ್ಟೆಪಾಡಿಗೊಂದು ಉದ್ಯೋಗಕ್ಕೂ ಅಂಟಿಕೊಂಡ ಪೈಲ್ವಾನರು ಈ ದುಃಸ್ಥಿತಿಗೆ ಇಳಿಯಲಿಲ್ಲ. ಸ್ವತಃ ನಂಜಪ್ಪನವರಿಗೆ ತಮ್ಮ ಪೂರ್ವಿಕರಿಂದ ಬಂದ ಆಸ್ತಿ ಇತ್ತಾದರೂ, ಈ ಹೊಸ ಬದಲಾವಣೆಗಳು ಅವರ ಜೀವನದ ಮೇಲೆ ಪರಿಣಾಮ ಬೀರದಿರಲಿಲ್ಲ. ಇದೂ ಕೂಡಾ ಮಂಕಾದ ಭವಿಷ್ಯ ಅವರೆದುರಿಗೆ ನಿಂತಂತಾಗಿ ಬಹುಶಃ ಮತ್ತಷ್ಟು ಒಂಟಿತನ ಅವರಿಗೆ ಅಮರಿಕೊಂಡಿತು. ಇದೆಲ್ಲದರ ಪರಿಣಾಮವಾಗಿ ಅವರು ಕುಡಿತ ಹೆಚ್ಚು ಮಾಡಿಕೊಂಡು, ತಮ್ಮ ಬದುಕಿನ ಕೊನೆಯನ್ನು ಜಾಗ್ರತೆ ಬರುವಂತೆ ಮಾಡಿಕೊಳ್ಳಲು ಕಾರಣವಾಗಿರಬೇಕು. ಹೀಗಾಗಿ ಅವರ ಸಾವು ವೈಯಕ್ತಿಕ ದುರಂತವಾಗಿರುವಂತೆ ಆ ಕಾಲ ತಂದ ಬದಲಾವಣೆಗಳು ಅವರ ಬದುಕಿನ ದುರಂತಕ್ಕೆ ಕಾರಣವಾಗಿವೆ ಎಂಬುದು ಸ್ಪಷ್ಟವಾಗುತ್ತದೆ.

ಸಾಮಾಜಿಕ ದೃಷ್ಟಿಯಿಂದ ಅವರ ಸಾವನ್ನು ಕುರಿತು ಇನ್ನೂ ಕೊಂಚ ಹಿಂಜಿ ನೋಡಬಹುದು ಎನ್ನಿಸುತ್ತದೆ. ನಂಜಪ್ಪ ಒಬ್ಬ ಸಾಮಾನ್ಯ ಮನುಷ್ಯನಾಗಿರದೆ ಅಸಾಮಾನ್ಯ ಕುಸ್ತಿ ಕಲಾವಿದನಾಗಿ ಬೆಳೆದಂಥವನು. ಕುಸ್ತಿ ಕ್ರೀಡೆಗಳಿಗೆ ಒತ್ತಾಸೆಯಾಗಿ ನಿಂತಿದ್ದ ಪ್ರೋಷಕರು ಕಣ್ಮರೆಯಾದ ಮೇಲೆ, ಚಿತ್ರದುರ್ಗದ ಬಹುಪಾಲು ಗರಡಿಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಕ್ಷೀಣವಾಗಿ ಪ್ರಯತ್ನಿಸಿವೆ. ಪ್ರೋಷಕರನ್ನು ಮತ್ತೆ ಸೃಷ್ಟಿಸಲು ಸಾಧ್ಯವೇ? ಹಣ, ಲಾಭದ ದಂಧೆಯನ್ನು ಮಾತ್ರ ಸಾಮಾಜಿಕ ಗೌರವ, ಮೌಲ್ಯ ಎಂಬಂತೆ ಅಂತರ್ರಾಷ್ಟ್ರೀಯ ನಡವಳಿಗಳು, ನಮ್ಮ ಸರ್ಕಾರದ ನೀತಿಗಳು ರೂಪುಗೊಂಡು ಪ್ರಚುರವಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಸಾಮಾಜಿಕ ಬಂಧಗಳು ಸಡಿಲವಾಗಿ, ಜಾಳುಜಾಳಾಗತೊಡಗಿವೆ. ಇಂಥ ಹೊತ್ತಲ್ಲಿ ಶ್ರೀಮಂತ ಮತ್ತಷ್ಟು ಶ್ರೀಮಂತನಾಗುತ್ತಾನೆಯೇ ಹೊರತು ಶ್ರೀಮಂತ ಹೃದಯನಾಗುವುದು ಕಷ್ಟ! 'ಊರಚಿಂತೆ ಕಟ್ಟಿಕೊಂಡು ವೀರಶೆಟ್ಟಿ ಬಡವಾದ', ಆದ್ದರಿಂದ ನಾವೇಕೆ ಬಡವರಾಗಬೇಕು ಎಂಬುದು ಇಂದಿನ ಉಳ್ಳವರ ನಡೆ ನುಡಿಯಾಗಿದೆ. ಇದು ಗರಡಿಗಳ ಪಾಲಿಗೆ ಕ್ಷಯ ರೋಗವೆಂಬಂತೆ ಭಾಸವಾಗುತ್ತಿದೆ.

ಪೋಷಕರು ಕೈಬಿಟ್ಟಾಗ, ಗರಡಿಗಳನ್ನು ರಕ್ಷಿಸಬೇಕಾದ, ಕುಸ್ತಿ ಕಲಾವಿದರನ್ನು ಕಾಪಾಡಬೇಕಾದ ಹೊಣೆ ಯಾರದು? ಸಹಜವಾಗಿ ನಮಗನ್ನಿಸುವುದು ಸರ್ಕಾರದ್ದು ಎಂದು. ಸರ್ಕಾರದ ನೂರಾರು ಜವಾಬ್ದಾರಿಗಳಲ್ಲಿ ನಮ್ಮ ಪ್ರಾಚೀನ ಕಲೆಯಾದ ಕುಸ್ತಿಗಳನ್ನು ಉಳಿಸಿಕೊಳ್ಳುವುದು, ಕುಸ್ತಿಪಟುಗಳನ್ನು ಬೆಳೆಸುವುದು, ಗರುಡಿಗಳನ್ನು ಸಂರಕ್ಷಿಸುವುದು ಅನಿವಾರ್ಯ. ಸರ್ಕಾರ ಅಷ್ಟೋ ಇಷ್ಟೋ ಈ ಬಗ್ಗೆ ಕಣ್ಣು ತೆರೆದಿರುವುದರಿಂದಲೇ ಕೆಲವು ಗರಡಿಗಳು ನವೀಕರಣಗೊಂಡಿವೆ, ಹೊಸ ಕಟ್ಟಡಗಳಾಗಿವೆ. ಕುಸ್ತಿಪಟುಗಳನ್ನು ಕಲಾವಿದರೆಂದು ಪರಿಗಣಿಸಿ ಅವರಿಗೆ ಒಂದಷ್ಟು ಜೀವನಕ್ಕೆ ಬೇಕಾದ ಆರ್ಥಿಕ ನೆರವನ್ನು ಮಾಸಾಶನ ರೂಪದಲ್ಲಿ

ಕೊಟ್ಟರೆ, ಅದು ಅನೇಕರಿಗೆ ಲಾಭವಾಗುತ್ತದೆ. ಸಮರ್ಪಕ ವ್ಯವಸ್ಥೆಯಿಲ್ಲದೆ ಅನೇಕ ಕುಸ್ತಿಪಟುಗಳು ನಿತ್ಯಜೀವನದಲ್ಲಿ ಪಾಡು ಪಡುವಂತಾಗಿದೆ. ಬಹುಶಃ ನಂಜಪ್ಪನವರಿಗೆ ಆ ಕಾಲದಲ್ಲಿ ಇಂಥ ಯಾವ ನೆರವೂ ಸರ್ಕಾರದಿಂದ ದೊರೆತಂತೆ ಕಾಣುವುದಿಲ್ಲ. ಜೊತೆಗೆ ಪೈಲ್ವಾನ್ ನಂಜಪ್ಪ ಜವಾಬ್ದಾರಿ ಸರ್ಕಾರದ ಪರವಾಗಿ ಮಾಡಿದ ಸ್ವಾತಂತ್ರ್ಯ ಹೋರಾಟದ ಸಂಗತಿಯನ್ನಾದರೂ ಗಮನಿಸಿ ಸರ್ಕಾರವು ಅವರಿಗೆ ನೆರವು ನೀಡಿದ್ದರೆ ಚೆನ್ನಾಗಿರುತ್ತಿತ್ತು. ಇಂಥ ವ್ಯಕ್ತಿಗಳಿಗೆ ಜೀವನೋತ್ಸಾಹ ಉಳಿಯಲು ಸರ್ಕಾರ, ಸಂಘ ಸಂಸ್ಥೆಗಳು ಅವರ ಕಾರ್ಯ ಸಾಧನೆಗಳನ್ನು ಗುರುತಿಸಿ ನೆರವು ನೀಡದಿದ್ದರೆ ಅವರಿಗೆ ಬದುಕಿನ ಬಗ್ಗೆ ಯಾವ ಸೆಳೆತ ಇರುತ್ತದೆ?

ಜೊತೆಗೆ ಯಾವ ಯಾವ ಕಾರಣಗಳಿಂದಲೋ ದೇಸೀಯ ಕಲೆಗಳು, ಕ್ರೀಡೆಗಳು, ಚಿಂತನೆಗಳು ಹೊಡೆತ ತಿಂದಿವೆ. ಕ್ರೀಡೆಯ ದೃಷ್ಟಿಯಿಂದ ಯೋಚಿಸಿದಾಗ ಕುಸ್ತಿಗೆ ಅಂತಹ ದುರ್ಗತಿ ಒದಗಿದೆ ಎಂದು ಅನ್ನಿಸುತ್ತದೆ. ಕ್ರಿಕೆಟ್, ಟೆನಿಸ್ ಮೊದಲಾದ ಕ್ರೀಡೆಗಳು ವ್ಯಾಪಿಸಿರುವ ಪರಿಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅವು ದೇಶಗಳು, ನಗರಗಳು, ಹಳ್ಳಿಗಳು ಎಲ್ಲಾ ಕಡೆಯು ಟಿ.ವಿ. ರೇಡಿಯೋಗಳ ಮೂಲಕ ವ್ಯಾಪಿಸಿ ನಿಂತಿವೆ. ಹಗಲು ರಾತ್ರಿಗಳ ವ್ಯತ್ಯಾಸವಿಲ್ಲದೆ ಆಫೀಸು, ಕಛೇರಿಗಳಲ್ಲಿ, ಮನೆಗಳಲ್ಲಿ ಇವನ್ನು ಮನರಂಜನೆ ಎಂದು ಬಗೆದು ನೋಡುತ್ತಾರೆ; ಅಂತಸ್ತು ಹೆಚ್ಚುತ್ತದೆ ಎಂದು ಮಾತನಾಡುತ್ತಾರೆ. ಬುದ್ಧಿ ಬೆಳೆಯುತ್ತದೆಂದು ಈ ಕ್ರೀಡಾಪಟುಗಳ ಹೆಸರುಗಳನ್ನು ನೆನಪಿಡುತ್ತಾರೆ. ಇದರ ದೆಸೆಯಿಂದ ದೇಸೀ ಕ್ರೀಡೆಗಳಿಗೆ ಮಾರಣಾಂತಿಕ ಪೆಟ್ಟು ಬಿದ್ದಂತೆ ಕುಸ್ತಿ ಕ್ರೀಡೆಗೂ ಪೆಟ್ಟು ಬಿದ್ದಿದೆ. ಕುಸ್ತಿ ಕ್ರೀಡೆ ಮನರಂಜನೆ ಮಾತ್ರವಲ್ಲ ಬದುಕನ್ನು ಎದುರಿಸುವ ಅಂತಃಪ್ರೇರಣೆ ಆ ಕ್ರೀಡೆಯಲ್ಲಿ ಅಡಗಿದೆ ಎಂಬುದನ್ನು ಸರ್ಕಾರಕ್ಕಿಂತ ಮುಖ್ಯವಾಗಿ ಜನ ತಿಳಿಯಬೇಕಾಗಿದೆ. ಕುಸ್ತಿಗಳನ್ನು ನೋಡಲು ಈ ಉದ್ದೇಶದಿಂದ ಜನ ಅಖಾಡದ ಕಡೆಗೆ ಧಾವಿಸಬೇಕಾಗಿದೆ. ಯುವಶಕ್ತಿ ಗರಡಿಯ ಕಡೆ ಹೋಗಬೇಕಾಗಿದೆ. ಇಲ್ಲದಿದ್ದರೆ ಗರಡಿಗಳೂ ಉಳಿಯುವುದಿಲ್ಲ; ನಂಜಪ್ಪನಂತಹ ಪೈಲ್ವಾನರೂ ಉಳಿಯುವುದಿಲ್ಲ. ಈ ದುರಂತವನ್ನು ನಂಜಪ್ಪನವರ ಅಕಾಲಿಕ ಮರಣ ಸಾರಿ ಹೇಳುತ್ತಿದೆ.

❑

೧೭ ಬಲ್ಲವರ ಬಗೆಯಲ್ಲಿ ಮೂಡಿದ ಪೈ. ನಂಜಪ್ಪ

ಪೈಲ್ವಾನ್ ನಂಜಪ್ಪನವರ ಬಗ್ಗೆ ಅವರ ಸಮಕಾಲೀನರೂ, ಅವರ ನಿಕಟವರ್ತಿಗಳೂ ಶಿಷ್ಯರೂ ಅಗಿದ್ದ ಕೆಲವರ ಅಭಿಪ್ರಾಯಗಳನ್ನು ಅವರ ಬದುಕಿನ ಸಂಗತಿಗಳ ಅಧಿಕೃತತೆಗಾಗಿ ಸಂಗ್ರಹಿಸಬೇಕೆಂಬ ಉದ್ದೇಶದಿಂದ ಒಂದು ಚಿಕ್ಕ ಪ್ರಶ್ನಾವಳಿಯನ್ನು ಎಲ್ಲರಿಗೂ ಕಳುಹಿಸಲಾಯಿತು. ಅವರಲ್ಲಿ ನಾಲ್ಕು ಜನ ಹಿರಿಯರು ಮಾತ್ರ ಉತ್ತರಿಸಿದ್ದಾರೆ. ಅವರು ಪ್ರಶ್ನೆಗಳಿಗೆ ಉತ್ತರಿಸದೆ ತಾವು ಕಂಡಿದ್ದನ್ನು ಬರೆದು ಕಳುಹಿಸಿದ್ದಾರೆ. ಅದನ್ನು ಈ ಕೊನೆಯ ಅಧ್ಯಾಯದಲ್ಲಿ ಸಂಗ್ರಹರೂಪದಲ್ಲಿ ಕೃತಜ್ಞತೆಯೊಡನೆ ಇಲ್ಲಿ ಕೊಡಲಾಗಿದೆ.

ಸಿ.ಟಿ.ಎಸ್. ನಾಯಕ್

ಸಿ.ಟಿ.ಎಸ್. ನಾಯಕ್ ಕರ್ನಾಟಕ ಸರ್ಕಾರದಲ್ಲಿ ಸಿವಿಲ್ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ದೊಡ್ಡಗರುಡಿಯ ಸಮೀಪವೇ ಇದ್ದ ಇವರು ಪೈಲ್ವಾನ್ ನಂಜಪ್ಪನವರನ್ನು ಬಹಳ ಹತ್ತಿರದಿಂದ ಬಲ್ಲವರು. ದೊಡ್ಡಗರುಡಿಯಲ್ಲಿ 'ನವಭಾರತ ತರುಣ ಕಲಾವಿದರ ಸಂಘ, ದೊಡ್ಡಗರುಡಿ, ಚಿತ್ರದುರ್ಗ' ಎಂಬುದು ಸ್ಥಾಪಿತವಾಗಿ ಹಲವು ನಾಟಕಗಳನ್ನು ಪ್ರದರ್ಶಿಸಿತು. ಸಿ.ಟಿ.ಎಸ್. ನಾಯಕರು ಈ ಕಲಾಸಂಘದಲ್ಲಿ ಸಕ್ರಿಯವಾಗಿ ಪಾಲುಗೊಂಡರು. ಈ ಸಂಘದವರು ಪ್ರದರ್ಶಿಸಿದ 'ರಾಜಾವೀರ ಮದಕರಿನಾಯಕ' ಯಶಸ್ವಿಯಾಗಿ ೪೫೦ ಪ್ರದರ್ಶನಗಳನ್ನು ಕಂಡಿತು. ಆ ನಾಟಕದಲ್ಲಿ ಪರಶುರಾಮ ನಾಯಕನ ಪಾತ್ರ ಮಾಡಿದ್ದರ ಜೊತೆಗೆ, ಆ ನಾಟಕದ ನಿರ್ದೇಶನ ಕೂಡಾ ಮಾಡಿದರು. ಈ ನಾಟಕಕ್ಕೆ ಪೈ. ನಂಜಪ್ಪ ತಬಲ ನುಡಿಸುತ್ತಿದ್ದರು. ಪೈ. ನಂಜಪ್ಪನವರ ಬಗ್ಗೆ ಅವರ ಕೆಲವು ಅಭಿಪ್ರಾಯಗಳು:

ಪೈ. ನಂಜಪ್ಪನವರು ೧೯೪೨ರಿಂದ ಪರಿಚಯ. ದೊಡ್ಡಗರುಡಿಗೆ ನಂಜಪ್ಪ ಸಾಧನೆ ಮಾಡಲು ಬರುತ್ತಿದ್ದುದರಿಂದ, ಅವರ ಕುಸ್ತಿಗಳನ್ನು ನೋಡಿದವರು ಹೊಗಳುತ್ತಿದ್ದುದರಿಂದ ಅವರ ಬಗ್ಗೆ ನನ್ನಲ್ಲಿ ಅಭಿಮಾನ ಹುಟ್ಟಿತು. ನಾನು ನಂಜಪ್ಪ ಮಾಡಿದ ಒಂದು ಕುಸ್ತಿಯನ್ನು ನೋಡುವ ಅವಕಾಶ ಸಿಕ್ಕಿತ್ತು. ಪೈ. ಮರುಡಪ್ಪನ ಮೇಲೆ ಕುಸ್ತಿ ಆಡಿದ ಪೈ. ನಂಜಪ್ಪ ಆತನನ್ನು ಎರಡೇ ನಿಮಿಷದಲ್ಲಿ ಸೋಲಿಸಿ ಪ್ರೇಕ್ಷಕರನ್ನು ದಂಗುಬಡಿಸಿದ.

ಪೈ. ನಂಜಪ್ಪ ಪ್ರೌಢನಾದ ಮೇಲೆ ಕುಸ್ತಿರಂಗದಲ್ಲಿ ಹೆಸರು ಗಳಿಸುತ್ತಿದ್ದರೂ ಯಾರಿಗೂ ಅನಾವಶ್ಯಕವಾಗಿ ತೆಗಳುವುದೇ ಆಗಲಿ, ನಿಷ್ಠುರವಾಗಿ ಮಾತನಾಡುವುದೇ ಆಗಲಿ ಅವನಲ್ಲಿರಲಿಲ್ಲ. ದೊಡ್ಡ ಮನುಷ್ಯರು, ಹೆಂಗಸರನ್ನು ಕಂಡರೆ ಬಹಳ ಮರ್ಯಾದೆ ಕೊಡುತ್ತಿದ್ದ. ವಯಸ್ಸಾದಂತೆ, ಕುಸ್ತಿ ಕಮ್ಮಿಯಾದಂತೆ ಕುಡಿತವನ್ನು ಹೆಚ್ಚುಮಾಡಿಕೊಂಡ. ಅವನ ದೇಹದಲ್ಲಿ ಎಷ್ಟು ವೀರತ್ವ ಇದ್ದರೂ ಯಾವ ಹೆಂಗಸಿನ ಮೇಲೆ ದೌರ್ಜನ್ಯ ಮಾಡಲಿಲ್ಲ. ಅವನಿಗೆ ಹಣದ ಮುಗ್ಗಟ್ಟು ಬಂದಾಗ ಸಂಬಂಧಿಕರಲ್ಲಿ ಹಣದ ಸಹಾಯ ಕೇಳುತ್ತಿದ್ದ. ಆದರೆ ಇವನ ಮೇಲೆ ಅಷ್ಟಾಗಿ ನಿಗಾ ವಹಿಸಲಿಲ್ಲ. ಹೀಗಾಗಿ ಕುಡಿತದ ಗೀಳಿಗೆ ಬಲಿಯಗಿ ಜಾಸ್ತಿ ಮಾಡಿದ. ಅಂಥಾ ದೇಹದಾರ್ಢ್ಯವಿದ್ದರೂ ಮಾನಸಿಕವಾಗಿ ಚಿಂತೆಗೊಳಗಾದ. ವಯಸ್ಸಿಗೆ ತಕ್ಕಂತೆ ಮದುವೆಯಾಗದೆ ಮನೋರೋಗಕ್ಕೆ ಬಲಿಯಾಗಿ ಸಾವನ್ನು ತಂದುಕೊಂಡ.

ನಂಜಪ್ಪನ ಜೊತೆಯಲ್ಲಿ ಸೊಪ್ಪಿನ ರಾಮಪ್ಪನು ಅವನಷ್ಟೇ ಪ್ರಸಿದ್ಧಿಯಾಗಿದ್ದನು. ದಾವಣಗೆರೆ ಚಾರ್ಲಿ ಪೈಲ್ವಾನನ ಮೇಲೆ ರಾಮಪ್ಪನ ಕುಸ್ತಿ ಇತ್ತು. ನಾನೂ ಆ ಕುಸ್ತಿ ನೋಡಲು ಹೋಗಿದ್ದೆ. ರಾಮಪ್ಪನ ಗೆಲುವಿನ ಬಗ್ಗೆ ನಮ್ಮೆಲ್ಲರಿಗೂ ಆತ್ಮೀಯ ವಿಶ್ವಾಸವಿತ್ತು. ರಾಮಪ್ಪ ಸೋಲು ಅನುಭವಿಸಿದ. ಆತ ಬಳಿಕ ಕುಸ್ತಿ ಕಲೆಯ ಬಗ್ಗೆ ನಿಗಾ ವಹಿಸದೆ, ಕುಸ್ತಿ ಮಾಡುವುದನ್ನೇ ಕಮ್ಮಿ ಮಾಡಿದ. ಆದ್ದರಿಂದ ದೊಡ್ಡಗರುಡಿಯಲ್ಲಿ ನಂಜಪ್ಪನವರಿಗೆ ಸರಿಗಟ್ಟುವ ಪೈಲ್ವಾನರು ಹೊರಹೊಮ್ಮಲಿಲ್ಲ.

೧೯೪೭ರಲ್ಲಿ ನಾನು ಡಿಪ್ಲೋಮಾ ಸಿವಿಲ್ ಇಂಜಿನಿಯರಿಂಗ್ ಓದುತ್ತಿದ್ದಾಗ ಸ್ವಾತಂತ್ರ್ಯ ಹೋರಾಟದಲ್ಲಿ ಕೇಂದ್ರದಲ್ಲಿ ಸ್ವತಂತ್ರ ಉದಯಿಸಿತ್ತು. ಆದರೆ ಕೆಲವು ಸಂಸ್ಥಾನಗಳಲ್ಲಿ ಅಂದಿನ ರಾಜರು ಸ್ವತಂತ್ರವನ್ನು ಘೋಷಿಸಿರಲಿಲ್ಲ. ಆಗ ಬೆಂಗಳೂರಿನಲ್ಲಿಯೂ ಸ್ವತಂತ್ರ್ಯ ಚಳವಳಿ ಪ್ರಾರಂಭವಾಯಿತು. ಶಾಲಾ ಕಾಲೇಜುಗಳಿಗೆ ರಜಾ ಘೋಷಿಸಿದ್ದರಿಂದ ನಾವುಗಳು ವಿದ್ಯಾಭ್ಯಾಸ ತಾತ್ಕಾಲಿಕವಾಗಿ ನಿಲ್ಲಿಸಿ ಊರುಗಳಿಗೆ ಹೊಂದಿರುಗಿದೆವು. ನಮ್ಮ ಹೃದಯದಲ್ಲಿ ಮತ್ತು ಮನಸ್ಸಿನಲ್ಲಿ ಸ್ವತಂತ್ರ ಹೋರಾಟದ ಗುಂಗು ಇನ್ನು ಹೋಗಿರಲಿಲ್ಲ. ಚಿತ್ರದುರ್ಗದ ಸ್ಥಳೀಯರ ಸಹಕಾರದೊಂದಿಗೆ ಚಳುವಳಿ ಪ್ರಾರಂಭಿಸಬೇಕೆನಿಸಿತು. ನಾನು ಮತ್ತು ನನ್ನ ಸಹೋದ್ಯೋಗಿ ಬಸವರಾಜು ಇವರೊಂದಿಗೆ ದೊಡ್ಡಗರುಡಿಗೆ ಹೋಗಿ ಪೈಲ್ವಾನರುಗಳನ್ನೆಲ್ಲಾ ಸೇರಿಸಿ ಅವರಿಗೆ ಸ್ವತಂತ್ರದ ಮಹತ್ವವನ್ನು ಮನದಟ್ಟಾಗುವ ರೀತಿಯಲ್ಲಿ ತಿಳಿವಳಿಕೆ ಹೇಳಿದ ಮೇಲೆ ಎಲ್ಲಾ ಗರುಡಿಯ ತರುಣರು ಸೇರಿ ನೀಲಕಂಠೇಶ್ವರ ದೇವಸ್ಥಾನದಿಂದ ದೊಡ್ಡ ಮೆರವಣಿಗೆಯನ್ನು ಏರ್ಪಾಡು ಮಾಡಿದ್ದರು. ಇದರ ನೇತೃತ್ವವನ್ನು ಪೈಲ್ವಾನ್ ನಂಜಪ್ಪ ವಹಿಸಿದ್ದರು. ನಾವಿಬ್ಬರು ಮುಂದಾಳುಗಳಾಗಿ ಮೆರವಣಿಗೆ ಹೊರಟು ಡಿಸ್ಟ್ರಿಕ್ಟ್ ಕಚೇರಿಗೆ ಬಂದಾಗ ಅಲ್ಲಿ ಬಲವಾದ ಪೋಲೀಸ್ ಪಹರೆಯಿತ್ತು. ಅವರು ನಮ್ಮನ್ನು ತಡೆದದ್ದರಿಂದ ತಾಲ್ಲೂಕ್ ಕಛೇರಿಯ ಕಡೆ ಮೆರವಣಿಗೆ ನುಗ್ಗಿತು. ನಂಜಪ್ಪನ ತಂಡದವರು ತಾಲ್ಲೂಕ್ ಕಚೇರಿಯ ಬಳಿಸಾರಿ ಕಟ್ಟಡವನ್ನು ಹತ್ತಿ ಕಾಂಗ್ರೆಸ್ ಬಾವುಟವನ್ನು ಏರಿಸಿದರು. ಇದರಿಂದ

ಜನ ಸಂತೋಷಪಟ್ಟು ಭುಗಿಲೆದ್ದು ಕುಣಿದಾಡಲು ಪ್ರಾರಂಭಿಸಿದರು. ಇದನ್ನು ಸಹಿಸಿದ ಪೋಲೀಸರು ಜನಸಂದಣಿಯ ಮೇಲೆ ಗೋಲಿಬಾರ್ ಮಾಡಿದರು. ನಂಜಪ್ಪನವರನ್ನು ಪೋಲೀಸರು ದಸ್ತಗಿರಿ ಮಾಡುತ್ತಾರೆ ಎಂದು ತಿಳಿದಾಗ ನಂಜಪ್ಪ ಬೆಟ್ಟದ ಮೇಲೆ ಹೋಗಿ ಅವಿತುಕೊಂಡಿದ್ದರು. ಆಗ ನಾವು ಕಳ್ಳತನದಿಂದ ಒಂದು ವಾರ ಊಟ ಕೊಟ್ಟು ಬಂದೆವು. ಬಳಿಕ ಆತ ರಾಣೆಬೆನ್ನೂರಿಗೆ ಹೋಗಿ, ಸ್ವತಂತ್ರ ಘೋಷಣೆಯಾದ ಮೇಲೆ ದುರ್ಗಕ್ಕೆ ಕರೆತರಲಾಯಿತು. ಇಡೀ ಚಿತ್ರದುರ್ಗದ ಜನಗಳ ಮನಸ್ಸಿನಲ್ಲಿ ಆತನ ಧೈರ್ಯ, ಸ್ಥೈರ್ಯ, ಸಾಹಸಗಳು ಮಾಸದೆ ಅಚ್ಚಳಿಯದೆ ನಿಂತಿವೆ.

ಪೈಲ್ವಾನ್ ವಸಂತರಾವ್

ದೊಡ್ಡಗರುಡಿಗೆ ಹೊಂದಿಕೊಂಡಂತೆ, ದೊಡ್ಡಗರುಡಿಯ ಮುಂದೆಯೇ ಮನೆ ಇರುವ ಪೈಲ್ವಾನ್ ವಸಂತರಾವ್ ಅವರು ಪೈಲ್ವಾನ್ ನಂಜಪ್ಪನವರ ಮುಖ್ಯ ಶಿಷ್ಯರುಗಳಲ್ಲಿ ಒಬ್ಬರು. ಇವರ ತಂದೆ ಪೈಲ್ವಾನ್ ನಾರಾಣಪ್ಪನವರು ಕೆಲವು ಕಾಲ ದೊಡ್ಡಗರುಡಿಯಲ್ಲಿ ಉಸ್ತಾದ್ ಆಗಿದ್ದವರು. ಪೈಲ್ವಾನ್ ನಂಜಪ್ಪನವರಿಗೂ ಕೆಲವು ಕಾಲ ಉಸ್ತಾದ್ ಆಗಿದ್ದರು. ಕುಸ್ತಿ ಪಟುವಾದ ವಸಂತರಾವ್ ಈಗಾಗಲೇ ತಮ್ಮ ನೆನಪುಗಳನ್ನು ಕೃತಿರೂಪದಲ್ಲಿ [ನಿರೂಪಣೆ : ಟಿ.ಆರ್. ರಾಧಾಕೃಷ್ಣ (ಇದೇ ಕೃತಿಯ ಲೇಖಕ)] ಪ್ರಕಟಿಸಿದ್ದಾರೆ. ಪೈಲ್ವಾನ್ ನಂಜಪ್ಪನವರನ್ನು ನಿಕಟವಾಗಿ ಬಲ್ಲ ಅವರ ಕೆಲವು ಅಭಿಪ್ರಾಯಗಳು:

೧೯೪೨ರಿಂದಲೂ ದೊಡ್ಡಗರುಡಿಯ ಪಕ್ಕದಲ್ಲೇ ಇರುವುದರಿಂದ ಪೈಲ್ವಾನ್ ರಾಮಪ್ಪ, ಪೈಲ್ವಾನ್ ನಂಜಪ್ಪ, ಉಸ್ತಾದ್‌ಗಳಾದ ನಾರಾಣಪ್ಪ (ನಮ್ಮ ತಂದೆ), ಕಾಲುಂಗುರದ ಬುಡ್ಡಣ್ಣ ಎಲ್ಲರ ಪರಿಚಯವೂ ನನಗಿದೆ. ಪೈಲ್ವಾನ್ ನಂಜಪ್ಪನವರು ಮಾಡಿದ ಕುಸ್ತಿಗಳನ್ನು ಗರುಡಿಗಳಲ್ಲೂ ಮತ್ತು ಹೊರಗಡೆ ನಡೆಯುತ್ತಿದ್ದ ಅವರ ಕುಸ್ತಿಗಳನ್ನು ಬೇಕಾದಷ್ಟು ನೋಡಿದ್ದೇನೆ.

ಪೈಲ್ವಾನ್ ನಂಜಪ್ಪನವರು ಸುಪ್ರಸಿದ್ಧ ಕುಸ್ತಿಪಟುಗಳು. ಅಂದಿನ ಪ್ರಸಿದ್ಧ ಪೈಲ್ವಾನರುಗಳಾದ ನಾಗಪುರದ ಪೈಲ್ವಾನ್ ಅಣ್ಣಪ್ಪ, ಪೈಲ್ವಾನ್ ದಿವಾನ್, ರಾಣೆಬೆನ್ನೂರು ಪೈಲ್ವಾನ್ ಮರುಡಪ್ಪ, ತಿಪಟೂರು ಪೈಲ್ವಾನ್ ಶಂಕರ್, ಹೊಸಪೇಟೆ ಪೈಲ್ವಾನ್ ಭೀಮಪ್ಪ, ಪೈಲ್ವಾನ್ ಕೃಷ್ಣೋಜಿ, ಬೆಳಗಾಂ ಪೈಲ್ವಾನ್ ವಿಷ್ಣು ಇಸಾಕ್, ಪೈ. ಅಪ್ಪಾಜಿ, ಪೈ. ರಾಮ್‌ಸಿಂಗ್, ಪೈ. ವಸಂತ್, ಗದುಗಿನ ಪೈ. ಸಾಣೆ ಇಮಾಂ, ಹುಣಿಸೆಕಟ್ಟೆ ಸಿದ್ದಪ್ಪ, ಕಾಶ್ಮೀರ್ ಮೆಹಬೂಬ್, ಬಾಂಬೆವಾಲಾ, ಬೆಂಗಳೂರಿನ ಮಿಲಿಟರಿ ಅಧಿಕಾರಿಯಾಗಿದ್ದ ಪೈ. ಅಮ್ಮೀಸಿಂಗ್, ತುಮ್ಮಿನ ಕಟ್ಟೆ ಪೈ. ರಾಮಪ್ಪ, ಕರ್ಜಗಿ ಬಾಷಾ, ಮಲೆಬೆನ್ನೂರು ಹಸನ್, ಲಿಂಗದಹಳ್ಳಿ ಚೆನ್ನಬಸಪ್ಪ, ದಾವಣಗೆರೆಯ ಚಾರ್ಲಿ – ಮೊದಲಾದವರ ಜೊತೆ ಪೈ. ನಂಜಪ್ಪ ಸರಿಸಾಟಿಯಾಗಬಲ್ಲವರು. ಇವರಲ್ಲಿ ಎಷ್ಟೋ ಪೈಲ್ವಾನರ ಜೊತೆಯಲ್ಲಿ ಕುಸ್ತಿ ಆಡಿ ಗೆದ್ದಿದ್ದಾರೆ.

ಪೈ. ನಂಜಪ್ಪನವರ ಅನೇಕ ಕುಸ್ತಿಗಳನ್ನು ನಾನು ನೋಡಿದ್ದೇನೆ. ಅವುಗಳಲ್ಲಿ ಬೆಂಗಳೂರಿನ ಮಿಲಿಟರಿ ಆಫೀಸರ್ ಆಗಿದ್ದ ಅಮ್ಮೀಸಿಂಗ್ ಜೊತೆ ಪೈ. ನಂಜಪ್ಪನವರು ಮಾಡಿದ ಕುಸ್ತಿ ಕಣ್ಣಿಗೆ ಕಟ್ಟಿದಂತಿದೆ. ಈ ಕುಸ್ತಿಯನ್ನು ಈಗಾಗಲೇ ನಾನು ನನ್ನ ನೆನಪುಗಳು ಕೃತಿಯಲ್ಲಿ ಸ್ಮರಿಸಿದ್ದೇನೆ. ಪ್ರಸ್ತುತ ಕೃತಿಯಲ್ಲೂ ಅದರ ಬಣ್ಣನೆ ಇದೆ. ಪೈ. ನಂಜಪ್ಪ ಗೆಲ್ಲಲು ಅಸಾಧ್ಯ ಎನ್ನುವವರೊಡನೆ ಜೊತೆಹಾಕಿಕೊಳ್ಳುತ್ತಿದ್ದ ಬಗೆ, ಅಂದಿನ ಪೈಲ್ವಾನರ ಉದಾರ ನಡವಳಿಕೆ, ನಂಜಪ್ಪನವರ ಕುಸ್ತಿಯ ಕೌಶಲ – ಎಲ್ಲವನ್ನೂ ಗಮನಿಸಬಹುದಾದುದರಿಂದ ಅಮ್ಮೀಸಿಂಗ್ ಜೊತೆ ಮಾಡಿದ ಕುಸ್ತಿ ನನಗೆ ಸ್ಮರಿಸಲು ಈಗಲೂ ಇಷ್ಟ.

ಪೈ. ನಂಜಪ್ಪನವರ ವೇಷಭೂಷಣಗಳು ಸರಳ. ಸಾಧಾರಣ ಉಡುಪೆಂದರೆ ಬಿಳಿ ಪೈಜಾಮ, ಬಿಳಿ ಜುಬ್ಬಾ ಮತ್ತು ತಲೆಗೆ ಕಪ್ಪು ಟೋಪಿ ಧರಿಸುತ್ತಿದ್ದರು. ಅವರು ಕುಸ್ತಿ ಆಡುವಾಗ ಅಖಾಡಕ್ಕೆ ಬರುವಾಗಲೂ ಸರಳವಾಗಿ, ಠೀವಿಯಿಂದ ಬರುತ್ತಿದ್ದರು. ಅಖಾಡದಲ್ಲಿ ಕುಸ್ತಿ ಆಡಲು ಚಡ್ಡಿ ಧರಿಸಿ ನಿಲ್ಲುತ್ತಿದ್ದ ಭಂಗಿ ನಂಜಪ್ಪನವರಿಗೆ ಮಾತ್ರ ಮೀಸಲು. ಆ ಭಂಗಿಯನ್ನು ಬೇರೆ ಯಾವ ಪೈಲ್ವಾನರಲ್ಲೂ ನೋಡಿಲ್ಲ. ಅವರ ಕುಸ್ತಿ ಪ್ರಾರಂಭವಾಯಿತೆಂದರೆ ಪಟ್ಟಿನ ಮೇಲೆ ಪಟ್ಟು ಸಮಯ ಸಂದರ್ಭ ನೋಡಿಕೊಂಡು ಅದಕ್ಕೆ ತಕ್ಕಂತೆ ಪಟ್ಟುಗಳನ್ನು ಉಪಯೋಗಿಸುತ್ತಿದ್ದರು. ಅವರು ಆಡಿರುವ ಅನೇಕ ಕುಸ್ತಿಗಳಲ್ಲಿ ಬೇರೆ, ಬೇರೆ ಪೈಲ್ವಾನರಿಗೆ ಬೇರೆ ಬೇರೆ ಪಟ್ಟುಗಳನ್ನು ಹಾಕಿ ಕೇವಲ ಐದು ನಿಮಿಷಗಳಲ್ಲಿ ಜಯಗಳಿಸಿದ್ದಾರೆ. ಅವರ ಜಯ ಎಂದರೆ ಐದು ನಿಮಿಷ, ಸಮವಾಗುವ ಕುಸ್ತಿ ಎಂದರೆ ಒಂದು ಗಂಟೆ. ನಾನು ಪೈಲ್ವಾನನಾಗಿ ಅವರ ಗುಣ ಗಮನಿಸಿರುವಂತೆ ಅವರು ಪೋಷಕರಿಗೆ, ಗುರುಗಳಿಗೆ, ಹೆಣ್ಣುಮಕ್ಕಳಿಗೆ ಬಹಳ ಗೌರವ ಕೊಡುತ್ತಿದ್ದರು. ಕೊನೆಗಾಲದಲ್ಲಿ ಅವರ ಸ್ನೇಹಿತರು ಕೆಲವರಿಂದ ಕುಡಿತವನ್ನು ಕಲಿತರು. ಎಂಥಾ ನಿಶಾದಲ್ಲಿದ್ದರೂ ಅವರ ಮುಂಚಿನ ಮನೋಭಾವ ಬಿಟ್ಟವರಲ್ಲ. ಎಂದೂ ಅಶ್ಲೀಲವಾಗಿ ನಡೆದುಕೊಳ್ಳಲಿಲ್ಲ.

ಎಚ್.ಜಿ. ಸೋಮಶೇಖರರಾವ್. ಎಂ.ಎ., ಡಿ.ಎಸ್.ಎಸ್‌ಸಿ.,

ಇವರು ವೃತ್ತಿಯಿಂದ ಕೆನರಾ ಬ್ಯಾಂಕಿನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಮತ್ತು ಸ್ಟಾಫ್ ಟ್ರೈನಿಂಗ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರು ವೃತ್ತಿಗಿಂತಲೂ ಪ್ರವೃತ್ತಿಯಿಂದ ಕನ್ನಡನಾಡಿಗೆಲ್ಲಾ ರಂಗಭೂಮಿ, ಚಲನಚಿತ್ರ, ಕಿರುತೆರೆಯ ನಟರಾಗಿ ಸುಪರಿಚಿತರಾಗಿದ್ದಾರೆ. ಆತ್ಮಚರಿತ್ರೆಯ ರೂಪದಲ್ಲಿರುವ ಇವರ ಕೃತಿ 'ಸೋಮಣ್ಣನ ಸ್ಟಾಕ್‌ನಿಂದ' ಸೊಗಸಾಗಿ ಓದಿಸಿಕೊಳ್ಳುವ ಕೃತಿ. ಬಾಲ್ಯದಲ್ಲಿ ದೊಡ್ಡಗರುಡಿ ಮತ್ತು ಪೈ. ನಂಜಪ್ಪನವರ ಸಂಪರ್ಕ, ಸ್ನೇಹವಿದ್ದ ಸೋಮಣ್ಣನವರು ತಮ್ಮ ಕೃತಿಯಲ್ಲಿ ಅವನ್ನು ಆತ್ಮೀಯವಾಗಿ ಸ್ಮರಿಸಿದ್ದಾರೆ. ನವಭಾರತ ತರುಣ ಕಲಾವಿದರ ಸಂಘದವರು ಅಭಿನಯಿಸುತ್ತಿದ್ದ 'ರಾಜಾವೀರ ಮದಕರಿನಾಯಕ'ದಲ್ಲಿ ದಿವಾನ್ ಪೂರ್ಣಯ್ಯನ ಪಾತ್ರ ವಹಿಸುತ್ತಿದ್ದ

ಸೋಮಣ್ಣನವರು ಪೈ. ನಂಜಪ್ಪನ ತಬಲಾವಾದನ ಮೆಚ್ಚಿಕೊಂಡವರು. ಅವರ ಕೆಲವು ಮಾತುಗಳು:

ನಂಜಪ್ಪನವರು ಸೊಗಸಾಗಿ ತಬಲ ಬಾರಿಸುತ್ತಿದ್ದರು. ಅಷ್ಟರಮಟ್ಟಿಗೆ ಅವರಿಗೆ ಸಂಗೀತ ಜ್ಞಾನವಿತ್ತು. ಸಾಂಸ್ಕೃತಿಕ ಬದುಕಿನ ಬಗ್ಗೆ ಆಸಕ್ತಿಯಿತ್ತು. ನಾಟಕ, ಸಂಗೀತಗಳಲ್ಲಿ ಅವರಿಗಿದ್ದ ಪ್ರೀತಿ ನಿಜಕ್ಕೂ ಅಚ್ಚರಿ ಹುಟ್ಟಿಸುವಂಥದ್ದು.

ನಂಜಪ್ಪನವರ ಕುಸ್ತಿ ಕೌಶಲ, ಅವರ ವಿಚಿತ್ರ 'ಪಟ್ಟು'ಗಳ ಬಗ್ಗೆ ಉತ್ತರ ಕರ್ನಾಟಕ ದಲ್ಲಿಯಂತೆ ಮಹಾರಾಷ್ಟ್ರ ಮತ್ತು ಪಂಜಾಬಿನ ಕೆಲವು ಕಡೆ ಮೆಚ್ಚಿಕೆ ವ್ಯಕ್ತಪಡಿಸುತ್ತಿದ್ದರೆಂದು ಕೇಳಿದ್ದೇನೆ. ನಂಜಪ್ಪನವರು ಅಖಾಡಕ್ಕೆ ಇಳಿದರೆಂದರೆ ಸಾಕು ಮಿಂಚಿನಂತೆ ಫಳಫಳಾರೆಂದು ಪಟ್ಟುಗಳನ್ನೆಸೆಯುತ್ತಾ, ತೋಳು–ತೊಡೆ ತಟ್ಟುತ್ತ, ಅಖಾಡದ ಸುತ್ತ ತಕತಕ ಓಡಾಡುವುದನ್ನು ನೋಡಲು ಎರಡು ಕಣ್ಣು ಸಾಲದಾಗುತ್ತಿತ್ತು. ನಂಜಪ್ಪನವರು ನಮಗೆ ಮಾದರಿಯೂ, ಸ್ಫೂರ್ತಿದಾಯಕರೂ ಆಗಿದ್ದರು. ಅಖಾಡದಲ್ಲಿ ಸಿಂಹ, ಸ್ನೇಹವಲಯದಲ್ಲಿ ಆಕಳು ಮರಿ. ಸದಾ ಶಾಂತಚಿತ್ತರೂ, ಹಸನ್ಮುಖರೂ ಆಗಿರುತ್ತಿದ್ದ ನಂಜಪ್ಪ ಸಿಟ್ಟಿಗೆದ್ದರೆ ಅಗ್ನಿಪರ್ವತವೇ!

ಒಮ್ಮೆ ಮಗುವಿನಂಥ ನಗು, ಇನ್ನೊಮ್ಮೆ ಅವ್ವುಡು ಕಚ್ಚಿ ನಿಂತ ಛಲದಂಕ ಮಲ್ಲ. ಅಂಥ ಪೈಲ್ವಾನ್ ಜೊತೆ ಜಂಗಿ ಕುಸ್ತಿಗಿಳಿದು ಸೋತರೆ ಅದೂ ಕೂಡಾ ಒಂದು ಸಾಧನೆ ಎಂದು ಜೊತೆಗಾರ ಪೈಲ್ವಾನರು ನಂಬಿದ್ದರು.

ನನಗೆ ಪರಿಚಯವಿದ್ದ ಮತ್ತು ಅಷ್ಟಿಷ್ಟು ಸಣ್ಣ ಸಣ್ಣ ಪಟ್ಟುಗಳನ್ನು ಕಲಿಸಿದ್ದ ಹಿರಿಯ ಪೈಲ್ವಾನ್ (ಶಿಕ್ಷಕ–ಗುರು) ಪರಿಪೈಗರ್ ಎಂಬ ವ್ಯಕ್ತಿ ನಂಜಪ್ಪನ ಬಗ್ಗೆ ಏನಾದರೂ ಹೇಳುವಾಗಲೆಲ್ಲಾ ಭಾವಪರವಶರಾಗುತ್ತಿದ್ದರು, ಇಳಿವಯಸ್ಸಿನ ಅವನ ಮೈ ಸೆಟೆದು ನಿಲ್ಲುತ್ತಿತ್ತು. ನಂಜಪ್ಪನವರು–ರಾಮಪ್ಪನವರು ಅಂಥ ಪೈಲ್ವಾನರಿದ್ದ 'ದೊಡ್ಡ'ಗರುಡಿ ಚರಿತ್ರಾರ್ಹ ಚಿತ್ರದುರ್ಗಕ್ಕೊಂದು ಹೆಮ್ಮೆಯಾಗಿತ್ತು.

ಕೆ. ನಾಗರಾಜ್

ಜಯಲಕ್ಷ್ಮೀ ಟೆಕ್ಸ್‌ಟೈಲ್ ಮಿಲ್‌ನಲ್ಲಿ ಆಫೀಸಿನಲ್ಲಿ ಸೇವೆ ಸಲ್ಲಿಸಿದ ಕೆ. ನಾಗರಾಜು ಅವರು, ಒಮ್ಮೆ ಚಿತ್ರದುರ್ಗ ನಗರಸಭೆಯ ಸದಸ್ಯರಾಗಿದ್ದರು. ಈಗ ಚಿತ್ರದುರ್ಗದ ಟೌನ್‌ಕ್ಲಬ್‌ಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಾಮಾಜಿಕವಾಗಿ ನಾಗರಿಕರ ಸೇವೆಗೆ ಸದಾ ಸಿದ್ಧವಾಗಿರುವ ಇವರು ದೊಡ್ಡಗರುಡಿಯ ನಿಕಟ ಸಂಪರ್ಕ ಉಳ್ಳವರು, ನಾಟಕಾಭಿರುಚಿಯುಳ್ಳವರು, ನಟರು. ಒಂದು ರೀತಿ ಪೈ. ನಂಜಪ್ಪನವರಿಗೆ ಪ್ರೀತಿಯ ಬಾಲಕ, ಶಿಷ್ಯನಂತೆ, ಗೆಳೆಯನಂತೆ ಬೆಳೆದ ನಾಗರಾಜ್ ಸದಾ ನಂಜಪ್ಪನವರ ಜೊತೆಗಿದ್ದರು. ಅವರ ಕೆಲವು ಅಭಿಪ್ರಾಯಗಳು:

ನಮ್ಮ ತಂದೆ ಎನ್. ಕೃಷ್ಣಪ್ಪನವರು ದೊಡ್ಡಗರುಡಿಯ ಪೋಷಕರಲ್ಲಿ ಒಬ್ಬರು. ಗರುಡಿಯ ಸಮೀಪವೇ ನಮ್ಮ ಮನೆ ಇರುವುದರಿಂದ ಸ್ನೇಹಿತರೊಂದಿಗೆ ಆಟವಾಡುತ್ತ ೧೯೪೯ರಿಂದಲೂ ಪೈ. ನಂಜಪ್ಪ, ಪೈ. ರಾಮಪ್ಪ ಮತ್ತು ಇತರೆ ಪೈಲ್ವಾನರನ್ನು ನೋಡುತ್ತಾ ಬಂದಿದ್ದೇನೆ. ನಾನೂ ಸಹ ಚಿಕ್ಕ ವಯಸ್ಸಿನಲ್ಲಿಯೇ ಗರಡಿಯಲ್ಲಿ ಸಾಧನೆ ಮಾಡುತ್ತ, ಪೈ. ನಂಜಪ್ಪನವರಿಗೆ ಅತ್ಯಂತ ಪ್ರೀತಿಯ ಶಿಷ್ಯನಾಗಿ ಸೇವೆ ಮಾಡುತ್ತ ಕಾಲ ಕಳೆದೆ. ಅನೇಕ ಸಲ ಶಾಲೆಗೆ ತಪ್ಪಿಸಿಕೊಂಡು ಗರಡಿಯಲ್ಲೇ ಕಾಲ ಕಳೆಯುತ್ತಿದ್ದೆ. ಅನೇಕ ಪೈಲ್ವಾನರು ಸಾಧನೆ ಮಾಡಲು ಬರುತ್ತಿದ್ದರು. ಸಂಜೆಯಲ್ಲಿ ಪೈ. ರಾಮಪ್ಪನವರ ಮತ್ತು ಪೈ. ನಂಜಪ್ಪನವರ ಲಡತ್ ನೋಡಲು ಪೋಷಕರೆಲ್ಲರೂ ಬರುತ್ತಿದ್ದರು. ಇವರಿಬ್ಬರ ಲಡತ್ ಒಂದು ಗಂಟೆಯತನಕ ನಡೆಯುತ್ತಿತ್ತು. ಬರುವ ಮುಖಂಡರಲ್ಲಿ ಪ್ರತಿಯೊಬ್ಬರೂ ಒಂದೊಂದು ದಿನ ಬಾದಾಮಿ, ಹಾಲು ತರಿಸಿಕೊಡುತ್ತಿದ್ದರು. ನಂಜಪ್ಪರ ಶಿಷ್ಯನಾದ ನಾನು ಅವರು ಲಡತ್ ಮಾಡಿ, ಸ್ನಾನ ಮುಗಿಸಿಕೊಂಡು ಬರುವುದರೊಳಗಾಗಿ ಬಾದಮಿಯನ್ನು ಕುಟ್ಟಿ, ಬೇರ್ಪಡಿಸಿ ನಂತರ ರುಬ್ಬುವ ಕಲ್ಲನ್ನು ತೊಳೆದು ಇಡುತ್ತಿದ್ದೆ. ಅವರು ಬಾದಾಮಿಯನ್ನು ಅರೆದು ಹಾಲು ಮತ್ತು ಸಕ್ಕರೆ ಸೇರಿಸಿ ಬಾದಾಮಿ ಹಾಲು ಮಾಡಿ, ಅವರು ಕುಡಿದು ನಮಗೂ ಕೊಡುತ್ತಿದ್ದರು.

ನಂಜಪ್ಪನವರು ಕುಸ್ತಿಗಳನ್ನು ಗೆದ್ದು 'ಮೈಸೂರು ಹುಲಿ' ಎಂದೇ ಪ್ರಖ್ಯಾತರಾಗಿದ್ದರು. ಗರುಡಿಯ ಮುಖಂಡರು ಅವರಿಗೆ ಬಹಳ ಗೌರವ ಕೊಡುತ್ತಿದ್ದರು. ಅವರೂ ಅಷ್ಟೇ ಗೌರವ ತೋರಿಸುತ್ತಿದ್ದರು. ಅವರು ಶಾಂತಸ್ವಭಾವದವರು, ಒಳ್ಳೆಯ ಸ್ನೇಹಜೀವಿ. ಅನೇಕ ಸಂದರ್ಭಗಳಲ್ಲಿ ತಮಾಷೆ ಮಾಡಿ ನಗುತ್ತಿದ್ದರು, ನಗಿಸುತ್ತಿದ್ದರು.

ಅವರು ದೊಡ್ಡಗರುಡಿಯವರು ಆಡುತ್ತಿದ್ದ ನಾಟಕಗಳಿಗೆ ತಬಲ ನುಡಿಸುತ್ತಿದ್ದರು. ಮಾಸ್ಟರ್ ಹಿರಣ್ಣಯ್ಯನವರು ಕಷ್ಟಕಾಲದಲ್ಲಿ ಚಿತ್ರದುರ್ಗಕ್ಕೆ ಬಂದಾಗ ಒಂದೆರಡು ತಿಂಗಳು ಅವರ ನಾಟಕಗಳಿಗೆ ತಬಲ ನುಡಿಸಿದರು. ಮಾಸ್ಟರ್ ಹಿರಣ್ಣಯ್ಯನವರು ಪೈಲ್ವಾನ್ ನಂಜಪ್ಪನವರನ್ನು ರಂಗಭೂಮಿಗೆ ಕರೆಸಿ, ಸಾರ್ವಜನಿಕರ ಸಮ್ಮುಖದಲ್ಲಿ ಬಂಗಾರದುಂಗುರ ನೀಡಿ ಸನ್ಮಾನಿಸಿದರು.

೧೯೪೬–೪೭ರ ಸ್ವಾತಂತ್ರ್ಯಕ್ಕೋಸ್ಕರ ಪೈ. ನಂಜಪ್ಪ ಹಾಗೂ ಗರಡಿಯ ಮಜಮುದಾರರು ಹೋರಾಡಿ, ತಾಲ್ಲೂಕ್ ಕಛೇರಿಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿ, ಬಳಿಕ ಜಿಲ್ಲಾಧಿಕಾರಿಗಳವರ ಮನೆಗೆ ನುಗ್ಗಿ ಘೋಷಣೆಯನ್ನು ಕೂಗಿ, ಘರ್ಷಣೆಯಾಗಿ ದುರ್ಗದ ಬೆಟ್ಟದಲ್ಲಿ ತಲೆಮರೆಸಿಕೊಂಡು, ನಂತರ ದಾವಣಗೆರೆಯಲ್ಲಿ ಸೆರೆಸಿಕ್ಕ ಸಂಗತಿಯನ್ನು ಗರಡಿಯ ಮುಖಂಡರಿಂದ ಕೇಳಿ ತಿಳಿದಿದ್ದೇವೆ. ಅವರು ಜೀವಂತವಾಗಿದ್ದಾಗ ಅವರ ಶಿಷ್ಯನಾಗಿ ಅವರಿಂದಲೇ ಕೇಳಿ ತಿಳಿದುಕೊಳ್ಳುವ ಭಾಗ್ಯ ಒದಗಿ ಬರಲಿಲ್ಲ. ಅವರು ಗರುಡಿಯಲ್ಲಿ ಲಡತ್ ಮಾಡುವಾಗ ನನಗೆ ಎಲ್ಲಾ ಪಟ್ಟುಗಳನ್ನೂ ಅವರ ಫೇವರೇಟಾದ ದೋಬಿಚಾಟ್

ಅನ್ನು ಚೆನ್ನಾಗಿ ಕಲಿಸಿದರು. ನನ್ನ ಕುಸ್ತಿಯನ್ನು ನೋಡುವ ಭಾಗ್ಯ ಅವರಿಗೂ ಬರಲಿಲ್ಲ. ಅವರ ಕುಸ್ತಿ ನೋಡುವ ಭಾಗ್ಯ ನನಗೂ ಬರಲಿಲ್ಲ.

ಗರಡಿಯ ಪಕ್ಕದಲ್ಲಿರುವ ಪೈಲ್ವಾನ್ ಗೋಪಾಲಪ್ಪನವರ ಅವರದೇ ಕೊಠಡಿಯಲ್ಲಿ ನಾನು, ಗೋಪಾಲಯ್ಯ, ಪೈ. ನಂಜಪ್ಪನವರೊಂದಿಗೆ ರಾತ್ರಿ ಸಮಯದಲ್ಲಿ ಮಲಗುತ್ತಿದ್ದೆವು. ಅವರು ಸಾಯುವ ಹಿಂದಿನ ದಿನ ಅವರು ಮಲಗಲು ಬರುವರೆಂಬ ನಂಬಿಕೆಯಿಂದ ಅವರ ಹಾಸಿಗೆಯನ್ನು ಹಾಸಿದ್ದೆವು. ಆದರೆ ಅವರು ಬರಲೇ ಇಲ್ಲ. ಮರುದಿವಸ ಶ್ರೀ ಉತ್ಸವಾಂಬಾ ದೇವಸ್ಥಾನದ ಹತ್ತಿರವಿರುವ ಅವರ ತಮ್ಮನ ಮನೆಯಲ್ಲಿ ಮಲಗಿದ್ದಾಗ ಸಾವನ್ನಪ್ಪಿದ ವಿಷಯ ತಿಳಿದು ದುರ್ಗ ಶೋಕಸಾಗರದಲ್ಲಿ ಮುಳುಗಿತು. ಹಿರಿಯರಿಗೆ ಗೌರವ ತೋರಿಸುತ್ತಿದ್ದ, ಎಲ್ಲರಿಗೂ ಗೌರವ ಕೊಡುತ್ತಿದ್ದ ಗೌರವದ ವ್ಯಕ್ತಿತ್ವದ ಪೈ. ನಂಜಪ್ಪನವರದು. ಅದೆಲ್ಲಾ ಈಗ ನೆನಪು ಮಾತ್ರ..

❑

ಗ್ರಂಥಋಣ

ನೆರವಿಗೆ ಬಂದ ಪುಸ್ತಕಗಳು:

೧. ಹೋರಾಟದ ನೆನಪು – ಸಂಪಾದಕರು : ಕೊಟಗಿ ಸಿದ್ಧಲಿಂಗಪ್ಪ
(ಚಿತ್ರದುರ್ಗ ಜಿಲ್ಲಾ ಸ್ವಾತಂತ್ರ್ಯಯೋಧರ ಸಮ್ಮೇಳನ – ೧೯೯೬)

೨. ಕರ್ನಾಟಕ ಸ್ವಾತಂತ್ರ್ಯ ಹೋರಾಟಗಾರರು – ಸಂ: ಸುಶೀಲ ಸುಬ್ರಹ್ಮಣ್ಯ
(ಕ್ವಿಟ್ ಇಂಡಿಯಾ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ – ೧೮.೧೨.೧೯೯೩
ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಉತ್ತರಾಧಿಕಾರಿಗಳ ಸಂಸ್ಥೆ
– ಬೆಂಗಳೂರು)

೩. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು – ಡಾ. ಸೂರ್ಯನಾಥ ಕಾಮತ್

೪. ಪೈ. ವಸಂತರಾವ್ ನೆನಪುಗಳು – ನಿರೂಪಣೆ – ಟಿ.ಆರ್. ರಾಧಾಕೃಷ್ಣ

೫. ಸೋಮಣ್ಣನ 'ಸ್ಟಾಕ್'ನಿಂದ – ಎಚ್.ಜಿ. ಸೋಮಶೇಖರರಾವ್

೬. ಮತಗಳು ದೇಶಕ್ಕೆ ಶಾಪ – ಬಿ.ಎಲ್. ವೇಣು

೭. ಮೈಸೂರು ವಿಶ್ವವಿದ್ಯಾಲಯ ವಿಶ್ವಕೋಶ (ಸಂಪುಟ–೪)

೮. ಕ್ರೀಡೆ – ಆಟಗಳು – ವಿಶ್ವಕೋಶ – ಸಂ. ನಿರಂಜನ

ನೆರವಿಗೆ ಬಂದ ಲೇಖನಗಳು:

೧. ಕುಸ್ತಿಯಾಕಾಶದಲ್ಲಿ ಬೆಳಗಿದ ತಾರೆ
ಚಿತ್ರದುರ್ಗದ ಪೈಲ್ವಾನ್ ನಂಜಪ್ಪ : ಲೇ: ಡಾ. ಬಿ. ರಾಜಶೇಖರಪ್ಪ
(ವೀರಾಗ್ರಣಿ ಸಂಕ್ರಾಂತಿ ವಿಶೇಷ ಸಂಚಿಕೆ – ೧೯೮೮)

೨. ಕ್ರೀಡಾಕ್ಷೇತ್ರಕ್ಕೆ ಚಿತ್ರದುರ್ಗದ ಕೊಡುಗೆ : ಲೇ: ಡಾ. ಬಿ. ರಾಜಶೇಖರಪ್ಪ
ಕುಸ್ತಿಕಲೆ – (ಯುವ ಕರ್ನಾಟಕ ಪತ್ರಿಕೆ)

೩. ಗರಡಿಯಲ್ಲಿ ಮೆರೆದ (ಹುಲಿ) : ಲೇ : ಸಿ.ಎಂ. ನರಸಿಂಹ ಜಟ್ಟಿ
ಪೈ. ನಂಜಪ್ಪ
(ಪ್ರಜಾಪ್ರಗತಿ ದಿನಪತ್ರಿಕೆ – ಆಗಸ್ಟ್ ೮, ೨೦೦೫)

೪. ಚಿತ್ರದುರ್ಗದ ಗರುಡಿಗಳು : ಲೇ : ಟಿ.ಆರ್. ರಾಧಾಕೃಷ್ಣ
ಸಾಂಸ್ಕೃತಿಕ ಅಧ್ಯಯನ
(ಕಾಯಕ – ತ್ರೈಮಾಸಿಕ)

ಮೌಖಿಕ ಪರಂಪರೆಯ ನೆನಪುಗಳ ನೆಲೆಯಲ್ಲಿ ಅರಳಿದ ಜೀವನ ಗಾಥೆ 'ಪೈಲ್ವಾನ್ ನಂಜಪ್ಪ' ಕೃತಿ. ಇಲ್ಲಿ ಪೈಲ್ವಾನ್ ನಂಜಪ್ಪನವರ ಜೀನವ ವಿವರ ಮಾತ್ರ ಬಿಚ್ಚಿಕೊಳ್ಳುತ್ತಿಲ್ಲ; ಇಡೀ ಚಿತ್ರದುರ್ಗದ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಬದುಕಿನ ವಿವರಗಳು ದನಿ ಪಡೆದಿವೆ. ಚಿತ್ರದುರ್ಗದ ಸಾಂಸ್ಕೃತಿಕ ಬದುಕಿನಲ್ಲಿ ಗರಡಿ ಮನೆಗಳು ಪಡೆದುಕೊಂಡಿದ್ದ ಮಹತ್ವ, ಇಂಥ ಪರಂಪರೆಯನ್ನು ಬೆಳೆಸುವುದಕ್ಕೆ ಕಾರಣಕರ್ತರಾದ ಉಸ್ತಾದ್‌ಗಳು, ಗರಡಿ ಮನೆಯ ಪೋಷಕರ ಉದಾರತೆ ಪೈಲ್ವಾನರುಗಳ ಜಾತ್ಯತೀತ ಮನೋಧರ್ಮ ಇತ್ಯಾದಿ ವಿವರಗಳು ಕಣ್ಣಿಗೆ ಕಟ್ಟಿದಂತೆ ಈ ಕೃತಿಯಲ್ಲಿ ದಾಖಲಾಗಿವೆ. ಪೈಲ್ವಾನ್ ನಂಜಪ್ಪನವರ ವ್ಯಕ್ತಿತ್ವ ಸಾಧನೆ ಶ್ರೇಯಗಳನ್ನು ಲೇಖಕರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಬೆಲೆ ರೂ. ೪೫/-

ISBN : 81 - 7713 - 206 - 7